ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸತೀಶ ಎಂ.ಬಿ

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೧

ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸತೀಶ ಎಂ.ಬಿ

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೨೧

ಸಂಶೋಧಕರ ಪ್ರಮಾಣ ಪತ್ರ

"ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ" ಎಂಬ ಮಹಾಪ್ರಬಂಧವನ್ನು **ಡಾ. ವೆಂಕಟೇಶ ಇಂದ್ವಾಡಿ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: 04-02-2021

ಸ್ಥಳ : ವಿದ್ಯಾರಣ್ಯ

(ಸತೀಶ ಎಂ. ಬಿ.)
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಸತೀಶ ಎಂ.ಬಿ ಅವರು ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ"** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: ೦೨.೦೭.೨೧

ಸ್ಥಳ : ವಿದ್ಯಾರಣ್ಯ

(ಡಾ. ವೆಂಕಟೇಶ ಇಂದ್ವಾಡಿ)
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

Kannada University, Hampi

Akshara Central Library

Anti-Plagiarism Cell

Certificate of Plagiarism Check Report

Vasahathottara Kaalada Kannada Janapada Sahitya Adhyayanagala Vishleshane

Postcolonial Kannada Folklore Studies: A Critical Analysis

By

Satisha M.B

Reg.No. K0-1312 dated: 04.09.2015

Research Guide

Dr. Venkatesh Indvadi

Professor

Department of Kannada Literature Studies

Kannada University, Hampi - 583276.

Urkund Analysis Result

Analyzed document	: KUH-PhD-DKL-Satisha M B.docx (D99414787)
Submitted	: 3/24/2021 6:36:00 AM
Submitted by	: Shankaragouda S G
Submitter email	: shankargoudas.mailbox@gmail.com
Similarity	**: 6%**
Analysis address	: shankargoudas.mailbox.kanuni@analysis.urkund.com

24/03/2021

Seal and authorized sign

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ ಹಾಗೂ ವಿಧಾನ

೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನದ ಮಹತ್ವ
೧.೩. ಅಧ್ಯಯನದ ವ್ಯಾಪ್ತಿ
೧.೪. ಅಧ್ಯಯನದ ಸ್ವರೂಪ
೧.೫. ಅಧ್ಯಯನದ ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ ಹಾಗೂ ವಿಧಾನ

ವಸಾಹತುಕಾಲದಲ್ಲಿ ಬ್ರಿಟಿಷರಿಂದ ಸಾಂಸ್ಕೃತಿಕ ಶೋಧನೆಗಳು ಪ್ರಾರಂಭವಾದವು. ವಸಾಹತುಶಾಹಿ ಸಂಸ್ಕೃತಿಯ ಪರಿಣಾಮದ ಫಲದಿಂದ ಪ್ರವೇಶವಾದ ಅಂದಿನ ಆಂಗ್ಲ ವಿದ್ಯಾಭ್ಯಾಸ, ಮುದ್ರಣ, ಆಡಳಿತ, ಹೊಸ ಶಿಕ್ಷಣ ಪದ್ಧತಿ, ಹೊಸ ವಿಚಾರ ಸರಣಿ, ವಿಜ್ಞಾನ, ತಂತ್ರಜ್ಞಾನ, ಇಂಗ್ಲಿಷ್ ಸಾಹಿತ್ಯದ ವಿಶ್ವಸ್ಥ ಪ್ರಜ್ಞೆ, ಕೈಗಾರೀಕರಣ, ಸಂಸ್ಕೃತಿಕರಣ, ಅಂದಿನ ಆಂಗ್ಲ ಕ್ರೈಸ್ತ ಮಿಶನರಿಗಳ ಸಾಮಾಜಿಕ ಶ್ರದ್ಧೆ ಇನ್ನೂ ಮೊದಲಾದ ಸಂವೇದನೆಗಳು ಭಾರತದ ಪರಂಪರೆಯೊಂದಿಗೆ ಸೇರಿಕೊಂಡವು. ಬ್ರಿಟಿಷರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು ನಂತರ ಇಲ್ಲಿನ ಆಡಳಿತಾಧಿಕಾರಿಗಳಾದರು. ತಮ್ಮ ಧರ್ಮ ಪ್ರಸಾರಕ್ಕಾಗಿ ಹಾಗೂ ಆಡಳಿತ ನಡೆಸುವುದಕ್ಕಾಗಿ ಇಲ್ಲಿನ ಭಾಷೆ ಮತ್ತು ಸಂಸ್ಕೃತಿ ತಿಳಿಯುವುದು ಅನಿವಾರ್ಯವಾಗಿತ್ತು. ಅದಕ್ಕಾಗಿ ಅವರು ಇಲ್ಲಿನ ಸಾಹಿತ್ಯವನ್ನು ಅದರಲ್ಲೂ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಲು ಮುಂದಾದರು. ಭಾರತವು ಗ್ರಾಮೀಣ ಸಂಸ್ಕೃತಿಗಳ ನಾಡಾಗಿದ್ದರಿಂದ ಬ್ರಿಟಿಷರು ಸ್ಥಳೀಯ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಂತಹ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಲು ಮುಂದಾದರು. ಗ್ರಾಮೀಣ ಜನರ ತಳವರ್ಗಗಳಲ್ಲಿ ಉಳಿದುಕೊಂಡು ಬಂದಿರುವ ಲಾವಣಿ, ಕತೆ, ಗಾದೆ, ಒಗಟು, ಗೀತೆ ಮುಂತಾದವುಗಳನ್ನು ಸಂಗ್ರಹಿಸಿದರು. ಇವುಗಳ ಅಧ್ಯಯನವಾದರೆ ಮಾತ್ರ ಇಲ್ಲಿನ ಜನರ ಸ್ಥಿತಿಗತಿ, ಸಂಸ್ಕೃತಿ, ಸಂಪ್ರದಾಯ, ಭಾಷೆ ತಿಳಿಯುವುದು ಎಂಬುದು ಇವರ ಉದ್ದೇಶವಾಗಿತ್ತು. ಇದು ದೇಶಿಯ ವಿದ್ವಾಂಸರಿಗೆ ಪ್ರೇರಣೆಯಾಯಿತು. ಆದರೆ ಈ ಕಾಲಘಟ್ಟದಲ್ಲಿ ದೇಶಿಯ ವಿದ್ವಾಂಸರು ಯಾವುದೇ ಶಾಸ್ತ್ರೀಯ ನೆಲೆಯಲ್ಲಿ ಸಂಗ್ರಹಣೆ, ಸಂಪಾದನೆ ಮಾಡಲಿಲ್ಲ. ಬದಲಾಗಿ ಮಾಹಿತಿ ಪ್ರಧಾನ ನೆಲೆಯಲ್ಲಿ ಸಂಗ್ರಹ, ಸಂಪಾದನೆ ಮಾಡಿದರು. ಹಾಗಾಗಿ ಆರಂಭದ ಘಟ್ಟದ ಜನಪದ ಅಧ್ಯಯನಕ್ಕೆ ಪಾಶ್ಚಾತ್ಯ ಮತ್ತು ದೇಶಿ ವಿದ್ವಾಂಸರ ಕೊಡಗೆಯು ವಸಾಹತುಶಾಹಿ ನಂತರದ ಜಾನಪದ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾ ಬಂದಿರುವುದನ್ನು ನೋಡಬಹುದು. ವಸಾಹತುಶಾಹಿ ಕಾಲದಲ್ಲಿ 'ಜನಪದ ಗೀತೆ'ಗಳನ್ನಷ್ಟೆ ಸಂಗ್ರಹ, ಸಂಪಾದನೆ ಮಾಡಲಾಯಿತು. ವಸಾಹತುಶಾಹಿ ನಂತರದ ಕಾಲಘಟ್ಟದಲ್ಲಿ ಜಾನಪದದ ಸಾಹಿತ್ಯೇತರ ಪ್ರಕಾರಗಳ ಅಧ್ಯಯನಗಳಿಗೆ ವಿಸ್ತರಿಸಿಕೊಳ್ಳಲಾಯಿತು.

ವಸಾಹತೋತ್ತರ ಕಾಲದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಜಾಗತೀಕ ವಿದ್ಯಮಾನಗಳಿಂದ ಹೊಸ ಬದಲಾವಣೆಗಳು ಏರ್ಪಟ್ಟವು. ಈ ನೆಲದ ಸಂಸ್ಕೃತಿ, ಸಂಪ್ರದಾಯ, ಆಚಾರ ವಿಚಾರಗಳನ್ನು ಅಧ್ಯಯನ ಮಾಡುವ ಕ್ರಮವು ಈ ಕಾಲಘಟ್ಟದಲ್ಲಿ ಶುರುವಾದವು. ವಸಾಹತೋತ್ತರ ಕಾಲಘಟ್ಟದಲ್ಲಿ ಜಾನಪದ ಅಧ್ಯಯನಗಳು ಸಂಶೋಧನಾ ಬರವಣಿಗೆಗೆ ತಿರುಗಿದವು. ಅನೇಕ ವಿಶ್ವವಿದ್ಯಾಲಯಗಳು, ಪತ್ರಿಕೆಗಳು, ಸಂಗ್ರಹ ಕಾರ್ಯಕ್ಕೆ ಪ್ರಮುಖ ಪಾತ್ರ ವಹಿಸಿದವು. ಜಾನಪದ ಸಾಹಿತ್ಯ ಸಂಗ್ರಹದ ಜೊತೆಗೆ ಅವುಗಳ ವಿಶ್ಲೇಷಣೆ ಲೇಖನಗಳಲ್ಲಿ ಪ್ರಕಟಗೊಂಡವು. ಮುಖ್ಯವಾಗಿ ಭಾರತದಲ್ಲಿ ವಸಾಹತೋತ್ತರ ಸಂದರ್ಭದಲ್ಲಿ ಸಾಂಸ್ಕೃತಿಕ ವಿಶ್ಲೇಷಣೆ ಹೆಚ್ಚು ಆಗಿರುವುದು ಕಂಡುಬರುತ್ತದೆ. ಜನಪದ ಸಾಹಿತ್ಯ ಕೃತಿಗಳನ್ನು ಆಧುನಿಕ ಸಂದರ್ಭದಲ್ಲಿ ವಿಶ್ಲೇಷಣೆಗೆ ಒಳಪಡಿಸಿದಾಗ ಮಾತ್ರ ಅವುಗಳ ಸಾಂಸ್ಕೃತಿಕ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಬಹುದು. ಇವುಗಳನ್ನು ಜಾನಪದ ಸಿದ್ಧಾಂತಗಳು ಹಾಗೂ ಜಾನಪದ ಕಾವ್ಯ ಮೀಮಾಂಸೆಯೊಂದಿಗೆ ಅನುಸಂಧಾನಗೊಳಿಸಿ ಅಧ್ಯಯನ ಮಾಡಬೇಕಿದೆ. ಜನಪದ ಸಾಹಿತ್ಯ ಹುಟ್ಟಿದ ಹಿನ್ನೆಲೆ ಹಾಗೂ ಅವುಗಳ ಪರಂಪರೆ ಕುರಿತು ಅನೇಕ ಅಧ್ಯಯನಗಳು ನಡೆಯಬೇಕಿದೆ.

ವಸಾಹತೋತ್ತರ ಕಾಲದಲ್ಲಿನ ಜಾನಪದವು ಶೈಕ್ಷಣಿಕ ಸ್ವರೂಪ ಪಡೆದಿದ್ದರಿಂದ ಜಾನಪದವು ಸಂಶೋಧನೆಯ ವಿಷಯವಾಯಿತು. ದೇಶಿಯ ವಿದ್ವಾಂಸರು ಈ ಕಾಲದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಮಾಡುವುದರ ಜೊತೆಗೆ ಅವುಗಳ ಕುರಿತು ಸಂಶೋಧನೆ ಕೈಗೊಂಡರು. ಜಾನಪದ ಅಧ್ಯಯನದ ಹಿಂದಿನ ಸಾಧ್ಯತೆಗಳಿಗೆ ಭಿನ್ನವಾದ ಬಗೆಯಲ್ಲಿ ಸಂಕೀರ್ಣ ದೃಷ್ಟಿಕೋನದಿಂದ, ವಸ್ತುನಿಷ್ಠತೆಯಿಂದ ಜಾನಪದ ಎಂಬುದು ಒಂದು ಹವ್ಯಾಸಿ ವಿಷಯವಾಗಿರದೆ, ಅದೊಂದು ಗಂಭೀರವಾದ ಅಧ್ಯಯನ ವಿಷಯವಾಗಿ ಪರಿಗಣಿಸಲ್ಪಟ್ಟಿತು. ಕೇವಲ ಸಂಗ್ರಹಣೆ ಮತ್ತು ಸಂರಕ್ಷಣೆಯ ಹಂತವನ್ನು ಮೀರಿ ಅದರ ಸಂಶೋಧನೆಯಲ್ಲಿ ತೊಡಗುವ ದಿನಗಳು ಕೂಡಿಬಂದವು. ಹಾಗಾಗಿ ಜಾನಪದ ಪ್ರಕಾರಗಳನ್ನು ಅಧ್ಯಯನದ ವಸ್ತುಗಳಾಗಿ ಪರಿಗಣಿಸಿ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಲಾಯಿತು. ಹೀಗೆ ಸಂಶೋಧನೆ ಮಾಡಿರುವ ಜನಪದ ಅಧ್ಯಯನಕಾರರ ಅಧ್ಯಯನದ ಮಾದರಿ, ಅವರು ಅನುಸರಿಸಿದ ಸಿದ್ಧಾಂತ, ಸಂಶೋಧನೆ ಮಾಡಿದ ವಿವಿಧ ದೃಷ್ಟಿಕೋನಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

೧.೧. ಅಧ್ಯಯನದ ಉದ್ದೇಶ

ವಸಾಹತುಕಾಲದಲ್ಲಿ ಪಾಶ್ಚಿಮಾತ್ಯ ವಿದ್ವಾಂಸರು ಭಾರತದಲ್ಲಿ ವಸಾಹತುಶಾಹಿಯ ಭಾಗವಾಗಿ ದೇಶಿಯ ಸಂಸ್ಕೃತಿಯ ಅಧ್ಯಯನಕ್ಕೆ ಮುಂದಾದರು. ನಂತರದಲ್ಲಿ ಇದೇ ಮಾದರಿಯನ್ನು ಆಧಾರವಾಗಿಟ್ಟುಕೊಂಡು ದೇಶಿಯ ವಿದ್ವಾಂಸರುಗಳು ಭಾರತದ ವಿಶಿಷ್ಟವಾದ ಜನಪದ ಸಂಸ್ಕೃತಿಯನ್ನು

ಅಧ್ಯಯನ ಮಾಡಲು ಮುಂದಾದರು. ಇದರ ಭಾಗವಾಗಿ ಕನ್ನಡದ ನೆಲದಲ್ಲಿ ಹಲವಾರು ವಿದ್ವಾಂಸರು ಇಲ್ಲಿನ ಜನಪದ ಅಧ್ಯಯನವನ್ನು ಮಾಡಿದರು. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಜಾನಪದ ಅಧ್ಯಯನಗಳಲ್ಲಿ ವ್ಯಕ್ತವಾಗಿರುವ ಸೈದ್ಧಾಂತಿಕ ನೆಲೆಗಳು ಹಾಗೂ ದೇಶೀಯ ಸಂಸ್ಕೃತಿಯ ವಿಶಿಷ್ಟತೆಯನ್ನು ಎತ್ತಿಹಿಡಿಯುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಜಾನಪದ ಸಂಸ್ಕೃತಿಯು ಆಯಾ ಪ್ರಾದೇಶಿಕ ಪರಿಸರದಲ್ಲಿ ವಾಸಿಸುವ ಜನರ ಆಚಾರ, ವಿಚಾರ ಮತ್ತು ಜೀವನ ವಿಧಾನಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಇಂತಹ ಜನ ಸಂಸ್ಕೃತಿಯ ಭಾಗವಾಗಿ ನಡೆದು ಬಂದಿರುವ ಜಾನಪದ ಅಧ್ಯಯನಗಳಲ್ಲಿ ಕಂಡುಬರುವ ವೈವಿಧ್ಯತೆಯ ಸ್ವರೂಪವನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅನೇಕ ಪಾಶ್ಚಾತ್ಯ ವಿದ್ವಾಂಸರು ಕರ್ನಾಟಕದ ಜನಪದ ಸಂಸ್ಕೃತಿಯ ಕುರಿತು ಅಧ್ಯಯನ ನಡೆಸಿದ್ದಾರೆ. ಆದರೆ ಪಾಶ್ಚಿಮಾತ್ಯ ವಿದ್ವಾಂಸರಿಗಿಂತ ದೇಶಿಯ ವಿದ್ವಾಂಸರು ನಡೆಸಿರುವ ಜನಪದ ಸಾಹಿತ್ಯ ಅಧ್ಯಯನದಲ್ಲಿ ಕಂಡುಬರುವ ವಿಶಿಷ್ಟತೆ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿಯುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿರುತ್ತದೆ.

ಸಾವಿರಾರು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜನಪದ ಸಾಹಿತ್ಯವನ್ನು ಮುನ್ನೆಲೆಗೆ ತರಲಾಯಿತು. ಇದರ ಪರಿಣಾಮವಾಗಿ ವಸಾಹತೋತ್ತರ ಕಾಲದಲ್ಲಿ ಜಾನಪದವು ಅಧ್ಯಯನ ಶಿಸ್ತುಗಳಲ್ಲಿ ಪ್ರಮುಖವಾದ ಸ್ಥಾನಮಾನವನ್ನು ಪಡೆದುಕೊಂಡಿತು. ಇಂದು ನಾವು ಜಾನಪದವನ್ನು ಶೈಕ್ಷಣಿಕ ಅಧ್ಯಯನ ಶಿಸ್ತಾಗಿ ಪರಿಗಣಿಸುವುದಕ್ಕೆ ವಸಾಹತೋತ್ತರ ಕಾಲದ ಜಾನಪದ ಅಧ್ಯಯನ ಮಾದರಿಗಳು ಪ್ರಮುಖ ಕಾರಣವಾಗಿವೆ. ಹೀಗೆ ಜಾನಪದದ ಮುನ್ನೆಲೆಗೆ ಕಾರಣವಾದ ವಸಾಹತೋತ್ತರ ಅಧ್ಯಯನ ಮಾದರಿಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ವಸಾಹತೋತ್ತರ ಕಾಲದ ಜಾನಪದ ಸಾಹಿತ್ಯದ ಅಧ್ಯಯನಗಳಲ್ಲಿ ಜನಪದರ ಬದುಕಿನ ಅನೇಕ ವಿವರಗಳು ಸಿಗುವುದರ ಜೊತೆಗೆ, ಅಲ್ಲಿನ ಪ್ರಾದೇಶಿಕತೆಯ ಪರಿಚಯ ಲಭ್ಯವಾಗುತ್ತದೆ. ಆ ಪ್ರದೇಶದಲ್ಲಿ ನಡೆದ ವಿಶಿಷ್ಟವಾದಂತಹ ಘಟನೆಗಳ ಸ್ವರೂಪ, ಸಾಹಿತ್ಯ, ಆಚರಣೆ, ಮತ್ತು ಜೀವನದ ದೃಷ್ಟಿಕೋನ ಯಾವುದಾಗಿತ್ತು? ಎಂಬುದನ್ನು ಅರಿಯುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ವಸಾಹತೋತ್ತರ ಕಾಲದಲ್ಲಿ ಕನ್ನಡ ಜನಪದ ಸಾಹಿತ್ಯ ಅಧ್ಯಯನ ಕ್ರಮವು ಪಾಶ್ಚಿಮಾತ್ಯ ಚಿಂತನಧಾರೆಗಳಿಂದ ಪ್ರಭಾವಿತವಾಗಿದ್ದರೂ ಕನ್ನಡ ಜನಪದ ಅಧ್ಯಯನಕಾರರ ಗ್ರಹಿಕೆಯ ವಿಧಾನಗಳು ತೀರಾ ಭಿನ್ನವಾಗಿದ್ದವು. ಹಾಗಾಗಿ ಈ ಅಧ್ಯಯನಕಾರರ ವಿಧಾನಗಳ ತಾತ್ವಿಕ ಧೋರಣೆಗಳನ್ನು ಈ ಪ್ರಬಂಧದಲ್ಲಿ ಒಳಪಡಿಸಲಾಗಿದೆ.

ವಸಾಹತೋತ್ತರ ಕಾಲದಲ್ಲಿ ಜನಪದ ಸಾಹಿತ್ಯವನ್ನು ಸಂಶೋಧನೆ ಮಾಡಿದ ವಿದ್ವಾಂಸರ ಬೌದ್ಧಿಕ ಚಿಂತನೆ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳು ಪ್ರಾದೇಶಿಕ, ಸಾಂಸ್ಕೃತಿಕ, ಸಾಮಾಜಿಕ ನೆಲೆಯಲ್ಲಿ

ಭಿನ್ನವಾಗಿವೆ. ಈ ಭಿನ್ನತೆಗಳಿಗೆ ಇರುವಂತಹ ಕಾರಣಗಳನ್ನು ಅವರು ಅಧ್ಯಯನ ಮಾಡಿರುವ ಪ್ರಬಂಧಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಗುರುತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ

೧.೨. ಅಧ್ಯಯನದ ಮಹತ್ವ

ವಸಾಹತುಕಾಲದ ಜಾನಪದ ಅಧ್ಯಯನ ಮಾದರಿಗಳಿಂದ ಪ್ರಭಾವಿತವಾದ ವಸಾಹತೋತ್ತರ ಕಾಲದ ಜಾನಪದ ಅಧ್ಯಯನಗಳು ದೇಶಿ ಸಂಸ್ಕೃತಿಯ ಅಧ್ಯಯನಕ್ಕೆ ಮುಂದಾಗಿವೆ. ಇಲ್ಲಿನ ಅಧ್ಯಯನ ಕ್ರಮಗಳು ಪಾಶ್ಚಿಮಾತ್ಯ ಅಧ್ಯಯನ ಕ್ರಮಗಳಿಂದ ಪ್ರಭಾವಿತವಾಗಿದ್ದರೂ ದೇಶೀಯ ಸಂಸ್ಕೃತಿಯನ್ನು ಗ್ರಹಿಸುವಲ್ಲಿ ತನ್ನದೇ ಆದ ವಿಶಿಷ್ಟ ಮಾದರಿಗಳನ್ನು ಅನುಸರಿಸಿವೆ. ಹೀಗಾಗಿ ದೇಶೀಯ ವಿದ್ವಾಂಸರ ಅಧ್ಯಯನಗಳಲ್ಲಿ ತನ್ನತನದ ಭಾಗವಾಗಿ ಮೂಡಿಬಂದಿರುವ ತಾತ್ವಿಕ ಮಾದರಿಗಳನ್ನು ಗುರುತಿಸುವುದು ಇಂದಿಗೆ ಮಹತ್ವವೆನಸಿದೆ.

ವಸಾಹತೋತ್ತರ ಕಾಲದ ಅಧ್ಯಯನ ಮಾದರಿಗಳು ಹಲವಾರು ಅಲಕ್ಷಿತ ಸಮುದಾಯಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳ ಮೇಲೆ ವಿಶೇಷವಾದ ಬೆಳಕು ಚೆಲ್ಲುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿವೆ. ಈ ಅಧ್ಯಯನ ಕ್ರಮಗಳು ದೇಶೀಯ ಸಂಸ್ಕೃತಿಯನ್ನು ಜಾಗತಿಕತೆಯೊಂದಿಗೆ ಅನುಸಂಧಾನಗೊಳಿಸುವಲ್ಲಿ ಮಹತ್ವದಿಂದ ಕೂಡಿವೆ. ಜಾನಪದವು ಜಾಗತಿಕ ಮಹತ್ವ ಪಡೆದುಕೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನವು ಸೂಕ್ತವೆಂದು ಭಾವಿಸಲಾಗಿದೆ.

ಲಾವಣಿ, ಗೀತೆ, ಕತೆ, ಒಗಟು, ಗಾದೆ, ಮಹಾಕಾವ್ಯ, ಸಮುದಾಯ, ಕಲೆ, ರಂಗಭೂಮಿ, ಆಚರಣೆ, ಸಂಪ್ರದಾಯ ಇತ್ಯಾದಿಗಳ ಬಗ್ಗೆ ಸಮಗ್ರವಾದ ಅಧ್ಯಯನಗಳು ನಡೆದಿವೆ. ಜಾನಪದ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳಲ್ಲಿನ ವಿಶೇಷತೆಗಳನ್ನು ಗುರುತಿಸುವುದು ಮಹತ್ವವೆನಿಸಿದೆ.

ಜಾನಪದವನ್ನು ದೇಶಿಯ ವಿದ್ವಾಸರು ಪಾಶ್ಚಾತ್ಯ ಜಾನಪದ ಸಿದ್ಧಾಂತಗಳನ್ನು ಬಳಸಿಕೊಂಡು ಆಧುನಿಕ ಸಂದರ್ಭದಲ್ಲಿ ಅಧ್ಯಯನಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಇಂತಹ ಪಾಶ್ಚಿಮಾತ್ಯ ಸಿದ್ಧಾಂತಗಳು ಕನ್ನಡ ಜಾನಪದ ಅಧ್ಯಯನಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಎತ್ತಿಹಿಡಿಯುವುದು ಇಂದಿಗೆ ಸೂಕ್ತವೆಂದು ಭಾವಿಸಲಾಗಿದೆ.

ವಸಾಹತೋತ್ತರ ಕಾಲಘಟ್ಟದಲ್ಲಿನ ಜಾನಪದ ವಿದ್ವಾಂಸರು ಜನಪದ ಸಾಹಿತ್ಯವನ್ನು ಸಂಗ್ರಹ ಮತ್ತು ಸಂಶೋಧನೆ ಮಾಡಲು ಮುಂದಾದರು. ಇಂತಹ ಅಧ್ಯಯನಗಳ ತಾತ್ವಿಕ ಹಿನ್ನೆಲೆ ಹಾಗೂ ಅದರ ಸ್ವರೂಪವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಾವಿರಾರು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಅಲಕ್ಷಿತ ಸಮುದಾಯಗಳಲ್ಲಿ ಅಂತರ್ಗತವಾಗಿದ್ದ ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನವನ್ನು ಕನ್ನಡ ಜಾನಪದ ಅಧ್ಯಯನಗಳು

ಮಾಡಿವೆ. ಇಂತಹ ಅಧ್ಯಯನ ಕ್ರಮಗಳಿಂದ ಸಮುದಾಯಗಳ ಸಾಹಿತ್ಯ ಮತ್ತು ಸಾಂಸ್ಕೃತಿಕ ಹಿರಿಮೆ ಹೆಚ್ಚಾಗುತ್ತಿದೆ. ಅದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಇಂತಹ ಅಧ್ಯಯನಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು ಸೂಕ್ತವೆಂದು ಭಾವಿಸಲಾಗಿದೆ.

ವಸಾಹತುಶಾಹಿ ಕಾಲಘಟ್ಟ ನಂತರದಲ್ಲಿ ಕನ್ನಡದ ಜಾನಪದ ಸಾಹಿತ್ಯದ ಅಧ್ಯಯನಕಾರರಿಗೆ ಇಲ್ಲಿನ ಸ್ಥಳೀಯ ಜನ ಜೀವನದ ಭಾಗವಾಗಿ ಬೆಳೆದು ಬಂದಿರುವ ಜನಪದ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಲು ಪ್ರೇರಣೆಯಾದ ಅಂಶಗಳನ್ನು ಗುರುತಿಸುವುದು. ಹಾಗೆಯೇ ಇವರ ಅಧ್ಯಯನಗಳಲ್ಲಿ ಅಭಿವ್ಯಕ್ತವಾಗಿರುವ ಸೈದ್ಧಾಂತಿಕ ಆಯಾಮಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಮಹತ್ವಗಳಲ್ಲೊಂದಾಗಿದೆ.

ಜಾನಪದದ ಕುರಿತಾಗಿ ಇಂದು ಜಾಗತಿಕ ಮಟ್ಟದಲ್ಲಿ ಚರ್ಚೆ, ಸಂವಾದ, ಸಂಕಿರಣಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಕನ್ನಡ ಜಾನಪದ ವಿದ್ವಾಂಸರು ಜಾನಪದ ಸಾಹಿತ್ಯದ ಅಧ್ಯಯನದ ಮೂಲಕ ನಾಡಿನ ಸಾಂಸ್ಕೃತಿಕ ಮೌಲ್ಯವನ್ನು ಎತ್ತಿಹಿಡಿದಿರುವ ಬಗೆಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಮಹತ್ವದ್ದಾಗಿದೆ.

ಜಾನಪದವು ಇಂದು ಅಧ್ಯಯನ ವಿಷಯವಾಗಿ ಹಲವಾರು ಪಠ್ಯಕ್ರಮಗಳಲ್ಲಿ ತನ್ನ ಸ್ಥಾನಮಾನವನ್ನು ಪಡೆದುಕೊಂಡಿದೆ. ಹಾಗೆಯೇ ಜಾನಪದ ಅಧ್ಯಯನಕ್ಕಾಗಿಯೇ ಪ್ರತ್ಯೇಕವಾಗಿ ವಿಶ್ವವಿದ್ಯಾಲಯಗಳನ್ನು ಇಂದು ತಲೆ ಎತ್ತುತ್ತಲಿವೆ. ಇದಕ್ಕೆ ಕರ್ನಾಟಕವು ಹೊರತಾಗಿಲ್ಲ. ಇಂತಹ ಸಂದರ್ಭದಲ್ಲಿ ವಸಾಹತೋತ್ತರ ಕಾಲದಲ್ಲಿ ದೇಶಿಯ ವಿದ್ವಾಂಸರ ಶ್ರಮದ ಫಲವಾಗಿ ನಡೆದ ಅಧ್ಯಯನಗಳ ವಿಶ್ಲೇಷಣೆಗೆ ಪ್ರಾಮುಖ್ಯತೆ ಕೊಡಲಾಗಿದೆ.

ವಸಾಹತು ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ನಡೆದಿರುವ ಜಾನಪದ ಅಧ್ಯಯನಗಳನ್ನು ತೌಲನಿಕವಾಗಿ ವಿಶ್ಲೇಷಣೆಗೆ ಒಳಪಡಿಸುವುದರಿಂದ ಈ ಎರಡು ಅಧ್ಯಯನ ಕ್ರಮಗಳಲ್ಲಿರುವ ಸಾಮ್ಯತೆ ಹಾಗೂ ಭಿನ್ನತೆಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಹಾಗೆಯೇ ಕಾಲದಿಂದ ಕಾಲಕ್ಕೆ ಆದಂತಹ ಸೂಕ್ಷ್ಮ ಪಲ್ಲಟಗಳು ಹಾಗೂ ಅಧ್ಯಯನ ಕ್ರಮದಲ್ಲಿನ ಬೆಳವಣಿಗೆಯನ್ನು ಅರಿಯುವಲ್ಲಿ ಪ್ರಸ್ತುತ ಸಂಶೋಧನೆಯ ವಿಶ್ಲೇಷಣ ಕ್ರಮವು ಇಂದಿಗೆ ಮಹತ್ವವೆಂದು ಭಾವಿಸಲಾಗಿದೆ.

೧.೩.ಅಧ್ಯಯನದ ವ್ಯಾಪ್ತಿ:

'ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ನಿರ್ದಿಷ್ಟವಾದ ನೆಲೆಯಲ್ಲಿ ಇದರ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ. ಇದನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ಗುರುತಿಸಲಾಗಿದೆ.

ವಸಾಹತೋತ್ತರ ಕಾಲಘಟ್ಟವನ್ನು ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ನಿಗದಿಪಡಿಸಿಕೊಳ್ಳಲಾಗಿದೆ. ಹೀಗಾಗಿ ಭಾರತಕ್ಕೆ ಸ್ವಾತಂತ್ರ್ಯಲಭಿಸಿದ ನಂತರ ನಡೆದಿರುವ ಪ್ರಮುಖ ಕನ್ನಡ ಜಾನಪದ ಅಧ್ಯಯನಗಳು ಇಲ್ಲಿನ ಅಧ್ಯಯನದ ಚೌಕಟ್ಟುಗಳಾಗಿವೆ. ಆದ್ದರಿಂದ ಸ್ವಾತಂತ್ರ್ಯ ದೊರೆತ ಕಾಲದಿಂದ ಸಮಕಾಲೀನ ಸಂದರ್ಭದವರೆಗೆ ಪ್ರಕಟವಾಗಿರುವ ಮುಖ್ಯ ಸಂಶೋಧನ ಕೃತಿಗಳು ಹಾಗೂ ಅದಕ್ಕೆ ಸಂಬಂಧಿಸಿದ ಲೇಖನಗಳನ್ನು ಇಲ್ಲಿ ಪ್ರಮುಖ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಕನ್ನಡದ ಜನಪದ ಸಾಹಿತ್ಯದ ಕುರಿತಾಗಿದ್ದರೂ, ಅಗತ್ಯವಿದ್ದಾಗ ಹಾಗೂ ಪ್ರಾಸಂಗಿಕವಾಗಿ ಚರ್ಚೆ ನಡೆಸುವಾಗ ಕನ್ನಡೇತರ ಭಾಷೆಯಲ್ಲಿ ನಡೆದಿರುವ ಜಾನಪದ ಅಧ್ಯಯನದ ಕೃತಿಗಳನ್ನು ಆಧ್ಯಯನದ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಜಾನಪದ ಪರಂಪರೆಯ ವಿವಿಧ ಪ್ರಕಾರಗಳಾದ ಕತೆ, ಗಾದೆ, ಒಗಟು, ಲಾವಣಿ, ಗೀತೆ, ಕಾವ್ಯ, ಸಮುದಾಯ, ಕಲೆ, ಆಚರಣೆ, ಸಂಪ್ರದಾಯ ಮುಂತಾದವುಗಳನ್ನು ಕುರಿತು ವಸಾಹತೋತ್ತರ ಕಾಲದ ಜಾನಪದ ವಿದ್ವಾಂಸರು ನಡೆಸಿದ ಸಂಶೋಧನೆಗಳನ್ನು ಪ್ರಮುಖ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಸಂಗ್ರಹ, ಸಂಪಾದಿತ ಕೃತಿಗಳನ್ನು ಹೊರತುಪಡಿಸಿ ಪ್ರಾತಿನಿಧಿಕವಾಗಿ ಜಾನಪದದ ಕುರಿತು ಅಕಾಡೆಮಿಕ್ ವಲಯದಲ್ಲಿ ಸಂಶೋಧನೆಗೊಂಡಿರುವ ಪ್ರಬಂಧಗಳನ್ನು ವಿಶ್ಲೇಷಣೆಗೆ ಆಯ್ದುಕೊಳ್ಳಲಾಗಿದೆ. ಪ್ರಮುಖವಾಗಿ ಬಿ.ಎಸ್.ಗದ್ದಗೀಮಠ, ಜೀ.ಶಂ.ಪರಮಶಿವಯ್ಯ, ಚಂದ್ರಶೇಖರ ಕಂಬಾರ, ಡಿ.ಕೆ.ರಾಜೇಂದ್ರ, ತೀ.ನಂ.ಶಂಕರನಾರಾಯಣ, ಪಿ.ಕೆ.ಖಂಡೋಬ, ಹಿ.ಶಿ.ರಾಮಚಂದ್ರೆ ಗೌಡ, ಶ್ರೀಕಂಠಕೂಡಿಗೆ, ಕೃಷ್ಣಮೂರ್ತಿ ಹನೂರು, ಬಸವರಾಜ ಮಲಶೆಟ್ಟಿ, ಕೆ.ಚಿನ್ನಪ್ಪಗೌಡ, ಕೆ.ಆರ್.ಸಂಧ್ಯಾರೆಡ್ಡಿ, ವೀರಣ್ಣ ದಂಡೆ, ಕಾಳೇಗೌಡ ನಾಗಾವರ, ಸಿದ್ಧಲಿಂಗಯ್ಯ, ಮೀರಾಸಾಬಿಹಳ್ಳಿ ಶಿವಣ್ಣ, ಬಿ.ಎ.ವಿವೇಕ ರೈ, ಗಾಯತ್ರಿ ನಾವಡ ಇತ್ಯಾದಿ ವಿದ್ವಾಂಸರ ಪ್ರಬಂಧಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೪. ಅಧ್ಯಯನದ ಸ್ವರೂಪ:

'ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ' ಎಂಬ ಸಂಶೋಧನಾ ವಿಷಯವನ್ನು ಒಟ್ಟಾರೆಯಾಗಿ ಒಂಭತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ಗುರುತಿಸಲಾಗಿದೆ;

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ, ಅಧ್ಯಯನದ ವಿಧಾನಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಪರಿಕಲ್ಪನಾತ್ಮಕ ಚರ್ಚೆಯನ್ನು ಮಾಡಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಶೀರ್ಷಿಕೆಯನ್ನು ಕುರಿತು ಸ್ಪಷ್ಟೀಕರಿಸಿಕೊಳ್ಳಲಾಗಿದೆ. ವಸಾಹತೋತ್ತರ, ಜನಪದ ಸಾಹಿತ್ಯ,

ಅಧ್ಯಯನ, ವಿಶ್ಲೇಷಣೆ ಎಂಬ ಪರಿಭಾಷೆಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಈ ಪರಿಭಾಷೆಗಳಿಗೆ ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ಪ್ರಸ್ತಾಪಿಸಲಾಗಿದೆ. ಅಧ್ಯಯನದಲ್ಲಿ ಬಳಸಿಕೊಳ್ಳುವ ಆಕರಗಳನ್ನು ಪರಿಕಲ್ಪನಾತ್ಮಕವಾಗಿ ನೋಡುವ ಮಾದರಿಯನ್ನು ನೋಡಲಾಗಿದೆ.

ಅಧ್ಯಾಯ ಮೂರರಲ್ಲಿ 'ವಸಾಹತುಶಾಹಿ ಜನಪದ ಸಾಹಿತ್ಯ ಅಧ್ಯಯನ: ಪೂರ್ವಪೀಠಿಕೆ' ಎಂಬ ವಿಷಯ ಕುರಿತು ಚರ್ಚಿಸಲಾಗಿದೆ. ಪಾಶ್ಚಾತ್ಯ ಹಾಗೂ ದೇಶಿಯ ವಿದ್ವಾಂಸರು ಕನ್ನಡ ಜನಪದ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ಸಮೀಕ್ಷಿಸಲಾಗಿದೆ. ಹಾಗೆಯೇ ದೇಶೀಯ ವಿದ್ವಾಂಸರು ಪಾಶ್ಚಾತ್ಯ ಅಧ್ಯಯನ ಮಾದರಿಯನ್ನು ಅನುಸರಿಸಿಕೊಂಡು ವಸಾಹತುಶಾಹಿಗೆ ಪ್ರತಿಕ್ರಿಯಿಸಿದ ಬಗೆಯನ್ನು ವಿವರಿಸಲಾಗಿದೆ. ವಸಾಹತುಶಾಹಿ ಹಿಡಿತದಿಂದ ಸಾಂಸ್ಕೃತಿವಾಗಿ ಬಿಡುಗಡೆಗೊಳ್ಳುವ ತವಕದಲ್ಲಿ ಮೌಖಿಕ ಸಾಹಿತ್ಯವನ್ನು ಅಧ್ಯಯನ ಮಾಡಿರುವ ಸ್ವರೂಪವನ್ನು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ 'ಸ್ವತಂತ್ರ್ಯೋತ್ತರ ಕಾಲದ ಜಾನಪದ ಅಧ್ಯಯನದ ಆಯಾಮಗಳು' ಎಂಬ ಶೀರ್ಷಿಕೆಯಲ್ಲಿ ದೇಶಿ ದೃಷ್ಟಿಕೋನ, ಶೈಕ್ಷಣಿಕ ಅಧ್ಯಯನ, ಸಾಂಸ್ಕೃತಿಕ ನೆಲೆಗಳು ಎಂಬ ಉಪ ಶೀರ್ಷಿಕೆಯಲ್ಲಿ ಜಾನಪದವನ್ನು ವಿವರಿಸಲಾಗಿದೆ. ವಸಾಹತು ಕಾಲದ ಜಾನಪದ ಅಧ್ಯಯನವನ್ನು ವೈಜ್ಞಾನಿಕವಾಗಿ ಅನುಸಂಧಾನಗೊಳಿಸಿದ ಬಗೆಯನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾನಪದವನ್ನು ಶೈಕ್ಷಣಿಕ ಶಿಸ್ತಿಗೆ ಒಳಪಡಿಸಿಕೊಂಡು ಅಜ್ಞಾತವಾಗಿದ್ದ ಜನಪದ ಸಾಹಿತ್ಯ ಪ್ರಕಾರಗಳನ್ನು ಬೆಳಕಿಗೆ ತಂದ ಅಂಶಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ 'ಸಾಹಿತ್ಯ ಪ್ರಧಾನ ಅಧ್ಯಯನಗಳು' ಎಂಬುದಾಗಿದ್ದು, ಇದರಲ್ಲಿ ವಸಾಹತೋತ್ತರ ಕಾಲದಲ್ಲಿ ಜನಪದ ಕುರಿತು ಸಂಶೋಧನೆಗಳು ಪ್ರಾರಂಭವಾದ ಬಗೆ ಹಾಗೂ ಪ್ರಾದೇಶಿಕವಾಗಿ ಜನಪದವನ್ನು ಆಯ್ಕೆ ಮಾಡಿಕೊಂಡು ಹೊಸ ಹೊಸ ಮೌಖಿಕ ಪ್ರಕಾರಗಳನ್ನು ಬೆಳಕಿಗೆ ತಂದ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆ ನೆಲೆಯಲ್ಲಿ ಬಿ.ಎಸ್.ಗದ್ದಗೀಮಠ, ಜೀ.ಶಂ.ಪರಮಶಿವಯ್ಯ ಮತ್ತು ಬಿ.ಎ.ವಿವೇಕ ರೈ, ವೀರಣ್ಣ ದಂಡೆ ಮುಂತಾದವರನ್ನು ಹೆಸರಿಸಬಹುದು. ಈ ಅಧ್ಯಾಯದಲ್ಲಿ ಇವರ ಜಾನಪದ ಸಂಶೋಧನಾ ಕೃತಿಗಳನ್ನು ಸಾಹಿತ್ಯ ಪ್ರಧಾನ ನೆಲೆಯಲ್ಲಿ ತಾತ್ವಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಇಲ್ಲಿ ಪ್ರಾದೇಶಿಕವಾಗಿ ಅಧ್ಯಯನ ಮಾಡಿರುವ ಈ ವಿದ್ವಾಂಸರ ಸಂಶೋಧನಾ ಪ್ರಬಂಧಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರು 'ಸಮುದಾಯ ಕೇಂದ್ರಿತ ಅಧ್ಯಯನಗಳು' ಎಂಬುದಾಗಿದ್ದು, ಇಲ್ಲಿ ಜಾನಪದ ಸಾಹಿತ್ಯ ಜೊತೆಗೆ ಸಮುದಾಯಗಳನ್ನು ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಸಾಂಸ್ಕೃತಿಕವಾಗಿ ಅಧ್ಯಯನಕ್ಕೆ ಒಳಪಡಿಸಿರುವ ಮಾದರಿಯನ್ನು ವಿವೇಚಿಸಲಾಗಿದೆ. ಮೌಖಿಕ ಸಾಹಿತ್ಯದಲ್ಲಿ ಸಮುದಾಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ೬೦ರ ದಶಕದಲ್ಲಿ ಜಾನಪದೀಯ ನೆಲೆಯಲ್ಲಿ ಸಮುದಾಯಗಳನ್ನು

ಅಧ್ಯಯನ ಮಾಡಿರುವ ತೀ.ನಂ.ಶಂಕರನಾರಾಯಣ ಮತ್ತು ಕೃಷ್ಣಮೂರ್ತಿ ಹನೂರ ಅವರ ಸಂಶೋಧನಾ ಗ್ರಂಥಗಳನ್ನು ಕೇಂದ್ರವಾಗಿಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಏಳು 'ಆಚರಣಾ ಪ್ರಧಾನ ಅಧ್ಯಯನಗಳು' ಎಂಬುದಾಗಿದ್ದು, ಇಲ್ಲಿ ಜಾನಪದವೆಂದರೆ ಬರೀ ಸಾಹಿತ್ಯವಲ್ಲ ಅದು ಸಾಹಿತ್ಯೇತರ ಪ್ರಕಾರಗಳಾದ ಆಚರಣೆ, ಸಂಪ್ರದಾಯ, ಕಲೆ, ವೈದ್ಯ, ಸಮುದಾಯ ಇತ್ಯಾದಿ ಅಂಶಗಳನ್ನು ಒಳಗೊಳ್ಳುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ಕರಾವಳಿ ಭಾಗದಲ್ಲಿ ಕಂಡುಬರುವ ವಿಶಿಷ್ಟ ಆಚರಣೆಗಳ ಅಧ್ಯಯನಗಳನ್ನು ಚರ್ಚಿಸಲಾಗಿದೆ. ಕೆ.ಚಿನ್ನಪ್ಪಗೌಡ, ಗಾಯತ್ರಿ ನಾವಡ ಅವರು ಈ ಭಾಗದ ಜಾನಪದದ ಕುರಿತು ಸಂಶೋಧನೆ ಮಾಡಿದ್ದಾರೆ. ಇವರ ಸಂಶೋಧನಾ ಕೃತಿಯ ಮೂಲಕ ಆಚರಣೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಎಂಟು 'ಕನ್ನಡ ಜನಪದ ರಂಗಭೂಮಿ' ಎಂಬುದಾಗಿದ್ದು, ಇಲ್ಲಿ ಕನ್ನಡ ಜಾನಪದ ರಂಗಭೂಮಿ ಕುರಿತು ಶೈಕ್ಷಣಿಕ ಶಿಸ್ತಿನ ನೆಲೆಯಲ್ಲಿ ಸಂಶೋಧನೆಗೆ ಒಳಪಟ್ಟಿರುವ ಪ್ರಮುಖ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕನ್ನಡ ಜಾನಪದ ರಂಗಭೂಮಿ ವಸಾಹುತುಶಾಹಿ ಕಾಲಘಟ್ಟದಲ್ಲಿ ಪ್ರತಿಕ್ರಿಯಿಸಿದ ಬಗೆಯನ್ನು ಚರ್ಚಿಸಲಾಗಿದೆ. ಶಿವರಾಮ ಕಾರಂತ, ಚಂದ್ರಶೇಖರ ಕಂಬಾರ, ಡಿ.ಕೆ.ರಾಜೇಂದ್ರ, ಬಸವರಾಜ ಮಲಶೆಟ್ಟಿ ಮುಂತಾದ ವಿದ್ವಾಂಸರು ಪ್ರಾದೇಶಿಕವಾಗಿ ಜನಪದ ರಂಗಭೂಮಿಯನ್ನು ಅಧ್ಯಯನ ಮಾಡಿದ್ದಾರೆ. ಇವರ ಸಂಶೋಧನಾ ಕೃತಿಗಳನ್ನ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಒಂಭತ್ತು 'ಸಮಾರೋಪ'ವಾಗಿದ್ದು ಇಲ್ಲಿ ಒಟ್ಟಾರೆ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಗುರುತಿಸಲಾಗಿದೆ. ಜಾನಪದ ಸಾಹಿತ್ಯದ ಅಧ್ಯಯನದ ಮುಂದಿನ ಸಾಧ್ಯತೆ ಮತ್ತು ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ.

೧.೫. ಅಧ್ಯಯನದ ವಿಧಾನ:

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ವಿಷಯವು ಪಠ್ಯ ಕೇಂದ್ರಿತವಾಗಿರುವುದರಿಂದ ಪರಾಮರ್ಶನ ಮಾದರಿಯನ್ನು ಅಧ್ಯಯನದ ಪ್ರಧಾನ ವಿಧಾನವಾಗಿ ಗುರುತಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮಾದರಿಯನ್ನು ಇಲ್ಲಿ ಪ್ರಮುಖವಾಗಿ ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನವು ಪಠ್ಯ ಕೇಂದ್ರಿತವಾಗಿದ್ದರು ಕೂಡ ಅಧ್ಯಯನದ ಅನುಕೂಲಕ್ಕಾಗಿ ಕ್ಷೇತ್ರಕಾರ್ಯ ಮಾದರಿಯನ್ನು ಅನುಸರಿಸಲಾಗಿದೆ. ಹಾಗೆಯೇ ಜಾನಪದ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಅಧ್ಯಯನಕ್ಕೆ ಆಯ್ದುಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸುವ ಕಾರಣದಿಂದಾಗಿ ವಿದ್ವಾಂಸರೊಂದಿಗೆ ಸಂದರ್ಶನ, ಸಂವಾದ ಹಾಗೂ ಚರ್ಚೆಯನ್ನು ನಡೆಸಲಾಗಿದೆ. ಇಲ್ಲಿನ ಅಧ್ಯಯನ ವಿಷಯವು ವಸಾಹತೋತ್ತರ ಕಾಲಕ್ಕೆ ಸೀಮಿತವಾಗಿದ್ದರು ಕೂಡ, ಅಧ್ಯಯನದ

ಅನುಕೂಲಕ್ಕಾಗಿ ವಸಾಹತು ಕಾಲದ ಜಾನಪದ ಅಧ್ಯಯನಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗಾಗಿ ಇಲ್ಲಿ ತೌಲನಿಕ ಅಧ್ಯಯನ ವಿಧಾನದ ಮೂಲಕವಾಗಿಯೂ ಸಂಶೋಧನ ವಿಧಾನವನ್ನು ಮುಂದುವರಿಸಲಾಗಿರುತ್ತದೆ. ಈ ಮೇಲೆ ಚರ್ಚಿಸಿದ ವಿಧಾನಗಳ ಮೂಲಕ ಪ್ರಸ್ತುತ ಸಂಶೋಧನಾ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ : ಎರಡು
ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ಎರಡು

ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ

'ವಸಾಹತೋತ್ತರ ಕಾಲದ ಕನ್ನಡ ಜನಪದ ಸಾಹಿತ್ಯ ಅಧ್ಯಯನಗಳ ವಿಶ್ಲೇಷಣೆ' ಎಂಬ ವಿಷಯವನ್ನು ಇಲ್ಲಿ ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ವಿಷಯವನ್ನು ಸಂಶೋಧನೆಗೆ ಗುರಿಪಡಿಸುವ ಮೊದಲು ಇಲ್ಲಿನ ಪ್ರಮುಖ ತಾತ್ವಿಕ ಪರಿಕಲ್ಪನೆಗಳನ್ನು ಅರ್ಥೈಸುವುದು ಸೂಕ್ತವೆಂದು ಭಾವಿಸಲಾಗಿದೆ. ಆದ್ದರಿಂದ ಇಲ್ಲಿ ಸಂಶೋಧನಾ ವಿಷಯದಲ್ಲಿ ಕಂಡುಬರುವ ಪ್ರಮುಖ ಪರಿಕಲ್ಪನೆಗಳಾದ ವಸಾಹತೋತ್ತರ, ಜನಪದ ಸಾಹಿತ್ಯ ಮತ್ತು ಅಧ್ಯಯನಗಳ ವಿಶ್ಲೇಷಣೆ ಎಂಬ ಮೂರು ನೆಲೆಯಲ್ಲಿ ಇಲ್ಲಿನ ಪ್ರಮುಖ ಪರಿಕಲ್ಪನೆಗಳನ್ನು ಚರ್ಚೆಗೆ ಒಳಪಡಿಸಿದೆ. ಪ್ರಸ್ತುತ ಅಧ್ಯಯನದ ಮೊದಲ ಹಂತವಾಗಿರುವ 'ವಸಾಹತೋತ್ತರ ಕಾಲ' ಎಂಬ ಭಾಗದಲ್ಲಿ ಇದರ ಅರ್ಥ, ಹಿನ್ನೆಲೆ, ಸ್ವರೂಪ ಹಾಗೂ ವಸಾಹತೋತ್ತರ ಪರಿಕಲ್ಪನೆ ಬೆಳೆದು ಬಂದ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಹಾಗೆಯೇ ಕನ್ನಡ ಜನಪದ ಸಾಹಿತ್ಯದಲ್ಲಿ ಮೇಲೆ ವಸಾಹತೋತ್ತರ ಕಾಲದ ಸಂದರ್ಭವು ಬೀರಿರುವ ಪ್ರಭಾವವನ್ನು ಇಲ್ಲಿ ಚರ್ಚಿಸಲಾಗುವುದು.

'ಜನಪದ ಸಾಹಿತ್ಯ' ಎಂಬ ಭಾಗದಲ್ಲಿ ಜನಪದ ಪರಿಕಲ್ಪನೆಯ ಕುರಿತ ಅದರ ಅರ್ಥ, ವ್ಯಾಪ್ತಿ, ಸ್ವರೂಪ ಹಾಗೂ ಕನ್ನಡದಲ್ಲಿ ಜನಪದ ಸಾಹಿತ್ಯ ಬೆಳೆದ ಬಂದ ಬಗೆಯನ್ನು ಹಾಗೂ ಸಾಹಿತ್ಯ ಮತ್ತು ಜನಪದ ನಡುವಿನ ಸಂಬಂಧವನ್ನು ಪರಿಕಲ್ಪನಾತ್ಮಕ ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸಲಾಗುವುದು. ಹಾಗೆಯೇ ಪ್ರಸ್ತುತ ಅಧ್ಯಯನದ ಮತ್ತೊಂದು ಪ್ರಮುಖ ತಾತ್ವಿಕ ಪರಿಕಲ್ಪನೆಯಾದ 'ಅಧ್ಯಯನಗಳ ವಿಶ್ಲೇಷಣೆ' ಎಂಬ ಭಾಗವನ್ನು ಚರ್ಚೆಗೆ ಒಳಪಡಿಸಲಾಗುವುದು. ಇಲ್ಲಿ ಪ್ರಮುಖವಾಗಿ ಅಧ್ಯಯನ ಮತ್ತು ವಿಶ್ಲೇಷಣೆ ಎಂಬ ಪರಿಕಲ್ಪನೆಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗುವುದು. ಆ ಮೂಲಕ ಅಧ್ಯಯನ ಮತ್ತು ವಿಶ್ಲೇಷಣೆ ಪದಗಳ ನಡುವಿನ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಗುರುತಿಸಲಾಗುವುದು. ಹೀಗೆ ಇಲ್ಲಿನ ಪ್ರಮುಖ ಪರಿಕಲ್ಪನೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಸ್ಪಷ್ಟತೆಯನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಮುಂದುವರೆಯಲಾಗುವುದು. ಈ ಕ್ರಮದಿಂದ ಒಟ್ಟಾರೆಯಾಗಿ ಸಂಶೋಧನೆಗೆ ಆಯ್ದುಕೊಂಡಿರುವ ವಿಷಯದ ಬಗೆಗೆ ಸ್ಪಷ್ಟತೆಯನ್ನು ಕಂಡುಕೊಳ್ಳಲಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಈ ಮೇಲಿನ ಮೂರು ಪ್ರಮುಖ ಪರಿಕಲ್ಪನೆಗಳನ್ನು ಅಧ್ಯಯನದ ಚೌಕಟ್ಟಿಗೆ ಒಳಪಡಿಸುವ ಮೂಲಕ ಸಂಶೋಧನಾತ್ಮಕ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳಲಾಗುವುದು. ಇದರಿಂದ ಮುಂದಿನ ಅಧ್ಯಯನದ ಸಂದರ್ಭದಲ್ಲಿ ಎದುರಾಗುವ ಗೊಂದಲ ಹಾಗೂ ಅಸ್ಪಷ್ಟತೆಗೆ ಪರಿಹಾರ ಲಭಿಸುತ್ತದೆ. ಆದ ಕಾರಣ ಪ್ರಸ್ತುತ ಅಧ್ಯಾಯವಾಗಿರುವ 'ಪರಿಕಲ್ಪನಾತ್ಮಕ ಚರ್ಚೆ' ಎಂಬ ಭಾಗದಲ್ಲಿ ಸಂಶೋಧನೆಗೆ ಆಯ್ದುಕೊಂಡ ವಿಷಯದ ಬಗೆಗೆ ಸ್ಪಷ್ಟತೆಯನ್ನು ಕಂಡುಕೊಳ್ಳಲಾಗುವುದು.

೧. ವಸಾಹತೋತ್ತರ ಕಾಲ

ಇಲ್ಲಿ ಪ್ರಮುಖವಾಗಿ ಅಧ್ಯಯನದ ದೃಷ್ಟಿಯಿಂದಾಗಿ ವಸಾಹತುಶಾಹಿ ಕಾಲಘಟ್ಟ ಮತ್ತು ವಸಾಹತೋತ್ತರ ಕಾಲಘಟ್ಟ ಎಂಬುದಾಗಿ ಎರಡು ನೆಲೆಗಳನ್ನು ಗುರುತಿಸಿಕೊಳ್ಳಲಾಗಿದೆ. ಹದಿನೆಂಟನೆಯ ಶತಮಾನದ ಆದಿಯಿಂದ ಇಪ್ಪತ್ತನೆಯ ಶತಮಾನದ ಮೊದಲ ಭಾಗದವರೆಗಿನ ಕಾಲಘಟ್ಟವನ್ನು ವಸಾಹತುಶಾಹಿ ಕಾಲವೆಂದು ಗುರುತಿಸಬಹುದು. ವಸಾಹತುಶಾಹಿ ಕಾಲವೆಂದರೆ ಭಾರತದ ಜನಜೀವನವನ್ನು ಒಳಗಿನ ಮತ್ತು ಹೊರಗಿನ ಶಕ್ತಿಗಳು ಏಕಕಾಲದಲ್ಲಿ ಆಕ್ರಮಿಸಿ ಭಾರತದ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣೀಕ, ಚಟುವಟಿಕೆಗಳು ಬದಲಾವಣೆಯಾಗಿ ಜನಜೀವನದಲ್ಲಿ ತಲ್ಲಣವನ್ನುಂಟು ಮಾಡಿದ ಕಾಲವಾಗಿದೆ. ವಿದೇಶಿ ಶಕ್ತಿಗಳು ಭಾರತದ ಮೇಲೆ ನಡೆಸಿದ ಅಧಿಕಾರದ ಹೇರಿಕೆಯ ಭಾಗವಾಗಿ ಇದು ಬೆಳೆದು ಬಂದಿದೆ. "ವಸಾಹತುಶಾಹಿ ಎನ್ನುವುದು ಆಧುನಿಕವಾದ, ಸಂಕೀರ್ಣವಾದ, ಬಂಡವಾಳ ಕೇಂದ್ರಿತವಾದ ಹಾಗೂ ವಿರೋಧಭಾಸಗಳಿಂದ ಕೂಡಿದ ಪರಿಕಲ್ಪನೆಯಾಗಿದೆ. ಅದು ಒಡಂಬಡಿಕೆ, ಹೇರಿಕೆ, ಬಲಪ್ರಯೋಗ, ಮುಂತಾದ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆದಿರುವಂತದ್ದು"[೧] ಭಾರತದ ಜನಜೀವನವನ್ನು ಒಳಗಿನ ಶಕ್ತಿಯಾದ ಪುರೋಹಿತಶಾಹಿಯು ಆಕ್ರಮಿಸಿ ಜನರನ್ನು ಅಜ್ಞಾನ ಅಂಧಕಾರಕ್ಕೆ ದೂಡಿತ್ತು. ಈ ಕಾಲದಲ್ಲಿ ಪಾಶ್ಚಾತ್ಯ ಸಂಸ್ಕೃತಿ, ಭಾಷೆ, ಶಿಕ್ಷಣ, ಆಡಳಿತ, ವೈಜ್ಞಾನಿಕ, ವೈಚಾರಿಕತೆಯ ಮಾದರಿಗಳು ನುಸುಳಿ ಭಾರತದ ಜನ ಜೀವನವನ್ನು ಪಲ್ಲಟಗೊಳಿಸಿದವು. ಎಲ್ಲ ವಲಯದಲ್ಲಿ ತೀವ್ರತರ ಬದಲಾವಣೆಗಳಾದವು. ಭಾರತವು ಬ್ರಿಟಿಷರ ಅಧೀನಕ್ಕೆ ಒಳಗಾಗಿದ್ದ ಸಂದರ್ಭದಲ್ಲಿ ಸ್ಥಳಿಯ ಪ್ರಭುತ್ವ ಬದುಕಿಗೆ ಜನ ಒಗ್ಗಿಹೋಗಿದ್ದರು. ಭಾರತದಲ್ಲಿ ಪರಕೀಯರ ಆಡಳಿತವು ಪ್ರಾರಂಭವಾಗಿ ಕಾಯ್ದೆ ಕಾನೂನುಗಳು ಜನರಲ್ಲಿ ಕಸಿವಿಸಿ ಉಂಟುಮಾಡಿದವು. ಇದರಿಂದ ವಸಾಹತುಶಾಹಿ ಆಡಳಿತದ ಬಗ್ಗೆ ಭಾರತೀಯರಲ್ಲಿ ಭುಗಿಲೆದ್ದಿತು. ಬ್ರಿಟಿಷರಿಂದ ವಿಮೋಚನೆ ಪಡೆಯಲು ಸಾಮಂತ ಪ್ರಭುಗಳು, ಪಾಳೇಗಾರರು, ಬುಡಕಟ್ಟು ಜನಾಂಗದವರು, ರೈತಾಪಿ ಜನರು ವಸಾಹತುಶಾಹಿ ವಿರುದ್ಧ ನಿರಂತರವಾಗಿ ಹೋರಾಟ ನಡೆಸಿದರು. ಸಾಮಂತ ಪ್ರಭುಗಳು, ಪಾಳೆಗಾರರು ಉತ್ತರ ಪ್ರಾಂತ್ಯದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬಂಡಾಯವೆದ್ದರೆ, ರಜಪೂತ ರೈತರು, ಒರಿಸ್ಸಾದ ರೈತರು, ಪೂನಮ್ ಬಡಕಟ್ಟು ಜನಾಂಗದವರು ಸ್ಥಳೀಯ ನಾಯಕತ್ವದಲ್ಲಿ ತಮ್ಮ ಕರ್ಮಭೂಮಿ ಹೋರಾಟ ನಡೆಸಿದರು. ಎಲ್ಲಾ ಬಂಡಾಯಗಳು ಅಂದಿನ ವಸಾಹತುಶಾಹಿ ವಿರುದ್ಧ ನಡೆಸಿದ ಹೋರಾಟಗಳಾಗಿದ್ದವು. "ಭಾರತದ ರಾಷ್ಟ್ರೀಯ ಚಳುವಳಿಯ ಇತರ ವಸಾಹತು ರಾಷ್ಟ್ರಗಳ ರಾಷ್ಟ್ರೀಯ

ಚಳವಳಿಗಿಂತಲೂ ಆಳವಾದ ಮತ್ತು ದೃಢವಾದ ಬೇರನ್ನು ವಸಾಹತುಶಾಹಿತ್ವದ ಪ್ರಭುತ್ವವು ಸ್ವಪ್ರಯೋಜನಕ್ಕಾಗಿ ಉಪಯೋಗಿಸುವ ವಿಧಾನದ ಸ್ವರೂಪ ಮತ್ತು ಲಕ್ಷಣವನ್ನು ವಸಾಹತುಶಾಹಿತ್ವದ ಹಿನ್ನೆಲೆಯಲ್ಲಿ ಪ್ರಾರಂಭಿಕ ನಾಯಕರು ಗುರುತಿಸಿದ್ದಾರೆ. ಜೊತೆಗೆ ೧೯ನೆಯ ಶತಮಾನದಲ್ಲಿ ಬೆಳವಣಿಗೆಯಾದ ವಸಾಹತುಶಾಹಿತ್ವದ ಆರ್ಥಿಕ ಶೋಷಣೆಯನ್ನು ವಿಮರ್ಶಿಸಿದರು. ಈ ವಿಮರ್ಶೆಯನ್ನು ಸಂಪತ್ತಿನ ಸೋರಿಕೆ ಸಿದ್ಧಾಂತ(ಡ್ರೈನ್ ಥಿಯರಿ)ಎಂದು ಕರೆಯುತ್ತಾರೆ. ಭಾರತದ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಈ ವಿಶ್ಲೇಷಣೆಯು ಪ್ರಾಯಶಃ ಮಹತ್ವದ ಕೊಡುಗೆಯಾಗಿತ್ತು. ನಂತರದ ಗಿಮ್ರೋಯ ಬೆಳವಣಿಗೆಯ ರಚನೆಯಲ್ಲಿ ಬಹುಮುಖ್ಯ ಭಾಗವಾದ ಜನಪ್ರಿಯ ಭಾಷಣಗಳು, ಕರಪತ್ರಗಳು, ವೃತ್ತ ಪತ್ರಿಕೆಗಳು, ನಾಟಕಗಳು, ಹಾಡುಗಳು, ಗಾದೆ ಮಾತುಗಳಲ್ಲಿ ವಸಾಹತುಶಾಹಿತ್ವದ ಶೋಷಣೆಯನ್ನು ಪ್ರತಿ ಬಿಂಬಿಸುತ್ತಿದ್ದವು"[೨] ಬ್ರಿಟಿಷರು ಮೊದಲ ಆದ್ಯತೆಯಾಗಿ ಕೈಗಾರಿಕೆಗೆ ಒತ್ತು ಕೊಟ್ಟು ವ್ಯಾಪಾರವನ್ನು ಭಾರತದಾದ್ಯಂತ ಕೇಂದ್ರಿಕರಿಸಿದರು. ನಂತರ ಭಾರತದ ರಾಜಕೀಯ, ಸಾಂಸ್ಕೃತಿಕ ವಿಚಾರಗಳನ್ನು ಅರ್ಥಮಾಡಿಕೊಳ್ಳುತ್ತಾ ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಂಡರು. ವಸಾಹತುಶಾಹಿತ್ವದ ಮೂಲಕ ಆಧುನಿಕ ವೈಚಾರಿಕ ಚಿಂತನೆಗಳು ಭಾರತಕ್ಕೆ ಪ್ರವೇಶ ಪಡೆದವು. ಇದರ ಫಲವಾಗಿ ಇಲ್ಲಿನ ವಿದ್ಯಾವಂತ ವರ್ಗ ವಸಾಹತುಶಾಹಿ ಸೃಷ್ಟಿಸಿದ ಬಿಕ್ಕಟ್ಟುಗಳನ್ನು ರಾಷ್ಟ್ರೀಯವಾದಿಯ ಹಿನ್ನೆಲೆಯಲ್ಲಿ ಎದುರಿಸಿದವು. "ವಸಾಹತುವಾದಿ ಸಂಕಥನವು ಈ ಯಜಮಾನ್ಯಕ್ಕಿಂತ ಕಡಿಮೆಯೇನೂ ಅಲ್ಲ, ಇದು ಚರಿತ್ರೆಯುದ್ದಕ್ಕೂ ದಮನಕಾರಿ ಯಜಮಾನ್ಯದ ಸಹಾಯಕನಂತೆಯೇ ವರ್ತಿಸಿದೆ. ಪಾಶ್ಚಿಮಾತ್ಯ ಯಜಮಾನ್ಯವನ್ನು ಸಂಸ್ಥಾಪಿಸುವ ಉದ್ದೇಶವುಳ್ಳ ವ್ಯಾಪಕ ಪುನಃ ಸಂಯೋಜನಾ ಪ್ರಕ್ರಿಯೆಯಾಗಿ ಇದು ಸದಾ ಕೆಲಸ ಮಾಡಿದೆ. ಜನರ ಆಲೋಚನಾ ಕ್ರಮಗಳನ್ನು, ಅನಿಸಿಕೆಗಳನ್ನು ಜನನಂಬಿಕೆಗಳನ್ನು ಅವರೇ, ಬದಲಿಸಿಕೊಳ್ಳುವಂತೆ ಮಾಡುವ ಸಾಧನವಾಗಿ ಅಷ್ಟೇ ಅಲ್ಲ, ಅವರ ನೈತಿಕ ನಿಯಮಗಳು ಮತ್ತವರ ಇತಿಹಾಸವನ್ನು ಅವರೇ ಬದಲಿಸಿಕೊಳ್ಳುವಂತೆ ಮಾಡುವ ಮಾರ್ಗೋಪಾಯವೂ ಆಗಿ, ಈ ವಸಾಹತು ಸಂಕಥನವು ಯಜಮಾನ್ಯದ ಕೈಯಲ್ಲಿ ಬಳಕೆಯಾಗಿದೆ"[೩]

ವಸಾಹತುಶಾಹಿಯನ್ನು ವಿರೋಧಿಸುವ ಅನೇಕ ಹೋರಾಟಗಳು ನಡೆದವು. ಅಲ್ಲದೆ ಕನ್ನಡ ಕೃತಿಗಳಲ್ಲಿ ಸ್ವಾತಂತ್ರ್ಯದ ಹೋರಾಟದ ವಸ್ತುವಾಗಿಟ್ಟುಕೊಂಡು ವಸಾಹತುಶಾಹಿ ಹೋರಾಟದ ಪ್ರಜ್ಞೆಯನ್ನು ವಿದ್ಯಾವಂತ ವರ್ಗವು ಜಾಗೃತಗೊಳಿಸಿದವು "ರಾಜಾರಾವ್‌ರವರ ಒಟ್ಟಾರೆ ಉದ್ದೇಶವೆಂದರೆ ಕಾಂತಾಪುರದಲ್ಲಿ ನಡೆದ ರೈತ ಬಂಡಾಯ ವಸಾಹತು ವಿರೋಧಿಯಾಗಿತ್ತು. ಬ್ರಿಟಿಷ್ ಆಡಳಿತವನ್ನು ವಿರೋಧಿಸಿ ಒಂದು ಪರ್ಯಾಯ ಸರಕಾರ ರಚನೆ ಮಾಡಬೇಕೆಂಬ ಉದ್ದೇಶ ರೈತರಿಗಿತ್ತು. ಬ್ರಿಟಿಷರಿಂದ ಸ್ವತಂತ್ರಗೊಳ್ಳಬೇಕು ಎಂಬ ಆಶಯವಿತ್ತು. ಹೀಗಾಗಿ, ಕೊನೆಗೆ ರೈತ ಬಂಡಾಯ ಸ್ವಾತಂತ್ರ್ಯ ಹೋರಾಟದಲ್ಲಿ ವಿಲೀನಗೊಂಡಿತು ಎಂಬ ಅಭಿಪ್ರಾಯವನ್ನು ಪದೇ ಪದೇ ಕಾದಂಬರಿಯ ಉದ್ದಕ್ಕೂ ಸಮರ್ಥಿಸುತ್ತ ಹೋಗುತ್ತಾರೆ"[೪] ಇಂತಹ ಶಿಷ್ಟ ಕೃತಿಗಳಲ್ಲಿ ಕಂಡು ಬರುವ ಕಥಾ ವಸ್ತುಗಳು ವ್ಯಾಪಕವಾಗಿ ವಸಾಹತುಶಾಹಿಯನ್ನು ವಿರೋಧಿಸುತ್ತಾ ಈ ನೆಲದ ಅಸ್ತಿತ್ವವನ್ನು ತೋರಿಸಿಕೊಟ್ಟವು.

ವಸಾಹತುಶಾಹಿ ಸಂದರ್ಭದ ಚಳುವಳಿಯಲ್ಲಿ ಗಾಂಧೀಯವರು ನಿರ್ಲಕ್ಷಕ್ಕೆ ಒಳಗಾದ ಜನರು ಭಾಗವಹಿಸುವಿಕೆ ರಾಷ್ಟ್ರ ಕಟ್ಟುವ ಪ್ರಕ್ರಿಯೆಯಲ್ಲಿ ಮುಖ್ಯವಾದುದು ಎಂದು ಗಮನಿಸಿದರು. ರೈತರ ಸಾಲ, ಕಂದಾಯ ಸಮಸ್ಯೆ, ಅವರ ಶೋಷಣೆಯ ಕುರಿತು ರಾಷ್ಟ್ರದಾದ್ಯಂತ ಒಂದು ಚರ್ಚೆಯನ್ನು ಆರಂಭಿಸಿದರು. “ರೈತರ ಅಭಿವೃದ್ಧಿಯ ಕುರಿತು ರಾಷ್ಟ್ರದಾದ್ಯಂತ ಒಂದು ಪ್ರಜ್ಞೆಯನ್ನು ಮೂಡಿಸಿದರು. ರೈತರ ಅಭಿವೃದ್ಧಿಯ ಕುರಿತು ಒಂದು ಯೋಚನೆ ರೂಪಿಸುವ ತಂತ್ರ ಹೂಡಿದರು. ಆದರೆ, ಅವರ ಸಮಸ್ಯೆಗಳು ನೇರವಾಗಿ ವಸಾಹತುಶಾಹಿ ಆಡಳಿತ ವೈಫಲ್ಯದ ಪರಿಣಾಮದಿಂದಲ್ಲ ಎಂಬುದು ಗಮನಾರ್ಹ ಅಂಶ”[೫] ಹಾಗಾಗಿ ಗಾಂಧೀಜಿಯ ಚಿಂತನೆಗಳು ಪಾಶ್ಚಾತ್ಯರು ರೂಪಿಸಿದ್ದ ಆಧುನಿಕತೆಯನ್ನು ನೇರವಾಗಿ ತಿರಸ್ಕರಿಸಿ ದೇಶಿಯತೆಯನ್ನು ಪ್ರತಿಪಾದಿಸುತ್ತಿದ್ದವು.

ವಸಾಹತುಶಾಹಿಯಿಂದ ಭಾರತೀಯ ಭಾಷೆಗಳ ಮೇಲೆ ಹಲವು ರೀತಿಯ ಪ್ರಭಾವಗಳಾಗಿವೆ. ಅದರಲ್ಲೂ ಪಾಶ್ಚಾತ್ಯರು ಮೊದಲು ಸ್ಥಳೀಯ ಭಾಷೆಗಳ ಮೇಲೆ ಹಿಡಿತವನ್ನು ಸಾಧಿಸಲು ಇಲ್ಲಿನ ಶಿಷ್ಟ ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡಿದ್ದರು. ಶಾಸನಗಳು, ಹಸ್ತಪ್ರತಿಗಳು, ಬಖೈರು, ನಾಮೆ, ಮುಂತಾದವುಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿದರು. ಅದರಲ್ಲಿ ಜಾನಪದ ಸಾಹಿತ್ಯವನ್ನು ಪ್ರಾದೇಶಿಕವಾಗಿ ಹಾಗೂ ಭಾಷಿಕವಾಗಿ ಸಹ ಅಧ್ಯಯನ ಮಾಡಿದರು. ಮುಖ್ಯವಾಗಿ ರಾಬರ್ಟ್ ಕಾಲ್ಡ್‌ವೆಲ್ ಅವರು ದ್ರಾವಿಡ ಭಾಷಾವರ್ಗ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದರು. ‘ಕಂಪ್ಯಾರೆಟಿವ್ ಗ್ರಾಮರ್ ಆಫ್ ಡ್ರೆವಿಡಿಯನ್ ಲ್ಯಾಂಗ್ವೇಜಸ್’(೧೮೫೬) ಇವರ ಮುಖ್ಯ ಕೃತಿಯಾಗಿದೆ. ವಸಾಹತುಶಾಹಿ ರೂಪಿಸಿದ ಅಧ್ಯಯನಗಳ ತಾತ್ವಿಕತೆಯು ಇದಾಗಿದೆ. “ದ್ರಾವಿಡ ಭಾಷೆಗಳೆಂದು ಕರೆಯಲಾಗುವ ಭಾಷಾವರ್ಗದಲ್ಲಿ ದಕ್ಷಿಣ ಭಾರತದ ಮಟ್ಟಿಗೆ ಹೇಳುವುದಾರೆ, ಸಾಹಿತ್ಯ ಪರಂಪರೆಯನ್ನು ಹೊಂದಿರುವ ಭಾಷೆಗಳಲ್ಲಿ ಕನ್ನಡಕ್ಕಿಂತ ಪ್ರಾಚೀನವಾದ ಇತಿಹಾಸವನ್ನು ಹೊಂದಿರುವ ಇನ್ನೊಂದು ಭಾಷೆ ಕಂಡುಬರುವುದಿಲ್ಲ. ಕನ್ನಡವು ಕರ್ನಾಟಕದ ಭಾಷೆಯಾಗಿದ್ದು ಯುರೋಪಿಯನ್ನರು ಅದನ್ನು ‘ಕೆನರೀಸ್’ ಎಂದು ಕರೆಯುತ್ತಾರೆ. ಆದರೆ ತಮಿಳು ಮತ್ತು ತೆಲುಗು ಭಾಷೆಗಳಿಗೆ ಗಮನಾರ್ಹವಾಗಿ ಅವುಗಳದ್ದೇ ಆದ ಪ್ರಾಕ್ತನ ಹಿಂಬಾಲಕರು ಇದ್ದಾರೆ. ಕನ್ನಡ ಭಾಷೆಯು ಕೆಲವೆ ಕೆಲವು ಮಂದಿ ವಿದ್ವಾಂಸರ ಗಮನವನ್ನಷ್ಟೇ ಸೆಳೆದಿದೆ. ಇದಕ್ಕೆ ಸ್ಥಳೀಯರು ತೋರುವ ಅನಾದರವು ಮುಖ್ಯವಾದ ಕಾರಣವಾಗಿದೆ. ಯುರೋಪಿಯನ್ನರಿಗೆ ಅದು ಕಡಿಮೆ ಪ್ರಮಾಣದಲ್ಲಿ ಪರಿಚಯವಾಗಿರುವುದು ಎರಡನೇಯ ಕಾರಣವಾಗಿದೆ. ಹಾಗೆಯೇ ವಿಸ್ತಾರವಾದ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಆಡಳಿತ ಭಾಷೆಯನ್ನಾಗಿ ಇತರ ಭಾಷೆಗಳನ್ನು ಬಳಸುವುದು ಮೂರನೆಯ ಕಾರಣವಾಗಿದೆ”[೬] ವಸಾಹತುಶಾಹಿ ಕಾಲಘಟ್ಟದಲ್ಲಿ ಭಾಷೆ, ಸಾಹಿತ್ಯ, ಜಾನಪದ, ಇತ್ಯಾದಿಗಳನ್ನು ಬ್ರಿಟಿಷರು ಲಿಖಿತವಾಗಿ ದಾಖಲಿಸಿದರು. ಕನ್ನಡದಲ್ಲಿ ಸಂಶೋಧನೆಗೆ ಶಿಷ್ಟ ಸಾಹಿತ್ಯವನ್ನೆ ಅವಲಂಬಿಸಿದ್ದ ಸಂದರ್ಭದಲ್ಲಿ ಮೌಖಿಕತೆಯನ್ನು ಪ್ರಮಾಣೀಕರಿಸುವ, ದಾಖಲಿಸುವ, ಆಲೋಚನೆಯನ್ನು ಈ ಕಾಲಘಟ್ಟದಲ್ಲಿ ಪಾಶ್ಚಾತ್ಯ ಅಧ್ಯಯನಕಾರರು ಜಾನಪದ ಸಾಹಿತ್ಯ ಸಂಗ್ರಹ ಮಾಡುವುದರ ಮೂಲಕ ನೀಡಿದರು. ಹಾಗೆಯೇ ಈ ಸಂಶೋಧನೆ ಅಧ್ಯಯನಗಳು

ವಸಾಹತೋತ್ತರ ಕಾಲದಲ್ಲೂ ಮುಂದುವರೆದು ಕನ್ನಡ ಸಂಶೋಧನೆಗೆ ಹೊಸ ಬಗೆಯ ಆಲೋಚನಾ ಕ್ರಮವನ್ನು ನೀಡಿದವು.

ಹೀಗೆ ಹತ್ತೊಂಬತ್ತನೆ ಶತಮಾನದ ಉದ್ದಕ್ಕೂ ಹಲವು ಪಾಶ್ಚಾತ್ಯ ವಿದ್ವಾಂಸರು ದಕ್ಷಿಣ ಭಾರತ ಮತ್ತು ಕರ್ನಾಟಕ ಎನ್ನುವ ಎರಡು ಚೌಕಟ್ಟಿನೊಳಗೂ ಕನ್ನಡ ನಾಡಿನ ಜನಪದ ಸಾಹಿತ್ಯ ಆಚರಣೆ, ನಂಬಿಕೆ, ಜೀವನ ಪದ್ಧತಿ ಇತ್ಯಾದಿಗಳನ್ನು ಕುರಿತು ಹಲವು ಪ್ರಕಟಣೆಗಳನ್ನು ಕೈಗೊಳ್ಳುವ ಮೂಲಕ ಜನಪದ ಅಧ್ಯಯನಕ್ಕೆ ಭದ್ರಬುನಾದಿಯನ್ನು ಹಾಕಿದರು. ಮೊದಲ ನೋಟಕ್ಕೆ ಈ ಸಂಪಾದನೆ ಮತ್ತು ವಿಶ್ಲೇಷಣೆಗಳ ವಸ್ತು ವೈವಿಧ್ಯ ಅವರು ಜಾನಪದ ಎಂಬುದನ್ನು ಗ್ರಹಿಸಿದ ವಿಸ್ತೃತ ನೆಲೆಯನ್ನು ಎತ್ತಿ ತೋರಿಸುತ್ತದೆ. ಭಾಷೆ, ಸಾಹಿತ್ಯ, ಧರ್ಮ, ಸಮಾಜಶಾಸ್ತ್ರ, ಕುಲಶಾಸ್ತ್ರ, ಇತ್ಯಾದಿಗಳೆಡೆಗಿನ ತಮ್ಮ ಬಹುಮುಖ ಆಸಕ್ತಿಗೆ ಅನುಗುಣವಾಗಿ ಅವರ ಜಾನಪದ ಅಧ್ಯಯನದ ಆಸಕ್ತಿಯು ಬೆಳೆದುದನ್ನು ಇಲ್ಲಿ ಗಮನಿಸಬಹುದಾಗಿದೆ. ಕನ್ನಡ ನಾಡಿನ ಬಹುಭಾಷಿಕ ಪರಿಸರಕ್ಕೆ ಅನುಗುಣವಾಗಿ ಕೊಡವ, ತುಳು, ಕನ್ನಡ ಇತ್ಯಾದಿ ಭಾಷಾಸಂಸ್ಕೃತಿಗಳ ನೆಲೆಯಲ್ಲಿ ಇದು ಹರಡಿಕೊಂಡಿದೆ. ಅಧ್ಯಯನ ಸಂದರ್ಭದಲ್ಲಿ ಇಂತಹ ಹಲವು ತಿಳುವಳಿಕೆಯನ್ನು ಇಟ್ಟುಕೊಂಡು ಶೋಧನೆ ಮಾಡುವ ಹುಡುಕಾಟ ಮಾಡುವ ಪ್ರಯತ್ನಗಳಿವೆ. ವಸಾಹತುಶಾಹಿಯನ್ನು ಕನ್ನಡ ಮತ್ತು ಕರ್ನಾಟಕದ ಅಧ್ಯಯನಗಳ ಸಂದರ್ಭದಲ್ಲಿ ವಿಭಿನ್ನ ನೆಲೆಯಲ್ಲಿ ನೋಡಲಾಗಿದೆ. ರಾಷ್ಟ್ರೀಯವಾದ, ಚಾರಿತ್ರಿಕ ನೆಲೆ, ಮತ್ತು ಸಂಸ್ಕೃತಿ ಜನಪದರ ಇತ್ಯಾದಿ ವಿನ್ಯಾಸಗಳ ಮುಖೇನ ಕಟ್ಟಿಕೊಡಲಾಗಿದೆ. ವಸಾಹತುಶಾಹಿ ಶಿಕ್ಷಣ ನೀತಿಗಳಿಂದ ರೂಪುಗೊಂಡ ವೈಚಾರಿಕತೆಯ ಕ್ರಮ ಮತ್ತು ಪ್ರಜ್ಞೆ ಕನ್ನಡಕ್ಕೆ ಹೊಸ ತಿಳುವಳಿಕೆಯನ್ನು ರೂಪಿಸಿತು.

ವಸಾಹತೋತ್ತರ ಕಾಲ ಎಂಬ ಪರಿಕಲ್ಪನೆಯು ಭಾರತೀಯರು ಬ್ರಿಟಿಷರಿಂದ ಬಿಡುಗಡೆಯನ್ನು ಕಂಡುಕೊಂಡ ಕಾಲಘಟ್ಟದ ಸೂಚಕವಾಗಿ ಬಳಕೆಯಲ್ಲಿದೆ. ಹೀಗಾಗಿ ವಸಾಹತೋತ್ತರ ಎಂಬುದು ಬ್ರಿಟಿಷ್ ವಿಮೋಚನೆಯ ಸೂಚಕವಾಗಿ ಬೆಳೆದು ಬಂದಿದೆ. ವಸಾಹತೋತ್ತರ ಕಾಲವನ್ನು ಸ್ವಾತಂತ್ರ್ಯೋತ್ತರ ಕಾಲ, ಸ್ವಾತಂತ್ರ್ಯದ ನಂತರದ ಕಾಲ ಎಂಬ ನೆಲೆಯಲ್ಲಿಯೂ ಅರ್ಥೈಸಿಕೊಳ್ಳಲಾಗಿದೆ. ಈ ಕಾಲಘಟ್ಟದಲ್ಲಿ ದೇಶೀಯ ನಾಯಕರ ಸಹಭಾಗಿತ್ವದ ಅಡಿಯಲ್ಲಿ ಆಡಳಿತದ ಚುಕ್ಕಾಣಿಯು ಮುಂದುವರೆದುಕೊಂಡು ಬಂದಿದೆ. ಹೀಗಾಗಿ ಈ ಕಾಲವನ್ನು ವಿಮೋಚನೆಯ ಕಾಲವೆಂದು ಅರ್ಥಸಿಕೊಳ್ಳಲಾಗಿದೆ. ವಸಾಹತುಶಾಹಿ ಕಾಲವು ಬ್ರಿಟಿಷ್ ಅಧಿಪತ್ಯಕ್ಕೊಳಪಟ್ಟ ದಾಸ್ಯದ ಸೂಚಕವಾದರೆ, ವಸಹಾತೋತ್ತರ ಕಾಲವು ಸ್ವಾತಂತ್ರ್ಯದ ಸೂಚಕವಾಗಿ ಬೆಳೆದು ಬಂದಿದೆ.

ವಸಾಹತೋತ್ತರ ಕಾಲದಲ್ಲಿ ನಡೆದ ಅಧ್ಯಯನಗಳು ಪಾಶ್ಚಿಮಾತ್ಯ ಚಿಂತನಧಾರೆಗಳಿಂದ ಪ್ರಭಾವಿತವಾಗಿದ್ದರೂ ದೇಶೀಯತೆಯೊಂದಿಗೆ ಅನುಸಂಧಾನಗೊಂಡಿವೆ. ಹಾಗೆಯೇ ದೇಶೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಸಾಂಸ್ಕೃತಿಕ ಹಿರಿಮೆ ಮತ್ತು ಗರಿಮೆಯ ಸೂಚಕವಾಗಿ ಇಲ್ಲಿನ ಅಧ್ಯಯನ ಕ್ರಮಗಳು ಮುಂದುವರೆದುಕೊಂಡು ಬಂದಿವೆ. "ಜಗತ್ತಿನ ಮಟದಲ್ಲಿಯೂ ವಸಾಹತುಶಾಹಿಯ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರವಾಗಿರುವ ಏಷ್ಯ, ಆಫ್ರಿಕಾ ಮತ್ತು ಲ್ಯಾಟಿನ್

ಅಮೇರಿಕಾದ ರಾಷ್ಟ್ರಗಳು ಹಾಗೂ ಆ ರಾಷ್ಟ್ರಗಳೊಳಗೆ ಇರುವ ವಿವಿಧ ಸಮುದಾಯಗಳು ತಮ್ಮ ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಕಟ್ಟಿಕೊಂಡು, ಸಾಂಸ್ಕೃತಿಕ ಅನನ್ಯತೆಯನ್ನು ಖಚಿತಪಡಿಸುತ್ತಿರುವುದು ಒಂದು ವಿಶಿಷ್ಟ ಪ್ರಕ್ರಿಯೆಯಾಗಿದೆ. ಇದಕ್ಕೆ ಪೂರಕವಾಗಿ ಜನಪದ ಮಹಾಕಾವ್ಯಗಳ ಅಧ್ಯಯನ ನಡೆಯುತ್ತಿರುವುದು ಪ್ರಮುಖ ಕಾರಣವಾಗಿದೆ"[೬] ಈ ಮೇಲೆ ಗುರುತಿಸಿದಂತೆ ವಸಾಹತು ಮತ್ತು ವಸಾಹತೋತ್ತರ ಕಾಲವು ತನ್ನದೇ ಆದ ವಿಶಿಷ್ಟತೆಯನ್ನು ಒಳಗೊಂಡಿವೆ. ಬ್ರಿಟಿಷ್ ಅಧಿಕಾರಶಾಹಿಯನ್ನು ವಸಾಹತು ಕಾಲವೆಂದು ಗುರುತಿಸಲಾಗಿದ್ದು, ಬ್ರಿಟಿಷ್ ದಾಸ್ಯದಿಂದ ವಿಮೋಚನೆ ಪಡೆದ ಕಾಲಘಟ್ಟವನ್ನು ವಸಾಹತೋತ್ತರ ಕಾಲ ಎಂಬುದಾಗಿ ಅರ್ಥೈಸಲಾಗಿದೆ. ಹೀಗಾಗಿ ವಸಾಹತೋತ್ತರ ಕಾಲವನ್ನು ಸ್ವಾತಂತ್ರ್ಯ ಸೂಚಕವಾಗಿ ಗುರುತಿಸಿಕೊಳ್ಳಲಾಗಿದೆ. ಈ ಎರಡು ಕಾಲಘಟ್ಟದ ಸಾಂಸ್ಕೃತಿಕ ವಿದ್ಯಮಾನಗಳಿಗೆ ಅನುಗುಣವಾಗಿ ಸಂಶೋಧನೆಗಳು ನಡೆಯುತ್ತ ಬಂದಿವೆ. ಅವುಗಳನ್ನು ಮುಂದಿನ ಹಂತದಲ್ಲಿ ಸಂಕ್ಷಿಪ್ತವಾಗಿ ಚರ್ಚೆಗೆ ಒಳಪಡಿಸಲಾಗುವುದು.

೨. ಜನಪದ ಸಾಹಿತ್ಯ:

ಪ್ರಸ್ತುತ ಸಂಶೋಧನ ವಿಷಯದಲ್ಲಿ 'ಜನಪದ ಸಾಹಿತ್ಯ' ಎಂಬುದು ಪ್ರಮುಖ ಪರಿಕಲ್ಪನೆಯಾಗಿ ಕಂಡುಬರುತ್ತದೆ. ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಜನಪದ ಮತ್ತು ಜನಪದ ಸಾಹಿತ್ಯ ಎಂಬ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವುದು ಸೂಕ್ತವೆಂದು ಭಾವಿಸಲಾಗಿದೆ. ಆದ್ದರಿಂದ ಈ ಎರಡು ಸಂಶೋಧನಾ ಪರಿಕಲ್ಪನೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗುವುದು.

ಪಾಶ್ಚಾತ್ಯ ಜನಪದ ವಿದ್ವಾಂಸನಾದ ವಿಲಿಯಂ ಥಾಂಸ್ ಮೊದಲು ಬಳಸಿದ 'ಜಾನಪದ' (Folklore)ಪದವನ್ನೆ ಕನ್ನಡಕ್ಕೂ ಬಳಸಲಾಯಿತು. ಈ ಬಗ್ಗೆ ಕನ್ನಡದಲ್ಲಿ ಮೊದಲಿಗೆ ಹಾ.ಮಾ.ನಾಯಕರು ವಿಸ್ತೃತವಾಗಿ ತಮ್ಮ 'ಜಾನಪದ ಸ್ವರೂಪ'(೨೦೦೧)ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಕೃತಿಯಲ್ಲಿ Folklore ಎನ್ನುವ ಪದಕ್ಕೆ ಸಮನಾಗಿ 'ಜಾನಪದ' ಎಂಬ ಕನ್ನಡ ಪದವನ್ನು ಬಳಸಿದ್ದಾರೆ. ಅಲ್ಲದೇ ಜನಪದ ಮತ್ತು ಜಾನಪದಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಾರೆ.

ಹಾ.ಮಾ.ನಾಯಕ ಅವರು 'ಜಾನಪದ' ಎಂಬ ಪದವನ್ನು ಒಂದು ಪರಿಭಾಷೆಯಾಗಿ ಸ್ವೀಕರಿಸಬೇಕೆ ಹೊರತು ಅದರ ಒಳ ಭಾಗವನ್ನು ಕುರಿತು ಶೋಧನೆ ಮಾಡಬಾರದು ಎಂದು ಹೇಳುತ್ತಾರೆ"[೭] ಒಂದು ಸಮುದಾಯದ ಸಮಗ್ರ ಜೀವನಾಭಿವ್ಯಕ್ತಿ ಹಾಗೂ ಅದನ್ನು ಕುರಿತ ವೈಜ್ಞಾನಿಕ ಅಧ್ಯಯನ ಎರಡನ್ನು ಒಟ್ಟಾಗಿ 'ಜಾನಪದ' ಎಂದು ಕರೆಯಲಾಗುತ್ತಿತ್ತು. ಆದರೆ ಇತ್ತೀಚೆಗೆ ಅಮೇರಿಕನ್ ಜಾನಪದ ವಿದ್ವಾಂಸರು ಜಾನಪದವನ್ನು ಜನಪದ ಜೀವನಾಭಿವ್ಯಕ್ತಿಗೆ ಸೀಮಿತಗೊಳಿಸಿ ಅದನ್ನು ಜಾನಪದ ವಿಜ್ಞಾನ ಎಂದು ಕರೆದಿದ್ದಾರೆ.

ವಿಲಿಯಂ ಥಾಂಸನು ೧೮೪೬ರಲ್ಲಿ Folklore ಪದವನ್ನು ಬಳಕೆಗೆ ತಂದಾಗ ಪಾಶ್ಚಾತ್ಯ ಜಾನಪದ ವಿದ್ವಾಂಸರಲ್ಲಿ ಅನೇಕ ಗೊಂದಲಗಳಿದ್ದವು. ಏಕೆಂದರೆ ಅನೇಕ ವ್ಯಾಖ್ಯಾನಗಳು "ಲೋರ್"(lore)

ಕುರಿತಿದ್ದರೆ, ಕೆಲವು ಮಾತ್ರ 'Folk' ಎಂಬ ಪದವನ್ನು ಕುರಿತಿವೆ. 'ಲೋರ್' ಪದವನ್ನು ಜನರು ಎಂಬುದಕ್ಕಿಂತ ಜನಪದ ಸಾಮಾಗ್ರಿಗಳು ಎಂಬ ಅರ್ಥದಲ್ಲಿ ಸ್ವೀಕರಿಸಿದ್ದು, ಉಗಮ, ರೂಪ, ಪ್ರಸರಣ, ಹಾಗೂ ಕಾರ್ಯದ ದೃಷ್ಟಿಯಿಂದ ವಿವರಿಸಲಾಗಿದೆ. ಇಷ್ಟಾದರು ಕೂಡ ಜಾನಪದ ಪ್ರಯೋಜನ ಎಂಬ ಬಗ್ಗೆ ಜಾನಪದ ವಿದ್ವಾಂಸರಲ್ಲೂ ಒಮ್ಮತವಿಲ್ಲದ ಇಂತಹ ಸಂದರ್ಭದಲ್ಲಿ ಥಾಂಸ್‌ನು ೧೮೪೬ರಲ್ಲಿ 'ಅಂಬ್ರೋಸ್ ಮೆರ್ಕ್‌ನ್' ಎಂಬ ಹೆಸರಿನಿಂದ ಅಥೇನಿಯಂ ಪ್ರತ್ರಿಕೆಗೆ ಒಂದು ಪತ್ರ ಬರೆದು 'ಜನಪ್ರಿಯ ನಡಾವಳಿಗಳು ಮತ್ತು ಜನತೆಯ ಸಾಹಿತ್ಯ' ಎಂಬ ಪದಗಳ ಬದಲಾಗಿ Folklore ಎಂಬ ಆಂಗ್ಲೋ ಸ್ಯಾಕ್ಷನ್ ಸಂಯುಕ್ತ ಪದವನ್ನು ಬಳಸಬಹುದು ಎಂದು ಹೇಳುತ್ತಾನೆ"[೯] ಇವನ ಈ ಪರಿಕಲ್ಪನೆ ಹಾಗೂ ವ್ಯಾಖ್ಯಾನವು ಸಮಗ್ರ ಜಾನಪದವನ್ನು ಪರಿಗಣಿಸುವ ಸ್ವರೂಪದ್ದಾಗಿದೆ. ಜಾನಪದವು ಒಳಗೊಳ್ಳುವುದು ಆಚಾರ, ವಿಚಾರಗಳು, ಸಂಪ್ರದಾಯ, ಆಚರಣೆಗಳು, ಮೂಢನಂಬಿಕೆಗಳು, ಕಥನ ಗೀತೆಗಳು, ಗಾದೆಗಳು ಮುಂತಾದವು ಎಂದು ಪರಿಗಣಿಸುತ್ತಾನೆ. ಕನ್ನಡದ ಸಂದರ್ಭದಲ್ಲಿ ಹಾ.ಮಾ.ನಾಯಕರು ಜಾನಪದವನ್ನು ಸಾಹಿತ್ಯಿಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆ ಎಂದು ನಾಲ್ಕು ನೆಲೆಯಲ್ಲಿ ವರ್ಗಿಕರಿಸಿಕೊಂಡು ಸಮಸ್ತ ಸಂಪ್ರದಾಯ ಹಾಗೂ ಈ ನಾಲ್ಕು ಅಂಶಗಳನ್ನು ಒಳಗೊಳ್ಳುವುದು 'ಜಾನಪದ' ಎಂದು ವ್ಯಾಖ್ಯಾನಿಸುತ್ತಾರೆ. ಪಾಶ್ಚಾತ್ಯ ವಿದ್ವಾಂಸನಾದ ಬಾಗ್ಸ್ ವರ್ಗೀಕರಣ ಮಾದರಿಯು ಇದೆ ನೆಲೆಯದ್ದಾಗಿದೆ. ಕಳೆದ ಶತಮಾನದಿಂದಲೂ ಕೇವಲ ಜನಪದ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದಂತೆ ನಡೆದು ಬಂದ ಜಾನಪದ ಅಧ್ಯಯನಕ್ಕೆ ಇಂಗ್ಲೆಂಡಿನ ವಿದ್ವಾಂಸ ಡಬ್ಲ್ಯು.ಜೆ.ಥಾಂಸ್ ೧೮೪೬ರಲ್ಲಿ 'ಫೋಕ್‌ಲೋರ್' ಪದವನ್ನು ಹೆಸರಿಸುವುದರೊಂದಿಗೆ ಜಾನಪದ ಅಧ್ಯಯನದ ವ್ಯಾಪ್ತಿಯಲ್ಲಿ ಜಾನಪದ ಸಾಹಿತ್ಯೇತರ ಪ್ರಕಾರಗಳಾದ ಐತಿಹ್ಯ-ಸಂಪ್ರದಾಯಗಳನ್ನು ಸೇರಿಸಿದನು.

ಹಾಮಾನ ಅವರು "ಜಾನಪದದಲ್ಲಿ 'ಜನಪದ ಸಾಹಿತ್ಯ' ಭಾಷೆ ಹಿನ್ನೆಲೆಯೊಳಗೆ ಅಭಿವ್ಯಕ್ತಿಗೊಳ್ಳುತ್ತದೆ ಎಂದು ಹೇಳುತ್ತಾರೆ"[೧೦] ಒಂದರಲ್ಲಿ ಭಾಷೆಯ ಕಲಾತ್ಮಕ ಸ್ವರೂಪವು ಇನ್ನೊಂದರಲ್ಲಿ ಭಾಷೆಯ ಸಾಮಾನ್ಯ ಸ್ವರೂಪವು ಕಾಣಿಸಿಕೊಂಡಿದೆ. ಎರಡರ ಮೂಲದ್ರವ್ಯ ಭಾಷೆಯಾಗಿದೆ. ಇವುಗಳಲ್ಲಿ ಸಮಗ್ರವಾಗಿ 'ಜಾನಪದ'ವೆ ಬರುತ್ತದೆ ಎಂದು ಹೇಳುತ್ತಾರೆ. ಇನ್ನು ಮುಂದುವರೆದು ಜಾನಪದದಲ್ಲಿ ಸಮಾಜಶಾಸ್ತ್ರ, ಮಾನವಶಾಸ್ತ್ರ, ವೈದ್ಯಶಾಸ್ತ್ರ, ಶಿಕ್ಷಣಶಾಸ್ತ್ರ, ಭಾಷಾಶಾಸ್ತ್ರ ಹೀಗೆ ಇನ್ನು ಅನೇಕ ಜ್ಞಾನಶಾಖೆಗಳಿವೆ. ಇವುಗಳು ರಚನಾ ಸಾಹಿತ್ಯಕ್ಕೆ ಸಂಬಂಧ ಏರ್ಪಡುತ್ತವೆ. "ಒಂದು ಅರ್ಥದಲ್ಲಿ ವಚನಕಾರರೂ. ಜನಪದರ ಮದ್ದು, ಚಿಕಿತ್ಸೆ, ಯಕ್ಷಿಣಿ, ಭವಿಷ್ಯ, ನಂಬಿಕೆಗಳು ವೈಜ್ಞಾನಿಕ ಬಗೆಗೆ ಸೇರುತ್ತವೆ. ಇವೆಲ್ಲದರ ಸಮಗ್ರ ಅಧ್ಯಯನವೇ ಜಾನಪದ ಎಂಬುದನ್ನು ತೋರಿಸಿಕೊಳ್ಳುತ್ತವೆ"[೧೧] ಜಾನಪದ ಅಧ್ಯಯನಕ್ಕೊಂದು ಸ್ಪಷ್ಟ ಚಿತ್ರಣ ನೀಡಿದ ನಂತರ ಜಾನಪದವನ್ನು ಮಾನವಿಕ ಶಾಸ್ತ್ರದ ಶಿಸ್ತಿನಲ್ಲಿ ಅಧ್ಯಯನ ಮಾಡಲು ಪ್ರಾರಂಭಿಸಲಾಯಿತು.

ಜಾನಪದ ಎಂಬುದು ಸಾಮಾನ್ಯ ಜನರ ಸಾಂಸ್ಕೃತಿಕ ವಿಜ್ಞಾನ ಹಾಗೂ ಹಲವು ಶಾಸ್ತ್ರಗಳ ತಾಯಿಬೇರು. ಭೌತಿಕ ಮತ್ತು ಸಾಂಸ್ಕೃತಿಕ ಸಮಗ್ರ ಇತಿಹಾಸವನ್ನು ಒಳಗೊಳ್ಳವಷ್ಟು ಅಧ್ಯಯನದ ವ್ಯಾಪ್ತಿ ವಿಶಾಲವಾಗಿದೆ. ಇದರಲ್ಲಿ ಶಾರೀರಿಕ ಮಾನವಶಾಸ್ತ್ರ ಎಂಬ ಎರಡು ಅಂಶಗಳು ಶಾರೀರಿಕದ ರಚನೆಯ ಬೆಳವಣಿಗೆ, ಸಾಂಸ್ಕೃತಿಕ ಮಾನವಶಾಸ್ತ್ರ ಆದಿಕಾಲದಿಂದ ಇದುವರೆಗೂ ಮಾನವ ಸಂಸ್ಕೃತಿಯ ಬೆಳವಣಿಗೆಯನ್ನು ಗುರುತಿಸುವುದಾಗಿದೆ"[೧೨] ಈ ಎಲ್ಲ ಸಮಸ್ತ ಅಂಶಗಳನ್ನು 'ಜಾನಪದ' ಒಳಗೊಳುವುದರಿಂದ ಜಾನಪದದ ವಿವಿಧ ಪ್ರಕಾರಗಳು ಅಧ್ಯಯನದ ವಿಷಯವಾದವು. ಕರ್ನಾಟಕ ಜಾನಪದದಲ್ಲಿ ಕಂಡುಬರುವ ಪ್ರಮುಖ ಪ್ರಕಾರಗಳನ್ನು ಗುರುತಿಸುವುದಾದರೆ ಜನಪದ ಸಾಹಿತ್ಯವು ಹಲವಾರು ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಇವುಗಳಲ್ಲಿ ಪ್ರಮುಖವಾದ ಪ್ರಕಾರಗಳೆಂದರೆ, ಗದ್ಯ ಕಥನಗಳು(ಪುರಾಣ, ಐತಿಹ್ಯ, ಕಟ್ಟುಕಥೆ), ಗೀತೆ, ಲಾವಣಿ, ಕಾವ್ಯ, ಜಾನಪದ ನಾಟಕ (ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ, ಯಕ್ಷಗಾನ, ಬಯಲಾಟಗಳು, ಸಣ್ಣಾಟಗಳು ಇತ್ಯಾದಿ) ಇತ್ಯಾದಿಗಳು ಜನಪದ ಸಾಹಿತ್ಯವಾಗಿ ಬೆಳೆದು ಬಂದಿವೆ. ಆದರೆ ಜನಪದವು ಕೇವಲ ಇಷ್ಟಕ್ಕೆ ಸೀಮಿತವಾಗಿರದೇ ಅದರ ವ್ಯಾಪ್ತಿಯು ಮತ್ತಷ್ಟು ವಿಶಾಲವಾಗಿದೆ. ಜನಪದ ಸಾಹಿತ್ಯವನ್ನು ಹೊರತುಪಡಿಸಿ ನಂಬಿಕೆ, ಸಂಪ್ರದಾಯ, ಹಬ್ಬ –ಹರಿದಿನಗಳು, ಆಹಾರ, ಪಾನಿಯಗಳು, ಜನಪದ ಕ್ರೀಡೆಗಳು, ಗಾದೆಗಳು, ಒಗಟುಗಳು, ಒಡಪುಗಳು, ಜನಪದ ಭಾಷೆ, ಜನಪದ ಚಿತ್ರ, ಜನಪದ ನೃತ್ಯಗಳು, ಜನಪದ ವಸ್ತು ವಿಶೇಷಗಳು (ದಿನ ಬಳಕೆ ವಸ್ತುಗಳು, ವ್ಯವಸಾಯ ಸಾಧನಗಳು, ವಿವಿಧ ವೃತ್ತಿಗಳು, ಸಲಕರಣೆಗಳು, ಜನಪದ ವಾಧ್ಯಗಳು, ಜನಪದ ವೈದ್ಯ, ಜನಪದ ಮನರಂಜಕರು, ಜನಪದ ಆಟಗಾರರು, ಜನಪದ ಗಣಿತ, ಲಿಖಿತ ಜಾನಪದ, ಶಿಶು ಪ್ರಾಸಗಳು, ಮಂತ್ರ, ಮಾಟ, ಜನಪದ ಬೈಗುಳಗಳು, ಅಡುಗೆಗಳು, ಸಸ್ಯ, ಪ್ರಾಣಿ, ಖನಿಜ ಜಾನಪದ) ಇತ್ಯಾದಿ ಸಾಂಸ್ಕೃತಿಕ ಬಗೆಗಳಲ್ಲಿ ಜನಪದ ಬೆಳೆದು ಬಂದಿದೆ. ಈ ಎಲ್ಲ ಪ್ರಕಾರಗಳನ್ನು ಕೂಡ ಜನಪದ ಸಾಹಿತ್ಯವೆಂದೆ ಹಲವಾರು ವಿದ್ವಾಂಸರು ಗ್ರಹಿಸಿದ್ದಾರೆ.

೧೯೫೦ರ ನಂತರದಲ್ಲಿ ಜಾನಪದದ ಒಂದೊಂದೆ ಪ್ರಕಾರಗಳನ್ನು ಕೇಂದ್ರವಾಗಿಟ್ಟುಕೊಂಡು ಶಾಸ್ತ್ರೀಯ ಹಾಗೂ ವೈಜ್ಞಾನಿಕ ನೆಲೆಯಲ್ಲಿ ದೇಶಿಯ ವಿದ್ವಾಂಸರು ಅಧ್ಯಯನ ಮಾಡಿದರು. ಜನಪದ ವಿದ್ವಾಂಸರು ಈ ಎಲ್ಲ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ನೋಡಬಹುದು. ಇದರ ಜೊತೆಗೆ ಸಂಗ್ರಹ, ಸಂಪಾದನೆ ಮಾಡಿ ಪ್ರಕಟಿಸಿರುವುದನ್ನು ನೋಡಬಹುದು. ಪುರಾಣ, ಜನಪದ, ಕಥೆ, ಹಾಡು, ಮಾತು, ಸನ್ನೆ, ಒಗಟು, ಗಾದೆ, ಮದ್ದು, ಚಿಕಿತ್ಸೆ, ಭವಿಷ್ಯ, ನೃತ್ಯ, ಸಂಗೀತ, ಆಟ, ವಿನೋದ, ನಾಟಕ, ಉಡುಗೆ, ಅಡುಗೆ, ಕಲೆ ಮುಂತಾದವುಗಳು ಜನಪದ ಸಂಸ್ಕೃತಿಯ ಭಾಗವಾಗಿವೆ. ಜನಪದ ಸಂಶೋಧನೆಯನ್ನು ಶೈಕ್ಷಣಿಕ ವ್ಯಾಪ್ತಿಯಲ್ಲಿ ಅನುಸಂಧಾನ ಹಾಗೂ ಪಾಶ್ಚಾತ್ಯ ಸೈದ್ಧಾಂತಿಕತೆಯಲ್ಲಿ ವಿಚಾರ ಮಾಡಿರುವುದು ದೇಶಿ ಜಾನಪದ ಅಧ್ಯಯನಗಳ ಕ್ರಮವಾಗಿದೆ.

೩. ಅಧ್ಯಯನಗಳ ವಿಶ್ಲೇಷಣೆ:

ಪ್ರಸ್ತುತ ಸಂಶೋಧನಾ ವಿಷಯದ 'ಅಧ್ಯಯನದ ವಿಶ್ಲೇಷಣೆ' ಎಂಬುದು ಪ್ರಮುಖ ಪರಿಕಲ್ಪನೆಯಾಗಿದೆ. ಇದನ್ನು ಎರಡು ಪ್ರಕಾರಗಳಾಗಿ ವಿಂಗಡಿಸಿಕೊಳ್ಳಬಹುದು. ಒಂದು, ಅಧ್ಯಯನ. ಎರಡು, ವಿಶ್ಲೇಷಣೆ. ಇಲ್ಲಿ ಅಧ್ಯಯನ ಮತ್ತು ವಿಶ್ಲೇಷಣೆ ಎಂಬ ಪದಗಳು ಮೇಲ್ನೋಟಕ್ಕೆ ಒಂದೇ ಎಂದು ಕಂಡುಬಂದರೂ ಇವುಗಳಲ್ಲಿ ಸಾಕಷ್ಟು ಸೂಕ್ಷ್ಮ ಭಿನ್ನತೆಗಳಿವೆ. ಅಧ್ಯಯನ ಎಂಬುದು ಕಲಿಕೆ, ಅಭ್ಯಾಸ, ಗ್ರಹಿಕೆ, ಅರಿವು, ತಿಳಿಯುವಿಕೆ ಇತ್ಯಾದಿ ಅರ್ಥಗಳನ್ನು ಒಳಗೊಂಡಿದೆ. ಯಾವುದೇ ಒಂದು ವಸ್ತು, ವಿಷಯದ ಕುರಿತಾದ ತಿಳುವಳಿಕೆ, ಅಭ್ಯಾಸ, ಪರಿಣಿತಿಯನ್ನು ಅಧ್ಯಯನ ಎಂದು ಸಾಮಾನ್ಯವಾಗಿ ಅರ್ಥೈಸಲಾಗುವುದು. ಆದರೆ ವಿಶ್ಲೇಷಣೆ ಎಂಬುದು ಇದಕ್ಕಿಂತ ಭಿನ್ನವಾದ ಅರ್ಥವನ್ನು ಒಳಗೊಂಡಿದೆ. ವಿಶ್ಲೇಷಣೆಯು ಒಂದು ಸಂಕೀರ್ಣ ವಿಷಯ ಅಥವಾ ವಸ್ತುವಿನ ಬಗ್ಗೆ ಹೆಚ್ಚು ಅವಶ್ಯಕವಾದ ತಿಳುವಳಿಕೆಯನ್ನು ಪಡೆಯಲು ಅದನ್ನು ಹೆಚ್ಚು ಸಣ್ಣ ಭಾಗಗಳಾಗಿ ಒಡೆಯುವ ಪ್ರಕ್ರಿಯೆಯಾಗಿದೆ. ಹಾಗೆಯೇ ಒಂದು ವಸ್ತು ಹಾಗೂ ವಿಷಯವನ್ನು ವಿಸ್ತೃತವಾದ ನೆಲೆಯಲ್ಲಿ ಅರ್ಥೈಸುವ ಮಾದರಿ ಅಥವಾ ಕ್ರಮವನ್ನು ವಿಶ್ಲೇಷಣೆ ಎಂದು ಕರೆಯಲಾಗುತ್ತದೆ.

ಸ್ವಾತಂತ್ರ್ಯಪೂರ್ವದ ಮೊದಲ ಹಂತದಲ್ಲಿ ಜಾನಪದ ಸಾಹಿತ್ಯ ಸಂಗ್ರಹ, ಸಂಪಾದನೆಗಳೆ ಅಧ್ಯಯನಕಾರರ ಮೂಲ ಉದ್ದೇಶಗಳಾಗಿದ್ದವು. ಈ ಸಂಗ್ರಹ, ಸಂಪಾದನೆಗಳನ್ನು ಇಟ್ಟುಕೊಂಡು ಜಾನಪದ ಸಾಹಿತ್ಯದ ಪರಂಪರೆಯನ್ನು ತಿಳಿಸಿಕೊಡುವ ಪ್ರಸ್ತಾವನೆಯನ್ನು ಬರೆದರು. ಈ ಪ್ರಸ್ತಾವನೆಗಳು ಪಠ್ಯದ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಡಲು ಅಪೂರ್ಣವೆನಿಸಿಕೊಂಡವು. ಇದಕ್ಕೆ ಕಾರಣ ಇಲ್ಲಿ ವಿಶ್ಲೇಷಣಾತ್ಮಕ ಮಾದರಿಗಳ ಕೊರತೆಯಾಗಿತ್ತು. ಆರಂಭಿಕ ಹಂತದ ಜನಪದ ಅಧ್ಯಯನಗಳು ಕೇವಲ ಮಾಹಿತಿ ಪ್ರಧಾನವಾಗಿ ಕಂಡುಬರುತ್ತವೆ.

ವಸಾಹತುಕಾಲದಲ್ಲಿ ಪಾಶ್ಚಾತ್ಯ ಅಧ್ಯಯನಕಾರರು ಪಠ್ಯ ಸಂಗ್ರಹ, ಸಂಪಾದನೆಗಳ ಹಿನ್ನೆಲೆಯಲ್ಲಿ ಪಠ್ಯ ವಿಶ್ಲೇಷಣೆಗೆ ಕೆಲವು ಸಿದ್ಧಾಂತಗಳನ್ನು ರೂಪಿಸಿದರು. ಈ ಸಿದ್ಧಾಂತಗಳನ್ನು ಕನ್ನಡದ ಅಧ್ಯಯನಕಾರರು ಅನುಸರಿಸಿದರೂ ಕೂಡ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆಗಳಿಗೆ ಪೂರಕವಾಗಿ ಬಳಸಿಕೊಳ್ಳಲಿಲ್ಲ. ಪಾಶ್ಚಾತ್ಯ ವಿದ್ವಾಂಸರ ಪರಿಕಲ್ಪನೆಯಲ್ಲಿ ಹಲವು ಸಿದ್ಧಾಂತಗಳು ಜನ್ಮತಳೆದವು. ಹರ್ಡರ್, ಗ್ರಿಮ್ ಸಹೋದರರು, ಮ್ಯಾಕ್ಸ್‌ಮುಲ್ಲರ್, ಥಿಯೋಡರ್ ಬೆನ್ಫೆ, ಸಿಗ್ಮಂಡ್ ಫ್ರಾಯ್ಡ್, ಆಂಡ್ರ್ಯೂಲ್ಯಾಂಗ್, ಫ್ರೇಜರ್, ಜೂಲಿಯಸ್ ಕ್ರಾಹ್ನ, ಕಾರ್ಲೆ ಕ್ರಾಹ್ನ, ವಿ.ಜೆ.ಪ್ರಾಫ್, ಕ್ಲಾಡ್ ಲೆವಿಸ್ಟ್ರಾಸ್, ಅಲನ್ ಡಂಡೆಸ್, ಮಿಲ್‌ಮನ್ ಪ್ಯಾರಿ, ಫ್ರಾಜ್ ಬೊವಾಸ್, ಮಾಲಿನೋವಾಸ್ಕಿ, ಗಿನ್ನೆಪ್, ನ್ಯೂಮನ್, ರೂಸ್ ಬೆನೆಡಿಕ್ಟ್, ಡಬ್ಲ್ಯು.ಆರ್.ಬಾಸ್ಕಂ, ರಿಚರ್ಡ್ ಡಾರ್ಸನ್, ಲೀವಿಸ್ ಹೆನ್ರಿ, ಮೋರ್ಗನ್, ಇ.ಬಿ.ಟೈಲರ್, ರೋಜರ್ ಡಿ. ಅಬ್ರಾಹಾಂಸ್, ಇತ್ಯಾದಿ. ಈ ವಿದ್ವಾಂಸರುಗಳು ಜಾನಪದ ಸಾಹಿತ್ಯವನ್ನು ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ, ಸೈದ್ಧಾಂತಿಕವಾಗಿ ರೂಪಿಸಿದರು. ಇವರು ರೂಪಿಸಿದ ಸಿದ್ಧಾಂತಗಳೆ

ವಸಾಹತು ನಂತರ ಕನ್ನಡದ ಸಂದರ್ಭದಲ್ಲಿ ಹೆಚ್ಚು ಪ್ರಭಾವಿಸಿದವು. ಆದರೆ ವಸಾಹತು ಕಾಲಘಟ್ಟದಲ್ಲಿ ಪಾಶ್ಚಾತ್ಯ ಸಿದ್ಧಾಂತಗಳನ್ನು ಕನ್ನಡ ಜನಪದ ಸಾಹಿತ್ಯ ಅಧ್ಯಯನಕಾರರು ಯಾವುದೇ ರೀತಿಯಿಂದಲೂ ಅನುಸರಿಸಲಿಲ್ಲ. ಬಿಎಂಶ್ರೀ, ದ.ರಾ.ಬೇಂದ್ರೆ, ಮಾಸ್ತಿ, ಸಿಂಪಿ ಲಿಂಗಣ್ಣ, ಗೊರೂರು, ಶ್ರೀವಿನೀತ ರಾಮಚಂದ್ರರಾಯ, ಮಧುರ ಚೆನ್ನ, ಡಿ.ವಿ.ಜಿ, ದೇವುಡು, ನಡಿಕೇರಿಯಂಡ ಚಿಣ್ಣಪ್ಪ, ಬೆಟಗೇರಿ ಕೃಷ್ಣಶರ್ಮ ಇತ್ಯಾದಿ ಕನ್ನಡ ಸೃಜನಶೀಲ ಸಾಹಿತಿಗಳು ಮೊದಲ ಘಟ್ಟದಲ್ಲಿ ಕನ್ನಡ ಜನಪದ ಸಾಹಿತ್ಯವನ್ನು ಕುರಿತು ಹಲವು ಬಗೆಯಲ್ಲಿ ಸಂಗ್ರಹ, ಸಂಪಾದನೆ, ಪ್ರಸ್ತಾವನೆಗಳನ್ನು ಬರೆದರು. ಆದರೆ ಇವರು ಯಾವುದೇ ತೆರೆನಾದ ಸಿದ್ಧಾಂತಗಳಿಗೆ ಒಳಗಾಗಲಿಲ್ಲ. ಜನಪದವನ್ನು ಸಾಹಿತ್ಯಿಕವಾಗಿ ಮಾತ್ರ ಪರಿಗಣಿಸಿ ಒಂದು ಕಡೆ ಸಂಗ್ರಹಿಸಿಡುವುದು ಮುಖ್ಯವಾಗಿತ್ತು. ಹಾಗಾಗಿ ಸ್ವಾತಂತ್ರ್ಯಪೂರ್ವ ಕನ್ನಡದ ಜನಪದ ಅಧ್ಯಯನಕಾರರಲ್ಲಿ ಶಾಸ್ತ್ರೀಯನೆಲೆ, ವೈಜ್ಞಾನಿಕತೆ, ಸೈದ್ಧಾಂತಿಕತೆಯು ಗೋಚರಿಸುವುದಿಲ್ಲ. ಸ್ವಾತಂತ್ರ್ಯನಂತರದಲ್ಲಿ ಮುಂದುವರೆದ ಅಧ್ಯಯನಕಾರರು ವೈಜ್ಞಾನಿಕ ದೃಷ್ಟಿಕೋನದಲ್ಲಿ ಜನಪದ ಸಾಹಿತ್ಯವನ್ನು ವಿಶ್ಲೇಷಣ ಮಾಡುವ ಮಾದರಿಯನ್ನು ಅನುಸರಿಸಿದ್ದಾರೆ. ವಸಾಹತೋತ್ತರ ಕಾಲಘಟ್ಟದ ಜನಪದ ಅಧ್ಯಯನಗಳಲ್ಲಿ ಸಂಶೋಧನಾ ಕ್ರಮವಾಗಿ ವಿಶ್ಲೇಷಣ ಮಾದರಿಯು ಮುಂದುವರೆದುಕೊಂಡು ಬಂದಿದೆ.

ಕನ್ನಡ ಜಾನಪದ ಸಾಹಿತ್ಯವು ಸಂಗ್ರಹ, ಸಂಪಾದನೆ, ವಿಮರ್ಶೆ, ವ್ಯಾಖ್ಯಾನ, ವಿಶ್ಲೇಷಣೆ, ಸಂಶೋಧನೆ ಇತ್ಯಾದಿ ಪ್ರಕಾರಗಳಲ್ಲಿ ಸ್ಥಿತ್ಯಂತರಗೊಂಡು ಬೆಳೆದು ಬಂದಿದೆ. ೬೦–೭೦ರ ದಶಕದಲ್ಲಿ ಜಾನಪದವನ್ನು ವೈಜಾನಿಕವಾಗಿ ನೋಡುವ, ಪರಿಭಾವಿಸುವ, ವ್ಯಾಖ್ಯಾನಿಸುವ ಮಾನದಂಡಗಳು ಬೆಳೆದು ಬಂದವು. ಅಕಾಡೆಮಿಕ್ ನೆಲೆಗೆ ಸಂಶೋಧನೆಯ ವಸ್ತುಗಳಾಗಿ ಜಾನಪದ ವಿವಿಧ ಪ್ರಕಾರಗಳು ಆಕರಗಳಾದವು. ಬರೀ ಸಂಗ್ರಹ, ಸಂಪಾದನೆಯಲ್ಲಿ ಇದ್ದಂತಹ ಜಾನಪದ ಸಾಹಿತ್ಯವನ್ನು ಅನ್ಯಜ್ಞಾನ ಶಿಸ್ತುಗಳ ಮೂಲಕ ಹೊಸದಾಗಿ ಸೃಜಿಸುವ ಕ್ರಿಯೆಗಳು ೫೦ರ ದಶಕದಿಂದಲೇ ಶುರುವಾದವು. ಗೀತೆ, ಕಥನಕವನ, ಲಾವಣಿ, ಗಾದೆ, ಒಗಟು, ಒಡಪು, ಕಥೆಗಳು ಸಾಹಿತ್ಯದ ಪರಿಕರಗಳಾದವು. ಇವುಗಳಲ್ಲದೇ ಜಾನಪದದ ಇನ್ನಿತರ ಅಂಗಗಳಲ್ಲಿ ಬರುವ ವೈಧ್ಯ, ನಂಬಿಕೆ, ಶಿಲ್ಪ, ನೃತ್ಯ, ಕಲೆ, ಸಂಗೀತ, ಮುಂತಾದ ವಿಷಯಗಳು ಸಂಶೋಧನೆಯ ವಸ್ತುಗಳಾಗಿ ಅಧ್ಯಯನವು ವಿಸ್ತಾರಗೊಂಡಿತು. ಇನ್ನೂ ಮುಂದುವರೆದು ಕನ್ನಡದ ಜಾನಪದ ಬಯಲಾಟಗಳೂ ವಿದ್ವಾಂಸರ ವಿವೇಚನೆಯಲ್ಲಿ ಮಹತ್ವವನ್ನು ಪಡೆದವು. ಕಿಳ್ಳಿಕೇತರಾಟ, ತೊಗಲುಗೊಂಬೆಯಾಟ, ದಾಸರಾಟ, ಮುಂತಾದವುಗಳೂ ಜಾನಪದ ವಿದ್ವತ್ತನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿದವು. ಈ ಜಾನಪದ ಪ್ರಕಾರಗಳನ್ನು ದೇಶಿಯ ವಿದ್ವಾಂಸರು ಒಂದೊಂದಾಗಿ ಎತ್ತಿಕೊಂಡು ಅಕಾಡೆಮಿಕ್ ನೆಲೆಯೊಳಗೆ ಸಂಶೋಧನೆ ಮಾಡಿದರು. ಬಿ.ಎಸ್.ಗದ್ದಗೀಮಠ, ಜೀ.ಶಂ.ಪರಮಶಿವಯ್ಯ, ದೇಜಗೌ, ಹಾಮಾನಾ, ಎಚ್.ಎಲ್.ನಾಗೇಗೌಡ, ಎಂ.ಎಸ್.ಸುಂಕಾಪುರ, ಬಿ.ಬಿ.ಹೆಂಡಿ, ಸಿಪಿಕೆ, ಚಂದ್ರಶೇಖರ ಕಂಬಾರ, ಸುಧಾಕರ, ರಾಗೌ, ವಿವೇಕ ರೈ, ಎಂ.ಎಸ್.ಲಠ್ಠೆ, ಸೋಮಶೇಖರ ಇಮ್ರಾಪುರ, ಎಂ.ಎಂ.ಕಲಬುರ್ಗಿ, ಎಂ.ಚಿದಾನಂದ ಮೂರ್ತಿ, ದೇವೇಂದ್ರಕುಮಾರ

ಹಕಾರಿ, ಡಿ.ಲಿಂಗಯ್ಯ, ಎಚ್.ಜೆ.ಲಕ್ಕಪ್ಪಗೌಡ, ತೀ.ನಂ.ಶಂಕರನಾರಾಯಣ, ಶ್ರೀಕಂಠಕೂಡಿಗೆ, ಡಿ.ಕೆ.ರಾಜೇಂದ್ರ, ಅಂಬಳಿಕೆ ಹಿರಿಯಣ್ಣ, ಕ್ಯಾತನಹಳ್ಳಿ ರಾಮಣ್ಣ, ಸಂಧ್ಯಾರೆಡ್ಡಿ, ಹಿ.ಶಿ.ರಾಮಚಂದ್ರಗೌಡ, ವೀರಣ್ಣ ದಂಡೆ, ಪಿ.ಕೆ.ರಾಜಶೇಖರ, ಪುರುಷೋತ್ತಮ ಬಿಳಿಮಲೆ, ಕೆ.ಚಿನ್ನಪ್ಪಗೌಡ, ಟಿ.ಎಸ್.ಸತ್ಯನಾಥ್, ಬಸವರಾಜ ಮಲಶೆಟ್ಟಿ, ಕೃಷ್ಣಮೂರ್ತಿ ಹನೂರು, ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಪಿ.ಕೆ.ಖಂಡೋಬ, ಚನ್ನಣ್ಣ ವಾಲೀಕಾರ, ಕೆ.ಆರ್.ದುರ್ಗಾದಾಸ್, ಕಾಳೇಗೌಡ ನಾಗವಾರ, ಎ.ವಿ.ನಾವಡ, ಗಾಯತ್ರಿ ನಾವಡ, ಇತ್ಯಾದಿ ವಿದ್ವಾಂಸರು ಅಕಾಡೆಮಿಕ್ ನೆಲೆಯೊಳಗೆ ಕೆಲಸ ಮಾಡಿ ಕನ್ನಡ ಜಾನಪದ ಪ್ರಕಾರಗಳನ್ನು ಬೆಳೆಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದಾರೆ.

ಕೊನೆ ಟಿಪ್ಪಣಿ

೧. ಕೆ.ಮೋಹನಕೃಷ್ಣ ರೈ, ವಸಾಹತುಶಾಹಿ ಮತ್ತು ನಗರೀಕರಣ, ಪು, ೫

೨. ವಿಜಯ ಪೂಣಚ್ಚ ತಂಬಂಡ, ಭಾರತ ಉಪಖಂಡದ ಆಧುನಿಕ ಚರಿತ್ರೆ(ಸಂ-೩), ಪು, ೨೫

೩. ರಾಮಲಿಂಗಪ್ಪ, ಟಿ. ಬೇಗೂರು, ಪು, ೩೦

೪. ವಸು.ಎಂ.ವಿ, ಕನ್ನಡದೋಳ್ ಭಾವಿಸಿದ ಜನಪದಂ, ಪು, ೫೬

೫. ರಾಮಲಿಂಗಪ್ಪ, ಟಿ.ಬೇಗೂರು, ಪೂರ್ವೋಕ್ತ, ಪು, ೬೬

೬. ಮಾಧವಪೆರಾಜೆ, ಪಂಪಪೂರ್ವದ ಕನ್ನಡ ಕವಿಗಳು, ಪು, ೪೫-೪೬

೭. ತೀ.ನಂ.ಶಂಕರನಾರಾಯಣ, ಎಂ.ಎನ್.ವೆಂಕಟೇಶ, ಜುಂಜಪ್ಪ ಮಹಾಕಾವ್ಯ, ಪು, ೩

೮. ಹಾ.ಮಾ.ನಾ, ಜಾನಪದ ಸ್ವರೂಪ, ಪು, ೨

೯. ಸಂಧ್ಯಾರೆಡ್ಡಿ.ಕೆ.ಆರ್, ಜಾನಪದ ಅಧ್ಯಯನ, ಪು, ೬೨

೧೦. ಹಾ.ಮಾ.ನಾ, ಪೂರ್ವೋಕ್ತ, ಪು, ೩೩

೧೧. ಸ್ವಾಮಿ.ಬಿ.ಎಸ್, ಕನ್ನಡ ಜಾನಪದ ಸಾಹಿತ್ಯ, ಪು, ೭

೧೨. ಅದೇ, ಪು, ೭

ಅಧ್ಯಾಯ : ಮೂರು

ವಸಾಹತುಶಾಹಿ ಕಾಲದ ಜನಪದ ಸಾಹಿತ್ಯ ಅಧ್ಯಯನ: ಪೂರ್ವ ಪೀಠಿಕೆ

ಅಧ್ಯಾಯ : ಮೂರು

ವಸಾಹತುಶಾಹಿ ಕಾಲದ ಜನಪದ ಸಾಹಿತ್ಯ ಅಧ್ಯಯನ: ಪೂರ್ವ ಪೀಠಿಕೆ

ಪ್ರಸ್ತಾವನೆ

ಜಾನಪದ ಅಧ್ಯಯನದ ಅನುಕೂಲಕ್ಕಾಗಿ ವಸಾಹತುಶಾಹಿ ಮತ್ತು ವಸಾಹತೋತ್ತರ ಕಾಲವೆಂದು ಗುರುತಿಸಿಕೊಳ್ಳಬಹುದು. "ಕನ್ನಡ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಐತಿಹಾಸಿಕ ವಿವೇಚನೆಯನ್ನು ನಡೆಸುವಾಗ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಎಂದು ಪ್ರಮುಖ ವಿಭಾಗಗಳಾಗಿ ಮಾಡಿಕೊಳ್ಳಬಹುದು. 'ಸ್ವಾತಂತ್ರ್ಯ' ಎಂಬುದು ಕಾಲವನ್ನು ನಿರ್ಧರಿಸುವ ಗಡೀ ಮಾತ್ರ. ಏಕೆಂದರೆ ಕನ್ನಡ ಜಾನಪದ ಕ್ಷೇತ್ರದ ಯಾವುದೇ ಪ್ರಮುಖವಾದ ಘಟ್ಟವನ್ನು ಅದು ಗುರುತಿಸುವುದು ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಜನಪದ ಗೀತೆಗಳ ಸಂಗ್ರಹ, ಸಂಪಾದನೆಗಳ ಮೂಲಕ ನಡೆದಿರುವ ಅಧ್ಯಯನದಿಂದ ಎಂದು ಗುರುತಿಸಬಹುದು"[೧] ಪ್ರಾಚೀನ ಕಾಲದಿಂದಲೂ ಜನಪದ ಸಾಹಿತ್ಯವನ್ನು ದೇಶಿ ವಿದ್ವಾಂಸರು ಸರಿಯಾಗಿ ಗುರುತಿಸಲಿಲ್ಲ. ಆದರೆ ವಸಾಹತುಶಾಹಿ ಪ್ರವೇಶದಿಂದಾಗಿ ಬ್ರಿಟಿಷರು ಜನಪದ ಗೀತೆಗಳ ಸಂಗ್ರಹ, ಸಂಪಾದನೆ ಮಾಡುವ ಮೂಲಕ ಜನಪದ ಸಾಹಿತ್ಯದ ಅಸ್ತಿತ್ವವನ್ನು ಗುರುತಿಸಿದರು. ಇವರು ಜಾನಪದ ಅಧ್ಯಯನವನ್ನು ಎರಡು ನೆಲೆಗಳಲ್ಲಿ ನಡೆಸಿದರು. ಒಂದು, ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡುವುದಾಕ್ಕಾಗಿ ಮಿಷನರಿಗಳು ಆನುಷಂಗಿಕವಾಗಿ ಜಾನಪದ ಅಧ್ಯಯನಕ್ಕೆ ತೊಡಗಿದುದು. ಎರಡು, ಆಡಳಿತಾಧಿಕಾರಿಗಳಾಗಿ ಕೆಲಸ ನಿರ್ವಹಿಸುತಿದ್ದ ಇವರಿಗೆ ಇಲ್ಲಿಯ ಸಂಸ್ಕೃತಿಯನ್ನು ಬೆರೆಗುಗಣ್ಣಿನಿಂದ ನೋಡಿದ್ದು, ಹಾಗೂ ಆಡಳಿತ ನಿರ್ವಹಣೆಯ ಅನುಕೂಲಕ್ಕಾಗಿ ಅಧ್ಯಯನ ನಡೆಸಿದುದು. ಅಪರಿಚಿತ ನೆಲೆಯಲ್ಲಿ ಆಡಳಿತ ನಿರ್ವಹಣೆಯನ್ನು ಸುಗಮಗೊಳಿಸುವುದಕ್ಕಾಗಿ ಬ್ರಿಟಿಷರು ಸ್ಥಳಿಯ ಜನರ ಭಾಷೆಗಳನ್ನು ಕಲಿತರು. ಜೊತೆಗೆ ಜನಪದ ಸಾಹಿತ್ಯ, ಸಂಪ್ರದಾಯ, ಆಚರಣೆ, ಕಲೆ, ನಂಬಿಕೆ, ಇತ್ಯಾದಿ ಅಂಶಗಳನ್ನು ಅರ್ಥಮಾಡಿಕೊಂಡರು. ಇವುಗಳ ಮೂಲಕ ಸ್ಥಳೀಯ ಸಂಸ್ಕೃತಿಯನ್ನು ತಿಳಿಯಲು ಬ್ರಿಟಿಷರಿಗೆ ತಳಸಮುದಾಯಗಳ ಜನಪದ ಸಾಹಿತ್ಯವು ಬಂಡವಾಳವಾಗಿ ಕಂಡವು. ಜನಪದ ಸಾಹಿತ್ಯ ಅಧ್ಯಯನವೆಂದರೆ ಅದು 'ಸಂಸ್ಕೃತಿಯ ಅಧ್ಯಯನ' ಎನ್ನುವ ಉದ್ದೇಶದಿಂದ ಹೊರಟ ಬ್ರಿಟಿಷರು ಜನಪದ ಸಂಗ್ರಹ, ಸಂಪಾದನೆಯನ್ನು ಮಾಡಿದರು. ಬಹುಸಂಸ್ಕೃತಿಯನ್ನು ಹೊಂದಿರುವ ಭಾರತದಲ್ಲಿ ಬ್ರಿಟಿಷರ ಅಧ್ಯಯನ ವಿಧಾನವು

ಏಕಮುಖವಾಗಿದ್ದವು. ಆದರೆ ಜನಪದ ಸಂಗ್ರಹ, ಸಂಪಾದನೆಯ ವಿಧಾನವನ್ನು ಹಾಕಿಕೊಟ್ಟ ಬ್ರಿಟಿಷರು ದೇಶಿ ವಿದ್ವಾಂಸರಿಗೆ ಮಾದರಿಯಾದರು.

ಜಾನಪದವು ಪ್ರಾಚೀನ ಕಾಲದ ಶಿಷ್ಟ ಸಾಹಿತ್ಯ ಪರಂಪರೆಯ ಕಾವ್ಯಗಳು ಹಾಗೂ ಶಾಸನಗಳಲ್ಲಿ ಉಲ್ಲೇಖಗೊಂಡಿರುವುದನ್ನು ನೋಡಬಹುದು. ಮೌಖಿಕ ಪರಂಪರೆ–ಶಿಷ್ಟಪರಂಪರೆ ಇವೆರಡನ್ನು ದೇಶಿ–ಮಾರ್ಗಗಳ ಸ್ವರೂಪದಲ್ಲಿ ಅನೇಕ ಕವಿಗಳು ಚರ್ಚೆ ಮಾಡಿದ್ದಾರೆ. ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ 'ದೇಶಿಯೊಳ್ ಪೊಗುವುದು ಪೊಕ್ಕು ಮಾರ್ಗದೋಳ್ ತಳ್ವುದು' ಎಂದು ಉಲ್ಲೇಖಿಸಿದ್ದಾನೆ. ಪ್ರಾಚೀನ ಕಾಲದ 'ವಡ್ಡಾರಾಧನೆ' ಕೃತಿಯಲ್ಲಿಯೂ ಜನಪದ ಅಂಶಗಳನ್ನು ಕಾಣಬಹುದು. ಈ ಕೃತಿಯಲ್ಲಿ ಜನಪದ ಕತೆಗಳ ಪ್ರಸ್ತಾಪವಿದೆ. ನೃಪತುಂಗನ 'ಕವಿರಾಜ ಮಾರ್ಗ' ಕಾವ್ಯದಲ್ಲಿ ಜನಪದ ಕುರಿತು ಪ್ರಸ್ತಾಪಿಸಿರುವುದನ್ನು ನೋಡಬಹುದು. 'ನಾಡವರ್ಗಗಳ್ ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಶ್ರೀವಿಜಯನು ಕರೆದಿದ್ದಾನೆ. ಇದು ಕನ್ನಡ ಜನಪದ ಸಂಸ್ಕೃತಿ ಮತ್ತು ಸಾಹಿತ್ಯ ಸಂಪತ್ತಿನ ವಿಫುಲತೆಯನ್ನು ಕುರಿತು ಹೇಳಿದ ಮಾತು"[೨] ಅಂದರೆ ಕನ್ನಡ ಜನಪದ ಸಾಹಿತ್ಯವು ಪ್ರಾಚೀನ ಕಾಲದಿಂದಲೂ ವೈವಿಧ್ಯಮದಿಂದ ಕೂಡಿತ್ತು. ಜನಪದ ಪರಂಪರೆಗೆ ಇರುವ ಐತಿಹಾಸಿಕ ಹಾಗೂ ಸಾಹಿತ್ಯಿಕ ಅಸ್ತಿತ್ವವನ್ನು ಪ್ರಾಚೀನ ಕನ್ನಡದ ಹಲವು ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವುದನ್ನು ನೋಡಬಹುದು. ಆದರೆ ಪ್ರಾಚೀನ ಕಾಲದಿಂದಲೂ ಶಿಷ್ಟಸಾಹಿತ್ಯಕ್ಕೆ ಮನ್ನಣೆ ನೀಡಿದ ಪಂಡಿತರು, ಅಕ್ಷರವಂತರು ಮೌಖಿಕ ಸಾಹಿತ್ಯವನ್ನು ಕಡೆಗಣಿಸಿರುವುದನ್ನು ನೋಡಬಹುದು. ಏಕೆಂದರೆ ಪ್ರಾಚೀನ ಕಾಲದಲ್ಲಿ ಶಿಷ್ಟ ಮತ್ತು ಅಭಿಜಾತ ಸಾಹಿತ್ಯವನ್ನು ಪ್ರಸಾರ ಮಾಡಲು ರಾಜರ ಆಸ್ಥಾನಗಳು ಇರುತ್ತಿದ್ದವು. ಆದರೆ ಜನಪದ ಸಾಹಿತ್ಯವನ್ನು ಪ್ರಸಾರ ಮತ್ತು ಪ್ರಚಾರ ಮಾಡಲು ಯಾವುದೇ ಮಾಧ್ಯಮ ಆಸರೆ ಇರುತ್ತಿರಲಿಲ್ಲ. ಆದಿಮಾನವನ ಕಾಲದಿಂದಲೂ ಸಮೃದ್ಧವಾಗಿದ್ದ ಮೌಖಿಕ ಸಾಹಿತ್ಯವನ್ನು ಜನಪದರು ಸಮಷ್ಠಿ ಪ್ರಜ್ಞೆಯ ಸ್ಮೃತಿಯಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಆದರೆ ಈ ಕೆಲಸವನ್ನು ಪ್ರಾಚೀನ ಕಾಲದಿಂದಲೂ ಯಾವ ವಿದ್ವಾಂಸರು, ಕವಿಗಳು ಮಾಡಲಿಲ್ಲ. ಏಕೆಂದರೆ ಪ್ರಾಚೀನ ಕಾಲದಿಂದಲೂ ಶಿಷ್ಟ ಸಾಹಿತ್ಯ(ಲಿಖಿತ) ಪರಂಪರೆಗೆ ಸಿಕ್ಕ ಮನ್ನಣೆ ಮೌಖಿಕ ಸಾಹಿತ್ಯಕ್ಕೆ ಸಿಗಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಶಾಸ್ತ್ರಗಳು, ಛಂದಸ್ಸುಗಳು, ವ್ಯಾಕರಣಗಳು ಶಿಷ್ಟ ಸಾಹಿತ್ಯವನ್ನು ಅನುಸರಿಸಿ ಹುಟ್ಟಿಕೊಂಡಿವೆಯೇ ಹೊರೆತು ಮೌಖಿಕ ಸಾಹಿತ್ಯ ಪರಂಪರೆಯನ್ನಲ್ಲ. "ಶಿಷ್ಟ ಸಾಹಿತ್ಯದ ರಾಚನಿಕ ಶಾಸ್ತ್ರಗಳಾದ ಛಂದಸ್ಸು, ವ್ಯಾಕರಣ, ಭಾಗಶಾಸ್ತ್ರ ಮುಂತಾದವುಗಳು ತಿರುಳು ಮತ್ತು ಪರಿಣಾಮವನ್ನ ಗಮನಿಸಿ ಹುಟ್ಟಿಕೊಳ್ಳುವ ಕಾವ್ಯಮೀಮಾಂಸೆ ಮತ್ತು ವಿಮರ್ಶೆಯಂತಹ ಶಾಸ್ತ್ರಗಳು ಹುಟ್ಟಿಕೊಂಡಿರುವುದು ಕೇವಲ ಲಿಖಿತ ಮೂಲದ ಕನ್ನಡ ಸಾಹಿತ್ಯವನ್ನು ಅನುಸರಿಸಿ"[೩] ಇಂತಹ ಶಾಸ್ತ್ರಗಳು ಇಲ್ಲಿಯವರೆಗೂ ಸೃಜನ ಸಾಹಿತ್ಯಕ್ಕೆ ಕೊಟ್ಟ ಮನ್ನಣೆ. ಜಾನಪದ ಸಾಹಿತ್ಯಕ್ಕೆ ಯಾವುದೇ ತರಹದ ಮನ್ನಣೆ ಕೊಡಲಿಲ್ಲ.

ಹಾಗಾಗಿ ೧೯ನೇ ಶತಮಾನದಲ್ಲಿ ಪಾಶ್ಚಾತ್ಯರು ಹಾಕಿಕೊಟ್ಟ ಅಧ್ಯಯನ ಪ್ರಾಶಸ್ತ್ಯದಿಂದಾಗಿ ಕನ್ನಡ ಜಾನಪದಕ್ಕೆ ಒಂದು ಮನ್ನಣೆ ದೊರೆಯಿತು. ನಂತರ ಬ್ರಿಟಿಷರ ಅಧ್ಯಯನ ಮಾದರಿ ಕ್ರಮದಲ್ಲಿ ಕನ್ನಡದ ಅಕ್ಷರವುಳ್ಳ ವಿದ್ವಾಂಸರೆ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಗಳಲ್ಲಿ ವಿವಿಧ ನೆಲೆಗಳಲ್ಲಿ ಜಾನಪದವನ್ನು ಅಧ್ಯಯನವನ್ನು ನಡೆಸಿಕೊಂಡು ಬಂದರು.

ಜನಪದ ಸಾಹಿತ್ಯವೆಂದರೆ ಒಂದು ಪ್ರದೇಶದ ಜನರ ಸಂಸ್ಕೃತಿ, ಆಚಾರ-ವಿಚಾರ, ಸಂಪ್ರದಾಯಗಳು, ನಂಬಿಕೆಗಳು ಮೌಖಿಕ ನೆಲೆಯಲ್ಲಿ ಕ್ರಿಯಾತ್ಮಕವಾಗಿ ಬೆಸೆದುಕೊಂಡಿರುತ್ತವೆ. ಇಂತಹ ಜಾನಪದ ಸಾಹಿತ್ಯವನ್ನು ೧೯ನೇ ಶತಮಾನದಲ್ಲಿ ಒಂದು ಸಾಂಸ್ಕೃತಿಕ ಪರಂಪರೆಯ ನೆಲೆಯಲ್ಲಿ ಪಾಶ್ಚಾತ್ಯ ಹಾಗೂ ದೇಶಿ ವಿದ್ವಾಂಸರು ಸಂಗ್ರಹ, ಸಂಪಾದನೆ ಮಾಡಿ ಜಾನಪದ ಸಂಸ್ಕೃತಿಯ ಪುನರ್ ಶೋಧನೆ ಮುಂದಾದರು. ಹಾಗಾಗಿ ಕನ್ನಡ ಜಾನಪದ ಅಧ್ಯಯನಕ್ಕೆ ವಿದೇಶಿ ಮತ್ತು ದೇಶಿ ವಿದ್ವಾಂಸರ ಕೊಡುಗೆ ಅಪಾರವಾದುದು. ಅದನ್ನು ಈ ಅಧ್ಯಾಯದಲ್ಲಿ ಸ್ಮರಿಸಿಕೊಂಡು ಸಮೀಕ್ಷಿಸಲಾಗುವುದು.

೩.೧. ವಿದೇಶಿ ವಿದ್ವಾಂಸರ ಅಧ್ಯಯನ

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಬರಹದ ಇತಿಹಾಸವಿದ್ದರೆ, ಮೌಖಿಕ ಅಧ್ಯಯನಕ್ಕೆ ಕೇವಲ ನೂರಿನ್ನೂರು ವರ್ಷಗಳ ಇತಿಹಾಸವಿದೆ. ಮೌಖಿಕ ಅಥವಾ ಜಾನಪದ ಸಾಹಿತ್ಯವು ಲಿಖಿತ ಸಾಹಿತ್ಯದಷ್ಟೆ ಮುಖ್ಯವಾದ ಅಧ್ಯಯನದ ವಸ್ತುವೆಂಬ ಪ್ರಜ್ಞೆಯನ್ನು ಬೆಳೆಸಿದವರು ಪಾಶ್ಚಾತ್ಯರೆ. ಕರ್ನಾಟಕದಲ್ಲಿ ಬ್ರಿಟಿಷರು ನಾಲ್ಕನೇ ಮೈಸೂರು ಯುದ್ಧದಲ್ಲಿ(೧೭೯೯) ಟಿಪ್ಪುವನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಶಪಡಿಸಿಕೊಂಡ ಮೇಲೆ 'ಈಸ್ಟ್ ಇಂಡಿಯಾ ಕಂಪನಿಯ' ಮೂಲಕ ಬ್ರಿಟಿಷ್ ಮೂಲದ ಕ್ಷೇತ್ರ ಅಧ್ಯಯನಕಾರರನ್ನು ನೇಮಿಸಿ ಕಂಪನಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನೋಡಿಕೊಂಡರು. ಈ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಬಂದವರು ಅಬೆದುಬೆಯಿಸ್ (ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರೆಮೊನೀಸ್-೧೭೯೨), ಪ್ರಾನ್ಸಿಸ್ ಬುಕ್ಯಾನಿನ್(ಎಜರ್ನಿ ಫ್ರಮ್ ಮದ್ರಾಸ್ ಥ್ರೂದಿ ಕಂಟ್ರಿಸ್ ಆಫ್ ಮೈಸೂರು ಕೆನರ್ಸ್ ಆಂಡ್ ಮಲಬಾರ್), ಫ್ರೇಜರ್(ದಿ ಗೋಲ್ಡನ್ ಬೋ: ಎ ಸ್ಟಡಿ ಕಾಂಪೆರೀವ್ ರಿಲಿಜಿನ್), ಇ.ಬಿ.ಟೈಲರ್(ಪ್ರಿಮಿಟಿವ್ ಕಲ್ಚರ್), ಮೆಕಂಜಿ(ಕೈಫಿಯತ್ತುಗಳು), ಚಾರ್ಲ್ಸ್ ಇ.ಗೋವರ್ (ಪೋಕ್ ಸಾಂಗ್ಸ್ ಆಫ್ ಸದರನ್ ಇಂಡಿಂಯಾ-೧೮೭೧), ಜೆ.ಎಫ್.ಫ್ಲೀಟ್(ಲಾವಣಿಗಳು-೧೮೮೫), ಕಿಟೆಲ್(ಜನಪದ ನುಡಿಗಟ್ಟುಗಳು), ಮೇರಿಪ್ರಿರೆ(ದ ಓಲ್ಡ್ ಡೆಕ್ಕನ್ ಡೇಸ್-೧೮೬೬), ಮೋಗ್ಲಿಗ್(ಕನ್ನಡ ಗಾದೆಗಳು-೧೮೯೪) ಮುಂತಾದವರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಿದರು. ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಸಂಗ್ರಹ ಮತ್ತು ಅಧ್ಯಯನಗಳು ಪ್ರಾಕ್ತನ ಶಾಸ್ತ್ರದ ಭಾಗವಾಯಿತು. ಈ ಅಧ್ಯಯನಗಳ ಹಿಂದಿನ ದೃಷ್ಟಿಕೋನ ಪ್ರಭುತ್ವಕ್ಕೆ ವ್ಯವಸ್ಥೆಯನ್ನು ಅರ್ಥಮಾಡಿಸಿ ಸಾಮ್ರಾಜ್ಯ ಸಾಹಿತ್ಯವನ್ನು ಬಲಪಡಿಸುವುದಾಗಿತ್ತು.

ಕರ್ನಾಟಕ ಜಾನಪದವನ್ನು ಕನ್ನಡೇತರರಿಗೆ ಪರಿಚಯಿಸಿದ ಕೀರ್ತಿ ಅಬೆದುಬೆಯಿಸ್, ಮೇರಿ ಫ್ರೇರೆ, ಫ್ಲೀಟ್, ಕಿಟೆಲ್, ಚಾರ್ಲ್ಸ್ ಇ.ಗೋವರ್ ಮುಂತಾದವರಿಗೆ ಸಲ್ಲಬೇಕು. ಅಬೆದುಬಾಯಿಸ್

'ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರೆಮೊನೀಸ್'(೧೮೯೨) ಕೃತಿಯಲ್ಲಿ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಸಂಚಾರ ಮಾಡಿ ವಿವಿಧ ಜಾನಪದ ಸಂಪ್ರದಾಯಗಳನ್ನು ಗುರುತಿಸಿ ಸಂಗ್ರಹಿಸಿ ದಾಖಲಿಸಿದ್ದಾನೆ. ಜನರೊಂದಿಗೆ ಆತ್ಮೀಯವಾದ ಬಾಂಧವ್ಯ ಇಟ್ಟುಕೊಂಡಿದ್ದ ಇವನನ್ನು ಎಲ್ಲರೂ 'ದೊಡ್ಡಸ್ವಾಮಿ' ಎಂದು ಕರೆಯುತ್ತಿದ್ದರು. ಮತ ಪ್ರಚಾರಕನಾಗಿ ಬಂದ ಇವನು ಕನ್ನಡ ಜಾನಪದಕ್ಕೆ ತುಂಬ ಹತ್ತಿರದವನಾಗಿ ಕನ್ನಡ ಜಾನಪದಕ್ಕೆ ಸಂಬಂದಿಸಿದ ಹಲವಾರು ಕೊಡುಗೆಗಳನ್ನು ನೀಡಿದ್ದಾನೆ.

ಚಾರ್ಲ್ಸ್ ಇ.ಗೋವರ್' ಕನ್ನಡ ಭಾಷೆಯ ಜೊತೆಗೆ ಭಾರತದ ಪ್ರಮುಖ ಭಾಷೆಗಳಲ್ಲಿ ಇದ್ದಂತಹ ಜನಪದ ಗೀತೆಗಳನ್ನು 'ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯಾ'(೧೮೭೧) ಕೃತಿಯಲ್ಲಿ ಇಂಗ್ಲೀಷ್ ಭಾಷೆಗೆ ಅನುವಾದಿಸಿದ್ದಾನೆ. ಕನ್ನಡ ಜನಪದ ಗೀತೆಗಳಿಗೆ ಮೊದಲ ಸ್ಥಾನವಿದ್ದು, ಕನ್ನಡದ ೨೮ ಗೀತೆಗಳು ಈ ಕೃತಿಯಲ್ಲಿವೆ. ಇವನ ಸಂಗ್ರಹದಲ್ಲಿ ದಾಸರ ಕೀರ್ತನೆಗಳು ಹೆಚ್ಚು ಕಂಡು ಬರುತ್ತವೆ. ಗೋವರ್ ಗಿಂತ ಮೊದಲು ಮೊಗ್ಲಿಂಗ್ ಕನ್ನಡ ಜನಪದ ಸಾಹಿತ್ಯ ಸಂಗ್ರಹದಲ್ಲಿ ಅದ್ವಿತಿಯನೆನಿಸಿದ್ದಾನೆ. ಇವನು ತನ್ನ ಸಂಗ್ರಹದಲ್ಲಿ ಬಡಗ ಜನಪದಗೀತೆಗಳು ಮತ್ತು ಕೊಡಗಿನ ಜನಪದಗೀತೆಗಳನ್ನು ದಾಖಲಿಸಿದ್ದಾನೆ. ಕೊಡಗಿನ ಹುತ್ತರಿಹಾಡು, ಮದುವೆಯ ಹಾಡುಗಳು, ಸಂಸ್ಕಾರ ಗೀತೆಗಳು, ಶಿಶುಪ್ರಾಸಗಳು ಇವುಗಳಿಗೆ ಸಂಬಂಧಿಸಿದ ೨೪ ಜನಪದಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾನೆ.

ಲಾವಣಿಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಿರುವ ಜೆ.ಎಫ್.ಫ್ಲೀಟ್ ಅವರು ಪ್ರಮುಖರಾಗಿ ಕಾಣಿಸಿಕೊಳ್ಳುತ್ತಾರೆ. ತಾವು ಸಂಗ್ರಹಿಸಿದ ಲಾವಣಿಗಳಿಗೆ ಉಪಯುಕ್ತ ಟಿಪ್ಪಣಿಗಳನ್ನು ಬರೆದು ಕನ್ನಡ ರೂಪವನ್ನು ಕೊಟ್ಟು ಅನಂತರ ಇಂಗ್ಲಿಷ್ ಭಾಷಾಂತರವನ್ನು ನೀಡಿರುವುದು ವಿಶೇಷವಾಗಿದೆ. ಫ್ಲೀಟ್‌ರವರು 'ಇಂಡಿಯನ್ ಆಂಟಿಕ್ವೆರಿ' ಸಂಪುಟದಲ್ಲಿ 'ಎ ಸೆಲೆಕ್ಷನ್ ಆಫ್ ಕ್ಯಾನರೀಸ್ ಬ್ಯಾಲೆಡ್ಸ್'(೧೮೮೫) ಎಂಬ ಕೃತಿಯನ್ನು ಪ್ರಕಟಿಸಿದರು. ಲಾವಣಿಗಳ ಮೇಲಿನ ಆಸಕ್ತಿಯು ಫ್ಲೀಟ್ ಸಂಗ್ರಹಿಸಿದ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ರಾಷ್ಟ್ರಪ್ರಭುತ್ವಕ್ಕೆ ಸಂಬಂಧಿಸಿದ ಲಾವಣಿಗಳನ್ನು ಓಲೀಟ್ ಮುಖ್ಯವಾಗಿ ಸಂಗ್ರಹಿಸಿದ್ದಾನೆ. ಕಿತ್ತೂರಿನ ಈರವ್ವ, ಸಂಗೊಳ್ಳಿ ರಾಯಣ್ಣ, ಬಾದಾಮಿಯ ರಾಣಮಂಡಲ ಕೋಟೆ ಮುತ್ತಿಗೆ, ನರಗುಂದದ ವಿಜಯ, ಆದಾಯ ತೆರಿಗೆ ಜಾರಿ, ಹಲಗಲಿಯ ಬೇಡರು ಹಳ್ಳಿಯ ಜಮಿನ್ದಾರ, ಆಂಗ್ಲ ರಾಷ್ಟ್ರ ವೈಭವದ ಹಾಡು, ಇತ್ಯಾದಿ ಈ ಲಾವಣಿಗಳು ಸಾಹಿತ್ಯ ಮತ್ತು ಇತಿಹಾಸದ ವಸ್ತುಗಳನ್ನು ಒಳಗೊಂಡಿವೆ.

'ಕನ್ನಡ ಗಾದೆಗಳು'(೧೮೯೪) ಎಂಬ ಕೃತಿಯಲ್ಲಿ ಹರ್ಮನ್ ಮೊಗ್ಲಿಂಗ್ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾನೆ. ನಂತರ ಕೃತಿಯನ್ನು ಜಾನಪದ ವಿದ್ವಾಂಸನಾದ ವೈಗಲ್ ಜರ್ಮನ್ ಭಾಷೆಗೆ ಅನುವಾದಿಸಿ ಪ್ರಕಟಿಸಿದನು. ಅಲ್ಲದೇ ಈ ಗಾದೆಗಳನ್ನು ಶಾಲಾ ಪಠ್ಯಗಳ ಭಾಗಕ್ಕೆ ಸೇರಿಸಿದನು.

'ಓಲ್ಡ್ ಡೆಕ್ಕನ್ ಡೇಸ್' ಅಥವಾ 'ಹಿಂದೂ ಫೇರಿ ಲೆಜೆಂಡ್ಸ್ ಕರೆಂಟ್ ಇನ್ ಸದರೆನ್ ಇಂಡಿಯಾ: ಕಲೆಕ್ಟೆಡ್ ಫ್ರಮ್ ಓರಲ್ ಟ್ರೆಡಿಷನ್"(೧೮೬೮) ಮೇರಿ ಫ್ರೇರಿ ಅವರ ಪ್ರಮುಖ ಗ್ರಂಥವಾಗಿದೆ.

ಕನ್ನಡ ಜನಪದ ಕಥೆಗಳನ್ನು ಜರ್ಮನ್, ಹಂಗೇರಿ, ಡ್ಯಾನಿಷ್, ಭಾಷೆಗಳಿಗೆ ಅನುವಾದಿಸಲಾಗಿದೆ. ಅಲ್ಲದೇ ಭಾರತದ ಭಾಷೆಗಳಾದ ಮರಾಠ, ಗುಜರಾತಿ ಮತ್ತು ಹಿಂದೂಸ್ತಾನಿ ಭಾಷೆಗಳಿಗೆ ಜನಪದ ಕಥೆಗಳನ್ನು ಅನುವಾದಿಸಲಾಗಿದೆ.

ಹೀಗೆ ಆರಂಭದಲ್ಲಿ ಬ್ರಿಟಿಷ್ ವಿದ್ವಾಂಸರಿಂದ ಜನಪದ ಅಧ್ಯಯನ ಕ್ಷೇತ್ರ ವಿಸ್ತಾರಗೊಂಡು, ಗೀತೆ, ಕಥೆ, ಲಾವಣಿ, ಗಾದೆ, ಒಗಟು, ಆಚರಣೆ, ನಂಬಿಕೆ, ಜೀವನ ಪದ್ಧತಿ ಇತ್ಯಾದಿಗಳನ್ನು ಕುರಿತು ಹಲವು ಪ್ರಕಟಣೆಗಳನ್ನು ಕೈಗೊಳ್ಳುವ ಮೂಲಕ ಜಾನಪದ ಅಧ್ಯಯನಕ್ಕೆ ಒಂದು ಮಾದರಿ ನೆಲೆಯನ್ನು ಕಲ್ಪಿಸಿದರು. ಮೊದಲ ನೋಟಕ್ಕೆ ಈ ಸಂಪಾದನೆ ಮತ್ತು ವಿಶ್ಲೇಷಣೆಗಳು ವಸ್ತು ವೈವಿಧ್ಯ ಅವರು ಜಾನಪದ ಎಂಬುದನ್ನು ಗ್ರಹಿಸಿದ ವಿಸ್ತೃತ ನೆಲೆಯನ್ನು ಎತ್ತಿ ತೋರಿಸುತ್ತದೆ. ಜಪದವು ಕರ್ನಾಟಕದ ಭಾಷೆ, ಸಾಹಿತ್ಯ, ಧರ್ಮ, ಇವುಗಳ ಮೂಲಕ ಬೆಳೆದು ಬಂದಿದೆ.

ಪಾಶ್ಚಾತ್ಯ ವಿದ್ವಾಂಸರಿಂದ ನಡೆದ ಈ ಜನಪದ ಸಂಗ್ರಹಣೆ ಮತ್ತು ಅಧ್ಯಯನದ ಹಿಂದಿನ ನಾಲ್ಕು ಧೋರಣೆಗಳನ್ನು ವಿಜಯಕುಮಾರ ಬೋರಟ್ಟಿಯವರು ಹೀಗೆ ಗುರುತಿಸುತ್ತಾರೆ.

೧. ಯುರೋಪಿಯನ್ ಮಿಶನರಿ ಮತ್ತು ಅಧಿಕಾರಿಗಳ ಶೈಕ್ಷಣಿಕ ಅನ್ವೇಷಣೆಯ ಆಸಕ್ತಿ.

೨. ೧೮೫೭ರ ಸಿಪಾಯಿ ದಂಗೆಯ ನಂತರ ಸ್ಥಳೀಯ ಜನರ ಮನಸ್ಥಿತಿಯನ್ನು ಅರಿಯಬಹುದೆಂಬ ಲೆಕ್ಕಾಚ್ಚಾರ.

೩. ಗ್ರಾಮೀಣ ಜನಪದರ ಸಾಹಿತ್ಯ ಸಂಸ್ಕೃತಿಯ ದಾಖಲಿಸುವ ಮತ್ತು ಸಂರಕ್ಷಿಸುವ ನೈತಿಕ ಹೊಣೆಗಾರಿಕೆ.

೪. ಲಿಖಿತ ಶಾಸ್ತ್ರೀಯ ಸಾಹಿತ್ಯದ ನೆಲೆಗಿಂತ ಭಿನ್ನವಾದ ಮೌಖಿಕ ಸಾಹಿತ್ಯವೇ ಜನಪದ, ಬುಡಕಟ್ಟು ಗ್ರಾಮೀಣ ಬಹುಸಮುದಾಯದ ನಿಜದನಿ ಎಂಬ ನಂಬಿಕೆ"[೪] ಹೀಗಾಗಿ ಬ್ರಿಟಿಷರ ಅಧಿಕಾರದ ದಾಹದ ಪರಿಣಾಮವಾಗಿ ಕರ್ನಾಟಕದಲ್ಲಿ ಜನಪದ ಅದ್ಯಯನಗಳು ಪ್ರಾರಂಭವಾದವು.

೩.೨. ದೇಶಿ ವಿದ್ವಾಂಸರ ಅಧ್ಯಯನ

ದೇಶಿ ವಿದ್ವಾಂಸರ ಜಾನಪದ ಸಂಗ್ರಹ ಮತ್ತು ಪ್ರಕಟಣಾ ಕಾರ್ಯವು ಇಪ್ಪತ್ತನೇ ಶತಮಾನದ ಆರಂಭಕ್ಕೆ ತನ್ನದೇ ಆದ ಸೈದ್ಧಾಂತಿಕ ಚೌಕಟ್ಟನ್ನು ಪಡೆಯಿತು. ೧೮೮೫ರಲ್ಲಿ ಆರಭಗೊಂಡ ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಮತ್ತು ಕರ್ನಾಟಕ ಏಕೀಕರಣದ ಮುಂಚೂಣಿ ನಾಯಕರಾದ ಆಲೂರು ವೆಂಕಟರಾಯರು ೧೯೨೨ರಲ್ಲಿ ಆರಂಭಿಸಿದ ಜಯಕರ್ನಾಟಕ ಪತ್ರಿಕೆಗಳು ಜನಪದ ಸಾಹಿತ್ಯದ ಪ್ರಕಟಣೆಗೆ ಒದಗಿ ಬರುವ ಮೂಲಕ ಅದಕ್ಕೊಂದು ಸೈದ್ಧಾಂತಿಕ ನೆಲೆಗಟ್ಟನ್ನು ದೊರಕಿಸಿಕೊಟ್ಟವು. ರಾವಬಹದ್ದೂರ್ ಸಿ.ಹನುಮಂತಗೌಡ ಎನ್ನುವವರು ೧೯೧೭ರಲ್ಲಿ ಜನಪದ ಗೀತೆಗಳನ್ನು ಸಂಗ್ರಹಿಸಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟಿಸಿದರು. ಜೊತೆಗೆ ಇವರೆ ಕೆಲವು ಲಾವಣಿಗಳನ್ನು

ರಚಿಸಿದ್ದಾರೆ. ಮುಂದೆ ಈ ಪತ್ರಿಕೆಯಲ್ಲಿ ಮಾಸ್ತಿ, ಚೆನ್ನಮಲ್ಲಪ್ಪ, ಬೆಟಗೇರಿ ಕೃಷ್ಣಶರ್ಮ ಮುಂತಾದವರು ಲೇಖನಗಳನ್ನು ಪ್ರಕಟಿಸಿದರು. ಜಯಕರ್ನಾಟಕ ಪತ್ರಿಕೆಯು ಜನಪದ ಸಾಹಿತ್ಯಕ್ಕಾಗಿ ಅಂಕಣವೊಂದನ್ನು ರೂಪಿಸುವ ಮೂಲಕ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನಕ್ಕೆ ಬೆನ್ನೆಲುಬಾಗಿ ನಿಂತಿತು. "ಈ ಘಟ್ಟದಲ್ಲಿ ಜನಪದ ಸಾಹಿತ್ಯಕ್ಕೆ 'ಹಳ್ಳಿಯ ಹಾಡುಗಳು', 'ಹಳ್ಳಿಯ ಸಾಹಿತ್ಯ,' 'ಗ್ರಾಮೀಣ ಹಾಡುಗಳು,' 'ವಾಸ್ತವ ಸಾಹಿತ್ಯ" ಇತ್ಯಾದಿ ಹೆಸರುಗಳು ಬಳಕೆಗೊಂಡವು"[೫] ೧೯೨೩ರ ಬಿಜಾಪುರ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಜಾನಪದ ವಿಷಯ ಮಂಡನೆಗೆ ವೇದಿಕೆಯು ದೊರಕಿತು. ೧೯೨೫ರ ಬೆಳಗಾವಿಯ ೧೧ನೇ ಸಮ್ಮೇಳನ, ೧೯೨೮ರ ಕಲಬುರ್ಗಿಯ ೧೪ನೇ ಸಮ್ಮೇಳನ ಮತ್ತು ೧೯೩೦ರ ಮೈಸೂರಿನ ೧೬ನೇ ಸಮ್ಮೇಳನಗಳಲ್ಲಿ ಇದರ ಚರ್ಚೆಗೆ ಗೋಷ್ಠಿಗಳು ರೂಪುಗೊಂಡವು. ಹೀಗೆ ೧೯೨೦ರ ದಶಕದಲ್ಲಿ ಜನಪದ ಸಂಗ್ರಹ ಮತ್ತು ಅಧ್ಯಯನಗಳು ಮುಖ್ಯ ವೇದಿಕೆಗೆ ಬಂದವು.

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ಜಾನಪದ ಕ್ಷೇತ್ರದಲ್ಲಿ ನೇರವಾಗಿ ಕೆಲಸ ಮಾಡಿದ ವಿದ್ವಾಂಸರು ಬೆರಳೆಣಿಕೆ ಮಾತ್ರ. ಆ ವಿದ್ವಾಂಸರ ಪೈಕಿ ಮಾಸ್ತಿ, ನಡಕೇರಿಯಂಡ ಚಿಣ್ಣಪ್ಪ, ಅರ್ಚಕ ಬಿ.ರಂಗಸ್ವಾಮಿ, ಹಲಸಂಗಿ ಗೆಳೆಯರು, ಮತಿಘಟ್ಟ ಸೋದರರು, ಗೊರೂರು, ದೇವುಡು, ನರಸಿಂಹಶಾಸ್ತ್ರಿ, ಎನ್.ರಂಗಸ್ವಾಮಿ ಮುಖ್ಯರು. ಈ ವಿದ್ವಾಂಸರು ಕನ್ನಡದ ರಸವತ್ತಾದ ಗೀತೆಗಳನ್ನು ಆಯ್ದು ಸಂಕಲಿಸಿ, ಪ್ರಕಟಿಸಿ, ಕರ್ನಾಟಕದಲ್ಲಿ ಜಾನಪದದ ಬಗೆಗೆ ವಿಶೇಷವಾದ ಒಲವು ಮೂಡುವಂತೆ ಮಾಡಿದರು. ವಿಶೇಷವಾಗಿ ಉತ್ತರ ಕರ್ನಾಟಕ ಪ್ರದೇಶದ ರಚನೆಗಳು ಕರ್ನಾಟಕದ ಉದ್ದಗಲಕ್ಕೂ ಜನಪ್ರಿಯವಾದವು. ಆಸಕ್ತರ ಗಮನವನ್ನು ಸೆಳೆದವು. ಸ್ವಾತಂತ್ರ್ಯಪೂರ್ವದ ಈ ಸಾಧನೆ ಗಮನಾರ್ಹವಾಗಿದೆ.

ಕರ್ನಾಟಕ ಗೀತಸಾಹಿತ್ಯ ಸಂಕಲನ ಪ್ರಚಾರ ಕಾರ್ಯಕ್ಕೆ ಹಲಸಂಗಿ ಗೆಳೆಯರು ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ. ಇವರು ೧೯೩೧ರಲ್ಲಿ ಉತ್ತರ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ ಮಾಡಿ 'ಗರತಿಹಾಡು' ಸಂಕಲನವನ್ನು ತಂದಿದ್ದಾರೆ. ಇದು ಗುಣದ ದೃಷ್ಟಿಯಿಂದ ಇಂದಿಗೂ ಮಹತ್ವದ ಸಂಕಲನವಾಗಿದೆ. ಇದಾದ ಮೇಲೆ ಹೊರ ಬಂದ ಜೀವನ ಸಂಗೀತ(೧೯೩೩) ಮಲ್ಲಿಗೆ ದಂಡೆ(೧೯೩೫) ಸಂಕಲನಗಳು ಪ್ರಮುಖವಾಗಿವೆ. ಕಾಪಸೆ ರೇವಪ್ಪ, ಮಧುರಚನ್ನ, ಸಿಂಪಿ ಲಿಂಗಣ್ಣ ಈ ಸಂಕಲನಗಳ ಸಂಪಾದಕರಾಗಿದ್ದಾರೆ. ಬಿ.ಎಂಶ್ರೀ, ಬೇಂದ್ರೆ, ಮಾಸ್ತಿ, ಇವರು ಈ ಸಂಕಲನಗಳಿಗೆ ಮುನ್ನುಡಿ ಬರೆದು ಜನಪದ ಸಾಹಿತ್ಯದ ಅನನ್ಯತೆಯನ್ನು ಪ್ರತಿಪಾದಿಸಿದ್ದಾರೆ.

ಮೈಸೂರು ಭಾಗದಲ್ಲಿ ಅರ್ಚಕ ಬಿ.ರಂಗಸ್ವಾಮಿಯವರು ಪ್ರಮುಖವಾಗಿ ಕಂಡುಬರುತ್ತಾರೆ. ಇವರು '೧೯೩೩ರಲ್ಲಿ 'ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು' ಸಂಕಲನವನ್ನು ಪ್ರಕಟಿಸಿದ್ದಾರೆ. ಇವರಲ್ಲದೇ ಈ ಭಾಗದಲ್ಲಿ ಕೆಲಸ ಮಾಡಿರುವ ಅನೇಕ ವಿದ್ವಾಂಸರನ್ನು ಗುರುತಿಸಬಹುದು. ಗೋರೂರು 'ಹಳ್ಳಿಯ ಹಾಡು(೧೯೩೮), ರಂಗಸ್ವಾಮಿ 'ಹಳ್ಳಿಯ ಪದಗಳು'(೧೯೪೦) ಇವರು ಒಂದೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕನ್ನಡ ಜಾನಪದ ಸಂಗ್ರಹದಲ್ಲಿ ಮುಖ್ಯವಾಗಿ ಕಂಡು ಬರುವ ಹೆಸರು ಮತಿಘಟ್ಟ ಕೃಷ್ಣಮೂರ್ತಿ ಅವರದು. ವಸಾಹತುಶಾಹಿ ಕಾಲದಲ್ಲಿ ಜನಪದಗೀತೆಗಳನ್ನು ವಿಸೇಷವಾಗಿ ಅಧ್ಯಯನ ಮಾಡಿದ್ದಾರೆ. 'ನಾಡಪದಗಳು' ಇವರು ಸಂಕಲಿಸಿದ ಜಾನಪದ ಗ್ರಂಥವಾಗಿದೆ. ಬಯಲುಸೀಮೆಯ, ಮಲೆನಾಡಿನ ಜನಪದ ಗೀತೆಗಳನ್ನು ಸಂಗ್ರಹಿಸಿ ಅದರ ಸಂಪ್ರದಾಯಗಳನ್ನು ಗುರುತಿಸಿದ್ದಾರೆ. ಈ ಎಲ್ಲ ಸಂಕಲನಗಳು ಸ್ವಾತಂತ್ರ್ಯಪೂರ್ವ ಅವಧಿಯ ಮೈಲಿಗಲ್ಲುಗಳು ಎಂದೇ ಹೆಸರಾಗಿವೆ.

ಹೀಗೆ ಸೀಮಿತ ಉದ್ದೇಶದಿಂದ ಆರಂಭಗೊಂಡ ಕನ್ನಡ ಜನಪದ ಸಾಹಿತ್ಯ ಸಂಗ್ರಹಗಳಲ್ಲಿ ಸಾಹಿತ್ಯೇತರ ವಿಷಯಗಳ ಪ್ರಸ್ತಾಪ ಅಲ್ಲಲ್ಲಿ ಬಂದಿದ್ದರೂ ಅವು ಪ್ರಾಸಂಗಿಕವಾಗಿವೆ. ಆದರೂ ಸಮಗ್ರ ಜನಪದ ಜೀವನವನ್ನೇ ಅಭ್ಯಸಿಸಿ ಜಾನಪದದ ಹಿನ್ನೆಲೆಯಲ್ಲಿ ಜನಪದಗೀತೆಗಳ ಸೊಗಸು ಸ್ವಾರಸ್ಯವನ್ನು ಪ್ರತಿಪಾದಿಸುವ ಪ್ರಯತ್ನಗಳೂ ಇಲ್ಲದಿಲ್ಲ. ಚೆಣ್ಣಪ್ಪ, ಅರ್ಚಕ ಬಿ.ರಂಗಸ್ವಾಮಿ, ದೇವುಡು, ಅವರು ಮಾತ್ರ ಸಮಗ್ರ ಜಾನಪದದ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದರು.

ಕೊಡಗಿನ ನಡಕೇರಿಯಂಡ ಚೆಣ್ಣಪ್ಪನವರು ೧೯೨೪ರಲ್ಲಿ 'ಪಟ್ಟೋಲೆ ಪಳಮೆ' ಎನ್ನುವ ಜಾನಪದ ಲಕ್ಷಣವಿರುವ ಕೊಡವರ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ಸಂಕಲನವನ್ನು ಹೊರತಂದರು.

ಎನ್.ಅನಂತರಂಗಾಚಾರ್ಯರರು ಕರ್ನಾಟಕದ ತುಂಬ ಪ್ರಸಿದ್ದವಾಗಿರುವ ಮಾನವಮಿ ಸಂಪ್ರದಾಯಕ್ಕೆ ಸೇರಿದ ಕಂಠಸ್ಥ ಗೀತೆಗಳನ್ನು 'ಮಾನವಮಿಯ ಚೌಪದ'(೧೯೪೦) ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಒಂದು ಸಮುದಾಯವು ಊರುಗಳಲ್ಲಿ ತಿರುಗುತ್ತಾ ಈ ಸಂಪ್ರದಾಯ ಗೀತೆಗಳನ್ನು ಹಾಡುತ್ತಿದ್ದವು. ಅಂತಹ ಗೀತೆಗಳನ್ನು ಒಂದು ಕಡೆ ಸಂಗ್ರಹಸಿ ನೀಡಿರುವುದು ಇವರ ಕೊಡುಗೆಯಾಗಿದೆ.

ಉತ್ತರ ಕರ್ನಾಟಕದ ೧೫೫೦ ತ್ರಿಪದಿಗಳನ್ನು ವಿಠೋಬ ತೊರ್ಕೆ ಅವರು ೧೯೩೩ರಲ್ಲಿ 'ಹಳ್ಳಿಯ ಹಾಡುಗಳು' ಹೆಸರಿನಲ್ಲಿ ಸಂಗ್ರಹಿಸಿದ್ದಾರೆ. ಈ ಸಂಕಲನದ ಮೂಲಕ ಪ್ರಾದೇಶಿವಾದ ಅಸ್ಮಿತೆಯನ್ನು ಕಟ್ಟಿಕೊಟ್ಟಿದ್ದಾರೆ. ಒಂದು ಪ್ರದೇಶದ ಸಂಸ್ಕೃತಿ, ಸಾಹಿತ್ಯ, ಸಂಪ್ರದಾಯಗಳು ನೀಡಿರುವುದು ಗಮನಾರ್ಹವೆನಿಸಿದೆ.

ವಸಾಹತುಶಾಹಿ ಕಾಲಘಟ್ಟದ ದೇಶೀ ವಿದ್ವಾಂಸರ ಜನಪದ ಅದ್ಯಯನ ಮಾದರಿಯೆಂದರೆ ಜನಪದ ಸಾಹಿತ್ಯವನ್ನು ಯಾವುದೇ ಶಾಸ್ತ್ರೀಯ ಸಿದ್ಧಾಂತಗಳಿಲ್ಲದೆ ಸಂಗ್ರಹ, ಸಂಪಾದನೆ ಮಾಡಿರುವುದು. ಇದರ ಜೊತೆಗೆ ಜನಪದವನ್ನು ದಾಖಲಿಕರಣ ರೂಪದಲ್ಲಿ ನೀಡಿರುವುದು. ಆದರೆ ಅವುಗಳನ್ನು ವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ಮಾಡದಿರುವುದು ಬಹುಮುಖ್ಯ ಮಿತಿಯಾಗಿದೆ.

ಸೈದ್ಧಾಂತಿಕ ದೃಷ್ಟಿಕೋನದ ಮೂಲಕ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡುವುದು ದೇಶಿ ಅಧ್ಯಯನಕಾರರಿಗೆ ಮುಖ್ಯವಾಗಿರಲಿಲ್ಲ. ವಸಾಹತುಶಾಹಿಯಿಂದ ಜನಪದ ಸಾಂಸ್ಕೃತಿಕ ಪರಂಪರೆ

ವಿಸ್ಮೃತಿಗೆ ಒಳಗಾಗುತ್ತಿದೆ. ಹಾಗಾಗಿ ಆ ಕಾಲದಲ್ಲಿ ವಿದ್ಯಾವಂತ ವರ್ಗವೇ ಜನಪದ ಸಂಗ್ರಹ, ಸಂಪಾದನೆ, ಜನಪದ ಸಂಸ್ಕೃತಿಯನ್ನು ಪುನರ್ ಕಟ್ಟುವುದಾಗಿತ್ತು. ಇದರಿಂದ ದೇಶಿಯ ಸಾಂಸ್ಕೃತಿಕ ಪರಂಪರೆಗೆ ತಿರುವನ್ನು ನೀಡಿದ್ದು ಗಮನರ್ಹವಾಗಿದೆ.

'ಕನ್ನಡ ನಾಡಿನ ಲಾವಣಿ ಸಾಹಿತ್ಯಗಳು'(೧೪೨೫) ಎಂಬ ಲೇಖನದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಾಂಗಾರ್ ಅವರು ಜನಪದ ಸಾಹಿತ್ಯ ಸಂಗ್ರಹ ಹಾಗೂ ಜನಪದ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ತಮ್ಮ ಅಧ್ಯಯನ ಮಾದರಿಯನ್ನು ಚರ್ಚಿಸುತ್ತಾರೆ. 'ಲಾವಣಿಗಳು' ಮೊದಲ ಕಾಲಘಟ್ಟದ ಸಂಗ್ರಹದ ಆಕರಗಳಾಗಿ ಕಾಣಬಹುದು. ಶಿಷ್ಟ ಸಾಹಿತ್ಯದ ಪರಂಪರೆಯ ವಿದ್ವಾಂಸರೆ ಮೌಖಿಕ ಸಾಹಿತ್ಯ ಪರಂಪರೆಯನ್ನು ಅಭ್ಯಾಸಿಸುವ ಆ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಹಾಗೂ ಸೈದ್ಧಾಂತಿಕ ಕಾರಣಗಳಿರುತ್ತವೆ. "ಶಿಷ್ಟ ಸಾಹಿತ್ಯಕ್ಕೂ ಇದ್ದ ಸೈದ್ಧಾಂತಿಕತೆ ಹಾಗೂ ಜನಪದ ಅಧ್ಯಯನದ ಸೈದ್ಧಾಂತಿಕತೆ ಒಂದಕ್ಕೊಂದು ಹಾಸುಹೊಕ್ಕಾಗಿರುತ್ತವೆ. ಅವುಗಳು ಬೇರೆ ಅಲ್ಲ. ಶಿಷ್ಟ ಸಾಹಿತ್ಯದಲ್ಲಿ ಇಲ್ಲದ ಅಂಶಗಳು ಜನಪದ ಸಾಹಿತ್ಯದಲ್ಲಿ ಕಾಣಬಹುದಾಗಿದೆ"[೬] ಎಂಬ ಅಂಶವು ಸಂದರ್ಭಕ್ಕೆ ಸೂಚಿತವಾಗಿದೆ.

೩.೩. ಜನಪದ ಸಾಹಿತ್ಯ ಅಧ್ಯಯನದ ತಾತ್ವಿಕತೆ

೧೯೩೦-೧೯೫೦ರ ನಡುವಿನ ಅವಧಿಯನ್ನು ಕನ್ನಡ ಜಾನಪದದ ನವೋದಯ ಕಾಲವೆಂದೇ ಗುರುತಿಸಲ್ಪಟ್ಟಿತು. ಈ ಕಾಲದ ಎಲ್ಲಾ ಕವಿಗಳು ಸ್ಪಂದಿಸಿದ್ದಾರೆ. ಈ ಕಾಲಘಟ್ಟದಲ್ಲಿ ನಡೆದ ಸಂಗ್ರಹ ಕಾರ್ಯಗಳು ಮತ್ತು ಅವುಗಳಿಗೆ ಬರೆದಿರುವ ಮುನ್ನುಡಿಗಳನ್ನು ಗಮನಿಸಿದರೆ ಶಿಷ್ಟ ಸಾಹಿತ್ಯದಂತೆ ಜಾನಪದವು ಸಾಹಿತ್ಯ ಎನ್ನುವ ದೃಷ್ಟಿಕೋನ ನವೋದಯದವರಿಗೆ ಮುಖ್ಯವಾಯಿತು. ಬಿ.ಎಂಶ್ರೀ, ಮಾಸ್ತಿ, ತೀನಂಶ್ರೀ, ಬೆಟಗೇರಿ ಕೃಷ್ಣಶರ್ಮ ಮುಂತಾದವರು ಭಾರತೀಯ ಮತ್ತು ಅನ್ಯ ಭಾಷೆಗಳಲ್ಲಿ ಪ್ರಕಟಗೊಂಡಿದ್ದ ಬರಹಗಳ ಮೂಲಕ ಕನ್ನಡ ಜಾನಪದದ ಸೊಗಸನ್ನು ಮನಗಂಡು ಸಾಹಿತ್ಯಿಕ ಆಸಕ್ತಿಯಿಂದಲೇ ಕನ್ನಡ ಜಾನಪದ ವಿವೇಚನೆಗೆ ತೊಡಗಿದರು. ಇದರ ಫಲವಾಗಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣಾಕಾರ್ಯ ಚುರುಕುಗೊಂಡಿತು. ಸಂಪೂರ್ಣಅಖಂಡ ಕರ್ನಾಟಕದಲ್ಲಿ ಕಥೆ, ಗಾದೆ, ಒಗಟು, ಮಹಾಕಾವ್ಯ ಇತ್ಯಾದಿ ಪ್ರಕಾರಗಳಲ್ಲಿ ಜಾನಪದ ಪರಂಪರೆಯು ಸಮೃದ್ಧವಾಗಿದ್ದರೂ, ವಸಾಹತುಶಾಹಿ ಕಾಲಘಟ್ಟದ ವಿದ್ವಾಂಸರು 'ಜನಪದ ಗೀತೆಗಳನ್ನು' ಮಾತ್ರ ಆಯ್ಕೆ ಮಾಡಿಕೊಂಡರು. ಇದಕ್ಕೆ ನವೋದಯ ಸಾಹಿತ್ಯದ ಪ್ರಭಾವವು ಕಾರಣವೆನ್ನಬಹುದು. ಭಾರತೀಯ ಸಂಸ್ಕೃತಿ ಶ್ರೇಷ್ಠ ಎನ್ನುವ ಆಶಯದಿಂದ ನವೋದಯ ಸಾಹಿತ್ಯ ಪಂಥವು ಜಾನಪದವನ್ನು ನೋಡುವ ಪ್ರಯತ್ನ ಮಾಡಿತು. ಅದಕ್ಕಾಗಿ ನವೋದಯ ಕಾಲದ ದೇಶಿ ವಿದ್ವಾಂಸರ ಗಮನವು ಜಾನಪದವನ್ನು ರಕ್ಷಿಸಬೇಕೆನ್ನುವ ಕಾಳಜಿಗಳಿಂದ ಶುರುವಾದವು. ಅಂದರೆ ಆಧುನಿಕತೆಯು ಜಾನಪದವನ್ನು ನಾಶಗೊಳಿಸುತ್ತದೆ ಎಂಬ ನಂಜಿಕೆಯಿಂದ ಆರಂಭದ ದೇಶಿವಿದ್ವಾಂಸರು ಜಾನಪದವನ್ನು ಪ್ರಾಕ್ತನಶಾಸ್ತ್ರದ

ಭಾಗವಾಗಿ ನೋಡಿದರು. ಬಿ.ಎಂ.ಶ್ರೀ, ಮಾಸ್ತಿ, ಸಿಂಪಿ ಲಿಂಗಣ್ಣ, ಗೊರೂರು, ಮತಿಘಟ್ಟ ಕೃಷ್ಣಮೂರ್ತಿ, ಕ.ರಾ.ಕೃ, ಅರ್ಚಕ ಬಿ.ರಂಗಸ್ವಾಮಿ, ಗದ್ದಗೀಮಠ ಮುಂತಾದವರು ಈ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರು ಜನಪದ ಸಾಹಿತ್ಯದ ಮೂಲಕ ಸಂಸ್ಕೃತಿ ಶೋಧನೆಯ ಹುಡುಕಾಟವನ್ನು ಮಾಡಿದರು.

ಆರಂಭಿಕ ಘಟ್ಟದ ಅಧ್ಯಯನಕಾರರು ಇಲ್ಲಿನ ಜಾನಪದದ ಬಗೆಗೆ ಆಸಕ್ತಿ ಮೂಡಿದ್ದು ಯಾವ ರೂಪದಲ್ಲಿದೆಯೋ ಆ ರೂಪದಲ್ಲಿ ಅದನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದಲ್ಲ. ಅದು ಏನನ್ನು ಹೇಳುತ್ತದೆ ಎಂಬ ಕುತೂಹಲದಿಂದಲೂ ಅಲ್ಲ. ಮುಖ್ಯವಾಗಿ ಸಾಹಿತ್ಯಿಕ, ಧಾರ್ಮಿಕ, ರಾಷ್ಟ್ರೀಯ, ರಾಜಕೀಯ, ಭಾವುಕ, ವಿಮೋಚನಾ, ಸಾಂಸ್ಕೃತಿಕ ನೆಲೆ, ಮುಂತಾದ ಕಾರಣಗಳಿಂದ ಜನಪದ ಸಾಹಿತ್ಯವನ್ನು ರೂಪಿಸಿಕೊಂಡಿದ್ದರು. ಹಾಗಾಗಿ ಜನಪದ ಸಾಹಿತ್ಯವನ್ನು ಅನೇಕ ಜನಪದ ವಿದ್ವಾಂಸರು ಭಿನ್ನ ನೆಲೆಯ ದೃಷ್ಟಿಕೋನಗಳಿಂದ ನಿರ್ವಚಿಸಿಕೊಂಡಿದ್ದರು. ಅವುಗಳೆಂದರೆ: ಜನಪದ 'ಸಾಹಿತ್ಯ' ಎನ್ನುವ ಧೋರಣೆ, ಸಾಹಿತ್ಯ ಮಾನದಂಡಗಳಿಂದಲೇ ಜಾನಪದವನ್ನು ಅಳತೆ ಮಾಡಿದ್ದು. ಆದ್ದರಿಂದ ಗೀತೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಲೇಖನದ ಮಧ್ಯೆ ಮಧ್ಯೆ ಉಲ್ಲೇಖಿಸುತ್ತಾ ಪ್ರಾಯೋಗಿಕವಾದ ವಿಮರ್ಶೆ ಮಾಡಿದ್ದು, ಶಿಷ್ಟ ಸಾಹಿತ್ಯಕ್ಕೆ ಪರ್ಯಾಯ ಸ್ಪರ್ಧೆಯೆಂದು ಭಾವಿಸಿದ್ದು, ಆಧುನಿಕತೆ ಅಬ್ಬರದಿಂದ ಕಾಪಾಡುವುದು, ಜಾನಪದವನ್ನು ವೈದಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಗಮನಿಸಿ 'ಗರತಿಯಹಾಡು' 'ಗೃಹಿಣಿಗೀತೆ'ಗಳೆಂದು ಕರೆದದ್ದು. ಹೀಗಾಗಿ ವಸಾಹತುಶಾಹಿ ಕಾಲದ ಜನಪದ ಸಾಹಿತ್ಯವನ್ನು ಅನೇಕ ತಾತ್ವಿಕ ನೆಲೆಗಳಲ್ಲಿ ಗುರುತಿಸಿಕೊಂಡು ವಿವೇಚಿಸಿದರು. ಹಾಗಾಗಿ ವಸಾಹತುಶಾಹಿ ಕಾಲದ ಜನಪದ ಸಾಹಿತ್ಯ ಅಧ್ಯಯದ ತಾತ್ವಿಕತೆಯನ್ನು ಕೆಲವು ಅಂಶಗಳ ಮೂಲಕ ನಿರ್ವಚಿಸಿಕೊಂಡು ಈ ಅಧ್ಯಯದಲ್ಲಿ ಚರ್ಚಿಸಲಾಗಿದೆ.

೩.೩.೧. ರಾಷ್ಟ್ರೀಯತೆಯ ನೆಲೆಗಳು

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ದೇಶಿ ಅಭಿವೃದ್ಧಿ ಚಿಂತಕರ ಜಾನಪದ ಆಸಕ್ತಿ ಪ್ರಕಟಗೊಂಡಿದ್ದು ಸ್ವಾತಂತ್ರ್ಯ ಚಳುವಳಿ ಮತ್ತು ನವೋದಯ ಸಾಹಿತ್ಯ ಚಳುವಳಿಯ ಜತೆಜತೆಯಲ್ಲಿ ಎಂಬುದು ಗಮನಾರ್ಹ. ರಾಷ್ಟ್ರೀಯ ಪ್ರಜ್ಞೆ, ದೇಶಾಭಿಮಾನ ಮತ್ತು ಸಂಸ್ಕೃತಿಪ್ರಿಯತೆ ಹಾಗೂ ನಾಡು ನುಡಿಗಳ ಮೇಲಣ ಅಭಿಮಾನ ಇವು ಈ ಚಿಂತಕರ ಅಧ್ಯಯನದ ಪ್ರಧಾನ ನೆಲೆಗಳಾಗಿದ್ದವು. ವಸಾಹತೀಕರಣ ಪ್ರಕ್ರಿಯೆಗೆ ವಿರುದ್ಧವಾಗಿ ಮತ್ತು ಸ್ವಾತಂತ್ರ್ಯ ಹೋರಾಟದ ಸಾಧನವಾಗಿ ಈ ಎಲ್ಲಾ ಬರಹಗಾರರು ಜನಪದ ಸಾಹಿತ್ಯವನ್ನು ಗ್ರಹಿಸಿದರು, ಸಂಗ್ರಹಿಸಿದರು ಮತ್ತು ಅರ್ಥೈಸಿದರು. ಕೆಲವೇ ಮಂದಿ ಬರಹಗಾರರನ್ನು ಹೊರತುಪಡಿಸಿದರೆ ಉಳಿದವರಲ್ಲಿ ಜನಪದ ಸಾಹಿತ್ಯದ ಅತಿಯಾದ ಭಾವುಕತೆ ಮತ್ತು ದೇಶೀ ಸಂಸ್ಕೃತಿಯ ವೈಭವೀಕರಣ ಕಂಡುಬರುತ್ತವೆ ಎಂಬುದು ನಿಜವಾದರೂ ಆ ಹೊತ್ತಿಗೆ ಅದು ಅನಿವಾರವಾಗಿದ್ದಿತು.

ದೇಶೀಯ–ಪರಕೀಯ, ಸಂಪ್ರದಾಯ–ಆಧುನಿಕತೆ ಮುಂತಾದವು ವಿಭಿನ್ನ ರೂಪಗಳನ್ನು ತಳೆದರೂ ಅದಕ್ಕೆ ತಾತ್ವಿಕ ಚೌಕಟ್ಟನ್ನು ಒದಗಿಸುವುದು ಈ ಪೂರ್ವ–ಪಶ್ಚಿಮವಾಗಿದೆ. ಪಶ್ಚಿಮದ ರಾಷ್ಟ್ರಗಳು ಪೂರ್ವದ ರಾಷ್ಟ್ರಗಳ ಮೇಲೆ ರಾಜಕೀಯ ಅಧಿಕಾರ ಸ್ಥಾಪಿಸಿದ್ದು ಹಾಗೂ ಅಲ್ಲಿ ಆರ್ಥಿಕ ಶೋಷಣೆ ನಡೆಸಿದ್ದು ಅದಕ್ಕೆ ಪೂರಕವಾದ ಒಂದು ವಿದ್ವತ್ತಿನ ಮೂಲಕವಾಗಿದೆ. ಹಾಗಾಗಿ ಅದು ಮೂಲತಃ ಒಂದು ಬೌದ್ಧಿಕ ಆಳ್ವಿಕೆ. ಈ ಆಳ್ವಿಕೆಯಲ್ಲಿ ದೇಶೀ ಚಿಂತನಾ ಕ್ರಮಗಳು ಮೂಲೆಗೊತ್ತಲ್ಪಟ್ಟವು. ಹಾಗೂ ವಸಾಹತು ಪ್ರಜೆಗಳ ಮನಸ್ಸು ವಸಾಹತೀಕರಣಕ್ಕೆ ಒಳಗಾಯಿತು. ಈ ಪ್ರಕ್ರಿಯೆ ತೃತಿಯ ಜಗತ್ತಿನ ವಸಾಹತುವಿಗೆ ಒಳಪಟ್ಟ ಎಲ್ಲಾ ರಾಷ್ಟ್ರಗಳಿಗೂ ಅನ್ವಯಿಸಿದವು. ಹಾಗಾಗಿ ಈ ಪ್ರಕ್ರಿಯೆಗೆ ಒಳಪಟ್ಟ ಎಲ್ಲಾ ರಾಷ್ಟ್ರಗಳು ಇದರಿಂದ ಆಚೆ ಬರಲು ತಮ್ಮದೇ ರಾಷ್ಟ್ರೀಯತೆಯನ್ನು ನಿರ್ಮಿಸಿಕೊಳ್ಳಲು ಜನಪದ ಸಾಹಿತ್ಯದ ಕಡೆ ಮುಖಮಾಡಿದವು. ಜನಪದ ಸಾಹಿತ್ಯದ ಅಧ್ಯಯನದ ಮೂಲಕ ರಾಷ್ಟ್ರೀಯತೆಯನ್ನು ಕಟ್ಟಿಕೊಂಡ ಮೊದಲ ಪುಟ್ಟದೇಶ ಫಿನ್ಲೆಂಡ್. ಈ ರಾಷ್ಟ್ರದಲ್ಲಿ ಸಾಂಸ್ಕೃತಿಕ–ಚಾರಿತ್ರಿಕ ಹಿರಿಮೆಗೆ ಯಾವುದೇ ಲಿಖಿತ ದಾಖಲೆ ಹಾಗೂ ಸಾಹಿತ್ಯ ದೊರಕಲಿಲ್ಲ. ಅದ್ದರಿಂದ ಜೂಲಿಯಸ್ ಕ್ರಾಹ್ನ ಎಂಬ ವಿದ್ವಾಂಸ ಮೊಟ್ಟಮೊದಲು 'ಚಾರಿತ್ರಿಕ ಭೌಗೋಳಿಕ ಸಿದ್ಧಾಂತದ' ಮೂಲಕ 'ಕಾಲೆವಾಲ' ಎಂಬ ಫಿನ್ಲೆಂಡಿನ ಪುರಾಣದ ಗೀತಕಥಾಮಾಲೆಗಳನ್ನು ಸಂಗ್ರಹಿಸಿ ಆಶಯಗಳಾಗಿ ವಿಭಜಿಸಿ ಅಧ್ಯಯನ ನಡೆಸಿದನು. ಇದರಿಂದ 'ಕಾಲೇವಾಲ' ಎಂಬ ಜನಪದ ಮಹಾಕಾವ್ಯದ ಮೂಲಕ ಫಿನ್ಲೆಂಡ್ ಜನತೆಯು ಸ್ವತಂತ್ರ ದೇಶವಾಗಿ ಘೋಷಿಸಿಕೊಳ್ಳಲು ಕಾರಣವಾಯಿತು. ಫಿನ್ಲೆಂಡ್ ಎಂಬ ಪುಟ್ಟ ಫಿನ್ಲೆಂಡಿನ ಕಾವ್ಯ ಒಬ್ಬ ವೀರ ಪುರುಷನ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಫಿನ್ಲೆಂಡಿನ ಜನತೆ ಸುಮಾರು ೬೦೦ ವರ್ಷಗಳ ಕಾಲ ಪರಕೀಯ ಪ್ರಭಾವದಲ್ಲಿ ಉಸಿರುಗಟ್ಟಿ ನರಳುತ್ತಿದ್ದ ಕಾಲದಲ್ಲಿ ಇಂತಹ ಜನಪದ ಪರಂಪರೆಯೇ ಅವರಿಗೆ ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸಲು ಕಾರಣವಾಯಿತು. ಫಿನ್ಲೆಂಡ್ ರಾಷ್ಟ್ರದ ಪ್ರೇರಣೆಯಿಂದ ತೃತಿಯ ಜಗತ್ತಿನ ರಾಷ್ಟ್ರಗಳು ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ಮೌಖಿಕ ಸಾಹಿತ್ಯವನ್ನು ಸಂಪಾದಿಸಲು, ಸಂಗ್ರಹಿಸಲು ಪ್ರಾರಂಭಿಸಿದವು. ಫಿನ್ಲೆಂಡಿನ ವಿದ್ವಾಂಸರ ಪ್ರಯತ್ನ ಜಗತ್ತಿನ ಇತರ ದೇಶಗಳ ಮೇಲೆ ಪ್ರಭಾವ ಬೀರಿತು. ಇದರಿಂದ ಪ್ರೇರಣೆಗೊಂಡ ಜನಪದ ವಿದ್ವಾಂಸರು ಆಯಾ ದೇಶಗಳ ಜನಪದ ಕಾವ್ಯಗಳನ್ನು ಗುರುತಿಸಲು ತೊಡಗಿದರು.

ಅಲ್ಲದೇ ಜನಪದ ಕಥೆಯ ಅಧ್ಯಯನದಲ್ಲೂ ಈ ಸಿದ್ಧಾಂತ ಹೆಚ್ಚು ಪ್ರಭಾವ ಬೀರಿದೆ. ಜನಪದ ಕಥೆಯೊಂದರ ಸಮಗ್ರ ಜೀವನ ಚರಿತ್ರೆಯನ್ನು ಕಂಡು ಹಿಡಿಯುವುದು ಈ ಪದ್ಧತಿಯ ಮುಖ್ಯ ಉದ್ದೇಶವಾಗಿದೆ. ಹೀಗಾಗಿ ಜಗತ್ತಿನ ಹಲವು ದೇಶಗಳು 'ಚಾರಿತ್ರಿಕ ಭೌಗೋಳಿಕ ಸಿದ್ಧಾಂತ'ವನ್ನು ಅಳವಡಿಸಿಕೊಂಡು ಜನಪದ ಕಾವ್ಯಗಳು ಹಾಗೂ ಕಥೆಗಳನ್ನು ಅಧ್ಯಯನ ಮಾಡಿ ತಮ್ಮ ದೇಶದ ಅಸ್ಮಿತೆಯನ್ನು ಕಂಡುಕೊಂಡವು.

ಔದ್ಯೋಗಿಕ ಕ್ರಾಂತಿಯ ಅವಸರದ ಜೀವನ, ಹಿಂದಿನ ಪ್ರಶಾಂತ ಜೀವನದ ನೆಮ್ಮದಿಯನ್ನು ಬಹುಮಟ್ಟಿಗೆ ಹಾಳು ಕೆಡವಿತ್ತು. ಇದರಿಂದ ರೋಸಿ ಹೋಗಿದ್ದ ಜನತೆಗೆ ಜನಪದ ಹಾಡು, ಕಲೆ,

ಸಾಹಿತ್ಯ ನೆಮ್ಮದಿಯನ್ನು ತಂದು ಕೊಡಬಲ್ಲವಾಗಿದ್ದವು. ಈ ಹಿನ್ನಲೆಯಲ್ಲಿ ತಮ್ಮ ಪರಂಪರೆಯನ್ನು ಕಾಯ್ದುಕೊಳ್ಳಲು ಮತ್ತು ಮೂಲ ಸಂಸ್ಕೃತಿಯನ್ನು ಯಾವುದೇ ರೂಪದಲ್ಲಿ ರಕ್ಷಿಸಿಕೊಳ್ಳಲು ಬಹಳಷ್ಟು ರಾಷ್ಟ್ರಗಳು ಜನಪದ ಸಾಹಿತ್ಯ ಸಂಗ್ರಹಣೆಗೆ ತಮ್ಮ ದೃಷ್ಟಿಕೋನ ಹರಿಸಿದವು. ಜಗತ್ತಿನ ಬಲಾಢ್ಯ ರಾಷ್ಟ್ರಗಳಾದ ರಷ್ಯಾ, ಅಮೇರಿಕಾ ಒಳಗೊಂಡು ಆಫ್ರಿಕಾ, ಇಂಗ್ಲೆಂಡ್, ಜರ್ಮನ್ ಮುಂತಾದ ದೇಶಗಳಲ್ಲಿ ಜನಪದ ಕಾವ್ಯಗಳು, ವಿದ್ವಾಂಸರಿಗೆ ಆಸಕ್ತಿಯ ಕ್ಷೇತ್ರವಾಗಿ ಪರಿಣಮಿಸಿದವು.

ನವೋದಯ ಕಾಲಘಟ್ಟದಲ್ಲಿ 'ರಾಷ್ಟ್ರೀಯ ಪ್ರಜ್ಞೆ' ಬೌದ್ಧಿಕ ಹಾಗೂ ವೈಚಾರಿಕ ನಿಲುವುಗಳಲ್ಲಿ ಜನ್ಮ ತಳೆಯಿತು. ಇಲ್ಲಿನ ವಿದ್ಯಾವಂತ ವರ್ಗವು ಸಾಂಸ್ಕೃತಿಕ ಅಂತರವನ್ನು ತುಂಬಲು ಸಾಹಿತ್ಯಿಕ ಅಂಶಗಳನ್ನು ಬಳಸಿಕೊಂಡರು. ಈ ವರ್ಗವು ರಾಷ್ಟ್ರೀಯತೆಯನ್ನು ಏಕಮುಖವಾಗಿ ನೋಡಿತು. ಇವರ ಪರಿಕಲ್ಪನೆಯಲ್ಲಿ ದೇಶಿಯತೆ ಮತ್ತು ರಾಷ್ಟ್ರೀಯತೆ ಎರಡು ಬೇರೆ ಬೇರೆ ಅರ್ಥದಲ್ಲಿ ಚರ್ಚೆಗೊಂಡವು. "ರಾಷ್ಟ್ರೀಯತೆ ಎಂಬುದು ಸಮಕಾಲೀನ ರಾಜಕೀಯದಲ್ಲಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡು ಅದು ಸಾರ್ವತ್ರಿಕ ನೆಲೆಯಲ್ಲಿ ವಸಾಹತು ವಿರೋಧದ ಪ್ರಜ್ಞೆಯನ್ನು ಅಳವಡಿಸಿಕೊಳ್ಳುತ್ತದೆ"[೭] ಮುಂದುವರೆದು ಇಂತಹ ರಾಷ್ಟ್ರೀಯತೆ ಎಂಬುದು ವರ್ತಮಾನದಲ್ಲಿ ಭಾವನಾತ್ಮಕವಾಗಿ ಬೆಳೆದು ಏಕಮುಖವಾಗಿ ಚಲಿಸುತ್ತದೆ. ಆದರೆ 'ದೇಶಿಯತೆ' ಎಂಬುದು ಒಂದು ಪ್ರಾದೇಶಿಕ ಚೌಕಟ್ಟು ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವ ಭಾಷಾ ಸಮುದಾಯವೊಂದರ ವಾಸ್ತವಿಕ ಜೀವನ ಕ್ರಮ ಹಾಗೂ ಭಾಷೆ, ಸಾಹಿತ್ಯ, ಆಚರಣೆ ಇವುಗಳನ್ನು ಒಳಗೊಂಡಿರುವುವು"[೮] ದೇಶಿಯವಾದದ ಒತ್ತು ಪ್ರಾದೇಶಿಕ ವೈಶಿಷ್ಟ್ಯತೆಗಿಂತ ಹೆಚ್ಚು ಭಾಷಾ ಸಮುದಾಯವೊಂದರ ಮೇಲೆ ಒಳಗೊಂಡಿರುತ್ತದೆ. ಭಾಷಾ ಸಮುದಾಯವೊಂದರ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಶಿಷ್ಟತೆಗಳು ರಾಷ್ಟ್ರೀಯತೆ, ರಾಜಕೀಯ ಸ್ವರೂಪ ಪಡೆದು ಅದೊಂದು ಕಲ್ಪಿತ ರಾಜಕೀಯ ನೆಲೆಯಲ್ಲಿ ಸ್ವಯಂ ಸಾರ್ವಭೌಮತ್ವವನ್ನು ಸ್ಥಾಪಿಸುತ್ತದೆ"[೯]

ದೇಶಿವಾದ ಮತ್ತು ರಾಷ್ಟ್ರೀಯತೆ ಒಂದಕ್ಕೊಂದು ಅಂತರ್ಗತಗೊಂಡಿವೆ. ಆದರೆ ದೇಶಿಯತೆಯ ನೆಲೆಯು ಜನಪದ ಪರಂಪರೆಗೆ ಹತ್ತಿರವಾದದ್ದು. ಇದು ತಳಸಂಸ್ಕೃತಿ ಮುಂತಾದವುಗಳನ್ನ ತನ್ನ ತೆಕ್ಕೆಯೊಳಗೆ ಹಾಕಿಕೊಂಡು ಚಿಂತನೆಯನ್ನು ಮಾಡುತ್ತದೆ. ರಾಷ್ಟ್ರೀಯತೆಯಲ್ಲಿ ಧರ್ಮದ ಪ್ರಭಾವ ವಿಸ್ತಾರವಾಗಿರುತ್ತದೆ. ಪ್ರಾರಂಭದ ಕಾಲಘಟ್ಟದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಗೆ ಜನಪದ ಸಾಹಿತ್ಯದ ಜನಪದ ಲಾವಣಿ, ಗೀತೆಗಳನ್ನು ಆಕರಗಳಾಗಿ ಬಳಸಿಕೊಂಡಿರುವುದನ್ನು ನೋಡಬಹುದು.

ಮುಖ್ಯವಾಗಿ ವಸಾಹತೀಕರಣವು ತಟಸ್ಥವಾದ ಕ್ರಿಯೆಯಲ್ಲಿ ಒಂದು ಅಂತರಿಕ ಚಲನೆಯೊಂದಿಗೆ ಪ್ರಕ್ರಿಯೆಗೊಳ್ಳುತ್ತಿರುತ್ತದೆ. ಅದು ಒಂದು ರಾಷ್ಟ್ರದ ಮೇಲೆ ಭೌತಿಕ ನೆಲೆಯೊಳಗೆ ಪರಿವರ್ತನೆಗೊಳಿಸದೆ, ಬೌದ್ಧಿಕತೆಯಲ್ಲಿ ಹಾಗೂ ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾಗುತ್ತದೆ. "ವಸಾಹತುಶಾಹಿ ಆಧುನಿಕರಣ ಕೇವಲ ಆರ್ಥಿಕ ವ್ಯವಹಾರವಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ಆಡಳಿತಾತ್ಮಕ,

ಸಾಂಸ್ಕೃತಿಕ ಕ್ಷೇತ್ರಗಳಿಗೆ ಅದು ಹಬ್ಬಿರುತ್ತದೆ. ಯಾವುದೇ ಪ್ರದೇಶಗಳನ್ನು ರೂಪಿಸುವ ಕೆಲಸ ಕೇವಲ ದಮನಯಂತ್ರ ಮೂಲಕ ನಡೆಯುವುದಿಲ್ಲ. ಚರಿತ್ರೆ, ತತ್ವಜ್ಞಾನ, ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ ಮೊದಲಾದ ಐಡಿಯೊಲಾಜಿಕಲ್ ಶಾಸ್ತ್ರಗಳ ಮೂಲಕವೂ ನಡೆಯುತ್ತಿದೆ"[೧೦] ಈ ಎಲ್ಲಾ ಚಿಂತನೆಗಳಲ್ಲಿ ಚಲಿಸುವ ವಸಾಹತುಶಾಹಿಗೆ ಪ್ರತಿಯಾಗಿ ರಾಷ್ಟ್ರೀಯತೆ ಸ್ಥಾಪನೆಗೆ ಜನಪದ ಸಾಹಿತ್ಯವನ್ನು ಬಳಸಿಕೊಳ್ಳಲಾಯಿತು. ಮೌಖಿಕ ಸಾಹಿತ್ಯದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಶೋಧಿಸುವ ಸಂದರ್ಭವೂ ರಾಷ್ಟ್ರೀಯ ಪ್ರಜ್ಞೆಗೆ ಕಾರಣವಾಗಿರುತ್ತದೆ.

ಜನಪದರು ಸೂಕ್ಷ್ಮ ಮನಸ್ಥಿತಿಯವರಾಗುವುದರೊಂದಿಗೆ ಸಮಾಜದ ಬದಲಾವಣೆಗೆ ತಕ್ಷಣವೇ ಸ್ಪಂದಿಸುತ್ತಾರೆ. ಸೂಕ್ಷ್ಮ ಗ್ರಹಿಕೆಗಳಾದ ಜನಪದ ಕತೆ, ಹಾಡು, ಪುರಾಣಗಳಲ್ಲಿ ಅಂದಿನ ಕಾಲದ ಜೀವನವು ಲಭ್ಯವಾಗುತ್ತದೆ. ಜನಪದ ಸಾಹಿತ್ಯದಲ್ಲಿ ದೊರೆಯುವ ಇತಿಹಾಸದ ಘಟನೆಗಳಲ್ಲಿ ವಾಸ್ತವದ ಚಿತ್ರಣವಿರುತ್ತದೆ. ಈ ಚಿತ್ರಣಗಳು ಇತಿಹಾಸದ ನಿರ್ಮಾಣದಲ್ಲಿ ಅತ್ಯಂತ ಮಹತ್ವದ ಆಕರಗಳಾಗುತ್ತವೆ.

ಹೀಗೆ ಜನಪದ ಅಧ್ಯಯನದ ಮೂಲಕ ರಾಷ್ಟ್ರೀಯತೆ ಪ್ರಜ್ಞೆ, ಸಾಂಸ್ಕೃತಿಕ ಹಾಗೂ ರಾಜಕೀಯ ಅಂಶಗಳನ್ನು ಕುರಿತು ಚರ್ಚಿಸಲಾಯಿತು. ಪಾಶ್ಚಾತ್ಯರ ಆಡಳಿತ ಮತ್ತು ಇಂಗ್ಲೀಷ್ ವಿದ್ಯಾಶ್ರಮಗಳ ಒಂದು ಪರಿಣಾಮವೆಂದರೆ ಬದುಕನ್ನೂ ನಾವು ಅರಿಯುವ ಪ್ರಾಯದಲ್ಲಿ ಬದಲಾವಣೆ ಪ್ರಚಾರವನ್ನು ನೋಡುವ ವರ್ಗಿಕರಿಸುವ, ತಿಳಿಯುವ, ಪರಿಭಾಷೆ, ನುಡಿಗಟ್ಟುಗಳು, ಬದಲಾದವು. "ಪಶ್ಚಿಮದ ಸ್ವಯಂತಂತ್ರವಾದಿ(liberal), ತರ್ಕಪಾರಮ್ಯವಾದಿ(Rituals), ಮಾನವತವಾದಿ(humanist) ಚಿಂತನಕ್ರಮವನ್ನು ಇಂಗ್ಲಿಷ್ ವಿದ್ಯಾಭ್ಯಾಸವು ನಿರ್ಣಾಯಕವಾಗಿ ಜಾರಿಗೆ ತಂದಿತು. ಇದರರ್ಥ ಭಾರತದ ವಿದ್ಯಾವಂತರು ಪಶ್ಚಿಮದ ವೈಚಾರಿಕತೆಯನ್ನು ಅಕ್ಷರದಲ್ಲಿ ನಕಲು ಮಾಡಿದರು ಎಂದಲ್ಲ. ಚರಿತ್ರೆ ತತ್ವಜ್ಞಾನ, ಸಮಾಜಶಾಸ್ತ್ರ, ಭಾಷಾಶಾಸ್ತ್ರ ಸಾಹಿತ್ಯ ಮೊದಲಾದ ಐಡಿಯೊಲಾಜಿಕಲ್ ಜರಡಿಯಲ್ಲಿ ಹಿಡಿಯಲ್ಪಟ್ಟು ರೂಪಾಂತರವನ್ನು ಪಡೆಯಿತು. ಆದ್ದರಿಂದಲೆ ವಸಾಹತು ಆಧುನಿಕತೆಗೆ ಭಿನ್ನ ಪ್ರಕ್ರಿಯೆಯಾಗಿದೆ. ಈ ವಿದ್ಯಾವಂತರ ಆಲೋಚನಾ ಕ್ರಮದಲ್ಲಿಯೆ ಭಾರತ ರಾಷ್ಟ್ರದ, ರಾಷ್ಟ್ರೀಯತೆಯ, ವಸಾಹತು ವಿರೋಧದ ಪ್ರಜ್ಞೆ ತನ್ನ ರೂಪವನ್ನು ಪಡೆಯುತ್ತದೆ"[೧೧] ಇದು ಭಾರತಿಯರ ಸಾಮಾಜಿಕ ಜೀವನದ ಕ್ರಮದ ಮೇಲೆ ನೇರ ಪರಿಣಾಮ ಬೀರಿತು. ಇದರಿಂದಾಗಿ ಭಾರತಿಯರ ಯೋಚನಾ ಕ್ರಮವು ಹೊಸ ದಿಕ್ಕಾಗಿ ಹರಿಯಿತು. ಹೊಸ ಶಿಕ್ಷಣ ವ್ಯವಸ್ಥೆ ಬಂತು. ಸಾಮಾಜಿಕವಾಗಿ ಹಿಂದು ಧರ್ಮ, ಸುಧಾರಣಾ ಪಂಥಗಳು, ಸ್ಥಾಪಿತವಾದವು. ಜೊತೆಗೆ ಮುದ್ರಣಯಂತ್ರಗಳು, ಪತ್ರಿಕೋದ್ಯಮಗಳು ಉಗಮಗೊಂಡವು. ಇವೆಲ್ಲದವುಗಳ ಪರಿಣಾಮವಾಗಿ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಅನೇಕ ರಾಷ್ಟ್ರೀಯ ಚಳುವಳಿಗಳು ನಡೆದವು. ಇದು ವಸಾಹತು ಸೃಷ್ಟಿಸಿದ ಆಪತ್ತು ಎಂದು ಹೇಳಬಹುದು. ವಸಾಹತು ಎಂಬುದು ಕೇವಲ ರಾಜಕೀಯ, ಅಧಿಕಾರ ನೆಲೆಯಲ್ಲಿರುವುದಲ್ಲದೇ ಅದು ಆ ಪ್ರದೇಶದಲ್ಲಿ ಸಾಂಸ್ಕೃತಿಕ ಪರಿಣಾಮಗಳನ್ನು ಸೃಜಿಸುತ್ತದೆ. ಅದರೊಂದಿಗೆ ಸ್ಥಳಿಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ತವಕಿಸುತ್ತಿರುತ್ತದೆ.

"ಕನ್ನಡ ಸಾಹಿತ್ಯದಲ್ಲಿ 'ನವೋದಯ' ಪರಂಪರೆಯ ಕ್ರಾಂತಿಯಾದಾಗ ಜನತೆಯ ಕಾವ್ಯ ರಸಿಕರ, ವಿದ್ವಾಂಸರ, ಅಭಿರುಚಿ, ಆಸಕ್ತಿಗಳೆಲ್ಲ ಉನ್ನತ ಮಟ್ಟದಲ್ಲಿ ಪರಿವರ್ತನೆ ನಡೆದು ಜಾನಪದ ಸಾಹಿತ್ಯ ಅಧ್ಯಯನ ಪ್ರಾರಂಭವಾಯಿತು"[೧೨] ಜನಪದವು ಇತರ ಕ್ಷೇತ್ರಗಳನ್ನು ಬಳಸಿಕೊಂಡು ಭಾರತದ ಒಂದು ಶಾಸ್ತ್ರದ ಭಾಗವಾಗಿ ಬೆಳೆಯಿತು. ಈ ಕಾಲಘಟ್ಟದಲ್ಲಿ 'ರಾಷ್ಟ್ರೀಯತೆಯ ಪ್ರಜ್ಞೆ' ಹೆಚ್ಚು ಸದ್ದು ಮಾಡಿರುವುದು ಕಂಡುಬಂದರೂ, ಅದು ಸಾಂಸ್ಕೃತಿಕ ಅಂತರ್ಮುಖಿ ನೆಲೆಯೊಳಗೆ ದೇಶಿಯ ಪರಿಕಲ್ಪನೆಗೆ ತಿರುಗಿತು. ನವೋದಯ ಕಾಲಘಟ್ಟದಲ್ಲಿ ಗ್ರಾಮೀಣ ಅವಿದ್ಯಾವಂತರಲ್ಲೂ ಸೊಗಸಾದ ಕಾವ್ಯವಿದೆ. ಕೈಗಾರೀಕರಣದಿಂದ ಅದು ನಾಶವಾಗುವ ಮೊದಲು, ಸಂಗ್ರಹಿಸಿ, ಪ್ರಕಟಿಸಿ ಮುಂದಿನ ತಲೆಮಾರುಗಳಿಗೆ, ಉಳಿಸಿಕೊಳ್ಳಬೇಕು. ಅದರ ಸತ್ವವನ್ನು ಬೆಳೆಸಿಕೊಂಡು ಶಿಷ್ಟ ಸಾಹಿತ್ಯದಂತೆ ಜನಪದವು ಶಕ್ತಿಶಾಲಿಯಾಗಬೇಕು ಎಂಬುದು ನವೋದಯ ಪಂಥ ಜನಪದ ಅಧ್ಯಯನಕಾರರ ಮೂಲ ಉದ್ದೇಶವಾಗಿತ್ತು.

ಹತ್ತೊಂಬತ್ತನೆ ಶತಮಾನದ ಕಾಲಘಟ್ಟದಲ್ಲಿ ರಮ್ಯರಾಷ್ಟ್ರೀಯವಾದ, ವಿಕಾಸವಾದಗಳು ಪ್ರಬಲವಾದ ಸಿದ್ಧಾಂತಗಳಾಗಿದ್ದವು. ಗಾಟ್‌ಫ್ರೀಡ್‌ಮನ್ ಹರ್ಡರ್‌ನು "ಅನೇಕ ಪ್ರಾಂತ್ಯಗಳಾಗಿ ಹಂಚಿಹೋಗಿದ್ದ ಜರ್ಮನ್ ರಾಷ್ಟ್ರದ ಏಕೀಕರಣದ ಸಲುವಾಗಿ ರಮ್ಯರಾಷ್ಟ್ರೀಯವಾದ ಸಿದ್ಧಾಂತವನ್ನು ಪ್ರತಿಪಾದಿಸಿದನು. ಜರ್ಮನ್‌ರಲ್ಲಿ ಭಾಷಾಭಿಮಾನ ಮತ್ತು ರಾಷ್ಟ್ರಾಭಿಮಾನವನ್ನು ಉದ್ದೀಪಿಸಿದ್ದು ಮಾತ್ರವಲ್ಲದೇ ಜಗತ್ತಿನ ಅನೇಕ ದೇಶಗಳ ಸ್ವಾತಂತ್ರ್ಯ ಚಟುವಟಿಕೆಗೆ ಮತ್ತು ಅದಕ್ಕೆ ಪೂರಕವಾಗಿ ಜಾನಪದ ಸಂಗ್ರಹ ಮತ್ತು ಅಧ್ಯಯನಕ್ಕೆ ಪ್ರೇರಣೆಯನ್ನು ನೀಡಿದ"[೧೩] ಯಾವ ಎರಡು ರಾಷ್ಟ್ರಗಳು ಭೌಗೋಳಿಕ ಮತ್ತು ಐತಿಹಾಸಿಕ ಸಂದರ್ಭದಲ್ಲಿ ಒಂದೇ ಆಗಿಲ್ಲದಿರುವುದರಿಂದ ಅವುಗಳ ರಾಷ್ಟ್ರೀಯ ಗುಣವು ಕೂಡ ಒಂದೇ ಆಗಿರುವುದಿಲ್ಲ, ಭಿನ್ನವಾಗಿಯೇ ಇರುತ್ತದೆ ಎಂಬುದು ಹರ್ಡರನ ಸಿದ್ಧಾಂತವಾಗಿದೆ. ಹರ್ಡರ್ ಪ್ರತಿಪಾದಿಸಿದ ರಮ್ಯರಾಷ್ಟ್ರೀಯವಾದ ಜರ್ಮನ್ ರಾಷ್ಟ್ರ ನಿರ್ಮಾಣಕ್ಕೆ ಮಾತ್ರವಲ್ಲದೇ ಫ್ರಾನ್ಸ್, ಫಿನ್ಲೆಂಡ್, ಐರ್ಲೆಂಡ್ ಮೊದಲಾದ ಅನೇಕ ರಾಷ್ಟ್ರಗಳ ಸ್ವಾತಂತ್ರ್ಯ ಚಳುವಳಿಗಳ ಮೇಲೆ ಪ್ರತ್ಯೇಕ್ಷವಾಗಿಯೋ ಪರೋಕ್ಷವಾಗಿಯೋ ಪ್ರಭಾವ ಬೀರಿ ಈ ದೇಶಗಳ ಜಾನಪದ ಸಂಗ್ರಹ ಮತ್ತು ಅಧ್ಯಯನಗಳಿಗೂ ಪ್ರೇರಣೆ ನೀಡಿದೆ. ಅಲ್ಲದೇ ಈ ಸಿದ್ಧಾಂತವು ಕನ್ನಡ ಜಾನಪದ ಅಧ್ಯಯನದ ಮೇಲೆ ಪ್ರಭಾವಗೊಂಡಿದ್ದರಿಂದ ಜನಪದ ಗೀತೆ, ಕಥೆ, ಗಾದೆ, ಲಾವಣಿ, ಮಹಾಕಾವ್ಯಗಳನ್ನು ಸಹ ರಾಷ್ಟ್ರ ನಿರ್ಮಾಣದಲ್ಲಿ ಬಳಸಿಕೊಳ್ಳಲಾಯಿತು.

ಜಾನಪದದ ಉಗಮ ವಿಕಾಸ, ಪ್ರಕರಣ ಇವುಗಳನ್ನು ತಿಳಿಯಲು ಮಾನವಶಾಸ್ತ್ರಿಯ ಸಿದ್ಧಾಂತಗಳು ಪ್ರೇರಕವಾದವು. ಈ ಕಾಲಘಟ್ಟದಲ್ಲಿ ಹೊಸದಾಗಿ ಪ್ರವೇಶ ಪಡೆದ ಬೌದ್ಧಿಕ, ವೈಚಾರಿಕ ಆಯಾಮಗಳು ಶಿಷ್ಟ ಸಾಹಿತ್ಯಕ್ಕೆ ಪ್ರಭಾವ ಬೀರಿದಂತೆ ಜಾನಪದ ಅಧ್ಯಯನದ ಮೇಲೆ ಪ್ರಭಾವ ಬೀರಿದವು. ಈ ಹಿನ್ನೆಲೆಯಲ್ಲಿ ಸಿದ್ಧಾಂತಗಳಿಂದ ಒಂದು ಜನಪದ ಪ್ರಕಾರವನ್ನು ಅಖಂಡತೆಯಿಂದ ಬೇರ್ಪಡಿಸಿ ಒಂದೊಂದು ಪ್ರಕಾರದ ತಾತ್ವಿಕತೆಯನ್ನು ತಿಳಿಯುವುದಾಗಿದೆ. "ಒಂದು ಜನಪದ ಸಾಹಿತ್ಯವನ್ನು

ಜನಪದ ಆಚರಣೆಯನ್ನು, ಕಲೆಗಳನ್ನು ಬೇರೆ ಬೇರೆ ಅಧ್ಯಯನ ಶಿಸ್ತುಗಳೊಂದಿಗೆ ಅಧ್ಯಯನ ಮಾಡುವುದು. ಸಂಸ್ಕೃತಿ ವಿಕಾಸವಾದಿಗಳ ಚಿಂತನೆಯನ್ನು ಬೇರೊಂದು ದೃಷ್ಟಿಕೋನದಿಂದ ಪರ್ಯಾಯ ನೆಲೆಯಲ್ಲಿ ಚಿಂತಿಸುವುದಾಗಿದೆ"[೧೪] ಈ ಸಿದ್ಧಾಂತಗಳ ಪ್ರಭಾವದಿಂದ ಯೊರೋಪ್ ರಾಷ್ಟ್ರಗಳಲ್ಲಿ ಜಾನಪದ ಅಧ್ಯಯನಗಳು ಪ್ರಾರಂಭವಾದವು. ಆದರೆ ಕನ್ನಡ ಜಾನಪದ ಅಧ್ಯಯನದಲ್ಲಿ ಈ ಸಿದ್ಧಾಂತಗಳು ಪ್ರವೇಶ ಪಡೆಯಲಿಲ್ಲ. ಅಂದರೆ ದೇಶಿಯ ವಿದ್ವಾಂಸರು ಮೊದಲ ಕಾಲಘಟ್ಟದಲ್ಲಿ ಈ ಸಿದ್ಧಾಂತಗಳನ್ನು ಬಳಸಿಕೊಳ್ಳಲಿಲ್ಲ. ಏಕೆಂದರೆ ಕರ್ನಾಟಕದಲ್ಲಿ ಬೇರೆ-ಬೇರೆ ಪ್ರಾಂತಿಯವಾಗಿ ಜನಪದವು ಹರಡಿಕೊಂಡಿದ್ದರಿಂದ "ಈ ಜಾನಪದ ಶಾಸ್ತ್ರಸಿದ್ಧಾಂತಗಳು ಕೆಲವೊಮ್ಮೆ ಸಂಸ್ಕೃತಿ ಮತ್ತು ಭಾಷೆಗಳ ಮೇಲೆ ಪರಿಣಾಮ ಬೀರಬಹುದು. ಮುಖ್ಯವಾಗಿ ಈ ರೀತಿಯಲ್ಲಿ ಹುಟ್ಟಿಕೊಂಡಿದಂತಹ ಸಮೂಹ ಸಂಸ್ಕೃತಿ ಸಿದ್ಧಾಂತ ಔದ್ಯೋಗಿಕರಣದ ಕಾಲಘಟ್ಟದಲ್ಲಿ ಕೈಗಾರಿಕೆ ಬೃಹತ್ ನೆಲೆಯಲ್ಲಿ ಪ್ರವೇಶ ಪಡೆದಾಗ ಇಲ್ಲಿನ ಸಂಸ್ಕೃತಿಗಳು ಕಮರಿ ಹೋಗುತ್ತವೆ"[೧೫] ಈ ನಿಟ್ಟಿನಲ್ಲಿ ಜನಪದ ಅಧ್ಯಯನವು ರೂಪಿಸಿದ ರಾಷ್ಟ್ರೀಯ ಪ್ರಜ್ಞೆಯ ಜೊತೆಗೆ ದೇಶಿ ಪ್ರಜ್ಞೆ ಕಂಡುಬರುತ್ತದೆ. ಜಾನಪದ ಅಧ್ಯಯನದ ಮೂಲ ಉದ್ದೇಶವೇ ಸಂಸ್ಕೃತಿಯನ್ನ ಪುನರ್ ಸಂಘಟಿಸುವುದಾಗಿದೆ.

೩.೪.೨. ವಿಮೋಚನೆಯ ನೆಲೆಗಳು

ಬಿ.ಎಂ.ಶ್ರೀಯವರು ಹಲಸಂಗಿ ಗೆಳೆಯರು ಸಂಪಾದಿಸಿದ 'ಗರತಿಯಹಾಡು' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಜನಪದ ಸಾಹಿತ್ಯದ ಅನನ್ಯತೆಯನ್ನು ಕುರಿತು ಮೊದಲ ಬಾರಿಗೆ ಪ್ರತಿಪಾದಿಸುತ್ತಾರೆ. ಆ ಮೂಲಕ ವಸಾಹತು ಘಟ್ಟದಲ್ಲಿ ಎಲ್ಲರ ಮನಸ್ಸು ಜನಪದ ಸಾಹಿತ್ಯದ ಸಂರಕ್ಷಣೆ, ನೆಲದ ಸಂಸ್ಕೃತಿಯ ಸಮರ್ಥನೆ ಆ ಮೂಲಕ ಆಳರಸರ ವಿರುದ್ಧದ ಹೋರಾಟ, ವಸಾಹತುಶಾಹಿಯಿಂದ ಭಾರತವನ್ನು ವಿಮೋಚನೆಗೊಳಿಸುವುದು ಈ ದಿಕ್ಕಿನಲ್ಲಿ ಕೆಲಸ ಮಾಡಿರುವುದು ಸ್ಪಷ್ಟ. ಇದನ್ನು ಹಿ.ಶಿ.ರಾಮಚಂದ್ರೇಗೌಡರು ಸ್ಪಷ್ಟವಾಗಿ ಗುರುತಿಸಿದ್ದಾರೆ. "ಸಂಸ್ಕೃತಿಯ ಮರೆವಿನಿಂದ ಮಲಗಿದ್ದ ಭಾರತೀಯರನ್ನು ಭಾರತದ ಸ್ವಾತಂತ್ರ್ಯ ಚಳುವಳಿ ಎಚ್ಚರಿಸಿತು. ಈ ಚಳುವಳಿ ಕೇವಲ ರಾಜಕೀಯವಾಗದಂತೆ, ಅದು ಸಾಂಸ್ಕೃತಿಕ ಎಚ್ಚರವಾಗಿರುವಂತೆ ಕವಿಗಳು, ಕಲಾವಿದರು, ದೇಶಭಕ್ತರು ತಮ್ಮ ಸಂದರ್ಭಕ್ಕೆ ಅಗತ್ಯವಾದ ಸಾಂಸ್ಕೃತಿಕ ಆಯುಧಗಳನ್ನು ಹುಟ್ಟಿಸಿಕೊಂಡರು. ಇಂಥ ಸಾಂಸ್ಕೃತಿಕ ಹೋರಾಟದ ಸಮಬಲ ಅಸ್ತ್ರವಾಗಿ ಜಾನಪದವು ಕರ್ನಾಟಕದಲ್ಲಿ ಪ್ರಾಪ್ತವಾಯಿತು"[೧೬] ಈ ಕಾಲಘಟ್ಟದಲ್ಲಿ ಕವಿಗಳು, ಬರಹಗಾರರು ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯನ್ನು ಒಟ್ಟೊಟ್ಟಿಗೆ ನಡೆಸಿದರು. ಸಂಸ್ಕೃತಿ ಚಿಂತನೆ ಎನ್ನುವುದು ಪ್ರಧಾನವಾಗಿ ಅವರಿಗೆ ದೇಶೀ ಅಭಿವೃದ್ಧಿಯ ಚಿಂತನೆಯಾಗಿತ್ತು ಮತ್ತು ರಾಷ್ಟ್ರೀಯ ಚಿಂತನೆಯೇ ಆಗಿದ್ದಿತು. ವಿಮೋಚನೆ ಎನ್ನುವಂತದ್ದು ಭೌತಿಕವಾಗಿ ಬಿಡುಗಡೆಗೊಳಿಸಿ ರಾಷ್ಟ್ರವನ್ನು ಸಾಂಸ್ಕೃತಿಕವಾಗಿ ಪುನರ್‌ನಿರ್ಮಾಣ ಮಾಡುವುದು. ಕನ್ನಡ ಜಾನಪದವನ್ನು ಸಂಸ್ಕೃತಿಯ ಜೀವಕೇಂದ್ರವೆಂದು ರಾಷ್ಟ್ರೀಯವಾದಿಗಳು ಭಾವಿಸಿದ್ದರ ಫಲವಾಗಿ ಗ್ರಾಮ ಕೇಂದ್ರಿತವಾದವು. ಇದರಿಂದಾಗಿ ಜನಪದ ಸಾಹಿತ್ಯ ಸಂಗ್ರಹ ಮತ್ತು ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ನಿರತರಾದರು.

ವಸಾಹತುಶಾಹಿ ಕಾಲಘಟ್ಟದ ದೇಶಿ ವಿದ್ವಾಂಸರ ಜನಪದ ಸಾಹಿತ್ಯ ಸಂಗ್ರಹದ ತಾತ್ವಿಕ ಸ್ವರೂಪವು ರಾಷ್ಟ್ರೀಯತೆ, ದೇಶಿಯತೆ, ವಿಮೋಚನೆ ಈ ಮೂರು ಅಂಶಗಳನ್ನು ಒಳಗೊಂಡಿದೆ. 'ವಿಮೋಚನೆ' ಎಂದರೆ 'ಬಿಡುಗಡೆ', ಕಳೆದುಕೊಳ್ಳು' 'ಹೊಸತನ್ನು' ಸ್ಥಾಪಿಸು ಎಂದು ಅರ್ಥೈಸಬಹುದು. ಭಾರತದಲ್ಲಿ ಬ್ರಿಟಿಷರು ತಮ್ಮ ಆಡಳಿತದ ಮೂಲಕ ದೇಶವನ್ನು ನಿಯಂತ್ರಿಸುತ್ತಿದ್ದರು. ಇದರಿಂದ ವಿಮೋಚನೆ ಪಡೆಯಲು ದೇಶಿಯ ವಿದ್ವಾಂಸರು ತಮ್ಮದೇ ಹೊಸ ಅಲೋಚನಾ ಕ್ರಮದ ಮೂಲಕ ಅಂದರೆ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಿ ಆ ಮೂಲಕ ಜನರನ್ನು ಎಚ್ಚರಿಸಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸುತ್ತಿದ್ದರು. ಜಗತ್ತಿನ ತೃತೀಯ ರಾಷ್ಟ್ರಗಳು ವಸಾಹತುಶಾಹಿಯಿಂದ ವಿಮೋಚನೆ ಪಡೆಯಲು ಜನಪದ ಸಾಹಿತ್ಯದ ಅಧ್ಯಯನ ಮಾರ್ಗವನ್ನು ಅನುಸರಿಸಿದವು. ವಸಾಹತುಶಾಹಿಯಿಂದ ಸ್ವಾತಂತ್ರ್ಯವನ್ನು ಪಡೆದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಹಾಗೂ ಹೊಸ ವಿಚಾರಗಳನ್ನು ತಮ್ಮ ಚಿಂತನಾ ರೂಪದಲ್ಲಿ ಅಳವಡಿಸಿಕೊಂಡರು. "ಸ್ವಾತಂತ್ರ್ಯಪೂರ್ವದಲ್ಲಿ ೧೯೩೦ರ ನಂತರ ಭಾರತದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗಳು ನಮ್ಮಲ್ಲಿ ಸ್ವದೇಶಿ ಸಂಗತಿಗಳ ಅರಿವು ಮೂಡಿಸಿವೆ. ಇದರಿಂದ ಒಂದಿಷ್ಟು ಜನಪದ ಸಾಹಿತ್ಯದ ಬಗೆಗೆ ನಮ್ಮ ಹಿರಿಯರ ಲಕ್ಷ್ಯ ನೀಡಿದೆ ಎಂದು ಹೇಳಬಹುದು"[೧೭] ಈ ಸಂದರ್ಭದಲ್ಲಿ ಹುಟ್ಟಿಕೊಂಡ 'ಸಾಂಸ್ಕೃತಿಕ ವಿಮೋಚನೆಯು' ನಮ್ಮಲ್ಲಿ ಅರಿವನ್ನು ಮೂಡಿಸುತ್ತದೆ. ಈ ಅರಿವಿನ ಫಲವೇ ಸ್ವಾತಂತ್ರ್ಯದ ಮಹತ್ವದ ಬಗೆಗೆ ನಮ್ಮವರಲ್ಲಿ ಅರಿವು ಅಭಿಮಾನ ಮೂಡಿದೆ. ಈ ಕಾರಣದಿಂದ ಸದಾವಕಾಶವಾಗಿ ಜನಪದ ಸಾಹಿತ್ಯದ ಅಷ್ಟಿಷ್ಟು ಸಂಗ್ರಹ, ಪ್ರಕಟಣೆ, ಅಧ್ಯಯನಗಳು ಪ್ರಾರಂಭವಾದವು. ಈ ಅರಿವಿನ ಕಾವು ಸ್ವಾತಂತ್ರ್ಯ ನಂತರ ಮುಂದುವರೆದುದು ಎದ್ದು ಕಾಣುವ ಸಂಗತಿಯಾಗಿದೆ. "ಸ್ವಾತಂತ್ರ್ಯದ ಒತ್ತಡದ ಬದುಕಿನಲ್ಲಿಯೇ ದೇಸಿ ಸಂಗತಿಗಳ ಅರಿವು–ಒಲವು ಮೂಡಿ ದೇಸಿ ಸಾಹಿತ್ಯ ಸಂಸ್ಕೃತಿಗಳ ಅಪ್ಪುಗೆಯಿಂದಲೇ ಒಂದು ದೇಶದ ಸ್ವಾತಂತ್ರ್ಯ ಚಳುವಳಿ ಮೂಡಿ ಬರುವುದು ಮತ್ತು ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗುವುದು ಎಂಬ ಸಂಗತಿ ಮುಖ್ಯವಾಗುತ್ತದೆ"[೧೮]

ವಸಾಹತುಶಾಹಿಯಿಂದ ವಿಮೋಚನೆಗೊಳ್ಳುವುದು ಎಂದರೆ ರಾಜಕೀಯವಾಗಿ ಅಧಿಕಾರ ಪಡೆಯುವುದಲ್ಲ, ಬೌದ್ಧಿಕ ಹಾಗೂ ವಸಾಹತು ಸೃಷ್ಟಿಸಿದ ಅನೇಕ ಸಂಗತಿಗಳನ್ನು ಕಳಚಿಕೊಂಡು ನಮ್ಮದೇ ದೇಶಿ ಸಂಗತಿಗಳನ್ನು ಸ್ಥಾಪಿಸಿಕೊಳ್ಳುವುದು ಹಾಗೂ ಸಾಂಸ್ಕೃತಿಕ ಆತಂಕವನ್ನು ನಿವಾರಿಸಿಕೊಳ್ಳುವುದಾಗಿದೆ. ಭಾಷೆ, ಸಾಹಿತ್ಯ, ಜೀವನ ದಿನ ನಿತ್ಯದ ಬದುಕಿನ ಅನೇಕ ಬಗೆಯಲ್ಲಿ ವಸಾಹತುಶಾಹಿ ಆಕ್ರಮಿಸಿದ್ದು ಇದರಿಂದ ವಿಮೋಚನೆ ಪಡೆಯಲು ಸಾಧ್ಯವಾಗುತ್ತದೆ. ವಸಾಹತುಶಾಹಿಯನ್ನು ಆಳಿದ ಮತ್ತು ಆಳ್ವಿಕೆಗೊಳಪಟ್ಟ ಎಂಬ ಎರಡು ವರ್ಗಗಳನ್ನು ರಾಜಕೀಯ ಹಿನ್ನಲೆಯಲ್ಲಿ ವಿಶ್ಲೇಷಿಸಬಹುದು. ಬ್ರಿಟನ್ ಮತ್ತು ಭಾರತವು ಆಳುವ ಮತ್ತು ಆಳಿಸಿಕೊಳ್ಳುವ ನೆಲೆಯಲ್ಲಿರುವ ಎರಡು ದೇಶಗಳು. ಜನಾಂಗಿಯ ನೆಲೆಯಲ್ಲಿ ನೋಡುವುದಾದರೆ ಬಿಳಿಯರು ಮತ್ತು ಕರಿಯರು.

ಭೌತಿಕವಾಗಿ ಸಂಪದ್ಭರಿತವಾದ ಪಾಶ್ಚಾತ್ಯ ಶಕ್ತಿ ಇಂಡಿಯಾದ ಬಡವಸ್ತುಗಳು, ಉನ್ನತ ಮತ್ತು ಕೆಳಮಟ್ಟದ ನಾಗರೀಕತೆಗಳ ಮಧ್ಯ ಕಂಡುಬರುವ ಆಳ್ವಿಕೆಯ ಭಿನ್ನ ನೆಲೆಗಳು. ವಸಾಹತುಶಾಹಿಯು ಭಾಷೆ, ಸಾಹಿತ್ಯ, ಸಂಸ್ಕೃತಿ ಈ ಮೂರು ಪ್ರಧಾನ ಅಂಶಗಳನ್ನು ತನ್ನ ಅಧೀನಕ್ಕೆ ಬರುವ ರಾಜ್ಯಗಳ ಮೇಲೆ ಮನವೋಲಿಕೆಯ ಮಾದರಿಯಲ್ಲಿ ಹೇರುವ ಮೂಲಕ ರಾಜ್ಯವನ್ನು ಅಧೀನಕ್ಕೆ ತಂದುಕೊಳ್ಳುತ್ತದೆ. ತೃತೀಯ ಜಗತ್ತಿನ ರಾಷ್ಟ್ರಗಳು ಸಂಪೂರ್ಣವಾಗಿ ಈ ರೀತಿಯ ಬ್ರಿಟಿಷ್ ಯಜಮಾನ್ಯಕ್ಕೆ ಅಧೀನವಾಗಿದ್ದರೂ, ಇನ್ನೊಂದೆಡೆಯಿಂದ ಈ ಯಜಮಾನ್ಯಗಳಿಗೆ ಸಾಂಸ್ಕೃತಿಕ ನೆಲೆಯಿಂದಲೇ ಪ್ರತಿರೋಧ ತೋರಿ ಅಧೀನ ರಾಷ್ಟ್ರಗಳು ಸಾಂಸ್ಕೃತಿಕ ಅನನ್ಯತೆಯನ್ನು ರೂಪಿಸಿಕೊಂಡಿವೆ. ವಸಾಹತು ಮತ್ತು ವಸಾಹತೋತ್ತರ ಜಗತ್ತು ಯಾವಾಗಲೂ ತಿಳಿವಳಿಕೆ ಸಂಸ್ಕೃತಿ, ಮತ್ತು ಅಧಿಕಾರಗಳ ನಡುವೆ ಇರುವ ಸಂಬಂಧದ ಬಗ್ಗೆ ಹೆಚ್ಚು ಪ್ರಜ್ಞಾಪೂರ್ವಕವಾಗಿರುತ್ತದೆ.

ಜನಪದಕಾವ್ಯ, ಗೀತೆಗಳು, ಕತೆ, ಗಾದೆ, ಕಲೆ, ಸಂಪ್ರದಾಯ, ಆಚರಣೆ, ನಂಬಿಕೆ, ಸಮುದಾಯ ಇತ್ಯಾದಿ ಜನಪದ ಸಾಹಿತ್ಯಗಳ ಮೂಲಕ ಒಂದು ಬಗೆಯಲ್ಲಿ ಪ್ರತಿರೋಧ ಒಡ್ಡುವುದು ಸಹ ವಸಾಹತುಶಾಹಿಯಿಂದ ವಿಮೋಚನೆಗೊಳ್ಳಲು ಸಾಧ್ಯವಾಗುತ್ತದೆ ಎಂಬುದು ದೇಶಿ ವಿದ್ವಾಂಸರ ನಿಲುವಾಗಿತ್ತು. ವಸಾಹತುಕಾಲದ ಜನಪದ ಅಧ್ಯಯನಕಾರರ ಆಕರ ಸಾಮಾಗ್ರಿಗಳಾಗಿ ಸಾಹಿತ್ಯ ಪ್ರಕಾರಗಳು ಗೋಚರಿಸಿವೆ. “ಪರಕೀಯ ಆಕ್ರಮಣದಿಂದ ಆದ ಅವಸ್ಥಾಂತರ ಭಾರತದ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಚಟುವಟಿಕೆಗಳೂ ಬದಲಾವಣೆಯಾಗಿ ಜನಜೀವನದಲ್ಲಿ ತಲ್ಲಣವನ್ನುಂಟು ಮಾಡಿದ ಕಾಲವದು. ಕಾಲವನ್ನು ಕತ್ತಲೆ ಮತ್ತು ಬೆಳಕಿನ ಸಂಘರ್ಷದ ಕಾಲವೆಂದು ಗುರುತಿಸುವುದುಂಟು. ಆದಾಗಲೇ ಭಾರತದ ಜನಜೀವನವನ್ನು ಬಳಗಿನ ಶಕ್ತಿಯಾದ ಪುರೋಹಿತಶಾಹಿಯು ಆಕ್ರಮಿಸಿ ಜನರನ್ನು ಅಜ್ಞಾನದ ಅಂಧಕಾರಕ್ಕೆ ದೂಡಿತ್ತು”[೧೯] ನಂತರ ಪಾಶ್ಚಾತ್ಯ ಸಂಸ್ಕೃತಿ, ಭಾಷೆ, ಶಿಕ್ಷಣ, ಆಡಳಿತ, ವೈಜ್ಞಾನಿಕ ವೈಚಾರಿಕತೆಯ, ಮಾದರಿಗಳು ನುಸುಳಿ ಭಾರತದ ಜನಜೀನವವನ್ನು ಪಲ್ಲಟಗೊಳಿಸಿದವು. ಈ ಎಲ್ಲ ಸ್ವರೂಪಗಳಲ್ಲಿ ತೀವ್ರತರ ಬದಲಾವಣೆಗಳಾದವು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜನಪದ ಸಾಹಿತ್ಯವೆ ತನ್ನದೇ ಆದ ನೆಲೆಯೊಳಗೆ ಆಕರವನ್ನು ಒದಗಿಸಿತು. ಈ ಜನಪದದಿಂದ ಆಕರಗಳು ಯಜಮಾನ್ಯ ಸಂಸ್ಕೃತಿ ಎದುರು ಪರ್ಯಾಯ ಚಿಂತನೆಯನ್ನು ತಾತ್ವಿಕತೆಯೊಂದಿಗೆ ಸೃಷ್ಟಿಸಿದವು.

ಅರ್ಚಕ. ಬಿ.ರಂಗಸ್ವಾಮಿ ಅವರ ‘ಹುಟ್ಟಿದ ಹಳ್ಳಿ ಹಳ್ಳಿಯಹಾಡು’ ಕೃತಿಯು ಮುಖ್ಯವಾದ ನೆಲೆಯಲ್ಲಿ ನಿಲ್ಲುತ್ತದೆ. ಒಂದು ಗ್ರಾಮದ ಜನಜೀವನವನ್ನು ಹಾಗೂ ಅಲ್ಲಿ ಮೌಖಿಕ ಸಾಹಿತ್ಯವನ್ನು ಸಂಗ್ರಹ, ಸಂಪಾದನೆ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಹೇಮಗಿರಿಯ ಬಳಿಯ ಬಂಡಿಗೊಳೆ ಶ್ರೀಯುತರ ಊರು. ಮತ್ತು ಹಳ್ಳಿಯನ್ನೇ ಸಂಗ್ರಹದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಹಳ್ಳಿಯ ಸಮಾಜ, ಅಲ್ಲಿಯ ನಡೆ-ನುಡಿ ಆಚಾರ-ವಿಚಾರಗಳು, ಹುಬ್ಬ-ಹುಣ್ಣಿಮೆಗಳು,

ಕಲೆ ಸಾಹಿತ್ಯ, ಬಡತನ, ಸಿರಿತನ, ಗ್ರಾಮ ಭಾಷೆಯ ವೈಖರಿ, ಸಂಸ್ಕೃತಿಯ ನೈಜತೆ, ಜೀವನ ಕ್ರಮ, ಆ ಗ್ರಾಮಕ್ಕೆ ಸಂಬಂಧಸಿದಂತೆ ಒಂದು ವಿಶ್ವಕೋಶವನ್ನು ಅವರು ಅರ್ಪಿಸಿದ್ದಾರೆ. ಪ್ರತಿಯೊಬ್ಬ ಜನಪದ ಸಾಹಿತ್ಯ ಸಂಗ್ರಹಕನಿಗೂ ಮೇಲ್ಪಂಕ್ತಿಯಾಗಿರುವ ಈ ಕೃತಿಯಲ್ಲಿ ರಂಗಸ್ವಾಮಿ ಅವರು ಗ್ರಾಮ ಜೀವನದ ಸಮಗ್ರ ಚಿತ್ರಣವನ್ನು ನೀಡಿದ್ದಾರೆ. ಈ ಕೃತಿಯಲ್ಲಿ ಊರಿನ ದಕ್ಷಿಣದ ಏಳೊರಮ್ಮನ, ಏಳೊರು ಸಿಡಿಗಳು, ಅಲ್ಲಿಗೆ ಬರುತ್ತಿದ್ದ ಬಗೆ, ಸುಗ್ಗಿಯ ಕುಣಿತ ಪ್ರಸಿದ್ಧವಾಗಿರುವ ಅನೇಕ ಜನಪದ ಗೀತೆಗಳು ಅವರ ಸಂಕಲನದಲ್ಲಿ ದೊರೆಯುತ್ತದೆ. ರಂಗಸ್ವಾಮಿಯವರ ಗ್ರಾಮೀಣ ಸಂಸ್ಕೃತಿಯ ಅನನ್ಯತೆಯು ವಸಾಹತುಶಾಹಿಯ ಪರಿಣಾಮದ ನೆಲೆಯಲ್ಲಿ ಹುಟ್ಟಿದಂತ ಪ್ರಕ್ರಿಯೆಯಾಗಿದೆ. ಒಂದು ಗ್ರಾಮದ ಸಂಸ್ಕೃತಿಯೆಂದರೆ ಮೌಖಿಕ ಸಾಹಿತ್ಯವೆಂದೆ ಅರ್ಥ. ಏಕೆಂದರೆ ಜನಪದರು ತಮ್ಮ ಸಾಂಸ್ಕೃತಿಕ ದೃಷ್ಟಿಕೋನವನ್ನು ಮೌಖಿಕ ಸಾಹಿತ್ಯ ನೆಲೆಯೊಳಗೆ ಸ್ಥಾಪಿಸಿಕೊಳ್ಳುತ್ತಾರೆ.

ಭಾರತವು ವಸಾಹತೀಕರಣಕ್ಕೆ ಒಳಪಟ್ಟಾಗ ಹಲವು ಪಾಶ್ಚಾತ್ಯ ಚಿಂತನೆಗಳು ಸಾಹಿತ್ಯದ ಮೂಲಕ ಪ್ರವೇಶ ಪಡೆದವು. ಈ ಪರಿಣಾಮವಾಗಿ ದೇಶಿಯ ಮೂಲ ಪರಂಪರೆಗಳು ವಿಸ್ಮೃತಿಗೆ ಒಳಗಾದವು. ಇಂತಹ ಸಂದರ್ಭದಲ್ಲಿ ಶಿಷ್ಟ ಸಾಹಿತ್ಯ ಪರಂಪರೆಗೆ ನವೋದಯ ಕಾಲದಲ್ಲಿ ಪಾಶ್ಚಾತ್ಯ ಚಿಂತನೆಗಳು ಅಂತಃಸತ್ವವಾಗಿ ಒಳಹೊಕ್ಕು ಇಲ್ಲಿನ ಜ್ಞಾನ ಪರಂಪರೆಗಳ ಮೇಲೆ ಹೊಸ ರೀತಿಯಲ್ಲಿ ಆಕ್ರಮಿಸಿಕೊಂಡವು. ಈ ಚಿಂತನಗಳು ಮೊದಲು ಆಕ್ರಮಿಸಿದ್ದು, ವಿದ್ಯಾವಂತರುಗಳನ್ನು ಇಂಗ್ಲಿಷ್ ಶಿಕ್ಷಣ, ಈ ಸಂದರ್ಭದಲ್ಲಿ ಮತ್ತೊಂದು ವಸಾಹತುಶಾಹಿಯ ಮಾದರಿಯಾಗಿದೆ. ನಂತರ ಧಾರ್ಮಿಕ, ಪ್ರಭುತ್ವದ ನೆಲೆಯಲ್ಲಿ ಸ್ಥಳಿಯ ಪ್ರದೇಶದ, ಸಂಸ್ಕೃತಿ, ಸಮುದಾಯ, ಸಂಪ್ರದಾಯ, ಸಾಹಿತ್ಯ, ಕಲೆ ಮುಂತಾದವುಗಳನ್ನ ನಿಯಂತ್ರಿಸುತ್ತದೆ. ಅನ್ಯ ಸಂಸ್ಕೃತಿಗಳ ಪ್ರಭಾವ ದೇಶಿ ಸಂಸ್ಕೃತಿಯನ್ನೆ ಪ್ರಭುತ್ವವೆಂದು ತಿಳಿದುಕೊಂಡು, ವಸಾಹತುಶಾಹಿ ವಿವರಣೆಯನ್ನು ಕೊಡಲಾಗುತ್ತದೆ"[೨೦] ಈ ಎಲ್ಲದರ ವಿರುದ್ಧ ಪ್ರತಿರೋಧಗಳನ್ನು ಇಲ್ಲಿನ ವಿದ್ಯಾವಂತ ವರ್ಗವು ರಾಜಕೀಯ, ಸಾಂಸ್ಕೃತಿಕ ಮಾರ್ಗಗಳ ಮೂಲಕ ಕಂಡುಕೊಳ್ಳುತ್ತದೆ. ಅದಕ್ಕಾಗಿ ಈ ವರ್ಗವು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ತಮ್ಮ ನೆಲದ ಸಾಂಸ್ಕೃತಿಕ ಸಂಪತ್ತಿಗೆ ಮರಳಿ ಹೋಗಿ ಹಾಗೂ ರಾಷ್ಟ್ರ ಪ್ರಜ್ಞೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಇದನ್ನು "ಸಂಪೂರ್ಣ ದಿಗ್ವಿಜಯ ಮತ್ತು ನಿಯಂತ್ರಣಗಳೆಂಬ ಪರಿಕಲ್ಪನೆಗಳೆ ವಸಾಹತುಶಾಹಿ ಅನುಭವ ಸಿದ್ಧಾಂತಗಳ ಎರಡು ಪ್ರಮುಖ ಆಧಾರ ಸ್ಥಂಭಗಳು ಎಂದು ಡಿ.ಆರ್.ನಾಗರಾಜ ಗುರುತಿಸುತ್ತಾರೆ"[೨೧] ಅಂದರೆ ವಸಾಹತುಶಾಹಿಯು ಇಡೀ ರಾಷ್ಟ್ರದ ನಿಯಂತ್ರಣವನ್ನು ಮಾಡುತ್ತ ತಮ್ಮ ಅಧೀನತೆಯನ್ನ ಸಾಧಿಸುವ ಮೂಲಕ ಇಲ್ಲಿನ ಸಾಂಸ್ಕೃತಿಕ ಪರಂಪರೆಯನ್ನು ಅಧ್ಯಯನ ಮಾಡುತ್ತಾ ತನ್ನ ಅನನ್ಯತೆಯನ್ನು ಸಾಧಿಸಿಕೊಳ್ಳುತ್ತದೆ. ಆದರೆ ಈ ಸಾಂಸ್ಕೃತಿಕ ಅಧ್ಯಯನಕ್ಕೆ ಆಧಾರವಾಗಿ ಮೌಖಿಕ ಸಾಹಿತ್ಯ ಪರಂಪರೆಯನ್ನು ಬಳಸಿಕೊಳ್ಳಲಾಯಿತು.

ದೇಶಿ ಜನಪದ ವಿದ್ವಾಂಸರು ವಸಾಹತುಶಾಹಿ ಧೋರಣೆಯನ್ನು ಹಾಗೂ ದೇಶಿಯ ಸಾಂಸ್ಕೃತಿಕ ಮೌಖಿಕ ಸಾಹಿತ್ಯವನ್ನು ವಿಸ್ಮೃತಿಯಿಂದ ತಪ್ಪಿಸಲು ಗ್ರಾಮೀಣ, ಜನಪದ ಸಾಹಿತ್ಯವನ್ನು ಹಾಗೂ

ಇಲ್ಲಿನ ಕಲೆ, ಸಂಪ್ರದಾಯಿಕ ಆಚರಣೆ, ಕುರಿತು ಅಧ್ಯಯನ ಮಾಡಿದರು. ಇದು ದೇಶಿ ವಿದ್ವಾಂಸರು ವಸಾಹತುಶಾಹಿಗೆ ಪರ್ಯಾಯ ನೆಲೆಯನ್ನು ಕಟ್ಟಿಕೊಳ್ಳುವಲ್ಲಿ ಪ್ರಾದೇಶಿಕ ಅಸ್ಮಿತೆಯನ್ನು ಸ್ಥಾಪಿಸಲು ಸಾಧ್ಯವಾಯಿತು.

ವಸಾಹತುಕಾಲ ಮತ್ತು ವಸಾಹತುನಂತರ ಮರು ನವವಸಾಹತುಶಾಹಿ ಕಾಲ ಎಂದು ಎರಡು ನೆಲೆಗಳನ್ನು ಗುರುತಿಸಬಹುದು. ಮೊದಲನೆಯದು ಚಾರಿತ್ರಿಕ ಪ್ರಕ್ರಿಯೆಯು ನಿರ್ವಸಾಹತೀಕರಣ ಸ್ವರೂಪದಲ್ಲಿ ಚಾಲನೆಗೊಳ್ಳುತ್ತದೆ. ಸ್ವಾತಂತ್ರ್ಯಕ್ಕಾಗಿ ನಡೆಸುವ ಚಳುವಳಿಯ ಕಾಲ, ತಾಯ್ನಾಡಿನ ಕಲ್ಪನೆಯ ಕಾಲ, ಅದು ಮೊದಲ ಘಟ್ಟದ್ದು, ಸ್ವದೇಶಿ ಜಾಗೃತಿ ಎರಡನೇ ಹಂತದ್ದು. ವಿಸ್ಮೃತಿಗೆ ಒಳಗಾಗಿರುವ ನೆಲದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಈ ಹಂತದ್ದು. ಸ್ವಾತಂತ್ರ್ಯ ನಂತರದ ವಸಾಹತು ಪ್ರಭಾವಗಳಾದ ಭಾಷೆ, ಶಿಕ್ಷಣ, ರಾಜಕೀಯ ಮುಂತಾದ ಸಂರಚನೆಗಳನ್ನು ಪುನಾರಚಿಸಿಕೊಳ್ಳುವುದು, ಮತ್ತೊಂದು ಆಧುನಿಕರಣದ ಪ್ರಕ್ರಿಯೆಯಾಗಿದೆ"[೨೨] ಈ ಎಲ್ಲ ಅಂಶಗಳಿಂದ ಜನಪದ ಅಧ್ಯಯನವು ವಸಾಹತು ಆಕ್ರಮಿಸಿದ ಬೌದ್ಧಿಕ ಚಹರೆಗಳಿಂದ ವಿಮೋಚನೆ ಪಡೆಯಲು ಇವುಗಳು ಪ್ರಮುಖ ಪಾತ್ರ ವಹಿಸಿರುವುದು ತಿಳಿಯುತ್ತದೆ. ಇದು ಎಲ್ಲಾ ತೃತೀಯ ರಂಗದ ರಾಷ್ಟ್ರಗಳು ಪಡೆದ ಸಾಂಸ್ಕೃತಿಕ ಹಾಗೂ ರಾಜಕೀಯ ವಿಮೋಚನೆಯಾಗಿದೆ.

ಮೊದಲ ಘಟ್ಟದಲ್ಲಿ ಲಾವಣಿಗಳು, ಕಥನಗೀತೆಗಳು, ಜನಪದಗೀತೆಗಳು ಸಂಗ್ರಹ, ಸಂಪಾದನೆಗೆ ಹೆಚ್ಚು ಒತ್ತನ್ನು ಕೊಡಲಾಯಿತು. ನಂತರ ಜನಪದ ಮಹಾಕಾವ್ಯಕ್ಕೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿಕೊಂಡು ಅಭ್ಯಾಸ ಮಾಡಲಾಯಿತು. ವಸಾಹತುಶಾಹಿ ಕಾಲದಲ್ಲಿ ದೇಶಿ ವಿದ್ವಾಂಸರು ಜನಪದ ಗೀತೆಗಳ ಅಧ್ಯಯನದ ಮೂಲಕ ರಾಷ್ಟ್ರೀಯತೆ ಪ್ರಜ್ಞೆ ಹಾಗೂ ವಿಮೋಚನೆಯನ್ನು ಸ್ಥಾಪಿಸಲು ಮೊದಲ ಆದ್ಯತೆಯ ನೆಲೆಯಲ್ಲಿ ಕೆಲಸ ಮಾಡಿದ್ದಾರೆ. ಜನಪದ ಮಹಾಕಾವ್ಯಗಳಿಗೆ ಪ್ರಾಮುಖ್ಯತೆ ಬಂದುದು ಈ ಕಾರಣಕ್ಕಾಗಿಯೆ. ಹಾಗೆಯೆ ಅವುಗಳ ಸಂಗ್ರಹಣೆ ಹಾಗೂ ಈ ರೀತಿಯಲ್ಲಿ ಅವುಗಳನ್ನು ಬಳಸಿಕೊಳ್ಳಲಾಯಿತು. ಈ ಕಾರಣಕ್ಕಾಗಿಯೇ ಜನಪದ ಮಹಾಕಾವ್ಯಗಳನ್ನು ಕುರಿತು ಅಧ್ಯಯನಕ್ಕೆ ನಾಂದಿ ಹಾಡಿದಂತಾಯಿತು. ವಸಾಹತುಶಾಹಿ ಕಾಲದಲ್ಲಿ ಜನಪದ ಮಹಾಕಾವ್ಯಗಳ ಅಧ್ಯಯನ ಕಾಣಿಸಿಕೊಳ್ಳದಿದ್ದರೂ ವಸಾಹತುಶಾಹಿ ನಂತರ ದೇಶಿ ಸಂಸ್ಕೃತಿಯ ನೆಲೆಯಲ್ಲಿ ಕಾಣಿಸಿಕೊಂಡವು. ವಸಾಹತುಶಾಹಿಯ ವಿರುದ್ಧದ ರಾಷ್ಟ್ರೀಯ ಪ್ರಜ್ಞೆಯ ಅಸ್ಮಿತೆಗಳಾಗಿ ಜನಪದ ಮಹಾಕಾವ್ಯಗಳು ಪ್ರಥಮ ಸ್ಥಾನದಲ್ಲಿ ನಿಲ್ಲುತ್ತವೆ. ಹಾಗಾಗಿ ಜನಪದ ಮಹಾಕಾವ್ಯಗಳನ್ನು ಜಗತ್ತಿನಾದ್ಯಂತ ರಾಷ್ಟ್ರೀಯತೆಯ ಪ್ರತೀಕಗಳಾಗಿ ಅಧ್ಯಯನ ಮಾಡಿದ್ದಾರೆ. ಜನಪದ ಮಹಾಕಾವ್ಯಗಳ ಅಧ್ಯಯನ ಆರಂಭವಾದುದ್ದು ರೊಮ್ಯಾಂಟಿಕ್ ಯುಗದಲ್ಲಿ ತಮ್ಮ ದೇಶಾಭಿಮಾನವನ್ನು ಎತ್ತಿ ಹಿಡಿಯಲು ತಮ್ಮವರನ್ನು ಒಗ್ಗೂಡಿಸಲು ತಮ್ಮ ಪರಂಪರೆಯ ಭವ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸಲು ಜನಪದ ಮಹಾಕಾವ್ಯಗಳನ್ನು ಬಳಸಿಕೊಳ್ಳಲಾಯಿತು. "ಜನಪದ ಮಹಾಕಾವ್ಯವು ಒಬ್ಬ ಸಾಂಸ್ಕೃತಿಕ ವೀರನ ಅಥವಾ ಧಾರ್ಮಿಕ

ಸಮಕಾಲಿನ ಸುತ್ತ ಹೆಣೆದುಕೊಂಡ ತನ್ನ ವಿಸ್ತಾರ ಈ ವ್ಯಾಪ್ತಿಗಳಿಂದ ಅನೇಕ ಮಜಲುಗಳಲ್ಲಿ ಸಾಗುವುದನ್ನು ಕಾಣಬಹುದು"[೨೩] ಜನಪದ ಮಹಾಕಾವ್ಯಗಳು ಒಂದು ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆನಿಂತು ತನ್ನದೆ ಆದ ಪ್ರಾದೇಶಿಕ ಅಸ್ತಿತ್ವವನ್ನು ಪಡೆದಿರುತ್ತವೆ. ಇವುಗಳ ಕುರಿತ ಅಧ್ಯಯನಗಳು ವಸಾಹತುಶಾಹಿ ಕಾಲಘಟ್ಟದಲ್ಲಿ ಕನ್ನಡ ಜನಪದ ಕುರಿತು ಮೆಚ್ಚುಗೆ ಸಮಗ್ರ ಅಧ್ಯಯನಗಳು ಪಡೆದಿಲ್ಲ. ಹಾಗೂ ಒಂದು ಪ್ರಕಾರವನ್ನಷ್ಟೆ ಕುರಿತು ಅಧ್ಯಯನವನ್ನ ಕೈಗೊಳ್ಳಲಾಯಿತು.

೩.೩.೩. ಸಾಂಸ್ಕೃತಿಕ ನೆಲೆಗಳು

ಪಾಶ್ಚಾತ್ಯರು ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಇಲ್ಲಿನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಜನಪದ ಅಧ್ಯಯನ ಮಾಡುವ ಉದ್ದೇಶವಾಗಿದ್ದರೆ, ದೇಶಿಯ ವಿದ್ವಾಂಸರಿಗೆ ಆಧುನಿಕತೆಯ ಅಬ್ಬರದಲ್ಲಿ ಕಳೆದುಹೊಗುತ್ತಿದ್ದ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸುವ ಅದರ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟುವುದಾಗಿತ್ತು. ಯಾವುದೇ ರಾಷ್ಟ್ರದ ಅಸ್ಮಿತೆ ಹಾಗೂ ಅಸ್ತಿತ್ವವು ಆ ಪ್ರದೇಶದ ಮೌಖಿಕ ಸಾಹಿತ್ಯದಲ್ಲಿ ಕಂಡುಬರುತ್ತದೆ. ಏಕೆಂದರೆ "ನಾಗರೀಕ ಮಾನವ ಜಗತ್ತಿನ ಯಾವುದೊಂದು ದೇಶ, ಕಾಲ ಮತ್ತು ಪರಿಸರದ ಇತಿಹಾಸವನ್ನು ಗಮನಿಸಿದಾಗಲೂ ಮೂರು ಮುಖ್ಯ ಸಾಮಾಜಿಕ ಸ್ತರಗಳು ಅಥವಾ ಸಾಮಾಜಿಕ ವ್ಯವಸ್ಥೆಗಳು ರೂಢಿಯಲ್ಲಿರುವುದು ನಮಗೆ ಕಂಡುಬರುತ್ತದೆ. ಆದಿವಾಸಿ ಅಥವಾ ಬುಡಕಟ್ಟು ಸಮಾಜಗಳು ಮಧ್ಯಸ್ಥ ಗ್ರಾಮೀಣ ಜನಪದ ಸಮಾಜಗಳು ಮತ್ತು ಇವರುಗಳ ಚರಮೆ ಸ್ವರೂಪವಾಗಿ ತೋರುವಂತಹ ಶಿಷ್ಟ ನಾಗರೀಕ ಸಮಾಜಗಳು ತಮ್ಮದೆ ಆದ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಸಂಪ್ರದಾಯ ಮೌಖಿಕ ಸಾಹಿತ್ಯವನ್ನು ಹೊಂದಿರುತ್ತವೆ"[೨೪] ನವೋದಯ ಕಾಲಘಟ್ಟದಲ್ಲಿ ಜನಪದ ಅಧ್ಯಯನದ ಮೂಲಕ ಸಾಂಸ್ಕೃತಿಕ ಹಿರಿಮೆಯ ಅನನ್ಯತೆಯನ್ನು ಸಾಧಿಸಲಾಯಿತು. ದೇವುಡು 'ಕರ್ನಾಟಕ ಸಂಸ್ಕೃತಿ', ಡಿವಿಜಿ 'ಸಂಸ್ಕೃತಿ', ಕೃತಿಗಳು ಜನಪದ ಸಂಸ್ಕೃತಿಯನ್ನು ಚರ್ಚಿಸುತ್ತವೆ.

'ಸಂಸ್ಕೃತಿ' ಎಂಬುದು ಒಟ್ಟಾರೆ ಜನರ ಜೀವನ ಕ್ರಮವನ್ನು ತಿಳಿಸುತ್ತದೆ. ಇದು ಆಧುನಿಕ ಕಾಲಘಟ್ಟದಲ್ಲಿ ಹುಟ್ಟಿದ ಸೈದ್ಧಾಂತಿಕ ಪ್ರಕ್ರಿಯೆಯಾಗಿದೆ. ಜನಪದದಲ್ಲಿ ಸಂಸ್ಕೃತಿ ಎಂಬುದು ಜನರ ಹಾಗೂ ಸಮುದಾಯಗಳಲ್ಲಿ ಉಂಟಾದ ಅನುಭವದ ಛಾಯೆ ಹಾಗೂ ಮನಸ್ಸಿನ ಅಂತರಂಗದಲ್ಲಿ ಹುಟ್ಟಿಕೊಳ್ಳುವ ಸಾಹಿತ್ಯದ ಅನುಭವವೇ ಆಗಿದೆ"[೨೫] ಸಂಸ್ಕೃತಿಯು ಸಮಷ್ಟಿ ನೆಲೆಯ ಸಮಗ್ರ ಜೀವನದ ಪ್ರಕ್ರಿಯೆಯಲ್ಲಿ ದಿನನಿತ್ಯದಲ್ಲಿ ಹುಟ್ಟಿಕೊಳ್ಳುತ್ತದೆ. ಇದರ ಜೊತೆಗೆ ಪ್ರಾದೇಶಿಕ ನೆಲೆಯಲ್ಲಿ ಸೇರಿಕೊಳ್ಳುತ್ತದೆ. ಇವೆಲ್ಲದರ ಸಮಗ್ರ ಚಿತ್ರಣವನ್ನು ಮೌಖಿಕ ನೆಲೆಯೊಳಗೆ ಕಟ್ಟಿಕೊಂಡಿರುವ ಜನಪದವು ಸಾಂಸ್ಕೃತಿಕ ಹಿರಿಮೆಯನ್ನು ಚಾರಿತ್ರಿಕ ನೆಲೆಯೊಳಗೆ ಪ್ರತಿಪಾದಿಸುತ್ತದೆ.

ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ವಿರೋಧಿಸಿ ಮೊಟ್ಟ ಮೊದಲಿಗೆ ಹೈದರ್ ಹಾಗೂ ಟಿಪ್ಪು ಅವರಿಂದ ಹೋರಾಟ ಆರಂಭವಾಯಿತೆಂದು ಹೇಳಬಹುದು. ನಂತರ ಕರ್ನಾಟಕದ ವಿವಿಧ ಭಾಗದ

ಸಾಮಂತ ಪ್ರಭುಗಳು ಪಾಳೆಗಾರರು, ಬುಡಕ್ಟು, ಜನಾಂಗದವರು, ಜನಸಾಮಾನ್ಯರು ಹೋರಾಟ ನಡೆಸಿದ್ದಾರೆ. ಅಗಾಧ ದೇಶ ಪ್ರೇಮ ಸಾಹಸಕ್ಕೆ ಹೆಸರಾದ ಬಿದನೂರು, ಬಾದಾಮಿ, ಕೊಪ್ಪಳ, ಸುರಪುರ, ಕಿತ್ತೂರು, ಬೆಳವಾಡಿ, ಹಲಸಂಗಿ, ಹಾನಗಲ್ಲು, ಬಂಡಾಪುರ, ಕೆಳದಿ ಮುಂಡರಗಿ, ನರಗುಂದ ಮುಂತಾದ ಉತ್ತರ ಕರ್ನಾಟಕದ ಹಲವಾರು ಪ್ರಾಂತ್ಯಗಳಲ್ಲಿ ಹಾಗೂ ಕೊಡಗು, ಕಾರ್ಕಳ, ಕವಲೇ ದುರ್ಗದ ಇನ್ನು ಮುಂತಾದ ದಕ್ಷಿಣ ಪ್ರಾಂತ್ಯಗಳಲ್ಲಿ ಬ್ರಿಟಿಷರ ವಿರುದ್ಧ ಹೋರಾಟಗಳು ನಡೆದವು. ದಂಗೆ ಕುರಿತಂತೆ ಅಪಾರ ಪ್ರಮಾಣದ ಜನಪದ ಗೀತೆಗಳು ಲಾವಣಿಗಳು ರಚನೆಗೊಂಡಿವೆ. ಬ್ರಿಟಿಷರ ವಿರುದ್ಧ ಹೋರಾಡಿದ ವೀರರ ಸಾಧನೆ ಶೌರ್ಯ ಯಶಸ್ಸು, ಕರುಣೆ, ತ್ಯಾಗ ಫಲವನ್ನು ಲಾವಣಿಕಾರರು, ಕೊಂಡಾಡಿದ್ದಾರೆ. ಲಾವಣಿಗಳು ಕನ್ನಡ ಜನಪದರ ಜೀವನ ಹಾಗೂ ಬ್ರಿಟಿಷರ ದೌರ್ಜನ್ಯವನ್ನು ಕುರಿತು ಅಭಿವ್ಯಕ್ತಿಸಲಾಗಿದೆ. ಬ್ರಿಟಿಷರು ದೌರ್ಜನ್ಯಕ್ಕೆ ಜನಪದರು ಹಾಗೂ ದೇಶಿಯ ಸಂಸ್ಥಾನಗಳು ತೋರಿದ ಪ್ರತಿಭಟನೆ ಆಗಿವೆ. ಕನ್ನಡ ನಾಡಿನ ವೀರರ, ವಿರುದ್ಧ ನಡೆಸಿದ ಬಂಡಾಯ ದೇಶಿಯ ಸಂಸ್ಥಾನಗಳ ಅನನ್ಯತೆಯನ್ನು ಪ್ರಜಾಸತ್ತಾತ್ಮಕವಾದ ನಿಲುವನ್ನು ಒಳಗೊಂಡಿವೆ. ಅಂದು ನಡೆದ ಘಟನೆಗಳಿಗೆ ಜನರು ಪ್ರತಿಕ್ರಿಯಿಸಿದ ರೀತಿಯನ್ನು ಲಾವಣಿಗಳಲ್ಲಿ ಗುರುತಿಸಬಹುದಾಗಿದೆ.

ಲಾವಣಿಗಳ ಮುಖ್ಯ ವಸ್ತು ಕಥನ, ಗೀತೆ ರೂಪದಲ್ಲಿ ಕಥಯನ್ನು ವ್ಯಕ್ತಪಡಿಸುತ್ತವೆ. ಜನಪದ ಗೀತಲೋಕದಲ್ಲಿ ಭಾವಗೀತೆಗಳು ಹೇಗೆ ಭಾವ ಪ್ರಾಧಾನ್ಯತೆ ಹೊಂದಿರುತ್ತವೆ. ಆದರೆ ಅಲ್ಲಿ ಕಥೆ ಗೌಣವಾಗಿರುತ್ತದೆ. ಇಲ್ಲಿ ಲಯ ಇವುಗಳಿಗೆ ಮನ್ನಣೆ ಬರುತ್ತದೆ. ಆದರೆ ಲಾವಣಿ 'ಇಂಗ್ಲಿಷ್', 'ಬ್ಯಾಲೆಡ್' ಸಂವಾದಿಯಾಗಿ ರೂಪುಗೊಳ್ಳುತ್ತದೆ. ಇದರಲ್ಲಿ ಕಥೆಯೇ ಪ್ರಧಾನವಾಗಿರುತ್ತದೆ. ಜನಪದ ಗದ್ಯ ಕಥನಗಳಲ್ಲಿ ಪುರಾಣ, ಐತಿಹ್ಯ ಹಾಗೂ ಕಟ್ಟುಕಥೆಗಳು ಮುಖ್ಯವಾಗಿ ಕಥೆಯನ್ನು ಹೇಳುತ್ತವೆ. ಕಥನ ಗೀತೆಯ ಮೂಲ ಉದ್ದೇಶವೂ ಕಥೆ ಹೇಳುವುದಾಗಿದ್ದರೂ ಅದು ನಾಡಿನ ಮೂಲಕ ನಿರೂಪಿಸಲ್ಪಡುವ ಕಥೆ ಎಂಬುದು ಮುಖ್ಯವಾಗಿರುತ್ತದೆ"[೨೬] ವಸಾಹತುಶಾಹಿ ಕಾಲಘಟ್ಟದಲ್ಲಿ ಸಾಂಸ್ಕೃತಿಕವಾಗಿ ಗೀತ ಪ್ರಕಾರಗಳನ್ನಷ್ಟೆ ಪರಿಗಣಿಸಿ ದೇಶಿ ವಿದ್ವಾಂಸರು ಅದ್ಯಯನ ಮಾಡಿದರು. ಲಾವಣಿಗಳು ಸಾಂಸ್ಕೃತಿಕವಾಗಿ ಮುಖ್ಯವಾಗುತ್ತವೆ. ಹಾಗಾಗಿ ಗೀತೆಗಳ ಜೊತೆಗೆ ಲಾವಣಿಗಳ ಸಂಗ್ರಹಗಳು ಈ ಕಾಲಘಟ್ಟದಲ್ಲಿ ನಡೆದವು.

ಮುಖ್ಯವಾಗಿ "ಒಂದು ದೇಶದ ಸಂಸ್ಕೃತಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಪ್ರತಿಸಂಸ್ಕೃತಿ ಮತ್ತು ಪರ್ಯಾಯ ಸಂಸ್ಕೃತಿ ನೆಲೆಯ ಅಧ್ಯಯನ, ಸಂಶೋಧನೆಗಳು ಅಗತ್ಯವಾಗಿ ನಡೆಯಬೇಕಾಗಿದೆ. ಸಾಹಿತ್ಯದ ಅಧ್ಯಯನ ಕ್ಷೇತ್ರದಲ್ಲಿ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಲಕ್ಷಿಸಿ ಅಧ್ಯಯನಗಳನ್ನು ನಡೆಸಿರುವುದು ಏಕಮುಖಿ ಕ್ರಮ ಎಂಬುದು ಈ ಕಾಲಘಟ್ಟದ ಅಧ್ಯಯನಗಳ ಹಿನ್ನಲೆಯಲ್ಲಿ ನೋಡಬಹುದು"[೨೭] ೧೯ನೇ ಶತಮಾನದಲ್ಲಿ ಸಾಂಸ್ಕೃತಿಕ ಹಿರಿಮೆಯು ಜನಪದ ಅಧ್ಯಯನದ ಮೂಲಕವೇ ಆಗಿರುವುದನ್ನು ನೋಡಬಹುದು. ಸಾಂಪ್ರದಾಯಿಕ ಭಾರತದ ಮೌಲ್ಯಗಳು ಮತ್ತು ಪಾಶ್ಚಾತ್ಯ ವೈಚಾರಿಕತೆಗಳ ನಡುವಿನ ಅಸಹಜ ಮೈತ್ರಿಯನ್ನು ಮೈಗೊಂಡಿಸಿಕೊಂಡ ಈ

ಇಂಗ್ಲಿಷ್ ವಿದ್ಯಾವಂತ ವರ್ಗ ಒಂದು ಕಡೆಯಲ್ಲಿ ಸಾಂಪ್ರದಾಯಿಕ ಭಾರತದಿಂದ ದೇಶಿ ಜೀವನ ಕ್ರಮದಿಂದ ಬೇರ್ಪಟ್ಟಿತು. ಆದರೆ ಇನ್ನೊಂದೆಡೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯಿಂದ ಈ ವರ್ಗ ಸ್ವೀಕರಿಸಲ್ಪಡುತ್ತಿರಲಿಲ್ಲ. ವ್ಯಕ್ತಿವಾದದ ಬೆಳವಣಿಗೆಯೂ ಇದಕ್ಕೆ ಪೂರಕವಾಯಿತು. ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ನಡುವೆ ೧೯ನೇ ಶತಮಾನದ ಇಂಗ್ಲಿಷ್ ವಿದ್ಯಾವಂತ ವರ್ಗ ಉದ್ಭವಿಸಿತು ಮತ್ತು ತ್ರಿಶಂಕು ಸ್ಥಿತಿಯನ್ನು ಅನುಭವಿಸಿತು. ಈ ವರ್ಗ ಪರಕೀಯವಾಯಿತು"[೨೮] ಪಾಶ್ಚಾತ್ಯ ಚಿಂತನೆಗಳು ಭಾರತೀಯ ಸಂದರ್ಭದಲ್ಲಿ ಸೃಷ್ಟಿಸಿದ ಆತಂಕಗಳು ರಾಜಕೀಯ ಹಾಗೂ ಆರ್ಥಿಕವಾಗಿರಲಿಲ್ಲ. ಅವುಗಳು ಸಾಂಸ್ಕೃತಿಕ ನೆಲೆಯಲ್ಲಿ ಪ್ರಭಾವ ಬೀರಿದ್ದವು. ಅದಕ್ಕಾಗಿ ತಮ್ಮಲ್ಲಿಯೇ ಕೀಳರಿಮೆ ಹುಟ್ಟಲು ಪ್ರಾರಂಭವಾಯಿತು. ಇಂಗ್ಲಿಷ್ ಶಿಕ್ಷಣ ಪಡೆದವರು ಶಿಷ್ಟ ಸಾಹಿತ್ಯ ಕೃಷಿಯ ಜೊತೆಗೆ ಮೌಖಿಕ ಸಾಹಿತ್ಯ ಸಹಜ ಕೃಷಿಯನ್ನು ಅವುಗಳ ಮೂಲ ಪರಂಪರೆಯನ್ನು ಶೋಧಿಸಲು ಪ್ರಾರಂಭಿಸಿದರು. ಇದು ಒಂದು 'ಸಾಂಸ್ಕೃತಿಕ ಹಗೆತನ' ಎನ್ನಬಹುದು. "ಇಂತಹ ಕೀಳರಿಮೆಯ ಕಾರಣದಿಂದ ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳಲಾರದ ವ್ಯಕ್ತಿ ವಿಶಿಷ್ಟ ಪಾಶ್ಚಾತ್ಯ ತಾತ್ವಿಕತೆಯನ್ನು ಒಪ್ಪಿಕೊಂಡಿದ್ದರಿಂದ ದೇಶಿಯ ಸಂಸ್ಕೃತಿಯೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಲಾರದ ಸ್ಥಿತಿಯಿಂದಾಗಿ ಭಾರತೀಯ 'ಧೀಮಂತ ವರ್ಗ' ತನ್ನ 'ಸಾಂಸ್ಕೃತಿಕ ಅನನ್ಯತೆ'ಗಾಗಿ ತದಕಾಡಬೇಕಾಗಿ ಬಂದಿತು.

"ಪರಕೀಯವಾದ ತನ್ನ ಸಾಂಸ್ಕೃತಿಕ ಅನನ್ಯತೆಗಾಗಿ ಹೋರಾಡುತ್ತಿದ್ದ ಚಿಕ್ಕ ಧೀಮಂತ ವರ್ಗವು ೧೯ನೇ ಶತಮಾನದ ಭಾರತದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಕ್ರಿಯಶೀಲವಾಗಿದ್ದುದು ಮಾತ್ರವಲ್ಲದೇ ಪ್ರಸಿದ್ಧ ಸಮಾಜ ಸುಧಾರಕ ಬ್ರಹ್ಮಸಮಾಜ, ಆರ್ಯ ಸಮಾಜ ಥಿಯೋಸೊಫಿಕಲ್ ಸೊಸೈಟಿ ಮೊದಲಾದ ಸಂಸ್ಥೆಗಳು ತಮ್ಮ ಕಾರ್ಯ ನಿರ್ವಹಿಸಿದವು. ಮತ್ತು ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದ ಮೂಲಕ ಪ್ರವೇಶಿಸಿದ ವ್ಯಕ್ತಿ ಕೇಂದ್ರಿತ ಮತ್ತು ತಾತ್ವಿಕ ಪರಂಪರೆಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತಂದಿತು. ಇದರಿಂದ ಒಂದು ಬಗೆಯಲ್ಲಿ ಚೈತನ್ಯ ಕಳೆದುಕೊಂಡ ಪರಂಪರೆ ಮರಳಿ ಪಡೆಯವುದು ಸಾಧ್ಯವಾಯಿತು"[೨೯] ಶಿಷ್ಟ ಸಾಹಿತ್ಯವು ಈ ಬಗೆಯ ಕೆಲಸವನ್ನು ನಿರ್ವಚಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಮೌಖಿಕ ಪರಂಪರೆಯಲ್ಲಿ ಹೊಸ ಚೈತನ್ಯವನ್ನು ಹುಡುಕಲು ಅದೇ ಶಿಕ್ಷಿತರು ದೇಶಿಯ ಸಂಸ್ಕೃತಿಯ ಅಧ್ಯಯನಕ್ಕೆ ಮರಳಿದರು. "ಸಂಪ್ರದಾಯ ಶಿಕ್ಷಣ, ವೈಚಾರಿಕತೆ, ಈ ಮೂರು ವಸ್ತುಗಳು ಹೇಗೆ ಒಂದು ಸಾಂಸ್ಕೃತಿಕ ಒಗ್ಗಟ್ಟು ಮತ್ತು ಸರಳೀಕರಣಗೊಳಿಸವುದು ಎಂಬುದು ಮುಖ್ಯವಾಗುತ್ತದೆ. ಆದರೆ ಇಲ್ಲಿ ಚರ್ಚೆಗೊಳ್ಳುವ ಮುಖ್ಯವಾದ ತಾತ್ವಿಕತೆ ಎಂದರೆ ಅಸ್ತಿತ್ವದ ಪ್ರಶ್ನೆ. ಅದಕ್ಕಾಗಿ ವಿದ್ಯಾವಂತ ವರ್ಗವು ಮರಳಿ ತಮ್ಮ ನಾಡಿನ ಧೀಮಂತ ಸಾಂಸ್ಕೃತಿಕತೆಯನ್ನು ಇಲ್ಲಿಯ ಜನಪದ ಪರಂಪರೆಯಲ್ಲಿರುವುದನ್ನು ಗುರುತಿಸುತ್ತಾರೆ. ಅದನ್ನು ಮತ್ತೆ ಕಟ್ಟುವ ಕೆಲಸವಾಗಬೇಕು ಎಂದು ಪುಷ್ಟೀಕರಿಸುತ್ತಾರೆ. ಇದರ ಮೂಲಕ ದೇಶಿ ಇಂಗ್ಲಿಷ್ ವಿದ್ಯಾವಂತವರ್ಗವು ತಮಗೊಂದು ಸಾಂಸ್ಕೃತಿಕ ವಲಯವನ್ನು ನಿರ್ಮಿಸಿಕೊಳ್ಳಲು ಯತ್ನಿಸಿತು. ಈ ಯತ್ನವು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬೇರೆ-ಬೇರೆ ರೀತಿಯಲ್ಲಿ ವ್ಯಕ್ತವಾಯಿತು"[೩೦] ಈ ಸಂದರ್ಭದಲ್ಲಿ ಜನಪದ

ಸಾಹಿತ್ಯದ ಕಡೆಗೆ ಸುಶಿಕ್ಷಿತ ಭಾರತಿಯರ ಗಮನ ಸೆಳೆಯಿತು ಮತ್ತು ಜನಪದ ಸಾಹಿತ್ಯಗಳ ಸಂಗ್ರಹದ ಕೆಲಸವೂ ಜೊತೆ-ಜೊತೆಗೆ ನಡೆಯಿತು. ಪ್ರಾರಂಭದಲ್ಲಿ ಜನಪದ ಸಂಗ್ರಹದ ಕಡೆಗೆ, ಹೆಚ್ಚು ಆಸಕ್ತಿ ತೋರಿದರು. ಅಲ್ಲಿಯುವರೆಗೆ ವೌಖಿಕ ರೂಪದಲ್ಲಿದ್ದ ಸಾಹಿತ್ಯವು ಲಿಖಿತ ರೂಪದಲ್ಲಿ ಪಡೆದುಕೊಂಡಿರಲಿಲ್ಲ ನಂತರ ಅನೇಕ ಸಂಗ್ರಹದ ಕೆಲಸಗಳನ್ನು ದೇಶಿ ಜನಪದ ಅಧ್ಯಯನಕಾರರು ಮಾಡಿದರು.

ಮಾಸ್ತಿಯವರು "ಕನ್ನಡ ಲಾವಣಿ ಸಾಂಗತ್ಯ' ಜನಪದ ಸಾಹಿತ್ಯದ ವಿಶಿಷ್ಟ ಸಾಂಸ್ಕೃತಿಕ ನೆಲೆಯಲ್ಲಿ ವಿಶಿಷ್ಟ ವ್ಯಕ್ತಿಗಳ ಕಥನಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ"[೩೦] 'ಕರ್ನಾಟಕ ಜನಪದ ಸಾಹಿತ್ಯ' ಎಂಬ ಲೇಖನದಲ್ಲಿ ಇದು ಹರಿಜನರಲ್ಲಿ ಸಿಕ್ಕಿದ ಪದ್ಯ ಯಾವ ತಪೋವನದಲ್ಲಾಗಲಿ, ಅರಮನೆಯಲ್ಲಾಗಲಿ, ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು ಎಂದು ಹೇಳುತ್ತಾರೆ.

ವಸಾಹತುಶಾಹಿ ಕಾಲದಲ್ಲಿ ದೇಶಿಯ ವಿದ್ವಾಂಸರು ಜನಪದ ಸಾಹಿತ್ಯದಲ್ಲಿ ಸಾಂಸ್ಕೃತಿಕ ಹಿರಿಮೆಯನ್ನು ಸಾರುವ ಗೀತೆಗಳನ್ನು ಆಯ್ಕೆ ಮಾಡಿಕೊಂಡು ಸಂಗ್ರಹಿಸಿದರು. ಜಾನಪದ ಗೀತೆಗಳು ವ್ಯಕ್ತಿನಿಷ್ಠ ರಚನೆಗಳಲ್ಲ. ಅವು ಒಂದು ಸಮುದಾಯದ ಅಭಿವ್ಯಕ್ತಿ. ಪ್ರಾರಂಭದ ಕಾಲಘಟ್ಟದ ಜನಪದ ಸಾಹಿತ್ಯ ಸಂಗ್ರಹದ ಪತ್ಯಗಳಿಗೆ ದೇಶಿಯ ವಿದ್ವಾಂಸರು ಬರೆದ ಮುನ್ನಡಿ, ಪ್ರಸ್ತಾವನೆಗಳು ವೈಭವೀಪೂರಿತವಾಗಿದ್ದವು ಇದನ್ನು ವೀರಣ್ಣ ದಂಡೆ ಗುರುತಿಸಿರುವಂತೆ "ಇವರ ಬರಹಗಳಲ್ಲಿ ದೇಸೀ ಸಂಸ್ಕೃತಿಯ ಬಗೆಗೆ ಭಾವುಕವಾದ ಒಲವು ಕಂಡುಬರುತ್ತದೆ. ಈ ಒಲವು ಪ್ರಶಂಸಾಪರವಾಗಿದ್ದು ಉದಾರವಾದೀ ನಿಲುವನ್ನು ಹೊಂದಿದೆ. ಜಾನಪದವು ಇಲ್ಲಿ ದೇಸಿ ಸಂಸ್ಕೃತಿಯ ಅತ್ಯುತ್ತಮ ಮಾದರಿ ಎಂಬಂತೆ ಗ್ರಹಿತವಾಗಿದೆ. ವಾಸ್ತವವಾಗಿ ಈ ಬಗೆಯ ಕೆಲಸಗಳು ಆ ಕಾಲದಲ್ಲಿ ನಡೆಯುತ್ತಿದ್ದ ವಸಾಹತೀಕರಣ ಮೂಲದ ಪಾಶ್ಚಾತ್ಯಿಕರಣಕ್ಕೆ ಒಂದು ಬಗೆಯ ಪ್ರತಿಕ್ರಿಯೆಯೂ ಹೌದು, ಪ್ರತಿಭಟನೆಯು ಹೌದು"[೩೧] ಸಂಸ್ಕೃತಿಯನ್ನು ಒಂದು ದೇಶಿಯ ನೆಲೆಯಲ್ಲಿ ಉದರೀಕರಿಸಿದ್ದು ತಿಳಿಯುತ್ತದೆ. ಇನ್ನೊಂದು ಮುಖ್ಯವಾದ ಅಂಶವೆಂದರೆ, ಯಾವ ವಿದ್ಯಾವಂತ ವರ್ಗ ಪಾಶ್ಚಾತ್ಯ ಚಿಂತನೆಗಳಿಂದ ಪ್ರಭಾವಿತವಾಗಿತ್ತೊ ಅದೇ ವರ್ಗ ದೇಶಿ ಮೂಲ ಪರಂಪರೆಯ ಕಡೆಗೆವಾಲಿದ್ದನ್ನು ಕಾಣಬಹುದು. ಪ್ರಮುಖವಾಗಿ ದೇವುಡು, ಮಾಸ್ತಿ, ಡಿ.ವಿ.ಜಿ, ಅರ್ಚಕ. ಬಿ.ರಂಗಸ್ವಾಮಿ, ಮಧುರ ಚೆನ್ನ, ಲಿಂಗಪ್ಪ, ರೇವಪ್ಪ, ಎಸ್.ವಿ.ರಂಗಣ್ಣ, ಬಿ.ಎನ್.ರಂಗಸ್ವಾಮಿ ಮುಂತಾದವರು. ವಸಾಹತುಶಾಹಿ ಧೋರಣೆಗಳಿಗೆ ಪರ್ಯಾಯವಾಗಿ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಮಾಡಿ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿದರು. ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ ಅನೇಕ ದೇಶಗಳಿಗೆ ಇರುವ ಏಕೈಕ ಸಾಂಸ್ಕೃತಿಕ ಆಸ್ತಿ ಜಾನಪದವೇ ಆಗಿರುವುದರಿಂದ ಜಾನಪದ ಅಧ್ಯಯನಕ್ಕೆ ಒಳ್ಳೆಯ ಭವಿಷ್ಯವಿದೆಯೆಂದು ಊಹಿಸಬಹುದಾಗಿದೆ. ಹೀಗೆ ಜಾನಪದವು ಹೊಸ ಹೊಸ ಚಿಂತನೆಗಳಿಗೆ ವಿದ್ಯಮಾನಗಳೊಂದಿಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿದೆ.

ಉಪಸಂಹಾರ

ಜಾನಪದ ಸಾಹಿತ್ಯವು ಪ್ರಾರಂಭದ ಘಟ್ಟದಿಂದ ಇಲ್ಲಿಯವರೆಗೂ ಹಲವು ಮಜಲುಗಳಲ್ಲಿ ಅಧ್ಯಯನಕ್ಕೊಳಪಟ್ಟಿದೆ. ಗೀತೆಗಳ ಸಂಗ್ರಹದಿಂದ ಶುರುವಾದ ಜಾನಪದ ಅಧ್ಯಯನಗಳು ಸಮುದಾಯಗಳ ಅಧ್ಯಯನದವರೆಗೂ ಬಂದು ನಿಂತಿದೆ. ಜನಪದ ವಿದ್ವಾಂಸರು ವರ್ತಮಾನದಲ್ಲಿ ಜಾನಪದವನ್ನು ಸರಿಯಾದ ನೆಲೆಗಳಲ್ಲಿ ಸಾಮಗ್ರಿಯನ್ನು ಒದಗಿಸಿಕೊಡುವ ವ್ಯಕ್ತಿಗಳು ಅವಿದ್ಯಾವಂತರಾಗಲಿ, ಅವರ ತಿಳುವಳಿಕೆಯನ್ನು ಗ್ರಹಿಸಬೇಕಾಗಿದೆ. ಇವುಗಳಿಗೆ ಹೊರಗಿನಿಂದ ಎರವಲು ತಂದ ಸಿದ್ಧಾಂತಗಳನ್ನು ಅನ್ವಯಿಸಿ ನೋಡುವುದು ಪರಮ ಅಂತವಲ್ಲ. ಜನಪದರು ಲೋಕಜ್ಞಾನಿಗಳು ಮತ್ತು ಲೋಕದೃಷ್ಟಿಯುಳ್ಳವರು. ಅವರು ನಮ್ಮ ಅಧ್ಯಯನದ ಸಹಭಾಗಿಗಳು. ವಸಾಹತುಶಾಹಿ ಶಿಕ್ಷಣ ಕ್ರಮವು ರೂಢಿಗೆ ತಂದ ಅಕ್ಷರದ ಅಹಂಕಾರವು ಗ್ರಾಮೀಣ ಪ್ರತಿಭೆಯನ್ನು ಸಮೃದ್ದ ಜೀವನಾನುಭವವನ್ನು ನಾಶಮಾಡಿದೆ. ವಸಾಹತುಶಾಹಿ ಹುಟ್ಟು ಹಾಕಿದ ಗ್ರಾಮೀಣ ಮೌಢ್ಯ ಪರಿಕಲ್ಪನೆಯನ್ನು ನಾವಿವತ್ತು ಜಾನಪದ ಎನ್ನುವಂಥದ್ದು ಪರಂಪರಾಗತವಾದ ಹರಳುಗಟ್ಟಿದ ವಿವೇಕ ಮತ್ತು ಪ್ರತಿಭೆ, ಸದಾ ಸೃಷ್ಟಿಸುವ ಶಕ್ತಿಯನ್ನುಳ್ಳದ್ದು, ಭೋಗಿಸುವಂಥದ್ದಲ್ಲ. ದೇಶೀಯ ಜ್ಞಾನ ಮರುಚಿಂತನೆ ಮಾಡಬೇಕಾಗಿದೆ. ಪರಂಪರೆಯನ್ನು ಈ ನಾಡಿನಲ್ಲಿ ಉಳಿಸಿ ಬೆಳೆಸಿಕೊಂಡು ಬಂದ ನಮ್ಮ ಜನ ನಿಸರ್ಗವನ್ನು ಪ್ರೀತಿಸುತ್ತ, ಪೂಜಿಸುತ್ತಾ ನಿಸರ್ಗದೊಂದಿಗೆ ತಳುಕು ಹಾಕಿಕೊಂಡು ಪ್ರಕೃತಿ ಮತ್ತು ಜೀವಕೇಂದ್ರಿತ ಚಿಂತನೆ ನಡೆಸಿದವರು. ಈ ಹಿನ್ನೆಲೆಯಲ್ಲಿ ನಾವೀಗ ಜಾನಪದವನ್ನು ಅದರ ಎಲ್ಲ ಅರ್ಥ-ವಿಸ್ತಾರಗಳೊಂದಿಗೆ ಹೊಸದಾಗಿ ಮುರಿದು ಕಟ್ಟುವ ಕೆಲಸ ಮಾಡಬೇಕಾಗಿದೆ. ಜಾಗತೀಕರಣದ ಸವಾಲುಗಳಿಗೆ ಪ್ರತಿಯಾಗಿ ಜಾನಪದವನ್ನು ರಚನಾತ್ಮಕವಾಗಿ ಗಟ್ಟಿಗೊಳಿಸಬೇಕಾದ ಅಗತ್ಯವಿದೆ.

ಕೊನೆ ಟಿಪ್ಪಣಿಗಳು

೧. ಪ್ರಬುದ್ಧ ಕರ್ನಾಟಕ, ಸುವರ್ಣ ಕರ್ನಾಟಕ, ಪು, ೪೯೧

೨. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ಪು, ೨೬

೩. ವೀರಣ್ಣ ದಂಡೆ, ಜಾನಪದ, ಪು, ೩

೪. ವಿಜಯಕುಮಾರ ಎಂ.ಬೋರಟ್ಟಿ, ಫೋಕ್ಲೋರ್ ಇನ್ ಕೊಲೋನಿಯಲ್ ಕರ್ನಾಟಕ, ಪು,೧೫

೫. ತಪಸೀಕುಮಾರ್.ನಂ, ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, ಪು. ೭೦

೬. ದೇ.ಜ.ಗೌ, ಜಾನಪದ ಅಧ್ಯಯನ, ಪು, ೧೨

೭. ಜಯಪ್ರಕಾಶ ಬಂಜಗೆರೆ, ಕನ್ನಡ ರಾಷ್ಟ್ರೀಯತೆ, ಪು, ೭

೮. ರಾಜೇಂದ್ರ ಚೆನ್ನಿ, ದೇಶಿವಾದ, ಪು, ೧೦

೯. ಜಯಪ್ರಕಾಶ ಬಂಜಗೆರೆ, ಪೂರ್ವೋಕ್ತ, ಪು, ೭

೧೦. ಶಿವರಾಮ ಪಡಿಕ್ಕಲ್, ನಾಡು-ನುಡಿಯ ರೂಪಕ, ಪು, ೩೫

೧೧. ವಿಶ್ವನಾಥ ಬದೀಕಾನ, ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ, ಪು, ೧೦

೧೨. ಪರಮಶಿವಯ್ಯ.ಜೀ.ಶಂ, ಜಾನಪದ ಕೆಲವು ಮುಖಗಳು(ಸಂ-೨) ಪು, ೧೪೪

೧೩. ವೀರಣ್ಣ ದಂಡೆ, ಜನಪದ ಶಾಸ್ತ್ರ ಸಿದ್ಧಾಂತಗಳು, ಪು, ೩

೧೪. ಚಂದ್ರಶೇಖರ ಕಂಬಾರ, ಜಾನಪದ ವಿಶ್ವಕೋಶ, ಪು, ೧೧೩

೧೫. ಅದೇ, ಪು, ೧೧೩

೧೬. ಶಿವರಾಮ ಪಡಿಕ್ಕಲ್, ಪೂರ್ವೋಕ್ತ, ಪು, ೫೬

೧೭. ಪರಮಶಿವಯ್ಯ.ಜೀ.ಶಂ, ಪೂರ್ವೋಕ್ತ, ಪು, ೧೪೫

೧೮. ವೀರಣ್ಣ ದಂಡೆ, ಜಾನಪದ, ಪು, ೩

೧೯. ಶಿವನಂಜಯ್ಯ.ಡಿ, ಕನ್ನಡ ಜನಪದ ಸಾಹಿತ್ಯದಲ್ಲಿ ಬಂಡಾಯದ ನೆಲೆಗಳು, ಪು, ೧೨೪

೨೦. ವಿವೇಕ ರೈ ಬಿ.ಎ, ಗಿಳಿಸೂವೆ, ಪು, ೧೫೯

೨೧. ನಾಗರಾಜ ಡಿ.ಆರ್, ಸಾಹಿತ್ಯ ಕಥನ, ಪು, ೫

೨೨. ತಾರಿಣಿ ಶುಭದಾಯಿನಿ, ನಿರ್ವಸಾಹತೀಕರಣ ಎಂದರೇನು?, ಪು, ೫

೨೩. ರಾಮಣ್ಣ ಕ್ಯಾತನಹಳ್ಳಿ, ಜಾನಪದ, ೨೦೦೭, ಪು, ೨೩

೨೪. ತಪಸೀಕುಮಾರ್.ನಂ, ಸಂಸ್ಕೃತಿ ವಿಕಾಸ, ಪು, ೯೫

೨೫. ರಾಮಚಂದ್ರಗೌಡ ಹಿ.ಶಿ, ಜಾನಪದ ಸಾಂಸ್ಕೃತಿಕ ಆಯಾಮಗಳು, ಪು, ೫

೨೬. ಶ್ರೀಕಂಠ ಕೂಡಿಗೆ. ಕನ್ನಡ ಲಾವಣಿಗಳು, ಪು, ೫

೨೭. ಅಂಬಳಿಕೆ ಹಿರಿಯಣ್ಣ, ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಪರಂಪರೆ, ಪು, ೫

೨೮. ವಿಶ್ವನಾಥ ಬದೀಕಾನ, ಪೂರ್ವೋಕ್ತ, ಪು, ೨೦

೨೯. ಅದೇ, ಪು, ೨೦

೩೦. ಶಿವರಾಮ ಪಡಿಕ್ಕಲ್, ಪೂರ್ವೋಕ್ತ, ಪು, ೩೪

೩೧. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ನಿರ್ಮಾಣ ಭಾಗ, ಮಾಸ್ತಿ, ಪು, ೭೧

೩೨. ವೀರಣ್ಣ ದಂಡೆ, ಜಾನಪದ ೧೯೯೨, ಪು, ೨೬

ಅಧ್ಯಾಯ : ನಾಲ್ಕು
ವಸಾಹತೋತ್ತರ ಕಾಲದ ಜಾನಪದ ಅಧ್ಯಯನಗಳ ಆಯಾಮಗಳು

೪.೧. ಶೈಕ್ಷಣಿಕ ನೆಲೆಯ ಅಧ್ಯಯನ
೪.೨. ದೇಶಿಯತೆಯ ದೃಷ್ಟಿಕೋನ
೪.೩. ಸಾಂಸ್ಕೃತಿಕ ನೆಲೆಗಳು
೪.೪. ಜಾನಪದ ಸಾಹಿತ್ಯದ ವಿಮರ್ಶಾತ್ಮಕ ನೆಲೆಗಳು

ಅಧ್ಯಾಯ : ನಾಲ್ಕು
ವಸಾಹತೋತ್ತರ ಕಾಲದ ಜಾನಪದ ಅಧ್ಯಯನಗಳ ಆಯಾಮಗಳು

ಪ್ರಸ್ತಾವನೆ

ಪಾಶ್ಚಾತ್ಯರ ಕಲ್ಪನೆಯಲ್ಲಿ ಜಾನಪದವು ಪಳಿಯುಳಿಕೆಯ ವಸ್ತುವಾಗಿದ್ದರೆ, ಕನ್ನಡದಲ್ಲಿ ಅದೊಂದು ಜೀವಂತವಿರುವ ಸತ್ವಶೀಲ ಪರಂಪರೆಯಾಗಿದೆ. ಅದ್ದರಿಂದ ಪಾಶ್ಚಾತ್ಯ ಸಿದ್ಧಾಂತಗಳು ಇಲ್ಲಿನ ಜಾನಪದ ಅಧ್ಯಯನಕ್ಕೆ ತೊಡಕಾಗಿ ಕಂಡುಬರುತ್ತವೆ. ಸ್ವಾತಂತ್ರ್ಯಪೂರ್ವದಲ್ಲಿ ಜನಪದ ಸಂಗ್ರಹ, ಸಂಪಾದನೆಗೆ ಒತ್ತುಕೊಟ್ಟಿದ್ದ ವಿದ್ವಾಂಸರು, ಸ್ವಾತಂತ್ರ್ಯನಂತರ ಜಾನಪದಕ್ಕೆ ವೈಜ್ಞಾನಿಕವಾದ ಅಧ್ಯಯನ ಕ್ರಮವನ್ನು ರೂಪಿಸಿದರು. ವಸಾಹತೋತ್ತರದಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಅಂಶಗಳು ದೇಶದಲ್ಲಿ ಅನೇಕ ಬಗೆಯಲ್ಲಿ ಸಂಚಲನ ಮೂಡಿಸಿದವು. ಆಧುನಿಕತೆಯ ರೂಪದಲ್ಲಿ ಹೊಸ-ಹೊಸ ಆವಿಷ್ಕಾರಗಳು ನಡೆದು ಜಾಗತಿಕ ಮಟ್ಟದಲ್ಲಿ ದೇಶ-ದೇಶಗಳ ಮಧ್ಯೆ ವಿನಿಮಯ ಪದ್ಧತಿಗಳು ಶುರುವಾದವು. ಇದು ವಸ್ತುವಿನ ರೂಪದಲ್ಲಿ ಮಾತ್ರವಲ್ಲದೇ ಬೌದ್ಧಿಕ ನೆಲೆಯೊಳಗೂ ಆವರಿಸಿಕೊಂಡು ಭಾರತದ ನೆಲದೊಳಗೆ ಪ್ರವೇಶ ಪಡೆದವು.

ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ಜನಪದ ಸಾಹಿತ್ಯ, ಆಚರಣೆ, ಸಂಪ್ರದಾಯ, ಕಲೆ, ಜನಪದ ರಂಗಭೂಮಿ ಇತ್ಯಾದಿ ವಿಶಿಷ್ಟವಾಗಿ ಕಂಡುಬರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆ, ಪಾಡ್ದನ, ಕೋಲ, ಕಂಬಳ, ಕೊಡಗಿನ ಬೊಳರಾವ್, ಹುತ್ತರಿಹಾಡು, ಉತ್ತರ ಕರ್ನಾಟಕದ ಕರಡಿಮಜಲು, ಹಂತಿ ಸಂಪ್ರದಾಯ, ಗೊಂದಲಿಗರ ಮೇಳ, ದಕ್ಷಿಣ ಕರ್ನಾಟಕದ ಕಂಸಾಳೆ ಮೇಳ, ಇವೆಲ್ಲವೂ ಆಯಾ ಪ್ರದೇಶಕ್ಕೆ ಸಂಬಂಧಿಸಿದ ಜಾನಪದ ವಿಶೇಷಗಳಾಗಿವೆ. ಈ ವೈವಿದ್ಯದ ನಡುವೆಯೂ ಗೀತೆ, ಕಥೆ, ಲಾವಣಿಗಳು, ಒಗಟು, ಗಾದೆ ಇತ್ಯಾದಿ ಹಲವು ಪ್ರಕಾರಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸದ ಹಿನ್ನೆಲೆಯನ್ನೊಳಗೊಂಡ ಸಮಾನತೆಯನ್ನು ಕರ್ನಾಟಕ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಇಂತಹ ಜನಪದ ಸಂಸ್ಕೃತಿಯನ್ನು ವಿದೇಶಿ ಹಾಗೂ ದೇಶಿ ವಿದ್ವಾಂಸರು ವಸಾಹತು ಕಾಲಘಟ್ಟದಲ್ಲಿ ಸಂಗ್ರಹಿಸಿ ಜನಪದ ಅಧ್ಯಯನಕ್ಕೆ ಒಂದು ತಾತ್ವಿಕ ಬುನಾದಿಯನ್ನು ಹಾಕಿಕೊಟ್ಟರು. ನಂತರದ ಕಾಲದಲ್ಲಿ ಜಾನಪದವನ್ನು ಸಂಗ್ರಹಿಸುವ, ವಿಮರ್ಶಿಸುವ, ವಿಶ್ಲೇಷಿಸುವ, ಸಂಶೋಧನೆ ಮಾಡುವ

ಆಕರ ವಸ್ತುಗಳಾದವು. ಅಲ್ಲದೇ ಶೈಕ್ಷಣಿಕ ಸಂಸ್ಥೆಯಲ್ಲಿ ಪಠ್ಯವಾಗಿ ಬೋಧನೆಗೆ ವಿಷಯವಾಯಿತು. ಜಾನಪದವನ್ನು ವಿವಿಧ ದೃಷ್ಟಿಕೋನಗಳಿಂದ ಪರಿಭಾವಿಸಲಾಯಿತು. ಜಾನಪದದ ಮೂಲಕ ಸಮುದಾಯಗಳ ಅಧ್ಯಯನದವರೆಗೂ ವಿಸ್ತಾರಗೊಂಡಿತು.

ಕನ್ನಡ ಜಾನಪದವನ್ನು ಕುರಿತು ಅಧ್ಯಯನ ನಡೆಸಿರುವ ಹೊಸ ಪೀಳಿಗೆಯ ವಿದ್ವಾಂಸರು ಸಮಗ್ರ ಜಾನಪದದ ಹಿನ್ನೆಲೆಯಲ್ಲಿ ಈಗ ಸಾಕಷ್ಟು ಪ್ರಕಾರಗಳನ್ನು ಬೆಳಕಿಗೆ ತಂದಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಕೆಲಸ ನಡೆದಿವೆ. ಮತ್ತೆ ಕೆಲವು ಕ್ಷೇತ್ರಗಳ ಸಾಹಿತ್ಯರೂಪಗಳ ಕುರಿತು ಸಂಶೋಧನಾತ್ಮಕ ಲೇಖನಗಳು ಹಾಗೂ ಕೃತಿಗಳು ಪ್ರಕಟಗೊಂಡಿವೆ. ವೈಜ್ಞಾನಿಕವಾಗಿ ಜಾನಪದವನ್ನು ಅಧ್ಯಯನ ಮಾಡಿದ ಉತ್ಸಾಹಿ ಕ್ಷೇತ್ರ ಕಾರ್ಯಕರ್ತರು ತಾವು ಸಂಗ್ರಹಿಸಿ ತಂದ ಜನಪದ ಮಾಹಿತಿಗಳು ಸಾಹಿತ್ಯ ಮತ್ತು ವಿಶೇಷಗಳು ಸಾಕಷ್ಟು ಅಧಿಕೃತವಾಗಿ ಇರುವಂತೆ ನೋಡಿಕೊಂಡಿದ್ದಾರೆ. ಇದರಿಂದ ಆಳವಾದ ಅಧ್ಯಯನವನ್ನು ಈ ಕ್ಷೇತ್ರದಲ್ಲಿ ಕೈಗೊಳ್ಳುವವರಿಗೆ ವಿಪುಲವಾದ ಸಾಮಗ್ರಿ ಈಗ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತದೆ. ಬಹುಶಃ ಭಾರತದ ಯಾವ ರಾಜ್ಯದಲ್ಲೂ ಜಾನಪದವನ್ನು ಕುರಿತ ಇಂಥ ದೊಡ್ಡ ಪ್ರಮಾಣದಲ್ಲಿ ಕಾರ್ಯ ನಡೆದಿಲ್ಲವೆಂದು ಹೇಳಬಹುದು.

ಜಾನಪದವನ್ನು ಅಧ್ಯಯನ ವಿಷಯವಾಗಿ ಪರಿಗಣಿಸಿ ಅದರ ಸಂಗ್ರಹ ಕಾರ್ಯದಲ್ಲಿ ಅದ್ವಿತಿಯ ಸಾಧನೆಯನ್ನು ತೋರಿರುವುದರಲ್ಲಿ ಕರ್ನಾಟಕ ಭಾರತದಲ್ಲಿ ಅಗ್ರ ಸ್ಥಾನದಲ್ಲಿ ನಿಂತುಕೊಂಡಿದೆ. ಇತ್ತೀಚಿನ ಜನಪದ ಕಲೆಗಳು ಅಧ್ಯಯನದ ವಸ್ತುಗಳಾಗಿರುವುದು ಅವುಗಳು ಜನಪದ ಸಾಹಿತ್ಯವನ್ನು ಸಂಕೀರ್ಣಾತ್ಮಕ ನೆಲೆಯಲ್ಲಿ ಆವರಿಸಿಕೊಂಡಿವೆ. ಕಲೆಗಳು ಕರ್ನಾಟಕದ ತುಂಬಾ ವ್ಯಾಪಕವಾಗಿ ಆವರಿಸಿಕೊಂಡಿರುವ ಕ್ಷೇತ್ರವಾಗಿದೆ. ಈ ಜನಪದ ಕಲೆಗಳು ಸಾಮುದಾಯಿಕ ನೆಲೆಯಲ್ಲಿರುವುದರಿಂದ ಇವುಗಳ ಸೈದ್ಧಾಂತಿಕತೆ ಕುರಿತು ಶೈಕ್ಷಣಿಕ ವಲಯದಲ್ಲಿ ಅಧ್ಯಯನ ಮಾಡಲಾಗುತ್ತಿದೆ.

ಸ್ವಾತಂತ್ರ್ಯನಂತರದಲ್ಲಿ ದೇಶಿ ಜನಪದ ವಿದ್ವಾಂಸರು ಸೈದ್ಧಾಂತಿಕತೆ ಹಾಗೂ ವೈಜ್ಞಾನಿಕತೆಯ ಮೂಲಕ ಸಂಗ್ರಹ, ಸಂಪಾದನೆ ಹಾಗೂ ಸಂಶೋಧನೆಯ ಜೊತೆಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ನಡೆದ ಜಾನಪದಶಾಸ್ತ್ರ ಅಭ್ಯಾಸದ ಕಡೆಗೆ ಗಮನ ಹರಿಸಿದರು. ಕನ್ನಡ ಜನಪದ ಸಾಹಿತ್ಯ ಅಭ್ಯಾಸವು ಪಾಶ್ಚಾತ್ಯರ ತಿಳುವಳಿಕೆಯಿಂದಾಗಿ ಸಂಗ್ರಹದ ಜೊತೆಗೆಯೇ ಶಾಸ್ತ್ರೀಯ ಅಭ್ಯಾಸವು ೧೯೬೦ರ ಸುಮಾರಿಗೆ ಪ್ರಾರಂಭವಾಯಿತು. ಹೀಗಾಗಿ ಈ ಕಾಲಘಟ್ಟದಲ್ಲಿ ಸಂಶೋಧನೆಯ ಜೊತೆಗೆ ಸಂಗ್ರಹದ ಕೊರತೆ ಕಾಣಿಸಿಕೊಳ್ಳುವುದನ್ನು ಪ್ರಸ್ತುತ ಸಮಕಾಲಿನ ಸಂದರ್ಭದಲ್ಲಿ ನೋಡಬಹುದು. ಅದು ಇತ್ತೀಚಿನ ಅಧ್ಯಯನಗಳ ಕೊರತೆಯಾಗಿದೆ. ಸಾಹಿತ್ಯ ಪ್ರಕಾರವನ್ನೇ ಪರಿಣಿಗಣಿಸಿದ ಸಂದರ್ಭದಲ್ಲಿ ಸಾಹಿತ್ಯೇತರ ಜನಪದ ಪ್ರಕಾರಗಳನ್ನು ಜನಪದ ವಿದ್ವಾಂಸರು ಪಾಶ್ಚಾತ್ಯ ಶಾಸ್ತ್ರಸಿದ್ಧಾಂತಗಳ ನೆಲೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಲು ಪ್ರಾರಂಭಿಸಿದರು. ಈ ಕಾಲಘಟ್ಟದ ಜಾನಪದ ಅಧ್ಯಯನದ ಸ್ವರೂಪವನ್ನು ಅಂಬಳಿಕೆ ಹಿರಿಯಣ್ಣ ಎರಡು ಮಾದರಿಯಲ್ಲಿ ಗುರುತಿಸುತ್ತಾರೆ. "ಒಂದು. ಮೌಖಿಕ

ಸಾಹಿತ್ಯದ ಸಂಗ್ರಹ ಸಂಪಾದನೆಯನ್ನು ಹೊಂದಿದ್ದು, ಎರಡು, ಅಧ್ಯಯನದ ಸಂಶೋಧನೆಗಳನ್ನು ಕ್ರಮವಾಗಿ, ಗೀತೆಗಳು ಕಥೆಗಳು, ಒಗಟುಗಳು, ಗಾದೆಗಳು, ಶಿಸುಪ್ರಾಸಗಳು ಮತ್ತು ಸಂಕೀರಣಗಳೆಂದು ಗುಂಪಾಗಿಸಿಕೊಂಡು ಪರಿಶೀಲಿಸಲಾಗಿದೆ. ಭಾಗ ಎರಡರಲ್ಲಿ ೧೯೮೧-೧೯೯೨ ರವರೆಗೆ ಹೊರಬಂದ ಅಧ್ಯಯನ ಸಂಶೋಧನೆಗಳ ಸಮೀಕ್ಷೆ ನಡೆಸಿದೆ. ಪಿಎಚ್.ಡಿ ನಿಬಂಧಗಳು, ಗೌರವ ಗ್ರಂಥಗಳು ಮತ್ತು ನಿಯತಕಾಲಿಕೆಗಳು ಪ್ರಕಟಣೆಗೊಂಡಿರುವ ವಿದ್ವತ್‌ಪೂರ್ಣವಾದ ಜಾನಪದ ಸಂಶೋಧನಾತ್ಮಕ ಬರಹಗಳ ಕಡೆಗೂ ಗಮನ ಸೇಳೆದಿದೆ"[೧] ೬೦ರ ದಶಕದ ಜನಪದ ಅಧ್ಯಯನವನ್ನು ಮೊದಲು ಪ್ರಭಾವಿಸಿದ್ದು ಶೈಕ್ಷಣಿಕ ಚಿಂತನೆ. ಇದರೊಂದಿಗೆ ದೇಶಿಯತೆ, ಶಾಸ್ತ್ರೀಯತೆ, ವೈಜ್ಞಾನಿಕತೆ ಜೊತೆ ಜೊತೆಯಲ್ಲಿಯೇ ಮೈದಾಳಿದ್ದವು.

ಜನಪದರ ಬದುಕಿನ ಸಮಸ್ತ ವಿಷಯಗಳನ್ನು ಅಡಕಗೊಳಿಸಿ ವಾಸ್ತವ ಬದುಕಿನ ಹಿನ್ನೆಲೆಯಲ್ಲಿ ಕನ್ನಡ ಸಂಸ್ಕೃತಿಯ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನ ನಡೆದಿದ್ದು ೧೯೭೦ರಿಂದೀಚೆಗೆ ಎಂಬುದು ತಿಳಿಯುತ್ತದೆ. ಆದರೆ ಅಲ್ಪ ಅವಧಿಯಲ್ಲಿಯೇ ಇಲ್ಲಿಯ ಸಾಂಸ್ಕೃತಿಕ ಅನನ್ಯತೆಗಳ ಶೋಧ ಭಾರತದ ಬೇರೆಡೆಗಳಿಗಿಂತ ಗಮನಾರ್ಹವಾದ ರೀತಿಯಲ್ಲಿ ನಡೆದು ಉಳಿದವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ. ಬಿ.ಎಸ್.ಗದ್ದಗೀಮಠ, ಜೀ.ಶಂ.ಪರಮಶಿವಯ್ಯ, ಎನ್.ಆರ್.ನಾಯಕ, ಎಲ್.ಆರ್.ಹೆಗಡೆ, ಶಿವರಾಮ ಕಾರಂತ, ಮುಂತಾದವರು ವ್ಯಾಪಕವಾಗಿ ಕ್ಷೇತ್ರಕಾರ್ಯ ನಡೆಸಿ ಕನ್ನಡ ಸಂಸ್ಕೃತಿಯ ವಿಶಿಷ್ಟತೆಯನ್ನು ಬೆಳಕಿಗೆ ತಂದಿದ್ದಾರೆ.

ಆಧುನಿಕ ವೈಧಾನಿಕತೆಯಲ್ಲಿ ಇಲ್ಲಿಯ ಜನಪದ ಸಂಸ್ಕೃತಿ ವಿಶೇಷಗಳನ್ನು ಅಭ್ಯಸಿಸಿದವರು ಅನೇಕರು. ರಾ.ಗೌ, ಸುಧಾಕರ, ಲಕ್ಕಪ್ಪಗೌಡ, ಶಂಬಾ, ಮಳವಳ್ಳಿ ಸಿದ್ದಪ್ಪ, ಲಠ್ಠೆ, ಹಾಕಾರಿ, ಇಮ್ರಾಪೂರ, ಸಿ.ಪಿ.ಕೆ, ದೇ.ಜ.ಗೌ. ವಿವೇಕರೈ, ತೀ.ನಂ.ಶಂಕರನಾರಾಯಣ, ಕ್ಯಾತನಹಳ್ಳಿ ರಾಮಣ್ಣ, ಪಿ.ಕೆ.ರಾಜಶೇಖರ, ಡಿ.ಲಿಂಗಯ್ಯ, ಎಂ.ಎ.ಜಯಚಂದ್ರ, ಮುಳಿಯ ತಿಮ್ಮಪ್ಪಯ್ಯ ಮುಂತಾದ ವಿದ್ವಾಂಸರು ಬೇರೆ ಬೇರೆ ಅನನ್ಯತೆಗಳ ಹುಡುಕಾಟದಲ್ಲಿ ಕಾರ್ಯ ಮಗ್ನರಾಗಿರುವುದನ್ನು ನೋಡಬಹುದು. ಕೆಲವು ವಿದ್ವಾಂಸರು ಪಾಶ್ಚಾತ್ಯರ ಶಾಸ್ತ್ರಸಿದ್ಧಾಂತಗಳ ನೆಲೆಯಲ್ಲಿ ಜನಪದ ಅಧ್ಯಯನ ಮಾಡಿದ್ದಾರೆ. ತಮ್ಮದೆ ದೇಶಿಸಿದ್ಧಾಂತಗಳನ್ನು ಸೃಷ್ಟಿಸಿಕೊಳ್ಳದೆ, ಪಾಶ್ಚಾತ್ಯ ಸಿದ್ಧಾಂತಗಳಿಗೆ ಗಂಟುಬಿದ್ದು ಅವುಗಳ ನೆಲೆಯಲ್ಲಿ ಇಲ್ಲಿಯ ಜಾನಪದ ಸಾಹಿತ್ಯ ಅಧ್ಯಯನ ಮಾಡಿರುವುದು ನೋಡಬಹುದು. ಇದರಿಂದ ಇಲ್ಲಿಯ ಜೀವಂತ ಚಲನಶೀಲ ಜನಪದ ಸಾಹಿತ್ಯವು ಪಾಶ್ಚಾತ್ಯ ಪಳೆಯುಳಿಕೆ ಜಾನಪದ ಸಾಹಿತ್ಯಕ್ಕಿಂತ ಭಿನ್ನವಾಗಿ ಕಂಡುಬರುತ್ತದೆ. ಇದರ ಹೊರತಾಗಿ ದೇಶಿ ಜಾನಪದ ಶಾಸ್ತ್ರಸಿದ್ಧಾಂತಗಳನ್ನು ಹೊಸದಾಗಿ ವೀರಣ್ಣದಂಡೆ ಅವರು ಪ್ರತಿಪಾದಿಸುತ್ತಾರೆ. ಇವರು ಜನಪದ ಕಾವ್ಯ ಮತ್ತು ಜನಪದ ಕಥೆಗಳಿಗೆ ಸಂಬಂಧಿಸಿದ ಏಳು ದೇಶಿಯ ಶಾಸ್ತ್ರಸಿದ್ಧಾಂತಗಳನ್ನ ಹುಟ್ಟುಹಾಕಿದ್ದಾರೆ"[೨] ದಂಡೆಯವರ ಒಟ್ಟು ಅಧ್ಯಯನ ಮಾದರಿ ಇವರು ರೂಪಿಸಿಕೊಂಡಿರುವಂತಹ ದೇಶಿಸಿದ್ಧಾಂತಗಳ ಮಾದರಿಯಲ್ಲಿವೆ.

ಆದರೆ ಇತರೆ ವಿದ್ವಾಂಸರು ವೀರಣ್ಣ ದಂಡೆಯವರ ದೇಶಿಸಿದ್ಧಾಂತಗಳ ಮಾದರಿಯಲ್ಲಿ ಅಧ್ಯಯನ ಮಾಡದೆ ಪಾಶ್ಚಾತ್ಯ ಸಿದ್ಧಾಂತಗಳ ನೆಲೆಯಲ್ಲಿ ಅಧ್ಯಯನ ಮಾಡಿರುವುದನ್ನು ನೋಡಬಹುದು. ವಸಾಹತೋತ್ತರ ಕಾಲದಲ್ಲಿ ನಡೆದ ಜಾನಪದ ಅಧ್ಯಯನದ ಪ್ರಮುಖ ಆಯಾಮಗಳನ್ನು ಗುರುತಿಸಿಕೊಂಡು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

೪.೧. ಶೈಕ್ಷಣಿಕ ನೆಲೆಯ ಅಧ್ಯಯನ

ಜಾನಪದವು ೫೦-೬೦ರ ದಶಕದವರೆಗೆ ಶೈಕ್ಷಣಿಕ ಕ್ಷೇತ್ರಕ್ಕೆ ಯಾಕೆ ಸೇರಲಿಲ್ಲ ಎಂಬುದನ್ನು ಮುಖ್ಯವಾಗಿ ಚರ್ಚಿಸಬೇಕಾಗಿದೆ. ಶೈಕ್ಷಣಿಕ ರಂಗದಲ್ಲಿ ಜಾನಪದವನ್ನು ಪಠ್ಯಕ್ರಮವಾಗುವುದಕ್ಕೆ ಪಟ್ಟಭದ್ರಹಿತಾಸಕ್ತಿಗಳು ಒಳಗೆಬಿಟ್ಟುಕೊಳ್ಳಲಿಲ್ಲ. ಇವುಗಳು ಹೇಳುವುದು ಜಾನಪದಕ್ಕೆ ಆಧಾರವಿಲ್ಲವೆಂದು. ಅಂದರೆ ಬರಹವೇ ಅಧಿಕೃತವೆಂದು ನಂಬಿಕೊಂಡಿದ್ದು. ಬರಹವೇ ಸಂಸ್ಕೃತಿಯ ಅಧಿಕೃತ ದಾಖಲೆ ಎಂದು ನಂಬಿದ್ದ ಬ್ರಿಟಿಷ್ ಮಾದರಿ ಶಿಕ್ಷಣ ಕ್ರಮವು ಜಾನಪದವನ್ನು ಅವಜ್ಞೆ ಮಾಡಿತು. ಶಿಷ್ಟ ಪರಂಪರೆಯಲ್ಲಿ ಜ್ಞಾನದ ಯಾವ ಧಾರೆಗಳು ಇದ್ದವು, ಅವುಗಳಿಗಿಂತಲೂ ಭಿನ್ನವಾದ, ವ್ಯಾಪಕವಾದ ಮತ್ತು ಸಮಗ್ರವಾದ ಜೀವನ ವಿಧಾನವನ್ನು ಜನಪದ ಒಳಗೊಂಡಿದ್ದು, ಶಿಕ್ಷಣ ಕ್ರಮದಲ್ಲಿ(ಪಠ್ಯ ಕ್ರಮದಲ್ಲಿ) ಜಾನಪದ ಸಾಹಿತ್ಯದ ಯಾವುದಾದರೊಂದು ಪಠ್ಯದ ಭಾಗವನ್ನು ತೆಗೆದುಕೊಟ್ಟು, ಶಿಷ್ಟ ಸಾಹಿತ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಬರಹಕ್ಕೆ ಇರುವುದಷ್ಟೆ ಪ್ರಾಮುಖ್ಯತೆಯು, ಮೌಖಿಕ ಸಾಹಿತ್ಯಕ್ಕೂ ಇತ್ತು. ಆದರೆ ಬ್ರಿಟಿಷರು ಕರ್ನಾಟಕ ಸಂಸ್ಕೃತಿಯ ಪುನರ್ ರಚನೆಯಲ್ಲಿ ಶಿಷ್ಟ ಸಾಹಿತ್ಯ ಕ್ರಮಕ್ಕೆ ಕೊಟ್ಟ ಪ್ರಾಧಾನ್ಯತೆಯನ್ನು ಜಾನಪದಕ್ಕೆ ಕೊಟ್ಟಿಲ್ಲ. ಈ ಕಾರಣ ೨೧ನೇ ಶತಮಾನದವರೆಗೂ ಜಾನಪದ ಮುನ್ನೆಲೆಗೆ ಬಂದಿರಲು ಸಾಧ್ಯವಾಗಲಿಲ್ಲ.

ಜಾನಪದ ಅಧ್ಯಯನ ವಿಶ್ವವಿದ್ಯಾಲಯಗಳ ಹೊರಗಿದ್ದ ಸಾಹಿತಿಗಳಿಂದ ಪ್ರಾರಂಭವಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಜಾನಪದ ಅಧ್ಯಯನಗಳು ವಿಶ್ವವಿದ್ಯಾಲಯದ ಭಾಗವಾಗಿ ತೀವ್ರವಾಗುತ್ತಿದ್ದಾಗ ಕರ್ನಾಟಕದಲ್ಲೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಈ ಕಡೆ ಹೆಚ್ಚು ಗಮನ ಕೊಟ್ಟು ಸಂಗ್ರಹ ಮತ್ತು ವಿಶ್ಲೇಷಣೆಗಳ ಕೆಲಸ ಮಾಡಿದರು. ಎ.ಕೆ.ರಾಮಾನುಜನ್, ಜೀ.ಶಂ.ಪರಮಶಿವಯ್ಯ, ದೇಜಗೌ, ಹಾಮಾನಾ, ಎಂ.ಎಸ್.ಸುಂಕಾಪುರ, ಲಠ್ಠೆ, ವಿವೇಕ ರೈ, ನೇಗಿನಹಾಳ, ಬಿ.ಬಿ.ಹೆಂಡಿ, ಎನ್.ಆರ್.ನಾಯಕ್, ಸಿಪಿಕೆ, ಮುಂತಾದವರು ವಿಶ್ವವಿದ್ಯಾಲಯಗಳಲ್ಲಿ ಜಾನಪದವನ್ನು ಅಧ್ಯಯನ ವಸ್ತುವನ್ನಾಗಿ ಮಾರ್ಪಡಿಸಿದರು. ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಹಾಕಿಕೊಟ್ಟ ವಿಶ್ವವಿದ್ಯಾಲಯಗಳೆಂದರೆ ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಈ ಎರಡು ಸಂಸ್ಥೆಗಳು ಜಾನಪದವನ್ನು ಅಧ್ಯಯನದ ಶಿಸ್ತನ್ನಾಗಿ ರೂಪಿಸಿ ಸಂಶೋಧನಾ ವಿಷಯವಾಗಿ ಜಾರಿಗೆ ತಂದವು. ಮೈಸೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ಸಂಸ್ಥೆ ಜಾನಪದಕ್ಕೆ ಅತಿಹೆಚ್ಚು ಮನ್ನಣೆ ನೀಡಿತು. ಜಾನಪದ ಸಂಬಂಧದ ಹಲವು ಸಕ್ರಿಯ ಚಟುವಟಿಕೆಗಳು ಇಲ್ಲಿಂದಲೇ

ಪ್ರಾರಂಭವಾದವು. ಜಾನಪದವನ್ನು ಅಧ್ಯಯನದ ವಿಷಯವನ್ನಾಗಿ ಕನ್ನಡ ಎಂ.ಎ ತರಗತಿಗಳಿಗೆ ಅಳವಡಿಸಿದ್ದರ ಜೊತೆಗೆ ಜಾನಪದ ಸಂಶೋಧನೆ, ಜಾನಪದ ವಸ್ತು, ಸಂಗ್ರಹಾಲಯದ ಸ್ಥಾಪನೆಯ ಮೂಲಕ ಕನ್ನಡ ಅಧ್ಯಯನ ಸಂಸ್ಥೆ ಉತ್ತಮ ರೀತಿಯಲ್ಲಿ ಜಾನಪದ ಸಂವರ್ಧನ ಕಾರ್ಯವನ್ನು ಕೈಗೊಂಡಿತು. ಜನಪದ ಗೀತೆಗಳನ್ನು ಧ್ವನಿ, ಮುದ್ರಣ ಮಾಡಿ ಸಂರಕ್ಷಿಸಲಾಯಿತು. ಇದರ ಜೊತೆಗೆ ಇತರ ಸಂಗ್ರಹಕರು ಕೈಗೊಳ್ಳುವ ಜಾನಪದ ಸಂಬಂಧವಾದ ಸಂಶೋಧನೆಗಳಿಗೂ ವಿಶೇಷ ಪ್ರೋತ್ಸಾಹವನ್ನು ನೀಡಿತು.

ಈ ಕಾಲಘಟ್ಟದಲ್ಲಿ ಜನಪದವನ್ನು ಪಾಶ್ಚಾತ್ಯ ಸಂಸ್ಕೃತಿಗೆ ಪರ್ಯಾಯ ಎನ್ನುವ ಅರ್ಥದಲ್ಲಿ ನಮ್ಮ ಸಂಸ್ಕೃತಿ ವಿರಚನೆಗೆ ನಾವು ಪಾಶ್ಚಾತ್ಯರನ್ನು ಹುಡುಕಬೇಕಿಲ್ಲ ನಮ್ಮಲ್ಲೇ ಸಮೃದ್ಧವಾದ ಆಕರಗಳಿವೆ ಎಂದು ದೇಶಿಯ ವಿದ್ವಾಂಸರು ಜಾನಪದವನ್ನು ತೋರಿಸಿಕೊಟ್ಟರು. ವಿಶ್ವವಿದ್ಯಾಲಯಗಳಲ್ಲಿ ಜಾನಪದ ಪಠ್ಯವಾಗಿ ಬಳಕೆಗೆ ಬಂತು. ಆಗ ಪಾಶ್ಚಾತ್ಯ ಜನಪದ ಸಿದ್ಧಾಂತಗಳನ್ನು ಕನ್ನಡಕ್ಕೆ ತಂದರು. ಲೆವಿಸ್ಟ್ರಾಸ್, ಪ್ರಾಪ್, ಅಲೆನ್ ಡೆಂಡಸ್ ಮುಂತಾದವರು ಯುರೋಪಿನ ಅನೇಕ ಜನಪದ ಸಿದ್ಧಾಂತಗಳನ್ನು ಚಾಲ್ತಿಗೆ ತಂದರು. ೭೦ರ ದಶಕದಲ್ಲಿ ಪಾಶ್ಚಾತ್ಯ ಸಿದ್ಧಾಂತಗಳು ಕನ್ನಡ ಜಾನಪದ ಕ್ಷೇತ್ರದಲ್ಲಿ ಬಳಕೆಗೆ ಬಂದವು. ಈ ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಮ್ಮಲ್ಲಿದ್ದ ಜಾನಪದ ಮಾಹಿತಿಗಳನ್ನು ಹೊಂದಿಸುವ ಪ್ರಯತ್ನ ಮಾಡಿದರು. ವರ್ಗ, ಆಶಯ, ವಿಭಾಗೀಕರಣ ಮುಂತಾದ ಸಂಶೋಧನ ವಿಧಾನವನ್ನು ಮಾಹಿತಿಗಳಿಗೆ ಬಳಸುವ ಪ್ರಯತ್ನ ಮಾಡಿದರು. ಕನ್ನಡ ಸಾಹಿತ್ಯದಲ್ಲಿ ನವ್ಯ ಹೇಗೆ ಪಾಶ್ಚಾತ್ಯ ಸಾಹಿತ್ಯದಿಂದ ಹೆಚ್ಚು ಪ್ರೇರಣೆ ಪಡೆದು ತನ್ನ ಅಸ್ತಿತ್ವವನ್ನು ಬಹುಬೇಗ ಕಳೆದುಕೊಂಡ ಹಾಗೇ ಪಾಶ್ಚಾತ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಮ್ಮ ಜನಪದ ಸಾಹಿತ್ಯವನ್ನು ನೋಡುವ ಕ್ರಮ ಕಡಿಮೆಯಾಗುತ್ತಾ ಬಂತು. ಮೂಲಭೂತವಾಗಿ ಈ ಜನಪದ ಸಿದ್ಧಾಂತಗಳು ಕನ್ನಡದಲ್ಲಿ ಕೆಲಕಾಲ ಜೀವಂತವಾಗಿ ಚಾಲ್ತಿಗೆ ಬಂದವು. ನಂತರ ಜನಪದ ಅಧ್ಯಯನದ ವಿಧಾನಗಳು ಬೇರೆ ಬೇರೆ ರೂಪ ಪಡೆಯುತ್ತಾ ಹೋದವು.

ಸ್ವಾತಂತ್ರ್ಯಪೂರ್ವದಲ್ಲಿ ಯಾವುದೇ ಪೂರ್ವನಿರ್ಧರಿತ ನೆಲೆಯಲ್ಲಿ ಜಾನಪದವನ್ನು ವಿಭಿನ್ನ ಬಗೆಯಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲ. ಈ ಬಗೆಯ ಗುರುತಿಸುವಿಕೆ ಸಾಧ್ಯವಾದದ್ದು ಸ್ವಾತಂತ್ರ್ಯನಂತರ ಜಾನಪದ ಅಧ್ಯಯನ ಸಂದರ್ಭದಲ್ಲಿ ಎಂದು ಹೇಳಬಹುದು. ೧೯೫೦ರಿಂದೀಚೆಗೆ ಬಂದ ವಿದ್ವಾಂಸರು ಜಾನಪದವನ್ನು ಕೇವಲ ಒಂದು ಹವ್ಯಾಸಿ ವಿಷಯವೆಂದು ಪರಿಗಣಿಸದೆ ಗಂಭೀರವಾದ ಅಧ್ಯಯನದ ವಿಷಯವೆಂದು ಪರಿಗಣಿಸಿದರು. ಈ ನೆಲೆಯಲ್ಲಿ ಅವರ ಸಂಗ್ರಹ ಮತ್ತು ಸಂರಕ್ಷಣೆಯ ಹಂತವನ್ನು ಮೀರಿ ಅದರಲ್ಲಿ ಶೋಧನೆಗೆ ತೊಡಗಿದರು. ಪಾಶ್ಚಾತ್ಯ ದೋರಣೆಗಳಲ್ಲಿ ಜಾನಪದದ ಬಗ್ಗೆ ನಡೆದ ವೈಜ್ಞಾನಿಕ ಅಧ್ಯಯನಗಳನ್ನು ಅಭ್ಯಾಸ ಮಾಡಿದರು. ಇದರ ಪರಿಣಾಮವಾಗಿ ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮೊದಲ ಬಾರಿಗೆ ಜಾನಪದ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ ಪದವಿಗಳನ್ನು ಪಡೆದರು.

ಅಖಂಡ ಕರ್ನಾಟಕದ ಜಾನಪದವನ್ನು ಪ್ರಾದೇಶಿಕವಾಗಿ ವಿಭಾಗಿಸಿಕೊಂಡು ಕೆಲವು ವಿದ್ವಾಂಸರುಗಳು ಜನಪದವನ್ನು ಅಧ್ಯಯನ ಮಾಡಿದ್ದಾರೆ. ಅಂತವರಲ್ಲಿ ಪ್ರಮುಖರನ್ನು ಗುರುತಿಸುವುದಾದರೆ, "ದಕ್ಷಿಣ ಕನ್ನಡ ಭಾಗದಲ್ಲಿ ಶಿವರಾಮ ಕಾರಂತ, ಅಮೃತ ಸೋಮೇಶ್ವರ, ಉತ್ತರ ಕನ್ನಡದ ಕಡೆ ಎಲ್.ಆರ್.ಹೆಗಡೆ, ಬಾಂಬೆ ಕರ್ನಾಟಕದ ಕಡೆ ಬಿ.ಎಸ್.ಗದ್ದಗೀಮಠ, ಆರ್.ಸಿ.ಹಿರೇಮಠ, ಜ್ಯೋತಿ ಹೊಸೂರು, ಬೆಟಗೇರಿ ಕೃಷ್ಣಶರ್ಮ, ಸಿಂಪಿ ಲಿಂಗಣ್ಣ, ಮದ್ರಾಸ್ ಕರ್ನಾಟಕದ ಕಡೆ ಮುದೆನೂರ ಲಿಂಗಣ್ಣ ಹಾಗೆಯೇ ಮೈಸೂರಿನ ಕಡೆ ದೇ.ಜವರೆಗೌಡ ಹಾ.ಮಾ.ನಾಯಕ ಸಿ.ಪಿ.ಕೆ ಹಾಗೂ ಜೀ.ಶಂ.ಪ ಮುಂತಾದ ಜಾನಪದ ವಿದ್ವಾಂಸರು ಹಾಗೂ ಆಸಕ್ತಿದಾಯಕ ವಿದ್ವಾಂಸರು ಜನಪದ ಸಾಹಿತ್ಯವನ್ನು ಶಾಸ್ತ್ರೀಯ ನೆಲೆಯಲ್ಲೂ ಅಧ್ಯಯನ ಮಾಡಲು ಪ್ರಾರಂಭಿಸಿದರು"[೩] ಆದರೆ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಬಿ.ಬಿ.ಹೆಂಡಿ ಅವರು ಜಾನಪದದಲ್ಲಿ ಅಧ್ಯಯನ ಪ್ರವೇಶ ಪಡೆದು ಈ ಭಾಗದಲ್ಲಿ ಒಂದು ಅಧ್ಯಯನ ಮಾದರಿಯನ್ನು ಸೃಷ್ಟಿಸಿದರು. ಇವರು ೧೯೭೨ ರಲ್ಲಿ ಜನಪದ ಸಾಹಿತ್ಯ ಅಧ್ಯಯನಕ್ಕೆ ಹೊಸ ಶೈಕ್ಷಣಿಕ ಶಿಸ್ತನ್ನು ರೂಪಿಸಿದರು. ಇವರ ಜೊತೆಗೆ ಎಂ.ಎಸ್.ಲಠ್ಠೆ, ಎಂ.ಜಿ.ಬಿರಾದಾರ ಮುಂತಾದವರು ಗುರುತಿಸಬಹುದು. ಈ ಭಾಗದಲ್ಲಿ ಜಾನಪದ ಶಾಸ್ತ್ರದ ಅಧ್ಯಯನ ಬೆಳೆಯಲು ಕಾರಣಕರ್ತರಾದರು. ಈ ಸಂದರ್ಭದಲ್ಲಿ "ದಕ್ಷಿಣ ಕನ್ನಡದಲ್ಲಿ ಬಿ.ಎ.ವಿವೇಕ ರೈ, ಧಾರವಾಡದ ಭಾಗದಲ್ಲಿ ಸೋಮಶೇಖರ ಇಮ್ರಾಪುರ, ದೇವೇಂದ್ರಕುಮಾರ ಹಕಾರಿ, ಹಾಗೂ ಮೈಸೂರಿನಲ್ಲಿ ಅನೇಕ ಹೊಸಬರ ತಂಡವೇ ಪ್ರವೇಶ ಮಾಡಿ ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಕಾರಣಕರ್ತರಾದರು. ನಂತರ ೧೯೮೦ರ ದಶಕದಲ್ಲಿ ಇಡೀ ಕರ್ನಾಟಕದ ತುಂಬಾ ಅನೇಕ ವಿದ್ವಾಂಸರು ಜನಪದ ಅಧ್ಯಯನಕ್ಕೆ ಪ್ರವೇಶ ಪಡೆದು ಕನ್ನಡ ಜಾನಪದಶಾಸ್ತ್ರದ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿದರು"[೪] ಮುಂದೆ ಈ ಅಧ್ಯಯನಕಾರರು ವೈಜ್ಞಾನಿಕ ಹಾಗೂ ಸೈದ್ಧಾಂತಿಕ ಮೂಲಕ ತಾತ್ವಿಕತೆಯನ್ನು ರೂಪಿಸಿದರು.

ಹಿ.ಶಿ.ರಾಮಚಂದ್ರಗೌಡರು ವಸಾಹತೋತ್ತರ ಜಾನಪದ ವಿದ್ವಾಂಸರ ತಾತ್ವಿಕ ಚಿಂತನೆಗಳೇನು ಹಾಗೂ ಅವರ ಅಧ್ಯಯನದ ಮಾದರಿಗಳೇನು ಎಂಬುದನ್ನು ಈ ರೀತಿ ಗುರುತಿಸುತ್ತಾರೆ. "ಮಾತೃಕಾ ಅನ್ವೇಷಣಾ ಪಂಥ, ವೈಧಾನಿಕ ಪಂಥ, ವೈಚಾರಿಕ ಪಂಥ ಈ ಮೂರು ನೆಲಗಳ ಹಿನ್ನಲೆಯ ಸಮಕಾಲಿನ ಜಾನಪದ ವಿದ್ವಾಂಸರನ್ನು ನೋಡಬೇಕಾಗಿದೆ"[೫] ಈ ಕಾಲಘಟ್ಟದ ವಿದ್ವಾಂಸರು ಒಂದೇ ಪ್ರಕಾರಕ್ಕೆ ಜೋತು ಬೀಳದೆ ಶೈಕ್ಷಣಿಕ ನೆಲೆಯಲ್ಲಿ ವೈಚಾರಿಕವಾಗಿ ಜಾನಪದ ಬೇರೆ ಬೇರೆ ಪ್ರಕಾರಗಳಿಗೆ ಸಂಬಂಧ ಪಟ್ಟಂತೆ ಅನೇಕ ಕೆಲಸಗಳನ್ನು ಮಾಡಿದರು. ಇದರಲ್ಲಿ ಮುಖ್ಯವಾಗಿ ಹಾಡು, ಲಾವಣಿ ಹಾಗೂ ಕಾವ್ಯಗಳಿಗೆ ಸಂಬಂಧಿಸಿದವು. ಇವೆಲ್ಲದರ ವ್ಯಾಪ್ತಿ ದೊಡ್ಡದೆನ್ನಬಹುದು. ಇಂತಹ ಕಾವ್ಯ ಸಂಪ್ರದಾಯಗಳನ್ನು ಜೀ.ಶಂ.ಪ ಅವರು ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಿರುವುದನ್ನು ನೋಡಬಹುದು. ಹೊಸ ಕಾವ್ಯ ಸಂಪ್ರದಾಯಗಳನ್ನು ಗುರುತಿಸಿ ಹಾಗೂ ವೃತ್ತಿಗಾಯಕರನ್ನು ಗುರುತಿಸಿ ಸಮಗ್ರವಾಗಿ ಸಂಪಾದನೆ ಹಾಗೂ ಅಧ್ಯಯನ ಮಾಡಿದ್ದಾರೆ. ಇವರು ಹೆಚ್ಚಾಗಿ ಕ್ಷೇತ್ರಕಾರ್ಯವನ್ನು

ಮಾಡಿ ಅನೇಕ ಜನಪದ ಗೀತೆ, ಲಾವಣಿ, ಕಥೆಗಳ, ಜೊತೆಗೆ ದಕ್ಷಿಣ ಕರ್ನಾಟಕ ಪ್ರದೇಶದ ವೃತ್ತಿಗಾಯಕ ಪರಂಪರೆಗಳನ್ನು ಗುರುತಿಸಿ ಅವುಗಳನ್ನ ಬೆಳಕಿಗೆ ತಂದಿದ್ದಾರೆ. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ಇವರ ಪಿಎಚ್.ಡಿ ಮಹಾಪ್ರಬಂಧದಲ್ಲಿ ಹಳೆಯ ಮೈಸೂರು ಭಾಗದ ಎಲ್ಲ ಜನಪದ ಕಾವ್ಯ ಸಂಪ್ರದಾಯಗಳನ್ನು ಪರಿಚಯಿಸಿದ್ದಾರೆ. ಇನ್ನು ಅನೇಕ ಕಾವ್ಯಗಳನ್ನು ಪರಿಚಯ ಮಾಡಿದ್ದಾರೆ. ಜಾನಪದ ಕಾವ್ಯ, ಕಥೆಗಳು, ಜನಪದ ಸಾಹಿತ್ಯ ಸಮೀಕ್ಷೆ ಇದು ಜನಪದ ಗೀತೆ, ಲಾವಣಿ ಹಾಗೂ ಕಾವ್ಯಗಳಿಗೆ ಸಂಬಂಧಿಸಿದ ಜಾನಪದ ಕೃತಿಗಳು, ವೃತ್ತಿಗಾಯಕ ಹಲವಾರು ಕಾವ್ಯಗಳನ್ನು ಬೇರೆ ಬೇರೆ ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ. ಜಾನಪದ ವೀರ ಕಾವ್ಯಗಳು, ದೊಂಬಿದಾಸರ ಲಾವಣಿಗಳು, ಹೇಳವರ ಕಾವ್ಯಗಳು ಮುಂತಾದ ಕೆಲವು ಗಮನಾರ್ಹ ಕೃತಿಗಳನ್ನು ಹೆಸರಿಸಬಹುದಾಗಿದೆ.

ಜಾಗತಿಕವಾಗಿ ಜನಪದ ಕಥೆ, ಕಾವ್ಯಗಳು, ಪುರಾಣಗಳು ಶಾಸ್ತ್ರೀಯವಾಗಿ ಹೆಚ್ಚು ಅಧ್ಯಯನಕ್ಕೆ ಒಳಪಟ್ಟವು. ಶೈಕ್ಷಣಿಕ ನೆಲೆಯ ಪ್ರಜ್ಞೆಯಿಂದಾಗಿ ಅಂತಾರಾಷ್ಟ್ರೀಯ ಸ್ವಭಾವದ ಕಥಾ ಮಾದರಿಗಳಿಗೆ ಮಾನವನ ಸಮಾನ ರೀತಿಯ ಆಲೋಚನಾ ಕ್ರಮ ಕಾರಣವಾದರೆ, ಪ್ರಾದೇಶಿಕ ಮಾದರಿಗಳಿಗೆ ಸ್ಥಳಿಯ ಸಾಂಸ್ಕೃತಿಕ ವಿಶೇಷಗಳು ಕಾರಣ ಎಂದು ಸಾಧಿಸುವುದರ ಮೂಲಕ ದೇಶಿಯ ಸಂಗತಿಗಳಿಗೆ ಪ್ರಾಶಸ್ತ್ಯ ನೀಡುವ ಧೋರಣೆಗೆ ಚಾಲನೆ ಸಿಕ್ಕಿತು. ಈ ಪರಿಕಲ್ಪನೆಯಲ್ಲಿ ಕನ್ನಡ ಜಾನಪದ ವಿದ್ವಾಂಸರು ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಣೆ, ಹಾಗೂ ವಿಶ್ಲೇಷಣೆಗಳನ್ನು ನಡೆಸಿದರು. ಆ ಮೂಲಕ ಕನ್ನಡ ಜಾನಪದ ಕಥಾಲೋಕದ ವಿಭಿನ್ನ ಆಯಾಮಗಳ ವಿವರಣೆಗೆ ತೊಡಗಿದರು. ಜಾಗತಿಕ ಮಟ್ಟದ ತತ್ತ್ವ ಸಿದ್ಧಾಂತಗಳೊಂದಿಗೆ ಕನ್ನಡ ಜಾನಪದ ಕಥೆಗಳ ಸಾಮ್ಯ, ವ್ಯತ್ಯಾಸ ಹಾಗೂ ಅನನ್ಯತೆಗಳನ್ನು ತೆರೆದು ತೋರಿಸಿದರು. ಈ ನೆಲೆಯಿಂದಲೂ ಕನ್ನಡ ಜಾನಪದ ಅಧ್ಯಯನ ಹೊಸ ಆಯಾಮವನ್ನು ಪಡೆದುಕೊಂಡಿತು. ಈ ಮಾದರಿಯ ಅಧ್ಯಯನಗಳಲ್ಲಿ ಚಾರಿತ್ರಿಕ ಭೌಗೋಳಿಕ ವಿಧಾನಕ್ಕೆ ಹೆಚ್ಚು ಒತ್ತು ನೀಡಿದ ಸಂಗತಿಗಳಿವೆ. ರಾಮೇಗೌಡ ಹಾಗೂ ಜೀ.ಶಂ.ಪ ಕೆಲಸಗಳು ಈ ಬಗೆಯವು. ಇವು ಆರಂಭಿಕ ಕೆಲಸಗಳಾದುದರಿಂದ ಕಥೆಗಳ ಸಂಗ್ರಹಣೆಯ ಸಂದರ್ಭದಲ್ಲಿ ಈ ವಿಧಾನವನ್ನು ಅನುಸರಿಸಿ ಒಂದು ಮಾದರಿಯನ್ನಷ್ಟೇ ರೂಪಿಸಿದರು. ಈ ಕೆಲಸಗಳ ಪ್ರೇರಣೆಯಿಂದ ತರುವಾಯ ಗಂಬಿರ ಅಧ್ಯಯನಗಳು ಹೊರಬಂದವು. ಇವುಗಳಲ್ಲಿ ಕೆ.ಆರ್.ಸಂಧ್ಯಾರೆಡ್ಡಿ, ಹಿ.ಶಿ.ರಾಮಚಂದ್ರೇಗೌಡ, ವೀರಣ್ಣ ದಂಡೆ, ಅವರ ಸಂಶೋಧನೆಗಳು ಉಲ್ಲೇಖಾರ್ಹವಾಗಿವೆ. ಈ ಬಗೆಯ ಅಧ್ಯಯನಗಳು ಕನ್ನಡ ಜನಪದ ಕಥೆಗಳ ಪ್ರಾದೇಶಿಕ ಉಪಮಾದರಿಗಳನ್ನು ಆರ್ನೆಆಂಟಿ ಹಾಗೂ ಸ್ಮಿಥ್ ಥಾಂಸನ್ನರ ಆಶಯ ಹಾಗೂ ಮಾದರಿ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ವಿಶಿಷ್ಟ ಪ್ರಯತ್ನಗಳಾಗಿವೆ.

೪.೨. ದೇಶಿಯತೆಯ ದೃಷ್ಟಿಕೋನ

ಜಾನಪದದಲ್ಲಿ ದೇಸಿ ಚಿಂತನೆ ಮುನ್ನೆಲೆಗೆ ಬರುವುದಕ್ಕೆ ಜಾಗತೀಕರಣ ಪ್ರಕ್ರಿಯೆಗಳು ಹೆಚ್ಚು ಪ್ರೇರಣೆ ನೀಡಿವೆ. ಜಾನಪದ ಚಿಂತನೆಯಲ್ಲಿ ಅಧುನಿಕತೆ, ವಸಾಹತುಶಾಹಿ, ಜಾಗತೀಕರಣ ಈ

ಮೂರನ್ನು ಒಂದೇ ಎಂದು ನಂಬುವ ಚಿಂತನೆಯ ಮಾದರಿಗಳಿವೆ. ಆದರೆ ಜಾನಪದಕ್ಕೆ ಆಧುನಿಕತೆಯಿಂದ ಅಷ್ಟು ನಷ್ಟ ಉಂಟಾಗಿಲ್ಲ. ಇಲ್ಲಿ ಬಂದು ಸೇರುವುದು ಬೇರೆ. ಬಂದು ಹೀರಿಕೊಳ್ಳುವುದು ಬೇರೆ. ಆಧುನಿಕತೆ ಸೇರಿ ಜೀರ್ಣವಾದಂತೆ ಜಾಗತೀಕರಣ ಏರಿ ದಮನಕಾರಿಯಾದದ್ದು. ಕನ್ನಡಕ್ಕೆ ಸಂಸ್ಕೃತ ಇಂಗ್ಲೀಷ್‌ಗಳಿಂದ ಬಂದು ಸೇರಿರುವುದು ಇದೆ. ಏರಿಕೊಂಡದ್ದು ಇದೆ. ಸೇರಿಕೊಂಡದ್ದು ಚಲನಶೀಲತೆಯ ಸಾಂಕೇತಿಕವಾಗಿ ಸಂಗಾತಿಯಾಗುತ್ತದೆ. ಏರಿಕೊಂಡದ್ದು ಸ್ಥಾವರದ ಸಂಕೇತವಾದದ್ದು ಧಣಿವಾಗಪ್ರಯತ್ನ ಮಾಡುತ್ತದೆ. ಇಂದು ಯಾವ ರಾಷ್ಟ್ರಗಳು ತಮ್ಮಷ್ಟಕ್ಕೆ ತಾವೇ ದೇಶಿಯಲ್ಲ. ಹಾಗೆ ಕನ್ನಡದಲ್ಲಿ ಕನ್ನಡದ್ದೆ ಆದ ದೇಶಿಯತೆ ಉಳಿದಿಲ್ಲ. ಕರ್ನಾಟಕ ಸಂಸ್ಕೃತಿ ಕೊಡುಕೊಳೆಗಳಿಂದ ಸಂಕರಶೀಲ ಸಂಸ್ಕೃತಿಯಾಗಿರುವುದರ ವಾಸ್ತವ. ಯಾವ ಸಂಸ್ಕೃತಿಯು ಇಂದು ದ್ವೀಪವಾಗಿ ಉಳಿದಿಲ್ಲ. ಚಲನಶೀಲ ಗತಿಯಲ್ಲಿ ನಿರಂತರ ಒಡನಾಟಗಳಿಂದ ರೂಪಿತವಾಗಿದೆ. ವಿದೇಶಿ ಚಿಂತನೆಗಳೆನಿಸಿಕೊಂಡ ಮಾರ್ಕ್ಸ್‌ವಾದ, ಗೂಗಿ ಚಿಂತನೆ, ಕನ್ನಡ ಸಾಹಿತ್ಯ ಚಿಂತನೆಯನ್ನು ಇನ್ನಷ್ಟು ವಿಸ್ತಾರಗೊಳಿಸಿ ಅರ್ಥಪೂರ್ಣಗೊಳಿಸಿವೆ. ದೇಶಿವಾದದ ಅಪಾಯಗಳಿರುವುದು ನಮ್ಮ ಹಿಂದಿನದಲ್ಲಿ ಶ್ರೇಷ್ಠವೆಂದು ನಂಬುವುದರಿಂದ. ನಮ್ಮದಷ್ಟೆ ಶ್ರೇಷ್ಠವೆಂದು ಹೊರಡುವುದು ಇನ್ನೊಂದರ್ಥದಲ್ಲಿ ಮೂಲಭೂತವಾದವು ಆಗುವುದು. ಉದಾಹರಣೆಗೆ ಹಿಂದುತ್ವ ಮತ್ತು ನಾಜಿಸಂ ದೇಶಿವಾದಗಳ ಅಲೆಯಲ್ಲಿ ಆಧುನಿಕತೆಯನ್ನು ವಿರೋಧಿಸುವ ಸಂಪ್ರದಾಯಗಳು ಇವೆ. ಆದ್ದರಿಂದ ಕನ್ನಡದ ಚಿಂತನೆ ಎಂದರೆ ದೇಶಿವಾದದ ಹುಡುಕಾಟವಲ್ಲ. ಆಧುನಿಕತೆಯಿಂದ ಕನ್ನಡ ಚಿಂತನೆ ವಿಸ್ತಾರವಾಗಿದೆ. ಇದು ಸೇರುವ ಜೀರ್ಣವಾಗುವ ಕ್ರಿಯೆ. ಆಧುನಿಕತೆ ಬೆನ್ನಲ್ಲೆ ಬಂದ ಜಾಗತೀಕರಣ ದಮನಕಾರಿ ಪ್ರವೃತ್ತಿಯಾದ್ದರಿಂದ ದೇಸಿಯತೆ ರಚಿಸಿಕೊಳ್ಳುವಲ್ಲಿ ಆಧುನಿಕತೆ ಮತ್ತು ಜಾಗತೀಕರಣಗಳ ನಡುವೆ ಇರುವ ವ್ಯತ್ಯಾಸದ ಅರಿವು ಅಗತ್ಯವಾಗಿದೆ. ಆಧುನಿಕ ಚಿಂತನೆ ಪರಿಣಾಮಗಳಿಂದ ಜನಪರ ಚಿಂತನೆಗಳು ಬಿಟ್ಟಿವೆ. ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತ ಮೌಲ್ಯಗಳು ಆಧುನಿಕ ಪರಿಣಾಮಗಳಿಂದಲೇ ಬಂದವು. ಕನ್ನಡ ಜಾನಪದ ಅಧ್ಯಯನ ಈಗ ಕೆಲವು ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಜಾಗತೀಕರಣದ ಕಾರಣದಿಂದಾಗಿ ಇಂದು ತೃತೀಯ ಜಗತ್ತಿನ ದೇಶಗಳು ಆರ್ಥಿಕ ಆಘಾತಕ್ಕೆ ಮಾತ್ರವಲ್ಲದೆ ಸಾಂಸ್ಕೃತಿಕ ಆಘಾತಕ್ಕೂ ಒಳಗಾಗಿವೆ. ಈ ಆಘಾತದಿಂದ ತಪ್ಪಿಸಿಕೊಳ್ಳಲು ಜನಪದ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು ಹಾಗೂ ಆ ಸಂಸ್ಕೃತಿಗಳನ್ನು ದೇಶಿಯ ದೃಷ್ಟಿಯಿಂದ ಅಭ್ಯಾಸ ಮಾಡುವುದು ಮುಖ್ಯವೆನಿಸಿದೆ.

ಪಾಶ್ಚಾತ್ಯ ಸಿದ್ಧಾಂತಗಳಿಂದ ನಮ್ಮ ಜಾನಪದವನ್ನು ಸಮರ್ಪಕವಾಗಿ ಅರ್ಥೈಸಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿ ವಿಶಿಷ್ಟವಾದುದು. ಆದ್ದರಿಂದ ನಮ್ಮ ಸಂಸ್ಕೃತಿಯನ್ನು ಅರ್ಥೈಸಲು ನಮ್ಮದೇ ವಿಧಾನಗಳು ಮತ್ತು ಸಿದ್ಧಾಂತಗಳನ್ನು ಮರೂಪಿಸಿಕೊಂಡು ದೇಶಿಯತೆಯನ್ನು ಪ್ರತಿಪಾದಿಸಬೇಕಾಗಿದೆ. ನಮ್ಮ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಶ್ರೇಣಿಕೃತವಾದ, ದಮನಕಾರಿಯಾದ ಜಾತಿಪದ್ಧತಿ ಪ್ರಮುಖ ಪಾತ್ರವಹಿಸಿರುವುದರಿಂದ ಇದರ ದುಷ್ಪರಿಣಾಮಗಳು ಜಾನಪದದಲ್ಲಿ ಹೇಗೆ ಕೆಲಸ ಮಾಡಿದೆ ಎಂಬುದನ್ನು

ಅಭ್ಯಾಸ ಮಾಡಬೇಕಿದೆ. ಏಕೆಂದರೆ ನಮ್ಮ ಹಿಂದಿನ ಸಾಂಪ್ರದಾಯಿಕ ಶ್ರೇಣಿಕೃತ ವ್ಯವಸ್ಥೆಯಲ್ಲಿ ಜಾತಿಯತೆಯಿದ್ದು, ಫೂಡಲ್ ವ್ಯವಸ್ಥೆಯಿದ್ದು ಮನುಷ್ಯರಲ್ಲೆ ಮೇಲುಕೀಳೆಂಬ ತಾರತಮ್ಯದ ಪರಮ ಸಿದ್ಧಾಂತವನ್ನು ಒಪ್ಪಿಕೊಂಡಿದ್ದು ಇದೆ. ಆದ್ದರಿಂದ ಆಧುನಿಕತೆ ಈ ಸಮಸ್ಯೆಗಳ ಬಿಡುಗಡೆಯ ದಾರಿಯಾಗಿದೆ. ಅಂಬೇಡ್ಕರ್ ಮತ್ತು ಲೋಹಿಯಾವಾದಗಳನ್ನು ಪ್ರತಿಪಾದಿಸುವ ದಲಿತ–ಬಂಡಾಯ ಲೇಖಕರು ದೇಸಿವಾದದ ಪ್ರತಿಪಾದನೆ ಮಾಡುವ ಅರವಿಂದ ಮಾಲಗತ್ತಿಯವರು ಈ ಬಗ್ಗೆ ಒಂದು ಮಹತ್ವಪೂರ್ಣ ವಿಚಾರ ಸಂಕಿರಣವನ್ನು ಏರ್ಪಡಿಸಿ ಅದರಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ನಮ್ಮ ಜಾನಪದವನ್ನು ಕುರಿತು ನಾವು ಸ್ವತಂತ್ರವಾಗಿ ವಿಚಾರ ಮಾಡಬೇಕು ಎಂದು ಹೇಳುತ್ತಾರೆ. ಆದರೆ ಪಾಶ್ಚಾತ್ಯ ಸಿದ್ಧಾಂತಗಳಲ್ಲಿ ಅನಗತ್ಯವಾದದನ್ನು ಕೈಬಿಟ್ಟು ಉಪಯುಕ್ತವಾದುದನ್ನು ಉಳಿಸಿಕೊಳ್ಳುವುದರಲ್ಲಿ ತಪ್ಪೇನೂ ಕಾಣುವುದಿಲ್ಲ ಎಂದು ಕಲವು ವಿದ್ವಾಂಸರು ಹೇಳುತ್ತಾರೆ. ಡಾ.ಚಂದ್ರಶೇಖರ ಕಂಬಾರ, ಕೆ.ವಿ.ಸುಬ್ಬಣ್ಣ, ಪ್ರೊ.ಬರಗೂರು ರಾಮಚಂದ್ರಪ್ಪ, ಡಾ.ಹಿ.ಶಿ.ರಾಮಚಂದ್ರೇಗೌಡ, ಡಾ.ಕಾಳೇಗೌಡ ನಾಗವಾರ, ಡಾ.ವೀರಣ್ಣ ದಂಡೆ, ಡಾ.ಸಿದ್ದಲಿಂಗಯ್ಯ, ಮೊಗಳ್ಳಿ ಗಣೇಶ್ ಮೊದಲಾದ ವಿದ್ವಾಂಸರು ದೇಸೀವಾದದ ಪ್ರತಿಪಾದನೆ ಮಾಡಿದ್ದಾರೆ. ಡಾ.ಪುರುಷೋತ್ತಮ ಬಿಳಿಮಲೆ ಅವರು ಈ ಬಗ್ಗೆ ವಿಮರ್ಶಾತ್ಮಕವಾಗಿ ವಿಚಾರ ಮಾಡಿದ್ದಾರೆ. ಡಾ.ರಹಮತ್ ತರೀಕೆರೆ ಅವರೂ ಈ ಬಗ್ಗೆ ವಿಮರ್ಶಾತ್ಮಕವಾಗಿ ವಿಚಾರಮಾಡಿ ಪ್ರತಿಸಂಸ್ಕೃತಿಯನ್ನು ಪ್ರತಿಪಾದಿಸಿದ್ದಾರೆ. ಈ ಎಲ್ಲ ವಿದ್ವಾಂಸರೂ ಕನ್ನಡ ಜಾನಪದ ಅಧ್ಯಯನಕ್ಕೆ ಒಳ್ಳೆಯ ಒಳನೋಟಗಳನ್ನು ನೀಡುವುದರ ಮೂಲಕ ಹೊಸ ಆಯಾಮವನ್ನು ತಂದುಕೊಟ್ಟಿದ್ದಾರೆ.

ಸ್ವಾತಂತ್ರ್ಯನಂತರ ತಳಸಮುದಾಯಗಳ ಹಾಗೂ ಗ್ರಾಮೀಣ ಸಂಸ್ಕೃತಿಯನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದ್ದಂತಹ ಮೌಖಿಕ ಸಾಹಿತ್ಯವನ್ನು ಒಂದು ಅಕಾಡೆಮಿಕ್ ಶಿಸ್ತಿನೊಳಗೆ ಸಂಶೋಧನೆ ಮಾಡಿ ದೇಶಿಪ್ರಜ್ಞೆಯನ್ನು ರೂಪಿಸಲಾಯಿತು. ತಳ ಸಮುದಾಯಗಳು ಭಿನ್ನ ಸಂಸ್ಕೃತಿ, ಜನಪದ ಆಚರಣೆ, ಸಂಪ್ರದಾಯ, ಕಲೆ, ಸಾಹಿತ್ಯ ಇವುಗಳನ್ನು ಒಳಗೊಂಡಿರುತ್ತವೆ. ಅರವತ್ತರ ದಶಕಗಳಲ್ಲಿ ದೇಶಿ ಚಿಂತನೆ, ಸಾಂಸ್ಕೃತಿಕ ಚರ್ಚೆ, ಸಮುದಾಯಗಳ ಕುರಿತ ಜ್ಞಾನ ಪರಂಪರೆಗಳ ಅಧ್ಯಯನ ಪ್ರಾರಂಭವಾದವು. ನಮ್ಮ ದೇಶಿ ಜ್ಞಾನ ಪರಂಪರೆಗಳು (ಕುಲಕಸುಬುಗಳು, ವ್ಯವಸಾಯ) ಸ್ಥಳೀಯ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಬೆಸೆದುಗೊಂಡಿವೆ. ಇವುಗಳನ್ನು ಕನ್ನಡ ಜಾನಪದ ವಿದ್ವಾಂಸರು ಪಾಶ್ಚಾತ್ಯ ಜಾನಪದ ಶಾಸ್ತ್ರೀಯ ಸಿದ್ಧಾಂತಗಳನ್ನು ಬಳಸಿಕೊಂಡು ಅಧ್ಯಯನ ಮಾಡಿದ್ದಾರೆ. ಆದರೆ ಇವರ ಹಿಂದಿನ ಉದ್ದೇಶ 'ದೇಶಿ' ಜ್ಞಾನ ಪರಂಪರೆಗಳ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸುವಂತದ್ದಾಗಿದೆ. ಈ ಕಾಲಘಟ್ಟದಲ್ಲಿ ಅಧ್ಯಯನಕ್ಕೆ ಒಳಪಡದೆ ಇದ್ದಂತಹ ಅನೇಕ ಜನಪದ ಪ್ರಕಾರಗಳನ್ನು ಕುರಿತು ಸಂಶೋಧನೆ ಮಾಡಿದರು. ಆದರೆ ಆ ಸಂಶೋಧಕರ ಅಧ್ಯಯನದ ಹಿಂದಿನ ತಾತ್ವಿಕ ಧೋರಣೆಯನ್ನು ಚರ್ಚಿಸುವ ಅಗತ್ಯವಿದೆ. ಏಕೆಂದರೆ ಗೀತೆ, ಕತೆ, ಬಯಲಾಟ, ಜನಪದ ರಂಗಭೂಮಿ, ಬುಡಕಟ್ಟು ಜನರ ಸಂಪ್ರದಾಯಗಳು, ನಂಬಿಕೆಗಳು, ಕಥನಗೀತೆಗಳು, ಮಾಸ್ತಿಕಲ್ಲುಗಳು,

ಜನಾಂಗೀಯ ಅಧ್ಯಯನ, ಜನಪದ ಪುರಾಣಗಳು, ಒಗಟುಗಳು, ಯಕ್ಷಗಾನ, ಲಾವಣಿ, ಶ್ರೀಕೃಷ್ಣ ಪಾರಿಜಾತ, ಮಹಾಭಾರತ, ರಾಮಾಯಣ, ಒಂದು ಹಟ್ಟಿಯ ಅಧ್ಯಯನ, ಒಂದು ಅಗ್ರಹಾರದ ಅಧ್ಯಯನ, ಸಂಗೀತ, ಜನಪದಕಲೆ, ವಿಧಿಕ್ರಿಯೆ, ದೇವರುಗಳ ಬಗ್ಗೆ, ಗ್ರಾಮದೇವತೆ, ಮುಂತಾದ ಹೊಸ ಹೊಸ ರೂಪಗಳ ಕುರಿತು ಅನೇಕ ಸಂಶೋಧನೆಗಳು ನಡೆದಿವೆ, ನಡೆಯುತ್ತಿವೆ. ಆದರೆ ಈ ಅಧ್ಯಯನಗಳ ಹಿಂದಿನ ಸೈದ್ಧಾಂತಿಕತೆಯನ್ನು ಗುರುತಿಸುವುದು ಮುಖ್ಯವಾಗುತ್ತದೆ. ಜನಪದ ಸಾಹಿತ್ಯವು ಪ್ರಸ್ತುತ ವಿದ್ಯಮಾನಗಳಲ್ಲಿ ನವಮೌಖಿಕತೆಯೆಡೆಗೆ ಚಲಿಸುತ್ತಿರುವ ಸಂದರ್ಭದಲ್ಲಿ ಇವುಗಳ ಅಧ್ಯಯನದ ತಾತ್ವಿಕತೆ ಕುರಿತು ಹೇಳಬೇಕಿದೆ. ಆಧುನಿಕ ಕಾಲಘಟ್ಟದಲ್ಲಿ ಜನಪದ ಸಾಹಿತ್ಯ ನವ ಮೌಖಿಕತೆಯೊಂದಿಗೆ ಬದಲಾಗುತ್ತಿದೆ. ಈಗಿನ ತಂತ್ರಜ್ಞಾನ ಯುಗದಲ್ಲಿ ಜನಪದ ಸಾಹಿತ್ಯದ ಹಾಡುಗಳು ಕೆಲವು ಮಾರ್ಪಾಡುಗಳಾಗಿವೆ. ಒಟ್ಟಾರೆಯಾಗಿ ಈ ಎಲ್ಲಾ ಅಧ್ಯಯನಗಳ ಹಿಂದೆ ಇರುವ ತಾತ್ವಿಕತೆ ಏನು? ಅಧ್ಯಯನಕಾರರನ್ನು ಮತ್ತೆ ಮತ್ತೆ ಕಾಡಿದ ಸಂಗತಿಗಳಾವುವು? ಅಧ್ಯಯನದ ಪ್ರಾದೇಶಿಕತೆಯ ಭಿನ್ನತೆ, ಮುಂತಾದ ವಿಷಯಗಳನ್ನು ಚರ್ಚಿಸುವ ಅಗತ್ಯವಿದೆ. ಮುಖ್ಯವಾಗಿ ದೇಶಿಯತೆ ಎನ್ನುವುದು ಒಂದು ಪ್ರದೇಶ, ಸಂಸ್ಕೃತಿ, ಸಮುದಾಯ, ಸಾಹಿತ್ಯ ಕುರಿತು ಅದರ ಅನನ್ಯತೆಯನ್ನು ಗುರುತಿಸುವುದು. ಈ ನೆಲೆಯಲ್ಲಿ ದೇಶೀಯ ಚಿಂತನೆಯನ್ನು ಹಲವು ಲೇಖಕರು ಬೇರೆ ಬೇರೆ ನೆಲೆಯಲ್ಲಿ ಗುರುತಿಸಿದ್ದಾರೆ. ಕನ್ನಡದಲ್ಲಿ ಅಧುನಿಕ ಶಿಷ್ಟ ಸಾಹಿತ್ಯಕ್ಕೆ ನೇರವಾಗಿ ಪಾಶ್ಚಾತ್ಯ ಚಿಂತನೆಗಳು ಪ್ರಭಾವ ಬೀರಿದವು. ಆದರೆ ಜಾನಪದ ಸಾಹಿತ್ಯಕ್ಕೆ ಇದು ಬೀರಿದ ಪರಿಣಾಮ ಸ್ಥಳೀಯ ಮೌಖಿಕ ಸಾಹಿತ್ಯವನ್ನು, ಜನಪದ ಸಂಸ್ಕೃತಿಯನ್ನು ದೇಶೀ ನೆಲೆಯಲ್ಲಿ ಅದ್ಯಯನ ಮಾಡಲು ಪ್ರಾರಂಭಿಸಲಾಯಿತು.

ಪಾಶ್ಚಾತ್ಯ ಅಧ್ಯಯನ ಮಾದರಿಗಳಿಗೆ ಪ್ರತಿಯಾಗಿ ದೇಶೀ ಪ್ರಜ್ಞೆಯನ್ನು ಮುಂದಿಟ್ಟು ಜಾನಪದವನ್ನು ಗಂಭೀರವಾಗಿ ಅಧ್ಯಯನ ಮಾಡುವ ವಿಧಾನಗಳೂ ಈಚೆಗೆ ಪ್ರಚಲಿತವಾಗುತ್ತಿದ್ದು, ಇಂಥ ದೇಶೀಯತೆ ಒಂದು ಜನಪದ ಜೀವನ ಕ್ರಮದ ಅನನ್ಯತೆಯನ್ನು ವಿಶೇಷವಾಗಿ ಪ್ರತಿಪಾದಿಸುತ್ತದೆ. ಇಂತಹ ದೃಷ್ಟಿಕೋನವು ಗ್ರಾಮಗಳ ಗಂಭೀರ ಪರಿಶೀಲನೆಯ ಹಿನ್ನೆಲೆಯಿಂದ ರೂಪಿತವಾಗಿವೆ. ಸಾಂಸ್ಕೃತಿಕ ಅನನ್ಯತೆಯ ಸ್ಥಾಪನೆಗೆ ದೇಶಿಯತೆ ನಿಲುವಿಗೆ ಮುಖ್ಯ ಗುರಿಯಾಗಿದೆ. ಇದರ ಅನನ್ಯತೆಗಾಗಿ ಕನ್ನಡ ಜಾನಪದ ವಿದ್ವಾಂಸರು ಒಂದೊಂದೆ ಜನಪದ ಪ್ರಾಕಾರವನ್ನು ಎತ್ತಿಕೊಂಡು ಸಂಶೋಧನೆ ಮಾಡಿದರು. ಹೀಗೆ ಜನಪದ ಪ್ರಕಾರಗಳನ್ನು ಒಂದೊಂದೆ ತೆಗೆದುಕೊಂಡು ಅಧ್ಯಯನ ಮಾಡುವುದರ ಜೊತೆಗೆ ಸಮುದಾಯ ಅಧ್ಯಯನಗಳನ್ನು ಮಾಡಿದರು. ಬರಗೂರು ರಾಮಚಂದ್ರಪ್ಪ ಅವರು ಉಪಸಂಸ್ಕೃತಿಯ ಮಾಲೆಯಲ್ಲಿ ಅನೇಕ ತಳಸಮುದಾಯಗಳ ಅಧ್ಯಯನ ಮಾಡಿ ಕೃತಿಗಳನ್ನು ಪ್ರಕಟಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹಮ್ಮಿಕೊಂಡಿರುವ 'ಉಪಸಂಸ್ಕೃತಿಗಳ' ಯೋಜನೆಯಂತೆ ಒಬ್ಬೊಬ್ಬ ವಿದ್ವಾಂಸರು ಒಂದೊಂದು ಉಪಸಂಸ್ಕೃತಿಯಲ್ಲಿ ಸಂಶೋಧನಾತ್ಮಕ ಅಧ್ಯಯನ ನಡೆಸಿದ್ದಾರೆ. ಈ ಅಧ್ಯಯನದಲ್ಲಿ ಕಲೆ ಮತ್ತು ಸಾಹಿತ್ಯಗಳ ಸಂಗ್ರಹ ಮತ್ತು ವಿಶ್ಲೇಷಣೆಗೆ ವಿಶೇಷ ಗಮನವನ್ನು ಕೊಡಲಾಗಿದೆ. ಇದರಿಂದ ಉಪಸಂಸ್ಕೃತಿಯಲ್ಲಿ ಬದುಕುತ್ತಿರುವ ಜನರ ವಿಭಿನ್ನ ಕತೆ, ಕವಿತೆ, ಪುರಾಣಗಳು ಪ್ರಕಟಗೊಳ್ಳಲು

ಸಾಧ್ಯವಾಗುತ್ತಿದೆ. ಉಪಸಂಸ್ಕೃತಿಗಳ ಸಾಹಿತ್ಯ ಶಿಷ್ಟ ಸಾಹಿತ್ಯಕ್ಕಿಂತ ಬೇರೆಯದೇ ಆದ ಆಶಯಗಳನ್ನು ಪಡೆದಿದೆ. ಶಿಷ್ಟ ರಾಮಾಯಣ, ಮಹಾಭಾರತಗಳಿಗಿಂತ ಭಿನ್ನವಾದ ರಾಮಾಯಣ, ಮಹಾಭಾರತದ ಕತೆಗಳನ್ನು ಹೊಂದಿದೆ. ಉಪಸಂಸ್ಕೃತಿಗಳ ಜೀವನ ಕ್ರಮ, ಕಲೆ, ಸಾಹಿತ್ಯಾದಿಗಳನ್ನು ಶಿಷ್ಟ ಸಂಸ್ಕೃತಿಯ ಇದೇ ಅಂಶಗಳೊಂದಿಗೆ ಹೋಲಿಸಿ ಅಧ್ಯಯನ ಮಾಡಲು ಬೇಕಾದ ಮೂಲ ಸಾಮಗ್ರಿಗಳನ್ನು 'ಉಪಸಂಸ್ಕೃತಿಗಳ ಅಧ್ಯಯನ ಯೋಜನೆ'ಯು ಒದಗಿಸುತ್ತದೆ. ಇವೆಲ್ಲ ಅಧ್ಯಯನಗಳು ಮೌಖಿಕ ಸಾಹಿತ್ಯಗಳ ಮೂಲಕವೇ ಹೊರಗೆ ಬಂದವು.

ಜಾನಪದ ಸಾಹಿತ್ಯದ ಅಧ್ಯಯನದ ಪ್ರಭಾವದಿಂದ ಬಹುಮುಖಿ, ಬಹುಭಾಷಿಕ ಸಂಸ್ಕೃತಿಗಳ ಕರ್ನಾಟಕದಲ್ಲಿ ಬೇರೆ ಬೇರೆ ಸಂಸ್ಕೃತಿಗಳ ಅಧ್ಯಯನಗಳು ರಭಸಗತಿಯಲ್ಲಿ ಆರಂಭಗೊಂಡಿವೆ. ಕಾಡುಗೊಲ್ಲರು, ಲಂಬಾಣಿಗಳು, ಜೈನರು, ಒಕ್ಕಲಿಗರು, ಕ್ರೈಸ್ತರು, ಸಂಕೇತಿಗಳು, ಹವ್ಯಕರು, ನವಾಯಿತರು ಹೀಗೆ ಹತ್ತು ಹಲವು ಸಮುದಾಯಗಳ ಜಾನಪದ ಅಧ್ಯಯನ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಸಾಂಸ್ಕೃತಿಕ ಅನನ್ಯತೆ ವೈವಿಧ್ಯತೆಗಳನ್ನು ತೋರಲು, ಸ್ವಂತಿಕೆಯನ್ನು ಉಳಿಸಿಕೊಳ್ಳಲು ಜಾಗತೀಕರಣದ ಸವಾಲನ್ನು ಎದುರಿಸಲು ಅಸ್ತ್ರವಾಗಿ ಬಳಕೆಯಾಗುತ್ತಿವೆ. ಸಂಶೋಧಕನಾದವನು ಸಮೂಹಗಳ ಸಾಂಸ್ಕೃತಿಕ ಅನನ್ಯತೆಯ ರಕ್ಷಣೆಗೆ ಅಧ್ಯಯನದ ಮೂಲಕ ಜ್ಞಾನ ವಿಸ್ತಾರಕ್ಕೆ ಕಾರಣವಾಗುವುದಾದರೆ ಅದು ಅತ್ಯಂತ ಶ್ರೇಷ್ಠ ಕೊಡುಗೆಯಾಗಿ ಮಾನವ ಕುಲಕ್ಕೆ ಉಳಿಯುತ್ತದೆ. ಇವುಗಳ ಅಧ್ಯಯನದ ವಿಸ್ತಾರತೆಯನ್ನು ಶಿಷ್ಟಸಾಹಿತ್ಯದೊಂದಿಗೆ ಅನುಸಂಧಾನಗೊಳಿಸಿ ದೇಶಿನೆಲೆಯನ್ನು ಕಂಡುಕೊಳ್ಳಬೇಕಾಗುತ್ತದೆ.

'ದೇಶೀ' ಎಂಬುದು ವಿಶಾಲವಾದ ಸಂಸ್ಕೃತಿಯ ಗುಣಗಳನ್ನು ಅಂತರ್ಗತಿಸಿಕೊಂಡಿರುವ ಕೇಂದ್ರ. ಇದಕ್ಕೆ ನಿರಂತರವಾದ ಸೃಜನಶೀಲ ಪ್ರವೃತ್ತಿಯಿದ್ದು ಬದುಕಿನ ಪ್ರತಿಬಿಂಬಗಳನ್ನು ಮರುರೂಪಿಸುತ್ತಿದೆ. ಸಂಸ್ಕೃತಿ ಪರವಾದ ನಿಲುವನ್ನು ತಾಳುವ ಸ್ವಭಾವವಿದೆ. ಈ ಹಿನ್ನೆಲೆಯಲ್ಲಿ ದೇಶಿ ಎಂಬುದು ತಳ ಸಮುದಾಯಗಳ ಸಂಯುಕ್ತ ಧ್ವನಿಯ ಸಾಧ್ಯತೆಯಾಗಿದ್ದು, ಅದು ಕಾಲದ ಹಂಗನ್ನು ತೊರೆಯುತ್ತ, ಚರಿತ್ರೆಯ ಚೌಕಟ್ಟನ್ನು ಮೀರುತ್ತಾ ಬದುಕಿನ ಬಹುರೂಪಗಳಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಹೀಗೆ ದೇಶಿಯು ಸಾಂಸ್ಕೃತಿಕ ವಲಯದೊಳಗೆ ಅಂತರ್ಗತವಾಗಿ ಬೆರೆತುಕೊಂಡು ತನ್ನ ಭಾಷಿಕ ಅಭಿವ್ಯಕ್ತಿಯಾಗಿ ಪ್ರತಿಬಿಂಬಿಸುತ್ತದೆ. ಜಾನಪದ ಅಧ್ಯಯನದ ಮೂಲಕ ದೇಶೀಯತೆಯ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲಾಗಿದೆ.

ದೇಶಿಚಿಂತನೆ ಎಂದರೆ ಭಾರತದ ಬಹುಸಾಂಸ್ಕೃತಿಕ ನೆಲೆಯನ್ನು ಅಥವಾ ಬಹುಜನಪದಗಳನ್ನು ಏಕ ಸಾಂಸ್ಕೃತಿಕ ನೇಣುಗಂಭಕ್ಕೆ ಏರಿಸುತ್ತಿರುವ ನವವಸಾಹತುಶಾಹಿ ಆಕ್ರಮಣ ಆಗಿದೆ. ಜಾನಪದದ ಭಾಷಾ ದೇಶಿಯತೆ ಅಥವಾ ಸಾಹಿತ್ಯ ದೇಶಿಯತೆಗಿಂತ ಭಿನ್ನವಾದದ್ದು. ಜಾಗತಿಕ ರಾಜಕಾರಣದ ಹುನ್ನಾರಗಳನ್ನು ಭೇದಿಸುತ್ತಾ ಸ್ಥಳೀಯತೆಯ ಶೋಷಣೆಗಳನ್ನು ತಡೆಗಟ್ಟಿ ಎಲ್ಲ ದೇಶಿಯ ಜನರನ್ನು

ಒಳಗೊಳ್ಳುವ ಮತ್ತು ಅವರ ಬದುಕನ್ನು ಸಹ್ಯವಾಗಿಸುವ ಜೀವನ ವಿಧಾನವನ್ನು ರೂಪಿಸುವುದು. ಮೂರನೆ ಜಗತ್ತು ಈ ಬಗ್ಗೆ ತುರ್ತು ಚಿಂತನೆಯನ್ನು ನಡೆಸುತ್ತದೆ. ತಮ್ಮ ದೇಶಿಯ ಜ್ಞಾನ ಅಪಮೌಲ್ಯ ಮತ್ತು ಅಪಮಾನಕ್ಕೆ ಈಡಾಗಿರುವ ಬಗ್ಗೆ ನಾಚಿಕೊಳ್ಳುತ್ತಿದೆ. ಆ ಮೂಲಕ ತಾವೇ ಅಪಮೌಲ್ಯಗೊಳ್ಳುತ್ತಿರುವುದರ ಬಗ್ಗೆ ಭಯ ಮತ್ತು ಆತಂಕವನ್ನು ಹೊಂದಿದೆ. ದೇಶಿವಾದ ಪ್ರತಿಪಾದನೆಯಲ್ಲಿ ಒಂದು ದೊಡ್ಡ ಅಪಾಯವಿದೆ. ಅನ್ಯವನ್ನು ವಿರೋಧಿಸುವ ಅವಸರದಲ್ಲಿ ತನ್ನದೆ ಸಂಸ್ಕೃತಿಯ ಮೂಲಭೂತವಾದಕ್ಕೆ ಪ್ರವೇಶ ಮಾಡಿ ಪ್ರಾಕೃತತ್ವದ ಕಡೆಗೆ ಹೋಗಿ ಬಿಡಬಹುದು. ದೇಶೀಯತೆ ಎಂದರೆ ನಮ್ಮ ಪೂರ್ವಾಶ್ರಮಕ್ಕೆ ಮರುಳುವುದು ಎಂದರ್ಥವಲ್ಲ. ಪೂರ್ವದ ಪ್ರಾಚೀನತೆಯನ್ನು ಅರ್ವಾಚೀನ ಅವಾಂತರವನ್ನು ಪರೀಕ್ಷೆಗೆ ಇಟ್ಟು ಇವತ್ತಿನ ಫಲಿತಾಂಶವನ್ನು ಪಡೆಯುವುದು ನಿಜವಾದ ದೇಶೀಯತೆಯಾಗಿದೆ. ಇದನ್ನು ಜನಪದ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ, ಯಜಮಾನ್ಯ ಸಂಸ್ಕೃತಿಯೊಂದಿಗಿನ ತಳಸಮುದಾಯ ಸಂಸ್ಕೃತಿಯನ್ನು ಪುನರ್ ಕಟ್ಟುವುದಾಗಿದೆ. ಅದರ ಅಗತ್ಯತೆ ಇಂದಿನ ಅಧ್ಯಯನಗಳ ಮೂಲಕ ಕಂಡುಕೊಂಡು ತನ್ನದೆ ಆದ ಸಾಂಸ್ಕೃತಿಕ ಮತ್ತು ದೇಶಿಯತೆಯನ್ನು ಪ್ರತಿಪಾದಿಸಬೇಕಿದೆ. ಜಗತ್ತಿನ ಮಟ್ಟದಲ್ಲಿ ಏಕರೂಪಿಯಾದ ಪಾಶ್ಚಾತ್ಯ ಸಂಸ್ಕೃತಿಯನ್ನು ಹೇರುವ ಪ್ರಯತ್ನಗಳು ಜಾಗತೀಕರಣದ ಹಿನ್ನೆಲೆಯಲ್ಲಿ ನಡೆಯುವಾಗ ದೇಶೀ ಸಂಸ್ಕೃತಿಗಳು ಇದಕ್ಕೆ ಪ್ರತಿಭಟನೆಯಾಗಿ ರೂಪುಗೊಳ್ಳುತ್ತಿವೆ. ಸಂಸ್ಕೃತಿಯನ್ನು ಪ್ರತಿಭಟನೆಯ ಅಸ್ತ್ರವಾಗಿ ಬಳಸುವುದು ಹೆಚ್ಚಾಗಿ ಕಂಡುಬರುತ್ತಿದೆ. ಭಾರತದಲ್ಲಿ ಏಕರೂಪದ ಹಿಂದೂ ಸಂಸ್ಕೃತಿಯನ್ನು ಉಳಿದ ನೂರಾರು ಸಂಸ್ಕೃತಿಗಳ ಮೇಲೆ ಹೇರುವ ಪ್ರಯತ್ನ ನಡೆದಾಗಲೂ ಈ ಬಗೆಯ ಪ್ರತಿರೋಧ ಹುಟ್ಟಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ದೇಶೀಯ ಜ್ಞಾನ ಪರಂಪರೆಗಳಿಗೆ ವಿಶೇಷವಾಗಿ ಮಹತ್ವವುಂಟಾಗುತ್ತದೆ. ಜಾನಪದವೂ ಕೂಡ ದೇಶೀಯ ಪರಂಪರೆಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿರುವುದರಿಂದ ಈ ಹಿನ್ನೆಲೆಯಲ್ಲಿ ಅದು ಪ್ರಾಮುಖ್ಯತೆ ಪಡೆಯುತ್ತದೆ. ಆದರೆ ಇಂದಿನ ಸವಾಲುಗಳನ್ನು ದೇಶೀಯ ಜ್ಞಾನ ಪರಂಪರೆಗಳು ಸಮರ್ಥವಾಗಿ ಎದುರಿಸಬಲ್ಲದೆ ಎಂಬುದರ ಬಗ್ಗೆ ಆಶೀಶ್ ನಂದಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ: "ದೇಶೀಯ ಜ್ಞಾನ ವ್ಯವಸ್ಥೆಗಳಾಗಲೀ, ಅವುಗಳ ಪರವಾಗಿ ನಡೆಯುತ್ತಿರುವ ಇಂದಿನ ಚಳುವಳಿಗಳಾಗಲೀ ಕ್ಷಣ ಸಿದ್ದ ಉತ್ತರ ಸೂತ್ರಗಳನ್ನಾಗಲೀ ಅಥವಾ ಚರಾಯ ಜೀವನ ಕಲ್ಪನೆಯನ್ನಾಗಲಿ ನೀಡುವ ಶಕ್ತಿಯನ್ನು ಇನ್ನೂ ಹೊಂದಿಲ್ಲ. ಆದರೆ ನಮ್ಮ ಜಗತ್ತು ಬಹಳಷ್ಟು ಸಮುದಾಯಗಳನ್ನು ಇಂದು ಕಾಡುತ್ತಿರುವ ಆಧುನಿಕ ರೂಪದ ಆಕ್ರಮಣ ತುಳಿತ-ಕ್ರೌರ್ಯಗಳನ್ನು ನಾವು ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ಅರ್ಥೈಸಿಕೊಳ್ಳುವಲ್ಲಿ ಪ್ರತಿರೋಧಿಸುವಲ್ಲಿ ಮಾತ್ರ ಅವು ನಮಗೆ ಸಹಾಯ ಮಾಡುತ್ತಿವೆ. ಅವುಗಳ ಇಂಥ ಸೀಮಿತ ಶಕ್ತಿಗೆ ಕಾರಣವೂ ಇರುವುದಿಲ್ಲ. ಅನ್ಯಾಕ್ರಮಣ, ದಬ್ಬಾಳಿಕೆ, ಹಿಂಸೆಗಳ ಹಳೆಯ ರೂಪಗಳು ಸರಳವಾಗಿದ್ದವು, ನೇರವಾಗಿದ್ದವು. ಆದರೆ ಅವುಗಳ ಆಧುನಿಕ ರೂಪಗಳು ಮಾತ್ರ ಸಂಕೀರ್ಣವಾದವು, ಪರೋಕ್ಷ ಪ್ರಭಾವದವು, ಬಹಳಷ್ಟು ಮಟ್ಟಿಗೆ ಅವುಗಳು ಅಭಿವೃದ್ಧಿ, ಆಧುನಿಕತೆಗಳ ಅವತಾರದಲ್ಲಿ ಸಮುದಾಯಗಳ

ಮೇಲೆ ಆಕ್ರಮಣ ನಡೆಸುತ್ತವೆ. ಅಭಿವೃದ್ಧಿ, ಆಧುನಿಕತೆಗಳ ಪರಿಕಲ್ಪನೆಗಳು ಈ ಹಿಂದೆ ನಮ್ಮಂಥ ಸಮಾಜಗಳಿಗೆ ಬಿಡುಗಡೆಯ ಮಾರ್ಗಗಳಾಗಿ ಕಂಡುಬರುತ್ತಿದ್ದವು. ಅವುಗಳ ಕರಾಳವಾದ ದಾಸ್ಯ ಪೋಷಣೆಯ ಇನ್ನೊಂದು ಮುಖವನ್ನು ಈಗಷ್ಟೇ ಕಂಡುಕೊಳ್ಳುತ್ತಿದ್ದೇವೆ"[೬] ಈ ಮಾತುಗಳ ಮೂಲಕ ಅಶೀಶ್ ನಂದಿ ಸಮಕಾಲೀನ ಸವಾಲುಗಳನ್ನು ಎದುರಿಸುವುದರಲ್ಲಿ ದೇಶಿ ಪರಂಪರೆಗಳ ಮಹತ್ವ ಮತ್ತು ಪರಿಮಿತಿಗಳೆರಡನ್ನೂ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಇದು ಜಾನಪದಕ್ಕೂ ಅನ್ವಯವಾಗುತ್ತದೆ. ಕನ್ನಡದ ಸಂದರ್ಭದಲ್ಲಿ 'ದೇಸಿ' 'ದೇಶೀ' 'ದೇಸೀಯತೆ' 'ದೇಶೀವಾದ' ಪದ ಮತ್ತೆ ಮತ್ತೆ ಬಳಕೆಯಾಗುತ್ತಾ ಬಂದಿವೆ. ತೊಂಬತ್ತರ ದಶಕದಿಂದೀಚೆಗೆ ಈ ಚರ್ಚೆ ಬಹು ಆಯಾಮವನ್ನು ಪಡೆದು ಬೆಳೆಯುತ್ತಿದೆ. ಕಾಲದಿಂದ ಕಾಲಕ್ಕೆ ಈ ಪದಗಳ ಅರ್ಥವನ್ನು ಹಿಗ್ಗಿಸಲಾಗಿದೆ. ಕೆಲವೊಮ್ಮೆ ಕುಗ್ಗಿಸಲಾಗಿದೆ, ಮತ್ತೆ ಬೇರೆ ಬೇರೆ ನೆಲೆಗಳಲ್ಲಿ ಎಳೆದಾಡಿದ್ದು ಇದೆ. ಮೂಲತಃ ಶುದ್ಧ ಸಾಹಿತ್ಯಿಕ ಚರ್ಚೆಯಾಗಿ ರೂಪುಗೊಂಡು ಅದೀಗ ಸಾಂಸ್ಕೃತಿಕ ಅಧ್ಯಯನಗಳ ಚರ್ಚೆಯಾಗಿ ವಿಶಾಲ ಹರವನ್ನು ಪಡೆದುಕೊಂಡಿದೆ.

ವಸಾಹತೋತ್ತರ ಕಾಲದಲ್ಲಿ ದೇಶೀಯ ವಿದ್ವಾಂಸರು ಪಾಶ್ಚಾತ್ಯ ಜನಪದ ವಿದ್ವಾಂಸರು ರೂಪಿಸಿದ ಪರಿಕಲ್ಪನೆ, ಶಾಸ್ತ್ರಸಿದ್ಧಾಂತ ವಾದಗಳನ್ನು ಅನುಸರಿಸಿ ಜನಪದ ಅಧ್ಯಯನಗಳನ್ನು ಮಾಡಿದರು. ಈ ಶಾಸ್ತ್ರಸಿದ್ಧಾಂತಗಳು ಕೆಲವೊಂದು ಮಿತಿಗಳನ್ನು ಹೊಂದಿವೆ. ಆದರೆ ಇವರು ದೇಶೀಯ ಸಿದ್ಧಾಂತಗಳನ್ನು ರೂಪಿಸದೇ ಪಾಶ್ಚಾತ್ಯ ಸಿದ್ಧಾಂತಗಳನ್ನು ಅನುಸರಿಸಿದರು. ವೀರಣ್ಣ ದಂಡೆ ಅವರು ರೂಪಿಸಿದ ದೇಶಿ ಸಿದ್ಧಾಂತವು ಜನಪದ ಕತೆ ಮತ್ತು ಮಹಾಕಾವ್ಯಗಳ ಅಧ್ಯಯನಗಳಿಗೆ ಅಷ್ಟೇ ಸೀಮಿತವಾಗಿದೆ. ಅವರು ರೂಪಿಸಿದ ಸಿದ್ಧಾಂತಗಳು ಜನಪದ ಕಾವ್ಯಮೀಮಾಂಸೆ ಮತ್ತು ಮಾದರಿ ಪರಿಕಲ್ಪನೆ ದೇಶೀಯ ಸಿದ್ಧಾಂತಗಳಾಗಿವೆ. ಹಿ.ಶಿ.ರಾಮಚಂದ್ರೇಗೌಡರು ತಮ್ಮ ಸಂಶೋಧನೆಯಲ್ಲಿ ಆರ್ನೆಥಾಂಸ್ ಸಿದ್ಧಾಂತಗಳ ಮಾದರಿಯನ್ನಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ತಮ್ಮ 'ಕನ್ನಡ ಜನಪದ ಕಥಾವರ್ಗಗಳು' ಪ್ರಬಂಧದಲ್ಲಿ ಕನ್ನಡದ ಜನಪದ ಕಥೆಗಳನ್ನು ಮೂರು ನೆಲೆಯಲ್ಲಿ ಅಭ್ಯಾಸ ಮಾಡುತ್ತಾರೆ. ಆಶಯ, ವರ್ಗ, ವರ್ಗನಿರ್ಧಾರ, ಎಂಬ ನೆಲೆಯಲ್ಲಿ ಕಥೆಗಳನ್ನು ವರ್ಗೀಕರಿಸಿಕೊಂಡು ಪಾಶ್ಚಾತ್ಯ ಸಿದ್ಧಾಂತಗಳನ್ನು ನೇರವಾಗಿ ಪರಿಚಯಿಸುತ್ತಾರೆ. ಹಿ.ಶಿ.ರಾಮಚಂದ್ರೇಗೌಡರು ದೇಶಿಯತೆಯ ಬಗೆಗಿನ ತಮ್ಮ ನಿಲುವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. "ಆಧುನಿಕತೆ ಭಿನ್ನಮತ ಎಂದರೆ ಸರಾಸಗಟಾಗಿ ಆಧುನಿಕತೆಯನ್ನು ತಿರಸ್ಕರಿಸುವುದಿಲ್ಲ. ಹಾಗೇ ತಿರಸ್ಕರಿಸಲು ಸಾಧ್ಯವು ಇಲ್ಲ. ಆದರೆ ಆಧುನಿಕತೆ ಸ್ವೀಕಾರದಲ್ಲಿಯ ನಮ್ಮತನವನ್ನು ಕಳೆದುಕೊಳ್ಳದಂತೆ ಸ್ವೀಕರಿಸಬಹುದಾದ ಎಚ್ಚರದ ಪ್ರಜ್ಞೆಯೆ ದೇಶೀಯತೆಯಾಗಿದೆ. ಇದು ಸಂಸ್ಕೃತಿಯನ್ನು ಕಳೆದುಕೊಳ್ಳದೆ ಆಧುನಿಕವಾಗಿ ಜೊತೆಯಲ್ಲಿಯೆ ತೆಗೆದುಕೊಂಡು ಹೋಗುವಂತದ್ದು ಎಂದು ಭಾಪಿಸಬಹುದು. ಅವರು ಕಥೆಗಳ ವರ್ಗೀಕರಣವನ್ನು ಈ ನೆಲೆಯಲ್ಲಿ ನೋಡಿದ್ದಾರೆ. ಪಾಶ್ಚಾತ್ಯ ಸಿದ್ಧಾಂತಗಳಿಂದಾಗಿ ನಮಗೆ ಹೊಸ ವಿಚಾರಕ್ರಮ ದೊರೆತರೂ ನಾವು ನಮ್ಮ ಜಾನಪದವನ್ನೆ ಪರಕೀಯ ದೃಷ್ಟಿಯಿಂದ ನೋಡುವಂತದ್ದಾಗಿದೆ.

ಚಂದ್ರಶೇಖರ ಕಂಬಾರರು "ದೇಶೀವಾದದಲ್ಲಿ ಪರಕೀಯ ಭಾವನೆ ತೀವ್ರವಾಗಿ ಉಂಟಾದಾಗ ಪಾಶ್ಚಾತ್ಯ ಸಿದ್ಧಾಂತಗಳನ್ನು ಬಳಸುವುದು ಬೇಡವೇ ಬೇಡ. ನಮ್ಮ ಜಾನಪದವನ್ನು ನಮ್ಮ ಸಂಸ್ಕೃತಿ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಿದರೆ ಸಾಕು ಎಂದು ಪ್ರತಿಪಾದಿಸುತ್ತಾರೆ" ವೀರಣ್ಣ ದಂಡೆ ಅವರು ಗುರುತಿಸುವಂತೆ "ಇತ್ತೀಚೆಗೆ ಕರ್ನಾಟಕದಲ್ಲಿ ವೈಜ್ಞಾನಿಕ ಮನೋಭಾವನೆಯ ಹಿನ್ನೆಲೆಯಲ್ಲಿ ಜಾನಪದವನ್ನು ಅಭ್ಯಾಸಿಸುವ ಒಂದು ಹೊಸ ಪೀಳಿಗೆಯೆ ಹೊರಬರುತ್ತಲಿದೆ. ಆದರೆ ಜಾನಪದದ ಅಂತರ್‌ಶಿಸ್ತಿನ ಅಧ್ಯಯನದ ಹಿನ್ನೆಲೆಯಲ್ಲಿ ವಿದೇಶಿ ಆಲೋಚನೆಗಳಿಗೆ ಹೆಚ್ಚು ಮಾರುಹೋಗುತ್ತಿರುವುದು ಕಂಡುಬರುತ್ತಿದೆ. ಕನ್ನಡ ಜಾನಪದ ಅಭ್ಯಾಸಕ್ಕೆ ವಿದೇಶಿಯರ ಆಲೋಚನೆಗಳು ತೋರು ಬೆರಳುಗಳಾಗಬೇಕೆ ವಿನಃ ಅಂತಿಮ ಗುರಿಯಾಗಬಾರದು ಎಂದು ಹೇಳುತ್ತಾರೆ" ಪಾಶ್ಚಾತ್ಯ ಸಿದ್ಧಾಂತಗಳು ಅಲ್ಲಿನ ವಿಭಿನ್ನ ಸಂಸ್ಕೃತಿಯಿಂದ ಕೂಡಿದ್ದು ಅವುಗಳು ತಮ್ಮಲ್ಲಿಯ ಸಾಂಸ್ಕೃತಿಕ ಭಿನ್ನತೆಗೆ ಮಾರಕವಾಗುತ್ತವೆ. ಆದ್ದರಿಂದ ಯಾವುದೆ ಸಮುದಾಯ, ಸಾಂಸ್ಕೃತಿಕ ಆ ರಾಷ್ಟ್ರದ ಪ್ರದೇಶಕ್ಕೆ ಭಿನ್ನವಾಗಿದ್ದು ಅವುಗಳ ಅಧ್ಯಯನ ದೇಶೀಯ ಸಿದ್ಧಾಂತಗಳಿಂದ ಕೂಡಿರಬೇಕು. ಆದರೆ ನಮ್ಮೆಲ್ಲ ಅಧ್ಯಯನಗಳು ಪಾಶ್ಚಾತ್ಯ ಸಿದ್ಧಾಂತಗಳಿಂದ ನಡೆದಿವೆ. ವೀರಣ್ಣ ದಂಡೆ ಅವರು ದೇಶಿವಾದದ ಕುರಿತು ಎರಡು ಮಾದರಿಗಳನ್ನು ಗುರುತಿಸಿದ್ದಾರೆ. ಒಂದು, ಸ್ವಲ್ಪವೂ ಬಳಸಿಕೊಳ್ಳದೆ ಸಂಪೂರ್ಣವಾಗಿ ದೇಶಿಯ ನೆಲೆಯಿಂದಲೆ ವಿಚಾರ ಮಾಡುವುದು. ಎರಡು, ತೌಲನಿಕ ಅಧ್ಯಯನದ ಮೂಲಕ ಅಂತರಾಷ್ಟ್ರೀಯ, ರಾಷ್ಟ್ರೀಯ ಜಾನಪದ ಕ್ಷೇತ್ರದಲ್ಲಿ ಜಾನಪದ ಹೇಗೆ ವಿಶಿಷ್ಟ ಎಂದು ತೋರಿಸಿಕೊಡುವುದು. ವೀರಣ್ಣ ದಂಡೆ ಅವರು ತಮ್ಮ ಮೊದಲ ಹೇಳಿಕೆಗೆ ಪೂರಕವಾಗಿ ಕಾಶೀಬಾಯಿ, ಕೆರೆಗೆಹಾರ ಮೊದಲಾದ ಕಥನಗೀತೆಗಳನ್ನು ಕೇವಲ ಕನ್ನಡದ ನೆಲೆಯಲ್ಲಿ ಮಾತ್ರ ವಿಚಾರ ಮಾಡಿದ್ದಾರೆ. ಗಾದೆ, ಒಗಟು, ಪುರಾಣ, ಐತಿಹ್ಯ ಮೊದಲಾದ ವಿಷಯಗಳ ಬಗ್ಗೆಯೂ ಅವರ ಕ್ರಮ ಇದೇ ರೀತಿಯಾಗಿದೆ.

'ದೇಶೀವಾದ' ಮತ್ತು 'ದೇಶೀಯತೆ' ಜಾನಪದ ಅಧ್ಯಯನದ ಮೂಲಕ ಭಿನ್ನ ರೂಪಗಳಲ್ಲಿ ವ್ಯಕ್ತಗೊಂಡಿರುವುದನ್ನು ನೋಡಬಹುದು. "ನವೋದಯ ಕಾಲದ ದೇಶೀಯತೆ, ಸ್ವದೇಶಿ ಅಥವಾ ರಾಷ್ಟ್ರೀಯತೆ ಪರಿಕಲ್ಪನೆಗಳಲ್ಲಿ ಹುಟ್ಟಿಕೊಂಡಿದ್ದರಿಂದ ದೇಶಿವಾದಕ್ಕೆ ಭಿನ್ನವಾದದ್ದಾಗಿದೆ. ರಾಷ್ಟ್ರೀಯತೆ ಎನ್ನುವುದು ವ್ಯಾಮೋಹ ಭಕ್ತಿ, ಆವೇಶ, ಅನನ್ಯತೆಯೆಡೆಗೆ ಮುಖಮಾಡಿ ನಿಲ್ಲುವ ಸ್ವರೂಪದ್ದಾದರೆ, ದೇಶೀವಾದವು ಈ ಎಲ್ಲಾ ವಿಚಾರಗಳಿಂದ ಹೊರಬಂದು ತನ್ನದೇ ಆದ ಪ್ರಾದೇಶಿಕ ಹಾಗೂ ಈ ನೆಲದ ಸಾಂಸ್ಕೃತಿಕ ಬಂಧುತ್ವವನ್ನು ಸ್ಥಾಪಿಸಿಕೊಳ್ಳುತ್ತವೆ"[೭] ಈ ನೆಲದ ಸಾಂಸ್ಕೃತಿಕ ಅನನ್ಯತೆಯ ಫಸಲನ್ನು ಈ ನೆಲದ ಜಾನಪದ ಪರಂಪರೆಗಳು ತುಂಬಿಕೊಂಡಿವೆ. ಅದಕ್ಕಾಗಿ ಇಲ್ಲಿನ ಜಾನಪದ ವಿದ್ವಾಂಸರು ಸ್ವದೇಶಿ ಇಲ್ಲವೇ ರಾಷ್ಟ್ರಕಲ್ಪನೆಗಿಂತ ಇಲ್ಲಿ ನೈಜ ಚಾರಿತ್ರಿಕ ಅಂಶಗಳು ಹಾಗೂ ಸಾಹಿತ್ಯಿಕ ರೂಪಗಳನ್ನು ಜಾನಪದ ಸಾಹಿತ್ಯದಲ್ಲಿ ಕಂಡುಕೊಂಡರು.

ವಸಾಹತೋತ್ತರ ಕಾಲದಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳು ವಸಾಹತುಶಾಹಿ ರೂಪಿಸಿದ ಅಮೂರ್ತ ಸ್ವರೂಪದ ಬೌದ್ಧಿಕ ಪರಿಕಲ್ಪನೆಯಿಂದ ಹೊರಗೆ ಬಂದು ತಮ್ಮದೇ ಆದ ಸತ್ವಶೀಲ ರಾಷ್ಟ್ರಗಳನ್ನು

ಕಟ್ಟಿಕೊಳ್ಳಲು ಪ್ರಾರಂಭಿಸಿದವು. ಹಾಗಾಗಿ ಭಾರತ ಮತ್ತು ಆಫ್ರಿಕಾದಂತಹ ತೃತೀಯ ಜಗತ್ತಿನ ರಾಷ್ಟ್ರಗಳು ಬಹುಭಾಷಿಕ, ಬಹುಧಾರ್ಮಿಕ, ಬಹುಸಾಂಸ್ಕೃತಿಕ ಪರಂಪರೆಗಳನ್ನು ಒಳಗೊಂಡಿದ್ದರೂ ವಸಾಹತುಶಾಹಿಯ ಬೌದ್ಧಿಕ ಹಾಗೂ ಭಾಷಾ ಯಜಮಾನ್ಯದ ಅಧಿಕಾರದ ಸಂಕೇತಗಳಿಂದ ಬಂಧಿತವಾಗಿವೆ. “ಆಳುವ ಭಾಷೆ ಮತ್ತು ಸಂಸ್ಕೃತಿಗಳು ಜಾಗತಿಕವಾಗಿ ನಮ್ಮ ಆಯ್ಕೆಗಳನ್ನು ಕೇವಲ, ಸಾಹಿತ್ಯಿಕ, ಸಾಂಸ್ಕೃತಿಕವಾಗಿ ನಿಯಂತ್ರಿಸುವುದಿಲ್ಲ. ದೃಷ್ಟೀಕೋನವನ್ನು ಸಹ ತಿದ್ದುತ್ತವೆ ಎಂದು ಆಫ್ರಿಕನ್ ಲೇಖಕ ಗೂಗಿ ವಾ ಥಿಯಾಂಗೊ ಅಭಿಪ್ರಾಯಿಸಿದ್ದಾರೆ”[೭] ಹಾಗಾಗಿ ಒಂದು ದೇಶದ ಸಂಸ್ಕೃತಿಯನ್ನು ಆಳುವ ರಾಷ್ಟ್ರಗಳು ತಮ್ಮ ಭಾಷೆಯ ಮೂಲಕ ಅಲ್ಲಿನ ಭಾಷೆಗಳನ್ನು ನಿಯಂತ್ರಿಸುತ್ತಾ ತಮ್ಮ ನಿಯಂತ್ರಣಕ್ಕೊಳಪಡಿಸಿಕೊಂಡು ಬೌದ್ಧಿಕ ಮತ್ತು ಭೌತಿಕವಾಗಿ ಬದಲಾವಣೆ ಮಾಡುತ್ತವೆ.

“ಬ್ರಿಟಿಷರು ವಸಾಹತುಶಾಹಿ ಕಾಲದಲ್ಲಿ ಭಾರತದ ವಿವಿಧ ಸಂಸ್ಕೃತಿಗಳನ್ನು ವಿಸ್ಮೃತಿಯನ್ನಾಗಿ ರೂಪಿಸಿದ್ದರು. ಬ್ರಿಟಿಷರ ನಂತರ ಭಾರತದಲ್ಲಿ ಯಜಮಾನ್ಯ ಸಂಸ್ಕೃತಿಯು ಅಧೀನ ಸಂಸ್ಕೃತಿಗಳನ್ನು ನಿಯಂತ್ರಿಸುತ್ತಾ ತಮ್ಮ ಸಂಸ್ಕೃತಿಯೇ ಉನ್ನತವಾದದ್ದು ಎಂಬ ಭ್ರಮೆಯನ್ನು ಒಳಗೊಂಡಿದ್ದವು”[೯] ಇದಕ್ಕೆ ಪರ್ಯಾಯವಾಗಿ ಜಾನಪದ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಳ್ಳಲು ಅನೇಕ ವಿದ್ವಾಂಸರು ಪ್ರಯತ್ನಿಸಿದರು. ತೃತೀಯ ರಾಷ್ಟ್ರಗಳಲ್ಲಿ ಯಜಮಾನ್ಯ ಸಂಸ್ಕೃತಿಯ ಎದುರು ಜಾನಪದದ ವಿವಿಧ ಪ್ರಕಾರಗಳು ಬೆಳಕಿಗೆ ಬರಲು ಕಾರಣವಾಯಿತು. ತಮ್ಮ ನೆಲದ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳುವ ತೃತೀಯ ರಾಷ್ಟ್ರಗಳು ಜಾನಪದ ಸಂಸ್ಕೃತಿಯನ್ನು ಮುಖ್ಯ ಆಕರಗಳಾಗಿ ಬಳಸಿಕೊಂಡವು. ಹಾಗಾಗಿ ಈ ಆಕರಗಳಲ್ಲಿ ಸ್ಥಳಿಯ ನೆಲಮೂಲ ಸಂಸ್ಕೃತಿಗಳ ಅಸ್ತಿತ್ವವನ್ನು ಕಂಡುಕೊಂಡವು. ಈ ಎಲ್ಲ ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ‘ದೇಶಿ’ ನೆಲೆಯಲ್ಲಿ ಅಧ್ಯಯನ ಮಾಡಲು ಪ್ರಾರಂಭಿಸಿದರು. ಪಾಶ್ಚಾತ್ಯ ಸಿದ್ಧಾಂತಗಳು ದೇಶೀ ಜಾನಪದ ವಿದ್ವಾಂಸರನ್ನು ಅತಿಯಾಗಿ ಪ್ರಭಾವಿಸಿದ್ದರಿಂದ ಎಲ್ಲಿ ತಮ್ಮ ನೆಲೆಯ ಸತ್ವವನ್ನು ಕಳೆದುಕೊಳ್ಳುತ್ತೇವೆ ಎಂಬ ಭ್ರಮ ನಿರಸನದಲ್ಲಿ ಜಾನಪದವನ್ನು ಪುನರ್ ಶೋಧಿಸಿ ದೇಶಿಯತೆಯನ್ನು ಕಟ್ಟಿಕೊಳ್ಳಲು ಕಾರಣವಾಯಿತು. ಇಲ್ಲಿನ ಮೂಲನಿವಾಸಿಗಳ ಮೌಖಿಕ ಸಾಹಿತ್ಯದಲ್ಲಿ ದೇಶೀಯತೆಯ ಅಸ್ಮಿತೆ ಇರುವುದು ಜಾನಪದ ಅಧ್ಯಯನವನ್ನು ರಾಷ್ಟ್ರೀಯ ಪ್ರಜ್ಞೆಗಿಂತ ದೇಶೀಯ ಪ್ರಜ್ಞೆ ಕಡೆ ಹೆಚ್ಚು ಗಮನ ಹರಿಸಲಾಯಿತು.

ಸ್ವಾತಂತ್ರ್ಯನಂತರ ಯಜಮಾನ್ಯ ಸಂಸ್ಕೃತಿಯು ಇಲ್ಲಿನ ತಳಸಂಸ್ಕೃತಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಮುಂದಾದಾಗ ಇಲ್ಲಿನ ತಳವರ್ಗದ ಸಮುದಾಯಗಳು ಯಜಮಾನ್ಯ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ಮುಂದಾಗುತ್ತವೆ. “ಯಾವುದನ್ನು ಅನ್ಯವು ಆಕ್ರಮಿಸುತ್ತದೆಯೊ ಅವಾಗ ಸ್ವಂತ ಎಚ್ಚರ ಪ್ರಜ್ಞೆ ಎಲ್ಲ ಸಂದರ್ಭಗಳಲ್ಲಿ ಕಂಡುಬರುತ್ತದೆ. ದೇಶಿಯ ಸಂಸ್ಕೃತಿಯ ಸತ್ವ ಶೀಲತೆಯ ಬಗ್ಗೆ ಹೆಚ್ಚು ತೀವ್ರವಾದ ಆಸಕ್ತಿ ಹುಟ್ಟುವುದು ಅನ್ಯಪ್ರಭಾವಗಳ ಹಿಡಿತದಿಂದಾಗಿ ಆ ಸತ್ವಶೀಲತೆಗೆ ಕುಂದು ಬಂದಿದೆ ಎನ್ನುವ ಅಸುರಕ್ಷತೆಯ ಭಾವನೆ ಬೆಳೆದಾಗ ದೇಶಿವಾದ ಹುಟ್ಟಿಗೆ

ಕಾರಣವಾಗುತ್ತದೆ"[೧೦] ಹಾಗಾಗಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಜನಪದ ಅಧ್ಯಯನಗಳು ದೇಶಿವಾದದ ಮೂಲಕ ನಡೆದವು. ಮೌಖಿಕ ಪರಂಪರೆಯಲ್ಲಿ ಗೀತೆ, ಕಥೆ, ಗಾದೆ, ಒಗಟು, ಮುಂತಾದವುಗಳು ಸಂದರ್ಭಕ್ಕೆ ತಕ್ಕಂತೆ ಹುಟ್ಟಿಕೊಂಡ ರೂಪಗಳಾದರೆ, ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು ಜನಪದರ ವಾರ್ಷಿಕಾವರ್ತನಗಳ ಮನರಂಜನೆಯ ರೂಪದಲ್ಲಿ ಕಂಡುಕೊಂಡ ಸಾಂಸ್ಕೃತಿಕ ಬಂಧ ಎಂದು ಹೇಳಬಹುದು. ಅದಕ್ಕಾಗಿ ಎಲ್ಲ ಅಕ್ಷರವಂತ ವಿದ್ವಾಂಸರು ಜಾನಪದ ಸಾಹಿತ್ಯವನ್ನು ದೇಶೀವಾದದ ನೆಲೆಯಲ್ಲಿ ನೋಡಿದರು. ಪಾಶ್ಚಾತ್ಯರು ರೂಪಿಸಿದ್ದ ಶಾಸ್ತ್ರಸಿದ್ಧಾಂತಗಳ ಜೊತೆಗೆ ದೇಶಿಸಿದ್ಧಾಂತಗಳನ್ನು ರೂಪಿಸಿಕೊಳ್ಳುವುದು ಕನ್ನಡದ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

ಸ್ವಾತಂತ್ರ್ಯ ಕಾಲಘಟ್ಟದ ನಂತರ ಕೆಲವು ವಿದ್ವಾಂಸರು ಜಾನಪದವನ್ನು ಅಕಾಡೆಮಿಕ್ ಶಿಸ್ತಿನಲ್ಲಿ ಪಾಶ್ಚಾತ್ಯ ಸಿದ್ಧಾಂತಗಳ ಮೂಲಕ ಅಧ್ಯಯನ ಮಾಡಲು ಪ್ರಾರಂಭಿಸಿದರು. ಇನ್ನೂ ಕೆಲವು ವಿದ್ವಾಂಸರು ಪಾಶ್ಚಾತ್ಯ ಸಿದ್ಧಾಂತಗಳನ್ನು ಕೈಬಿಟ್ಟು ದೇಶೀ ಸಿದ್ಧಾಂತಗಳನ್ನು ರೂಪಿಸಿಕೊಂಡು ಅಧ್ಯಯನ ಮಾಡಿದರು. ಬಿ.ಎ.ವಿವೇಕ ರೈ ಅವರು 'ಅನ್ವಯಿಕ ಜಾನಪದ' ಕೃತಿಯಲ್ಲಿ "ಒಂದು ಪ್ರದೇಶದ ಜಾನಪದ ಸಂಪ್ರದಾಯ, ಆಚರಣೆಗಳು ಹಾಗೂ ಸಾಂಸ್ಕೃತಿಕ ಸನ್ನಿವೇಶಗಳನ್ನು ಗೊತ್ತುಮಾಡಿ ಕೆಟ್ಟದ್ದನ್ನು ನಾಶಮಾಡುವುದು ಹಾಗೂ ಒಳ್ಳೆಯ ಅಂಶವನ್ನು ಬೆಳೆಸುವುದು ಅಭಿವೃದ್ಧಿಪಡಿಸುವುದು ಆಗಿದೆ ಎಂದು ಹೇಳುತ್ತಾರೆ"[೧೧] ಇವರ ಈ ಜಾನಪದ ಪರಿಕಲ್ಪನೆ ಇತ್ತೀಚೆಗೆ ಹೆಚ್ಚು ಅಧ್ಯಯನ ಗೊಳ್ಳುತ್ತಿರುವ ಬಗೆಯಾಗಿದೆ.

ಒಂದು ದೇಶದಿಂದ ಇನ್ನೊಂದು ದೇಶದ ಸಾಂಸ್ಕೃತಿಕ ಸಂದರ್ಭಗಳು ಬೇರೆ ಬೇರೆಯಾಗಿರುತ್ತವೆ. ಜಾತಿ, ಮತ, ಧರ್ಮ ಇವೆಲ್ಲಾ ಪರಸ್ಪರ ಅಂತರವನ್ನು ಹೊಂದಿದ್ದು ಇವು ಉಪಾಂಗಗಳಾಗುತ್ತವೆ. ಇದೆಲ್ಲದರ ಜಿಜ್ಞಾಸೆಯ ಸಂವಾದವೇ ದೇಶೀವಾದ ಎಂದು ಇನ್ನೊಂದು ನೆಲೆಯಲ್ಲಿ ಗುರುತಿಸಬಹುದು.. ದೇಶಿವಾದ ಒಂದು ಜೀವನ ಕ್ರಮವಾಗಿದೆ. ಒಂದು ಜನಪದ ಸಂಸ್ಕೃತಿಯೊಳಗೆ ದೇಶೀಯತೆ ಎಂಬ ಪ್ರಜ್ಞೆ ಇರುವುದಿಲ್ಲ. ಅನ್ಯ ಜನಪದ ಅಥವಾ ಸಂಸ್ಕೃತಿಯೊಂದಿಗಿನ ಹೋಲಿಕೆಯಿಂದ ದೇಶೀತನದ ಅರಿವು ಮೂಡುತ್ತದೆ. ಸ್ವದೇಶಿ-ವಿದೇಶಿ ಇವರೆಡರ ಮುಖಾಮುಖಿಯಿಂದ ದೇಶಿ ಪ್ರಜ್ಞೆ ಹುಟ್ಟುವುದು. "ಪ್ರಸ್ತುತ ಭಾರತ ದೇಶಿ ಚಿಂತನೆ ಎರಡು ನೆಲೆಯಲ್ಲಿ ಕೆಲಸ ಮಾಡುತ್ತದೆ. ನಿಜವಾದ ಸಾಂಸ್ಕೃತಿಕ ದೇಶಿಯತೆ ಭಾಷಾಸಂಸ್ಥಾನಗಳ ಅಸ್ತಿತ್ವದ ನೆಲೆಯಲ್ಲಿದೆ. ಹಾಗಾಗಿ ಪ್ರಧಾನ ಸಂಸ್ಕೃತಿಗಳು ಭಾಷಾ ನೆಲೆಗಳ ಮೂಲಕ ಅಧೀನ ಸಂಸ್ಕೃತಿಗಳ ಹಿಡಿತವನ್ನು ರಾಜಕೀಯ ನೆಲೆಯಲ್ಲಿ ಸಾಧಿಸಿದವು. ಎಷ್ಟರಮಟ್ಟಿಗೆ ಎಂದರೆ ಭಾಷಾವಾರು ಪ್ರಾಂತ್ಯಗಳು ಅಸ್ಥಿರತೆಯನ್ನು ಸೃಷ್ಟಿಸುವ ಮೂಲಗಳು ಎಂದು ಸಾಮಾನ್ಯ ಜನ ತಿಳಿಯುವ ಸ್ಥಿತಿಯನ್ನು ಅವು ತಲುಪಿವೆ"[೧೨] ನೆಲಮೂಲ ನಿವಾಸಿಗಳ ನಿಜವಾದ ಸಮಾನತೆ ಸಿಗುವುದು ಈ ಭಾಷಾದೇಶಗಳ ಅಸ್ತಿತ್ವವಾದ ಸಾಂಸ್ಕೃತಿಕ ದೇಶೀಯತೆಯ ಪ್ರತಿಪಾದನೆಯಿಂದ ಎಂದು ಹೇಳಬಹುದು.

ಜಗತ್ತಿನ ಮಟ್ಟದಲ್ಲಿ ಏಕರೂಪಿಯಾದ ಪಾಶ್ಚಾತ್ಯ ಸಂಸ್ಕೃತಿಯನ್ನು ಹೇರುವ ಪ್ರಯತ್ನಗಳು ಜಾಗತೀಕರಣದ ಹಿನ್ನೆಲೆಯಲ್ಲಿ ನಡೆಯುವಾಗ ದೇಶೀ ಸಂಸ್ಕೃತಿಗಳು ಇದಕ್ಕೆ ಪ್ರತಿಭಟನೆಯಾಗಿ ರೂಪಗೊಳ್ಳುತ್ತವೆ. ಸಂಸ್ಕೃತಿಯನ್ನು ಪ್ರತಿಭಟನೆಯ ಅಸ್ತ್ರವಾಗಿ ಬಳಸುವುದು ಹೆಚ್ಚಾಗಿ ಕಂಡುಬರುತ್ತದೆ. ಭಾರತದಲ್ಲಿ ಏಕರೂಪದ ಹಿಂದೂ ಸಂಸ್ಕೃತಿಯನ್ನು ಉಳಿದ ನೂರಾರು ಸಂಸ್ಕೃತಿಗಳ ಮೇಲೆ ಹೇರುವ ಪ್ರಯತ್ನ ನಡೆದಾಗಲೂ ಈ ಬಗೆಯ ಪ್ರತಿರೋಧ ಹುಟ್ಟಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ದೇಶೀಯ ಜ್ಞಾನ ಪರಂಪರೆಗಳಿಗೆ ವಿಶೇಷವಾಗಿ ಮಹತ್ವ ಉಂಟಾಗುತ್ತದೆ. ಜಾನಪದವು ಕೂಡ ದೇಶಿಯ ಪರಂಪರೆಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಈ ಹಿನ್ನೆಲೆಯಲ್ಲಿ ಅದು ಪ್ರಾಮುಖ್ಯತೆ ಪಡೆಯುತ್ತದೆ.

“ಜಾನಪದವು ಸ್ಥಳೀಯ ಸಂಸ್ಕೃತಿಯನ್ನು ತನ್ನ ಸಾಹಿತ್ಯ ಹಾಗೂ ಸಂಪ್ರದಾಯಗಳ ಮೂಲಕ ಆಧುನಿಕ ಜಗತ್ತಿನೊಂದಿಗೆ ವರ್ತಮಾನವನ್ನು ಅನುಸರಿಸಿಕೊಂಡು ಚರಿತ್ರೆಯನ್ನು ಸ್ಥಾಪಿಸಿಕೊಳ್ಳುತ್ತದೆ”[೧೩] ದೇಶೀಸಂಶೋಧನೆಯು ವಿಶೇಷವಾಗಿ ತಿರಸ್ಕೃತ ಜ್ಞಾನಪರಂಪರೆಗಳ ಬೇರನ್ನು ಹಿಡಿದು ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಕಂಡುಕೊಳ್ಳುತ್ತದೆ. ಈ ಪರಂಪರೆಗಳಲ್ಲಿ ಮೌಖಿಕ ಸಾಹಿತ್ಯದ ಜೊತೆಗೆ ತನ್ನ ಮೂಲ ಪರಂಪರೆಗಳ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಂಡಿರುತ್ತದೆ. ಇವುಗಳು ಜಾನಪದ ಅಧ್ಯಯನದ ಹಿನ್ನೆಲೆಯಲ್ಲಿ ದೇಶೀಯತೆಯನ್ನು ಪ್ರತಿಪಾದಿಸುತ್ತವೆ. ಈ ದೃಷ್ಟಿಯಲ್ಲಿ ನೋಡುವುದಾದರೆ ದೇಶೀವಾದವು ಕಳೆದು ಹೋದದ್ದರಲ್ಲಿ ಬದುಕುತ್ತಿರುವ ಸ್ಥಿತಿ, ಬದುಕಬೇಕಾದ ಸ್ಥಿತಿ, ಒಂದು ವಸ್ತುವನ್ನು ನಿರ್ಬಂಧಿಸುವುದು ಮತ್ತೊಂದು ಮುಂದಕ್ಕೆ ಬಿಟ್ಟು ಬೆಳೆಸುವುದು. ಇದು ಒಂದು ವಾಙ್ಮಯ ರೂಪವಲ್ಲದೆ, ಸಿದ್ಧ ಸ್ವರೂಪವಲ್ಲದೆ, ಭವಿಷತ್ತಿನ ಸುತ್ತ ಹಿಂದಿನದು, ಇಂದಿನದು ಕೂಡಿಸಿ ಕಳೆದು ತೆಗೆದ ಮೊತ್ತವಾಗಿದೆ. ಭೌತಿಕವಾಗಿ ಚಿಂತಿಸಿದಾಗ ಸಂಸ್ಕೃತಿಯ ಪರಸ್ಪರ ವಿವೇಚನೆಯಲ್ಲಿ ಪ್ರತ್ಯೇಕವಾಗಿ ಎದ್ದು ಕಾಣುವಂಥದ್ದು. ಇದು ಕೂಡ ಆರ್ಥಿಕ, ಸಾಮಾಜಿಕ ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳ ಪರಿಣಾಮದ ಕೂಸು, ದೇಶೀ ಜಾನಪದ ಎಂದರೆ ಒಂದು ಜನಾಂಗವಾದ, ನಿರ್ದಿಷ್ಟವಾದ, ಆರ್ಥಿಕ, ಸಮಾಜಿಕ, ಚರಿತ್ರೆಯನ್ನು ಹೊಂದಿದ್ದು, ಈ ಚರಿತ್ರೆ ಭೌಗೋಳಿಕವಾಗಿ ಒಂದು ಪ್ರದೇಶದಲ್ಲಿಯ ನಂಬಿಕೆ, ನಡವಳಿಕೆ, ಆಚರಣೆ, ಅಡುಗೆ, ಉಡುಗೆ-ತೊಡುಗೆ ಆಟಿಕೆಗಳಂಥ ವಸ್ತುಗಳಲ್ಲಿ ದಾಖಲಾಗಿರುತ್ತದೆ. ಅದು ಆಯಾ ಜನಪದದೊಂದಿಗೆ ಭಾವನಾತ್ಮಕ ಸಂಬಂಧವನ್ನು ಪಡೆದುಕೊಂಡಿರುವುದರಿಂದ ಅದು ಅವರ ಜೀವನದೃಷ್ಟಿಕೋನವು ಆಗಿರುತ್ತದೆ. ಹಾಗಾಗಿ ಜಾನಪದ ಎಂದರೆ ಅದು ನಿಂತ ನೀರಲ್ಲ. ಹಿಂದಿನಿಂದಲೂ ಚಲನಶೀಲತೆಯ ನೆಲೆಯಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಹಾಗೂ ಸಮುದಾಯಗಳ ಮೂಲಕ ಆಚರಣೆಗಳು, ಸಂಪ್ರದಾಯಗಳು ನಂಬಿಕೆಗಳ ಜೊತೆಯಲ್ಲಿಯೇ ಬಂದಿರುತ್ತದೆ. ಜಾನಪದದ ವಿವಿಧ ಪ್ರಕಾರಗಳು ಪ್ರಾದೇಶಿಕ ನೆಲದ ಸಾಂಸ್ಕೃತಿಕ ಬೇರುಗಳು. ಇವುಗಳನ್ನು ದೇಶಿವಾದದ ನೆಲೆಯಲ್ಲಿ ಅಧ್ಯಯನ ಮಾಡಬೇಕಾಗಿದೆ.

೪.೩. ಸಾಂಸ್ಕೃತಿಕ ನೆಲೆಗಳು

ಯಾವುದೇ ಒಂದು ಸಂಸ್ಕೃತಿಗೆ ಪ್ರತ್ಯೇಕ ಅಸ್ತಿತ್ವವಿದ್ದು ಅದು ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿ ತನ್ನದೇ ಆದ ವಿಶಿಷ್ಟಾಂಶಗಳನ್ನು ಪ್ರಕಟಪಡಿಸಿದರೆ ಅದನ್ನು ಆಯಾ ಸಂಸ್ಕೃತಿಯ 'ಅನನ್ಯತೆ' ಎಂದು ಕರೆಯಬಹುದು. ತಮ್ಮನ್ನು ತಾವು ಗುರುತಿಸಿಕೊಳ್ಳುವ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆಯೇ 'ಸಾಂಸ್ಕೃತಿಕ ಅನನ್ಯತೆ' ವಸ್ತಾವಿಕತೆಯನ್ನು ಮೀರುವ ತನ್ನನ್ನು ತಾನು ಕಂಡುಕೊಳ್ಳುವ ನಿಜದ ನೆಲೆಯನ್ನು ಹುಡುಕುವ ಪ್ರಯತ್ನವೆ ಸಾಂಸ್ಕೃತಿಕ ಅನನ್ಯತೆಯ ಅನ್ವೇಷಣೆಯ ಪಧಾನ ಗುರಿ. ಆದರೆ ಆ ಅನನ್ಯ ಅಂಶಗಳು ಆ ಗೊತ್ತಾದ ಸಮೂಹಕ್ಕೆ ಮಾತ್ರ ವಿಶಿಷ್ಟವಾಗಿರುತ್ತವೆ. ಸ್ವಾತಂತ್ರ್ಯನಂತರದಲ್ಲಿ ಸಮುದಾಯಗಳ ಅಧ್ಯಯನಗಳು ಈ ನೆಲೆಯಲ್ಲಿ ವ್ಯಕ್ತಗೊಂಡಿವೆ. ಜಾನಪದ ಅಧ್ಯಯನಕಾರರು ಜಾನಪದವನ್ನು ನಿರ್ವಸಾಹತೀಕರಣ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಐತಿಹಾಸಿಕವಾಗಿ ವಸಾಹತು ಆಕ್ರಮಣವನ್ನು ಒಳಗೊಂಡು ಅದರಿಂದ ಬಿಡುಗಡೆಯನ್ನು ಹೊಂದುವ ಪ್ರಕ್ರಿಯೆ. ಇನ್ನೊಂದು ಆಧುನಿಕ ಪರಿಭಾಷೆಯಾಗಿ ಬಳಸಿದಾಗ ವಿಶಾಲಾರ್ಥದಲ್ಲಿ ಭಾಷೆ, ಸಂಸ್ಕೃತಿ, ಶಿಕ್ಷಣ, ಸಾಹಿತ್ಯ, ರಾಜಕೀಯ, ಆರ್ಥಿಕ ವಲಯಗಳಿಗೆ ಅನ್ವಯಿಸುವಂತೆ ಯಜಮಾನ್ಯ ವಿಚಾರಧಾರೆಯನ್ನು ಎದುರಿಸುವುದು ಹಾಗೂ ಅದಕ್ಕೆ ಪರ್ಯಾಯ ನೆಲೆಗಳನ್ನು ಕಂಡುಕೊಳ್ಳುವುದು. ವಸಾಹತು ಆಡಳಿತಕ್ಕೆ ಒಳಪಟ್ಟ ದೇಶಗಳಲ್ಲಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡುತ್ತಿರುವಾಗಲೇ ದೇಶಿಯ ಸಮಾಜಗಳಲ್ಲಿದ್ದ ಯಜಮಾನಿಕೆಯ ಸ್ವರೂಪಗಳನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆಯು ಸಮಾನವಾಗಿ ನಡೆಯತೊಡಗಿತು. ಇವುಗಳನ್ನು ಕೂಡ ನಿರ್ವಸಾಹತೀಕರಣದ ಪ್ರಕ್ರಿಯೆಗಳಾಗಿಯೇ ಗುರುತಿಸಬಹುದು. ವಿಶಾಲಾರ್ಥದಲ್ಲಿ ಎಲ್ಲ ದೇಶ, ಭಾಷೆಗಳ ಸಬಾಲ್ಟ್ರನ್ ಪ್ರಜೆಗಳನ್ನೊಳಗೊಂಡಂತೆ ವಿಮೋಚನೆಯನ್ನು ಸಹ ಇಂದು ನಿರ್ವಸಾಹತೀಕರಣದಲ್ಲಿ ಗುರುತಿಸಲಾಗುತ್ತದೆ. ಭಾರತದಲ್ಲಿ ಬ್ರಿಟಿಷರು ಯಜಮಾನ್ಯ ಸಂಸ್ಕೃತಿಯನ್ನು ರೂಪಿಸಿದ ಸಂಗತಿ ಚರಿತ್ರೆಯಲ್ಲಿ ದಾಖಲಾಗಿರುವುದನ್ನು ನೋಡಬಹುದು ಹಾಗಾಗಿ ತಳಸಮುದಾಯಗಳು ತಮ್ಮ ಅನನ್ಯತೆಯನ್ನು ಸಂಸ್ಕೃತಿಯ ಮೂಲಕ ಕಟ್ಟಿಕೊಳ್ಳಲು ಜನಪದ ಸಾಹಿತ್ಯವನ್ನು ಪ್ರಮುಖ ಆಕರವಾಗಿ ಬಳಸಿಕೊಳ್ಳುತ್ತವೆ.

ಬ್ರಿಟಿಷರ ಒಡೆದು ಆಳುವ ಕ್ರಮವು ಈ ಪ್ರಕಾರದ ಒಂದು ಶಕ್ತಿಯಾಗಿದೆ. ಆದ್ದರಿಂದಲೆ ವಸಾಹತುಶಾಹಿಯಲ್ಲೂ ಸಾಮಾಜಿಕ, ಆರ್ಥಿಕ, ರಾಜಕೀಯ ಆಳ್ವಿಕೆಯಾಗಿ ಪರಿಗಣಿಸಿದರೆ, ಬೌದ್ಧಿಕ ಸಂಸ್ಕೃತಿಯು ಪ್ರಭುತ್ವದ ಆಳ್ವಿಕೆಯಾಗಿ ಪರಿಗಣಿಸಲಾಗುತ್ತದೆ. ವಸಾಹತುಶಾಹಿಯಿಂದ ಬಿಡುಗಡೆಗೊಂಡ ರಾಷ್ಟ್ರವು ಯಜಮಾನ್ಯ ಸಂಸ್ಕೃತಿಯಲ್ಲಿ ವಿಲೀನವಾಗಿರುತ್ತದೆ. ಇಲ್ಲಿ ತಳ ಸಮುದಾಯಗಳು ಯಜಮಾನ್ಯ ಸಂಸ್ಕೃತಿಯಲ್ಲಿ ಸೇರಿಕೊಂಡಿರುತ್ತದೆ. ಅದಕ್ಕಾಗಿ ತಳ ಸಮುದಾಯಗಳು ಯಜಮಾನ್ಯ ಸಂಸ್ಕೃತಿಯಿಂದ ಬಿಡುಗಡೆಗೊಂಡು ತಮ್ಮದೇ ಆದ ಭಾಷೆ, ಸಂಸ್ಕೃತಿ, ಅಧಿಕಾರ, ಶಿಕ್ಷಣ, ಸಾಹಿತ್ಯ ನೆಲೆಗಳನ್ನು

ಪರ್ಯಾಯವಾಗಿ ಕಟ್ಟಿಕೊಳ್ಳುತ್ತವೆ. ಈ ಪ್ರಕ್ರಿಯೇ ವಸಾಹತೋತ್ತರ ಕಾಲದಲ್ಲಿ ಹೆಚ್ಚು ಚರ್ಚಿತಗೊಂಡಿದೆ. "ನಿರ್ವಸಾಹತೀಕರಣ ಎನ್ನುವುದು ಎಲ್ಲಾ ಮಾನವಿಕಗಳನ್ನು ಒಳಗೊಳ್ಳುವ ಪ್ರಕ್ರಿಯೆಯಾಗಿದೆ. ಒಂದೇ ಕ್ಷೇತ್ರಕ್ಕೆ ಸೀಮಿತಗೊಳಿಸಿ ಮಾತನಾಡುವುದಷ್ಟು ಇದೊಂದು ಚಾರಿತ್ರಿಕ ಪ್ರಕ್ರಿಯೆಗಳೂ ಆಗಿವೆ. ಒಂದೊಂದು ಪಾತಾಳಿಯಲ್ಲಿಟ್ಟು ನೋಡುವಾಗ ನಿರ್ವಸಾಹತೀಕರಣದ ಅರ್ಥಗಳು ವಿಭಿನ್ನವಾದ ಅರ್ಥಗಳನ್ನು ಪಡೆದುಕೊಳ್ಳುತ್ತವೆ"[೧೪] ಇದು ಸಾಂಸ್ಕೃತಿಕ ವಿಮೋಚನೆ ಪಡೆದು ಸಾಂಸ್ಕೃತಿಕ ಅನನ್ಯತೆಗಾಗಿ ಹೊಸ ಸಾಮಾಗ್ರಿಗಳನ್ನು ಸೃಷ್ಟಿಸುವುದಾಗಿದೆ.

೪.೪. ಜನಪದ ಸಾಹಿತ್ಯದ ವಿಮರ್ಶಾತ್ಮಕ ನೆಲೆಗಳು

ಆಧುನಿಕ ಕನ್ನಡ ಶಿಷ್ಟಸಾಹಿತ್ಯದಲ್ಲಿ ವಿಮರ್ಶಾ ಪ್ರಸ್ಥಾನಗಳು ಬಳಕೆಗೊಂಡಿವೆ. ಈ ವಿಮರ್ಶಾ ಪ್ರಸ್ಥಾನಗಳು ಶಿಷ್ಟಸಾಹಿತ್ಯದ ಗದ್ಯ, ಕಥೆ, ಕಾವ್ಯ, ಪ್ರಬಂಧ, ನಾಟಕ, ಪದ್ಯ, ಕಾದಂಬರಿ, ಇತ್ಯಾದಿ ಅಂಶಗಳನ್ನು ವಿಶ್ಲೇಷಿಸುತ್ತ ಬಂದಿದೆ. ಇವುಗಳಂತೆ ಜನಪದ ಸಾಹಿತ್ಯದಲ್ಲೂ ಗೀತೆ, ಕಥೆ, ಕಾವ್ಯ, ಗಾದೆ, ಒಗಟು, ಕಲೆ, ರಂಗಭೂಮಿ, ಆಟ, ಸಂಗೀತ, ವೈಧ್ಯ, ಮಂತ್ರ, ಮಾಟ, ನೃತ್ಯ, ಇತ್ಯಾದಿ, ಅಂಶಗಳು ಸೇರಿವೆ. ಈ ಪ್ರಕಾರಗಳು ಆಧುನಿಕ ವಿಮರ್ಶೆಗೆ ಒಳಗಾಗಿವೆ. ಹಲವು ವಿದ್ವಾಂಸರು ಜನಪದ ಪ್ರಕಾರಗಳನ್ನು ತಾತ್ವಿಕವಾಗಿ ವಿವೇಚಿಸುತ್ತಾ ಬಂದಿದ್ದಾರೆ. ಅನ್ಯಜ್ಞಾನ ಶಿಸ್ತಿನಲ್ಲಿ ವಿಮರ್ಶೆಗೆ ಒಳಪಡಿಸಿದ್ದಾರೆ. ಆಧುನಿಕೋತ್ತರ ಸಂದರ್ಭದಲ್ಲಿ ಜನಪದ ಸಾಹಿತ್ಯ ಸಂಪಾದನೆ, ಸಂಗ್ರಹದ ಜೊತೆಗೆ ವಿಶ್ಲೇಷಿಸುವ, ವಿಮರ್ಶಿಸುವ ಕೆಲಸ ಪ್ರಾರಂಭವಾದವು. "ಶಿಷ್ಟ ಸಾಹಿತ್ಯ ವಿಮರ್ಶೆಯ ಪರಿಕಲ್ಪನೆಗಳಂತೆ ಜನಪದ ಸಾಹಿತ್ಯವನ್ನು ವಿಮರ್ಶಿಸುವ ಪ್ರಸ್ಥಾನಗಳನ್ನು ರೂಪಿಸಿಕೊಳ್ಳಲಾಯಿತು. ಶಿಷ್ಟಸಾಹಿತ್ಯದಲ್ಲಿ ಸಾಹಿತ್ಯ ವಿಮರ್ಶಕನ ಮುಖ್ಯ ಕಾರ್ಯಗಳಲ್ಲಿ ಸಾಹಿತ್ಯ ಕೃತಿಗಳ ಅಧ್ಯಯನ, ವಿವರಣೆ, ವ್ಯಾಖ್ಯಾನ, ಮೌಲ್ಯಮಾಪನ ಮಾಡುವುದಾಗಿದೆ. ಇವುಗಳೆಲ್ಲವೂ ವಿಮರ್ಶಕನು ಸಾಮಾಜಿಕ ಬದ್ಧವಾಗಿ ವೈಚಾರಿಕವಾಗಿ ಸಾಹಿತ್ಯ ಬಗೆಗಿನ ನಿಲುವನ್ನು ತಾಳುತ್ತಾನೆ. ಈ ಮಾದರಿಯಲ್ಲಿಯೇ ಜನಪದ ಸಾಹಿತ್ಯವನ್ನು ವಿಮರ್ಶಿಸುವ ಕ್ರಮವನ್ನು ವೀರಣ್ಣ ದಂಡೆ ಅವರು 'ಪ್ರಥಮ ವಿಮರ್ಶೆ' ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕುತ್ತಾರೆ"[೧೫] ಇದು ಜನಪದ ಕಾವ್ಯಗಳಿಗೆ ಅನ್ವಯವಾಗುವ ವಿಮರ್ಶಾ ಪಂಥವಾಗಿದೆ. "ಹಾಡುವ ಜನಪದ ಕಾವ್ಯವನ್ನು ಓದುವ ಕಾವ್ಯವನ್ನಾಗಿ ಮಾರ್ಪಡಿಸಿಕೊಂಡು ಲಿಖಿತ ವಿಮರ್ಶೆಗೆ ಒಳಪಡಿಸುವುದಾಗಿದೆ"[೧೬] ಹಾಗಾಗಿ ಯಾವುದೆ ಸಿದ್ಧಾಂತಗಳು ಶಿಷ್ಟ ಹಾಗೂ ಜನಪದ ಸಾಹಿತ್ಯದ ಅಂತರಂಗದಲ್ಲಿ, ಅವುಗಳ ಒಳಗಿನಿಂದಲೇ ಹುಟ್ಟಿಕೊಳ್ಳತ್ತವೆ. ಲಿಖಿತ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳು ಅವುಗಳ ಗರ್ಭದಲ್ಲಿಯೇ ಹುಟ್ಟಿಕೊಂಡಿರುವ ಪರಿಕಲ್ಪನೆಗಳಾಗಿವೆ. ಇವುಗಳಂತೆ ಜನಪದ ಕಾವ್ಯ, ಕಥೆ, ಗಾದೆ, ಮುಂತಾದ ಸಾಹಿತ್ಯ ಪ್ರಕರಗಳನ್ನು ಲಿಖಿತವಾಗಿಸಿಕೊಂಡು, ಶಿಷ್ಟ ಸಾಹಿತ್ಯ ವಿಮರ್ಶೆಯಂತೆ ಮೌಖಿಕ ವಿಮರ್ಶೆ ಹುಟ್ಟಿಕೊಳ್ಳುತ್ತದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದಿತ, ಸಂಶೋಧನಾ ಕೃತಿಗಳನ್ನು ಕಾರ್ಲ್‌ಯೂಂಗ್ ಪ್ರತಿಪಾದಿಸಿರುವ 'ಕೃತಿ ಕೇಂದ್ರಿತ ವಿಮರ್ಶೆ' ಹಾಗೂ 'ಚಿರಂತನ ಪ್ರತೀಕ ವಿಮರ್ಶೆ'ಯಲ್ಲಿ ವಿಶ್ಲೇಷಿಸುವ

ಅಗತ್ಯವಿದೆ. ಇವನು ಈ ವಿಮರ್ಶಾ ಪಂಥಗಳನ್ನು ಮನೋವೈಜ್ಞಾನಿಕ ನೆಲೆಯೊಳಗೆ ವಿವರಿಸಿದ್ದಾನೆ. ಪಾಶ್ಚಾತ್ಯ ನಾಗರೀಕತೆ, ಮಾನವನ ಭೌತಿಕ ಹಾಗೂ ಬೌದ್ಧಿಕ ಶಕ್ತಿಗೆ ಪ್ರಾಧಾನ್ಯ ಕೊಡುತ್ತಾ, ಮಾನವನ ಆಂತರಿಕ ಜ್ಞಾನಶಕ್ತಿಯನ್ನು ಕಡೆಗಣಿಸಿದೆ. ಹಾಗಾಗಿ ಮಾನವನ ಆಂತರಿಕ ಜ್ಞಾನ ಮತ್ತು ಸೃಜನಾತ್ಮಕ ಭಾವನೆಗಳಿಗೆ ಒತ್ತುಕೊಟ್ಟು ಅವುಗಳನ್ನು ಸಂಸ್ಕೃತಿಯನ್ನು ಖಚಿತಪಡಿಸುವುದಾಗಿದೆ. ಯೂಂಗ್‌ನು ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮೂರು ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾನೆ. ೧. ಸಾಮೂಹಿಕ ಸುಪ್ತ ಪ್ರಜ್ಞೆ ೨. ಪುರಾಣಗಳ ಸ್ವರೂಪ ೩. ಚಿರಂತನ ಪ್ರತೀಕ. ಇವುಗಳ ಮೂಲಕ ಮನುಷ್ಯನ ಮನಸ್ಸಿನ ಸ್ಥರಗಳನ್ನು ಗುರುತಿಸುತ್ತಾನೆ. ಜಾಗೃತ ಪ್ರಜ್ಞೆ(Conscious) ಸುಪ್ತಪ್ರಜ್ಞೆ(Unconscious) ಉಪಪ್ರಜ್ಞೆ(Subconscious) ವ್ಯಕ್ತಿಯ ಮನಸ್ಸಿನ ಅನುಭವಗಳ ಮೂಲಕ ಒಂದು ಸಾಮೂಹಿಕ ನೆಲೆಯಲ್ಲಿ ಈ ಅಂಶಗಳು ರೂಪಗೊಂಡಿವೆ. ಹಾಗಾಗಿ ಪ್ರತಿಯೊಂದು ಜನಾಂಗವೂ ಅನುಭವದ ಸುಪ್ತನೆಲೆಯನ್ನು ಹೊಂದಿರುತ್ತದೆ. ಸಾಮೂಹಿಕ ಸುಪ್ತಪ್ರಜ್ಞೆಯ ಅಭಿವ್ಯಕ್ತಿ ಸಾಧನ ಎಂದರೆ 'ಚಿರಂತನ ಪ್ರತೀಕಗಳು'(Archetypes) ಎಂದು ಯೂಂಗ್ ಹೇಳಿದ್ದಾನೆ. "ಪುರಾಣಗಳು, ಕನ್ನಡ ಕಥೆಗಳು, ಸಾಮೂಹಿಕ ಸುಪ್ತ ಪ್ರಜ್ಞೆಯಿಂದ ರೂಪಿಸಲ್ಪಟ್ಟ ಆದಿಮ ಪ್ರತಿಮೆಗಳಾಗಿ ಅಥವಾ ಚಿರಂತನ ಸಾಂಕೇತಿಕ ರಚನೆಗಳೆಂದು ಹೇಳಿರುವುದು"[೧೭] ಈ ಪ್ರತಿಪಾದನೆಯಂತೆ ಜನಪದ ಸಾಹಿತ್ಯದಲ್ಲಿ ಬರುವ ರೂಪಗಳು ಕಲ್ಪನೆಗಳಾಗಿರದೆ ವಾಸ್ತವ ಸ್ಥಿತಿಯನ್ನು ತಿಳಿಸುತ್ತವೆ. ಮಾನವ ತನ್ನ ಸ್ವಅನುಭವಗಳನ್ನು ಸಾಮೂಹಿಕ ನೆಲೆಯಲ್ಲಿ ತನ್ನನ್ನು ಸಾಂಸ್ಕೃತಿಕ ಸನ್ನಿವೇಷಗಳನ್ನು ಆಂತರಿಕ ಶಕ್ತಿಗಳಿಂದ ರಚಿಸಿಕೊಂಡಿರುತ್ತಾನೆ.

"ಒಂದು ಜನಾಂಗದ ಸಂಸ್ಕೃತಿಯ ತಿರುಳನ್ನು ಅರಿಯಬೇಕಾದರೆ ಆ ಜನಾಂಗದಿಂದ ರಚಿಸಲ್ಪಟ್ಟ ಪುರಾಣಗಳನ್ನು ಮತ್ತು ಜನಪದ ಕಥೆಗಳನ್ನು ಸಾಂಕೇತಿಕವಾಗಿ ಅರ್ಥೈಸುವುದು ಮುಖ್ಯವಾಗುತ್ತದೆ. ಒಂದು ಜನಾಂಗದ ಮೂಲಭೂತ ಆದರ್ಶಗಳು ಆಶೆ ಆಕಾಂಕ್ಷೆಗಳು, ನೀತಿಗಳು ಮತ್ತು ಕರ್ತವ್ಯಗಳು ಕಲ್ಪನೆ ಇತ್ಯಾದಿಗಳಲ್ಲಿ ಅದರ ಪುರಾಣಗಳಲ್ಲಿ ಹಾಗೂ ಜಾನಪದದಲ್ಲಿ ರೂಪಾತ್ಮಕವಾಗಿ ಅಭಿವ್ಯಕ್ತಿಗೊಂಡಿರುತ್ತದೆ"[೧೮] ಒಂದು ಜನಾಂಗಕ್ಕೆ ಸೀಮಿತವಾಗದೇ ಮಾನವಕುಲಕ್ಕೆ ಸಮಾನವಾದ ಅನೇಕ ಪೌರಾಣಿಕ ವಿನ್ಯಾಸಗಳನ್ನು ಯೂಂಗ್ ಗುರುತಿಸುತ್ತಾನೆ. ಅವುಗಳಲ್ಲಿ ಮುಖ್ಯವಾಗಿ ಸಾವು, ಪುನರ್ಜನ್ಮ, ಪರಿಭ್ರಮಣ, ಆಕಾಶ ತಂದೆ ಮತ್ತು ಭೂಮಿತಾಯಿ; ಕತ್ತಲೆ ಬೆಳಕುಗಳ ದ್ವಂದ್ವ, ಇತ್ಯಾದಿ. ಒಂದು ಕೃತಿಯ ಆಂತರಿಕ ರಚನೆಯಲ್ಲಿ ಕಂಡುಬರುವ ಇಂತಹ ರೂಪಕ ವಿನ್ಯಾಸಗಳಲ್ಲಿ ಅಲ್ಲದೇ ಯೂಂಗ್ ಗುರುತಿಸುವ ಇತರ ಪ್ರತೀಕಗಳೆಂದರೆ; ವೃದ್ಧ ಜ್ಞಾನಿ, ಮೋಹಿನಿ, ದೈವಿಕಶಿಸು, ತಂತ್ರಗಾರಿಕೆ, ಇತ್ಯಾದಿ. ಯೂಂಗ್ ಮಾನವನ ಸ್ವಾನುಭವಗಳು ಸಂಸ್ಕೃತಿ, ಜ್ಞಾನಶಿಸ್ತುಗಳು ಒಂದು ಜನಾಂಗದಿಂದ ರಚಿಸಿಕೊಂಡಿರುವ ಮೌಖಿಕ ನೆಲೆಯಲ್ಲಿರುತ್ತವೆ ಎಂದು ಪ್ರತಿಪಾದಿಸಿದನು. ಹಾಗಾಗಿ ಇವನು ರೂಪಿಸಿದ ಚಿರಂತನ ಪ್ರತೀಕ ವಿಮರ್ಶೆ ಚಾರಿತ್ರಿಕ ವಿಮರ್ಶೆಯ ವಿರುದ್ಧದಲ್ಲಿದೆ. ಇಂತಹ ವಿಮರ್ಶೆ ಮಾನವಶಾಸ್ತ್ರ, ಜಾನಪದ ಅಧ್ಯಯನ. ಮತ್ತು ಭಾಷಾವಿಜ್ಞಾನ. ಈ ಕ್ಷೇತ್ರಗಳಲ್ಲಿ ಸಿಗುವ ಒಳನೋಟಗಳನ್ನು ಉಪಯೋಗಿಸಿಕೊಳ್ಳತ್ತದೆ.

ಲಿಖಿತ ಸಾಹಿತ್ಯವನ್ನು ಅನುಸರಿಸಿ ಹುಟ್ಟಿರುವ ವಿಮರ್ಶಾ ಪ್ರಸ್ಥಾನಗಳಲ್ಲಿ ಕೃತಿ ಕೇಂದ್ರಿತ ವಿಮರ್ಶೆಯ ಕವಲುಗಳಲ್ಲಿ ಬರುವ ಚಿರಂತನ ಪ್ರತೀಕ ವಿಮರ್ಶೆ ಮೂಲತಃ ಮಾನವಶಾಸ್ತ್ರ ಅಧ್ಯಯನ ಶಿಸ್ತಿನಲ್ಲಿ ಬರುತ್ತದೆ. ಜನಪದ ಸಾಹಿತ್ಯವನ್ನು ಎಪ್ಪತ್ತರ ಕಾಲದಲ್ಲಿ ವಿಮರ್ಶೆಯ ಪರಿಕಲ್ಪನೆಯೊಳಗೆ ವಿಶ್ಲೇಷಿಸಲಾಗಿದೆ. ಬೇರೆ ಬೇರೆ ಅನ್ಯಜ್ಞಾನ ಶಿಸ್ತಿನ ಮೂಲಕ ಜಾನಪದವನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಶೈಕ್ಷಣೀಕ ಕಾಲಘಟ್ಟದ ಕನ್ನಡ ಜನಪದ ಅಧ್ಯಯನ ವಿಧಿ-ವಿಧಾನಗಳು ಆರಂಭದಲ್ಲಿ ಸಂಗ್ರಹಣಾತ್ಮಕವಾಗಿಯೂ, ಶೈಕ್ಷಣಿಕ ಹಂತದಲ್ಲಿ ವಿವರಣಾತ್ಮಕವಾಗಿಯೂ, ಆನ್ವಯಿಕ ಘಟ್ಟದಲ್ಲಿ ವಿಶ್ಲೇಷಣಾತ್ಮಕವಾಗಿಯೂ, ಬದಲಾಗಿರುವುದನ್ನು ಬೆಳೆದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಉಪಸಂಹಾರ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನಪದ ಅಧ್ಯಯನದ ಹಿಂದಿನ ಸಾಧ್ಯತೆಗಳಿಗೆ ಭಿನ್ನವಾದ ಬಗೆಯನ್ನು ಸಂಕೀರ್ಣ ದೃಷ್ಟಕೋನದಿಂದ, ವಸ್ತು ನಿಷ್ಟತೆಯಿಂದ ಜಾನಪದ ಎಂಬುದು ಒಂದು ಹವ್ಯಾಸಿ ವಿಷಯವಾಗಿರದೆ, ಅದೊಂದು ಗಂಭೀರವಾದ ಅದ್ಯಯನ ವಿಷಯವಾಗಿ ಪರಿಗಣಿಸಲ್ಪಟಿತ್ತು. ಕೇವಲ ಸಂಗ್ರಹಣೆ ಮತ್ತು ಸಂರಕ್ಷಣೆಯ ಹಂತವನ್ನು ಮೀರಿ ಅದರ ಸಂಶೋಧನೆಯಲ್ಲಿ ತೊಡಗುವ ದಿನಗಳು ಕೂಡಿಬಂದವು. ಈ ಮೊದಲೆ ಪಾಶ್ಚಾತ್ಯ ದೇಶಗಳಲ್ಲಿ ನಡೆದಿದ್ದ ಜಾನಪದ ವೈಜ್ಞಾನಿಕ ಅಧ್ಯಯನಗಳ ಅಭ್ಯಾಸ ಮಾಡುವ ಮೂಲಕ ಭಾರತದ ಜಾನಪದ ಆದ್ಯಯನದ ಕ್ಷೇತ್ರದಲ್ಲಿ ಹಲವಾರು ಹೊಸ ಹೊಸ ಏರ್ಪಾಡುಗಳು ಉಂಟಾದವು. ಇಲ್ಲಿಯೂ ಸಹ ಪಾಶ್ಚಾತ್ಯ ದೇಶಗಳಲ್ಲಿನ ವಿವಿಧ ಶಾಸ್ತ್ರಗಳ ತಜ್ಞರು ಜಾನಪದ ಅಧ್ಯಯನದಲ್ಲಿ ಪಾಲ್ಗೊಂಡಂತೆ ಭಾಷಾಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಸಾಹಿತ್ಯ ಅಧ್ಯಯನಕಾರರು, ಸಮಾಜ ಶಾಸ್ತ್ರಜ್ಞರು, ಪುರಾತತ್ವಶಾಸ್ತ್ರಜ್ಞರುಗಳು ಜಾನಪದ ಕ್ಷೇತ್ರದಲ್ಲಿ ಅಧ್ಯಯನ ನಡೆಸುತ್ತಿರುವುದನ್ನು ಕಾಣಬಹುದು. ಜನಪದವನ್ನು ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿವಿಧ ಆಯಾಮಗಳನ್ನು ಅಭ್ಯಾಸಿಸ ತೊಡಗಿದರು. ಡಾರ್ವಿನ್‌ನ ವಿಕಾಸವಾದ, ರಮ್ಯರಾಷ್ಟ್ರೀಯವಾದ, ಪುರಾಣ ಮೂಲವಾದ, ಸೌರಪುರಾಣ ಮೂಲವಾದ, ಚಾರಿತ್ರಿಕ ಭೌಗೋಳಿಕ ಅದ್ಯಯನ ವಿಧಾನ, ರಾಚನಿಕ ಸಿದ್ಧಾಂತಗಳು, ಸಮೂಹ ಸಾಂಸ್ಕೃತಿಕ ಸಿದ್ಧಾಂತ, ಸಾಂದರ್ಭಿಕ ಸಿದ್ಧಾಂತ ಮುಂತಾದ ಸಿದ್ಧಾಂತಗಳು ಜಾನಪದವನ್ನು ಕೂಲಂಕಷವಾಗಿ ಅದ್ಯಯನ ಮಾಡಲು ಪ್ರಮುಖ ಅಸ್ತ್ರಗಳಾದವು.

ಕೊನೆ ಟಿಪ್ಪಣಿಗಳು

೧. ಅಂಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪು. ೨೮

೨. ವೀರಣ್ಣ ದಂಡೆ, ಜನಪದ ಶಾಸ್ತ್ರ ಸಿದ್ಧಾಂತಗಳು, ಪು, ೫

೩. ಅಂಳಿಕೆ ಹಿರಿಯಣ್ಣ, ಪೂರ್ವೋಕ್ತ, ಪು, ೩೨

೪. ಅದೇ, ಪು, ೩೨

೫. ರಾಮಚಂದ್ರೇಗೌಡ.ಹಿ.ಶಿ, ಜಾನಪದ ಸಾಂಸ್ಕೃತಿಕ ಆಯಾಮಗಳು, ಪು, ೬೧

೬. ಸುಬ್ಬಣ್ಣ.ಕೆವಿ(ಕನ್ನಡಕ್ಕೆ), ಆಶೀಶ್ ನಂದಿ ಅವರ ಆಯ್ದ ಬರಹಗಳು, ಪು, ೩೩

೭. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಪು, ೨೬೩

೮. ರಹಮತ್ ತರೀಕೆರೆ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಪು, ೪

೯. ಯರವಿನ ತೇಲಿಮಠ, ವಸಾಹತೋತ್ತರ ಅಧ್ಯಯನ, ಪು, ೩೭

೧೦. ರಾಜೇಂದ್ರ ಚೆನ್ನಿ, ದೇಶಿವಾದ, ಪು, ೧೧

೧೧. ವಿವೇಕ ರೈ.ಬಿ.ಎ, ಆನ್ವಯಿಕ ಜಾನಪದ, ಪು, ೧೧೭

೧೨. ಶಾರದ ಬಿ.ಎ(ಕನ್ನಡಕ್ಕೆ), ವಿಸ್ಮೃತಿಯ ನಂತರ, ಪು, ೧೦೯

೧೩. ನಾವಡ.ಎ.ವಿ, ಕರ್ನಾಟಕ ಸಂಶೋಧನಾ ಜಾನಪದ, ಪು, ೬೧೩

೧೪. ಅಂಳಿಕೆ ಹಿರಿಯಣ್ಣ, ಪೂರ್ವೋಕ್ತ, ಪು, ೪

೧೫. ವೀರಣ್ಣ ದಂಡೆ, ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ಪು, ೧೬೫

೧೬. ಅದೇ, ಪು, ೭೨

೧೭. ರಾಮಚಂದ್ರನ್.ಸಿ.ಎನ್, ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನ, ಪು, ೧೦೬

೧೮. ಅದೇ,

ಅಧ್ಯಾಯ : ಐದು
ಸಾಹಿತ್ಯ ಪ್ರಧಾನ ಅಧ್ಯಯನಗಳು

೫.೧. ಪ್ರಾದೇಶಿಕ ನೆಲೆಯ ಅಧ್ಯಯನಗಳು

೫.೧.೧. ಕನ್ನಡ ಜಾನಪದ ಗೀತೆಗಳು

೫.೧.೨. ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು

೫.೧.೩. ತುಳು ಜನಪದ ಸಾಹಿತ್ಯ

೫.೧.೪. ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು

೫.೨. ಜನಪದ ಸಾಹಿತ್ಯ ಅಧ್ಯಯನಗಳ ಮಾದರಿಗಳು

ಅಧ್ಯಾಯ : ಐದು

ಸಾಹಿತ್ಯ ಪ್ರಧಾನ ಅಧ್ಯಯನಗಳು

ಪಸ್ತಾವನೆ

ಜನಪದ ರೂಪಗಳಲೆಲ್ಲ ಅತ್ಯಂತ ಸಮೃದ್ಧವಾದುದು ಗೀತ ಸಾಹಿತ್ಯ. ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಿಹಾಡು ಎಂದು ಹೆಸರಾಗಿರುವ ಈ ಗೀತ ಪ್ರಕಾರವು ಅನಕ್ಷರಸ್ಥ ಜನಸಮುದಾಯದ ನಡುವೆ ಹುಟ್ಟಿ, ವಾಚಿಕ, ಸಂಪ್ರದಾಯದಲ್ಲಿ ನಿರಂತರವಾಗಿ ಉಳಿದು ಬಂದಿದೆ. ಸರಳತೆ, ರೂಪಾಂತರಗಳು, ಜನಪದ ಗೀತೆಯ ಮೂಲ ಗುಣಗಳು. ಸಂಸ್ಕೃತಿಯ ಆದರ್ಶಗಳು, ಮೌಲ್ಯಗಳು, ಜೀವನಾನುಭವಗಳನ್ನು ಅಭಿವ್ಯಕ್ತಿ ಸ್ವರೂಪದಲ್ಲಿ ಕಂಡಿರಿಸುವ ಗೀತ ಪ್ರಕಾರವು ನಾಡಿನ ಸಂಸ್ಕೃತಿಯ ವೈಧ್ಯಮಯ ಮುಖಗಳನ್ನು ಪರಿಚಯಿಸುತ್ತದೆ. ಕನ್ನಡ ಜನಪದ ಗೀತೆಗಳ ರಚನೆ ತುಂಬಾ ಸರಳವಾದುದು. ಬಳಕೆಯಾಗುವ ಛಂದಸ್ಸು ವೈವಿಧ್ಯಮಯವಾದದ್ದು. ದ್ವಿಪದಿ, ತ್ರಿಪದಿ, ಚೌಪದಿ, ರಗಳೆ, ಮುಕ್ತ ಛಂದಸ್ಸು, ಮೊದಲಾದವೆಲ್ಲವೂ ಜನಪದ ಗೀತೆಗಳಲ್ಲಿ ಬಳಕೆಯಾಗಿವೆ. ಸಾಮಾನ್ಯವಾಗಿ ತ್ರಿಪದಿ ಪದ್ಯಗಳೆ ಹೆಚ್ಚು. ಮೂರು ಸಾಲುಗಳುಳ್ಳ ತ್ರಿಪದಿಯು ಜನಪದ ಹಾಡುಗಾರಿಕೆ, ಅಭಿವ್ಯಕ್ತಿಯ ವೈವಿಧ್ಯಕ್ಕೆ ಪರಿಣಾಮಕಾರಿಯಾದ ಮಾದ್ಯಮವಾಗಿದೆ. "ಲಯ, ಪ್ರಾಸ, ಯತಿಗಳಿಗೂ ಇಲ್ಲಿ ಗೌರವವುಂಟು. ಪ್ರಾಸದ ನಿಯತವಾಗಿಲ್ಲದಿದ್ದರೂ, ಲಯದ ನಿಯಮವನ್ನು ಮಾತ್ರ ಸಡಿಲಿಸುವಂತಿಲ್ಲ. ಪ್ರಾಸದ ಬದಲಿಗೆ ಧ್ವನಿ ಸಾಮ್ಯತೆ ಇದ್ದರೆ ಸಾಕು, ಹಾಡುವ ಧಾಟಿಯು ಪರಿಸರಕ್ಕೆ ಅನುಗುಣವಾಗಿ ಕಾಲದಿಂದ ಕಾಲಕ್ಕೆ ವ್ಯತ್ಯಾಸಗೊಳ್ಳಬಹುದು. ಗ್ರಾಮೀಣರಿಗೆ ಛಂದಸ್ಸಿನ ಅನುಭವವಿಲ್ಲ. ಭಾವಲಯ ಪ್ರಜ್ಞೆ ಅವರಿಗೆ ಸಹಜವಾಗಿ ಒದಗಿಬಂದಂಥ ಗುಣ. ಅಂಶಗಣದ ನಿಯಮಕ್ಕನುಸಾರವಾಗಿ ಅವರ ಹಾಡನ್ನು ವಿಶ್ಲೇಶಿಸಬಹುದೆ ಹೊರೆತು ಅನ್ಯಾಥಾ ಸಾಧ್ಯವಿಲ್ಲ"[1] ಜನಪದ ಹಾಡುಗಳ ರಚನೆ, ವಸ್ತು ಸ್ವರೂಪಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಿದೆ. ಉದಾಹರಣೆಗೆ, ತ್ರಿಪದಿ ಎಂಬ ಹಾಡಿನ ರೂಪ ಕನ್ನಡದಲ್ಲಿ ಮಾತ್ರವೇ ಹೆಚ್ಚು ಕಾಣಿಸುವಂಥದ್ದು. ಈ ರೂಪ ಭಾರತದ ಇನ್ನುಳಿದ ಪ್ರದೇಶಗಳಲ್ಲಿ ಅಥವಾ ಬೇರೆ ಬೇರೆ ದೇಶಗಳಲ್ಲಿ ಕಾಣಲಾಗುವುದದಿಲ್ಲ. ತುಳು ಪಾಡ್ದನಗಳು ತುಳುನಾಡಿಗೆ ವಿಶಿಷ್ಟ. ಅವುಗಳನ್ನು ಸ್ಥೂಲವಾಗಿ ಖಂಡಕಾವ್ಯಗಳ ಗುಂಪಿಗೆ ಸೇರಿಸಬಹುದಾದರೂ ಪಾಡ್ದನಗಳಿಗೆ ವಿಶಿಷ್ಟವಾದ ರಚನೆ ಇದೆ. ಅವುಗಳನ್ನು ಹಾಡುವ ರೀತಿ ಹಾಗೂ ಸಂದರ್ಭ ತುಂಬ ಭಿನ್ನ ಎಂಬುದನ್ನು ಗಮನಿಸಬಹುದು.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿಯೇ ಅಂದರೆ ಉತ್ತರ ಕರ್ನಾಟಕ, ಬಯಲು ಸೀಮೆ, ಕರಾವಳಿ ಪ್ರದೇಶ ಇವುಗಳಲ್ಲಿಯೂ ಕೂಡ ಅನೇಕ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವ್ಯತ್ಯಾಸಗಳಿವೆ. ಆದ್ದರಿಂದ ಜನಪದ ಗೀತೆಗಳ ಸ್ವರೂಪವನ್ನು ಕುರಿತು ಮಾತನಾಡುವಾಗ ಆಯಾ ಸಂಸ್ಕೃತಿ ಪ್ರದೇಶಗಳಿಗೆ ವಿಶಿಷ್ಟವಾದ ರೂಪಗಳು ಇರುತ್ತವೆ ಎಂಬ ಅಂಶವನ್ನು ಮರೆಯಬಾರದು. ಈ ಎಲ್ಲ ದೃಷ್ಟಿಕೋನಗಳಿಂದ ದೇಶೀ ವಿದ್ವಾಸರು ಜನಪದ ಗೀತೆಗಳಿಗೆ ಹೆಚ್ಚು ಒತ್ತು ಕೊಟ್ಟು ಪ್ರಧಾನವಾಗಿ ಸಂಗ್ರಹ, ಸಂಪಾದನೆ, ಸಂಶೋಧನೆ, ವಿಮರ್ಶೆ ಸಂಕಲನ ಮಾಡಿದ್ದಾರೆ. ಹಲಸಂಗಿ ಗೆಳೆಯರಾದಿಯಾಗಿ ಬಿ.ಎಸ್.ಗದ್ದಗೀಮಠರವರೆಗೆ ಈ ಮಾದರಿಯನ್ನು ಕಾಣಬಹುದು.

ಸ್ವಾತಂತ್ರ್ಯಪೂರ್ವದಲ್ಲಿ 'ಜನಪದಗೀತೆ'ಗಳನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ಸಂಗ್ರಹ, ಸಂಪಾದನೆಗಳು ನಡೆದವು. ಆ ಕಾಲಘಟ್ಟದಲ್ಲಿ ಜನಪದ ಸಾಹಿತ್ಯವೆಂದರೆ ಜನಪದ ಗೀತೆ ಪ್ರಕಾರಗಳಷ್ಟನ್ನೆ ಪರಿಗಣಿಸಿ ವಿವೇಚಿಸಲಾಗಿತ್ತು. ಆದರೆ ವಸಾಹತೋತ್ತರ ಕಾಲದಲ್ಲಿ ಕಥೆ, ಮಹಾಕಾವ್ಯ, ಕಥನಗೀತೆಗಳು, ಗಾದೆಗಳು, ಒಗಟುಗಳು, ಕಲೆ, ರಂಗಭೂಮಿ, ನೃತ್ಯ, ಕುಣಿತಗಳು, ವೈಧ್ಯ ಪದ್ಧತಿ, ಸಮುದಾಯ, ಆಚರಣೆ, ಸಂಪ್ರದಾಯ ಇತ್ಯಾದಿ. ಪ್ರಕಾರಗಳನ್ನು ಅಕಾಡೆಮಿಕ್ ಭಾಗವಾಗಿ ಅನೇಕ ಜನಪದ ವಿದ್ವಾಂಸರು ಸಂಶೋಧನೆ ಮಾಡಿದ್ದಾರೆ. ಈ ಅಧ್ಯಾಯದಲ್ಲಿ ಪ್ರಾದೇಶಿಕವಾಗಿ ಜನಪದ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಸಂಶೋಧನೆ ಮಾಡಿರುವ ಪ್ರಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫.೧. ಪ್ರಾದೇಶಿಕ ನೆಲೆಯ ಅಧ್ಯಯನಗಳು

ಅಖಂಡ ಕರ್ನಾಟಕದಲ್ಲಿ ಭಾಷೆ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ಹಬ್ಬ-ಹರಿದಿನಗಳು, ಸಮುದಾಯ ಇತ್ಯಾದಿ, ಅಂಶಗಳು ವಿವಿಧತೆಯಿಂದ ಕೂಡಿವೆ. ಅದರಂತೆ ಜನಪದ ಸಾಹಿತ್ಯವು ಇದಕ್ಕೆ ಹೊರತಾಗಿಲ್ಲ. ಜನಪದ ಗೀತೆಗಳು, ಕಥೆಗಳು, ಕಾವ್ಯಗಳು, ಗಾದೆಗಳು, ಒಗಟುಗಳು, ಮುಂತಾದ ಸಾಹಿತ್ಯ ಪ್ರಕಾರಗಳು ಪ್ರಾದೇಶಿಕವಾಗಿ ವಸ್ತು ವೈವಿಧ್ಯತೆಯಿಂದ ರಚನೆಗೊಂಡಿರುತ್ತವೆ. ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ, ಕಲ್ಯಾಣ ಕರ್ನಾಟಕ ಎಂದು ವಿಭಾಗಿಕರಣ ಮಾಡಿಕೊಂಡು ಜಾನಪದವನ್ನು ಅಧ್ಯಯನವನ್ನು ಮಾಡಬಹುದು. ಆದರೆ ಭಾಷಾ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ, ಭೌಗೋಳಿಕ ಹಿನ್ನಲೆಯಿಂದ ಈ ವಿಭಜನೆಯನ್ನು ಮಾಡಿಕೊಂಡರು 'ಜಾನಪದ'ಕ್ಕೆ ಅಷ್ಟೇನೂ ಪ್ರಯೋಜನವಾಗುವುದಿಲ್ಲ. ಜಾನಪದ ವಿಶ್ವವ್ಯಾಪಕದಿಂದ ಕೂಡಿದ್ದು. ಭಾಷೆಯ ಗಡಿ, ಭೌಗೋಳಿಕ ಗಡಿಗಳು ಅದನ್ನು ಒಂದು ಚೌಕಟ್ಟಿಗೆ ತರಲು ವಿಪಲವಾಗುತ್ತದೆ. "ಜಾನಪದ ಆಶಯಗಳು ಒಂದು ನೆಲೆಯಿಂದ ಮತ್ತೊಂದು ನೆಲೆಗೆ ನಾನಾ ಕಾರಣಗಳಿಂದ ಪ್ರಸರಣಗೊಳ್ಳುತ್ತವೆ. ಆಂಡ್ರುಲಾಂಗ್ ಮುಂತಾದ ವಿದ್ವಾಂಸರು ಮಂಡಿಸಿದ ಬಹುಮೂಲ ಸಿದ್ಧಾಂತ ದಂತೆ ಎಲ್ಲಾ ರಾಷ್ಟ್ರಗಳಲ್ಲೂ ಆದಿಕಾಲದ ಬದುಕಿನ ರೀತಿನೀತಿಗಳನ್ನು ಪ್ರತಿಬಿಂಬಿಸುತ್ತಾ ಅಲ್ಲಲ್ಲಿಗೆ ಸಂಬಂಧಿಸಿದ ಜಾನಪದ ಇದ್ದೆ ಇರುತ್ತದೆ"[೨] ಪ್ರಾದೇಶಿಕವಾಗಿ ಕೆಲವು ಮೂಲಭೂತ ಅಂಶಗಳು

ಪ್ರತಿಯೊಂದು ದೇಶದ ಜನಪದ ಸಾಹಿತ್ಯದಲ್ಲೂ ಇರುತ್ತದೆ. ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಈ ಸ್ಥೂಲ ವಿಭಜನೆ ಸಾಧ್ಯವಾಗುತ್ತದೆ. ಭೌಗೋಳಿಕ ಹಿನ್ನೆಲೆಯೂ ತಕ್ಕಮಟ್ಟಿನ ಪ್ರಭಾವವನ್ನು ಬೀರಿರುತ್ತವೆ. "ಜಾನಪದ ಸಾಹಿತ್ಯದಲ್ಲಿ ಪ್ರಾದೇಶಿಕ ಅಂಶವೂ ಮಹತ್ವದ್ದಾಗಿದೆ. ಕನ್ನಡ ಒಂದು ಭಾಷೆಯೆಂದರೂ ಅದರಲ್ಲಿ ಅನೇಕ ಉಪಭಾಷೆಗಳು ಇರುತ್ತವೆ. ಉಪ ಭಾಷೆಗಳಲ್ಲಿಯೂ ಪ್ರಾದೇಶಿಕ ಉಪಭಾಷೆ, ಸಾಮಾಜಿಕ ಉಪಭಾಷೆ ಎಂಬ ಪ್ರಭೇದಗಳಿವೆ. ಇದಕ್ಕೂ ಮುಂದೆ ಹೋಗಿ ವ್ಯಕ್ತಿ ವ್ಯಕ್ತಿಗೂ ತನ್ನದೇ ಆದ ಮಾತಿನ ರೂಪವಿದೆ. ಇದೇ ವ್ಯಕ್ತಿ ಭಾಷೆ. ಹಳ್ಳಿಯ ಜನ ತಮಗನಿಸಿದ್ದನ್ನು ತಮ್ಮ ಭಾಷೆಯಲ್ಲಿ ಬರೆದರು. ಹೀಗಾಗಿ ಅವರ ಸಾಹಿತ್ಯದ ಭಾಷೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಯಿತು"[೩] ಹಾಗಾಗಿ ಅಲ್ಲಿನ ಜನಪದ ಸಾಹಿತ್ಯವೂ ಕೂಡ ಅಲ್ಲಿನ ಭಾಷೆಗಳಲ್ಲಿ ನಿರಂತರವಾಗಿ ಬೆಳೆದುಕೊಂಡು ಬಂದಿರುತ್ತವೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಮಂಟೇಸ್ವಾಮಿ ಕಾವ್ಯ, ಮಲೆಮಹದೇಶ್ವರ ಕಾವ್ಯಗಳು ಹೆಚ್ಚು ಪ್ರಚಲಿತವಾಗಿವೆ. ಮಂಟೇಸ್ವಾಮಿ ಕಾವ್ಯವನ್ನು ನೀಲಗಾರರು ಹಾಗೂ ಮಾದೇಶ್ವರ ಕಾವ್ಯವನ್ನು ಹಾಡುವ ಕಂಸಾಳೆಯವರು ಒಂದೇ ಭೌಗೋಳಿಕ ಪರಿಸರದಲ್ಲಿ ಕಂಡುಬರುತ್ತಾರೆ. ಈ ಕಾವ್ಯಗಳು ಪ್ರಾದೇಶಿಕವಾಗಿ ಅನನ್ಯತೆಯನ್ನು ರೂಪಿಸಿಕೊಂಡಿವೆ. ಇವುಗಳಲ್ಲದೇ ಜುಂಜಪ್ಪನ ಕಾವ್ಯ, ಎಲ್ಲಮ್ಮನ ಕಾವ್ಯ, ಮೈಲಾರ ಕಾವ್ಯಗಳು ಮುಂತಾದವುಗಳು ಆಯಾ ಪ್ರಾದೇಶಿಕವಾಗಿ ಸಮುದಾಯಗಳ ಅಸ್ಮಿತೆಯ ಪ್ರಾತಿನಿಧಿಕವಾಗಿ ರಚನೆಗೊಂಡಿವೆ. ಕಾಡುಗೊಲ್ಲ ಸಮುದಾಯದ ಅಸ್ಮಿತೆಯ ಪ್ರತೀಕವಾಗಿ 'ಜುಂಜಪ್ಪನ ಕಾವ್ಯ'ವನ್ನು ನೋಡಬಹುದು. ಇವೆಲ್ಲವುಗಳನ್ನು ಪ್ರಾದೇಶಿಕವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ಅವುಗಳ ಸಾಂಸ್ಕೃತಿಕ ನೆಲೆಯನ್ನು ಗುರುತಿಸಬಹುದು. ಪ್ರಾದೇಶಿಕವಾಗಿ ಜನಪದ ಗೀತೆಗಳನ್ನೆ ಪ್ರಾತಿನಿಧಿಕವಾಗಿಟ್ಟುಕೊಂಡು ಕೆಲವು ವಿದ್ವಾಂಸರು ಸಂಶೋಧನೆ ಮಾಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ಗುರುತಿಸುವುದಾದರೆ, ಎನ್.ಆರ್.ನಾಯಕ ಅವರ 'ಕಾರವಾರ ಜಿಲ್ಲೆಯ ಜನಪದ ಗೀತೆಗಳು(೧೯೮೭) ಕರಾವಳಿ ಭಾಗದ ಜನಜೀವನವನ್ನು ಗೀತೆಗಳ ಮೂಲಕ ಪ್ರತಿಬಿಂಬಿಸುವ ಒಂದು ಸಂಶೋಧನಾ ಪ್ರಬಂಧ. ಇಲ್ಲಿಯ ವಸ್ತು ಕಾರವಾರ ಜಿಲ್ಲೆಯ ಜನಪದ ಗೀತೆಗಳ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಅಧ್ಯಯನ. ನಾಯಕ ಅವರು ತಮ್ಮ ಈ ಪ್ರಬಂಧದಲ್ಲಿ ಕಾರವಾರ ಜಿಲ್ಲೆಯ ಜನಪದ ಸಾಹಿತ್ಯಾವಲೋಕನದ ಮೂಲಕ ಅಲ್ಲಿಯ ಜನರ ಜೀವನ ವಿಧಾನವನ್ನು ಅದರ ವೈವಿಧ್ಯ ವೈಶಿಷ್ಟ್ಯಗಳನ್ನು ಗುರುತಿಸಿ ನಿರೂಪಿಸಿದ್ದಾರೆ. ನಂ.ತಪಸ್ವೀಕುಮಾರ್ ಅವರ 'ಕನ್ನಡ ಜನಪದ ಗೀತೆಗಳ ಮೂಲಕ ಸಾಂಸ್ಕೃತಿಕ ಅಧ್ಯಯನ' ಕನ್ನಡ ಜನಪದ ಗೀತೆಗಳನ್ನು ಮಾತ್ರವೇ ಅನುಲಕ್ಷಿಸಿ ಬಹುವಿಸ್ತಾರವಾದ ಸಾಂಸ್ಕೃತಿಕ ಅಧ್ಯಯನ ನಡೆಸುವ ಮೊದಲ ಪ್ರಯತ್ನ. ಜನಪದ ಗೀತೆಗಳ ಮೂಲಕ ಜನಪದರ ಬದುಕನ್ನು ಅವರ ಸಂಸ್ಕೃತಿಯನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಜೊತೆಯಲ್ಲಿಯೇ ಆ ಗೀತೆಗಳ ಸೊಬಗನ್ನು ಅವುಗಳ ಐತಿಹಾಸಿಕ ಮೌಲ್ಯವನ್ನು ತಪಸ್ವೀಕುಮಾರ್ ಚರ್ಚಿಸಿದ್ದಾರೆ. ೧೯೮೫ರಲ್ಲಿ ಪ್ರಕಟಗೊಂಡ ದೇವೇಂದ್ರಕುಮಾರ ಹಕಾರಿ ಅವರ 'ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ' ಜನಪದ ಕಥನಗೀತೆಗಳಿಗೆ ಸಂಬಂಧಿಸಿದಂತೆ ಪ್ರಕಟಗೊಂಡ ನಿಬಂಧ.

ಸಾಮಾಜಿಕ ಕಥನಗೀತೆಗಳ ವ್ಯಾಪಕವಾದ ಅಧ್ಯಯನ ನಡೆಸಿ ಅಲ್ಲಿ ಕಂಡು ಬರುವ ದುಃಖಾಂತ ನಿರೂಪಣೆಯನ್ನು ಅಲ್ಲಿಯ ಸಾಮಾಜಿಕ ಹಿನ್ನೆಲೆಯಲ್ಲಿ ಶೋಧಿಸಿ ನೋಡಿದ್ದಾರೆ. ಜನಪದರು ತಮ್ಮ ಬದುಕಿನಲ್ಲಿ ಅನುಸರಿಸಿಕೊಂಡು ಬಂದ ಕೆಲವು ಜೀವನಮೌಲ್ಯಗಳು ಆ ಸಮುದಾಯದ ಸಂಸ್ಕೃತಿಯ ಅಂತಃಸತ್ವವಾಗಿ ಹೇಗೆ ಬೇರು ಬಿಟ್ಟು ಅವರನ್ನೇ ಕಬಳಿಸುತ್ತವೆ ಎಂಬುದನ್ನು ಅದೇ ಮೌಲ್ಯಗಳು ಕಾಲಾನಂತರದಲ್ಲಿ ಹೇಗೆ ಸ್ಥಿತ್ಯಂತರಗೊಳ್ಳುತ್ತವೆ ಎಂಬುದನ್ನೂ ಆ ಪರಿಸರದ ಸಾಹಿತ್ಯದ ಹಿನ್ನೆಲೆಯಲ್ಲಿಯೇ ಕಂಡುಕೊಂಡು ನಿರೂಪಿಸಿದ್ದಾರೆ. ಹೀಗೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಇರುವ ಜನಪದ ಸಾಹಿತ್ಯವನ್ನು ಸಂಶೋಧನೆ ಮಾಡಿದ್ದಾರೆ. ಹೀಗೆ ಕರ್ನಾಟಕದಲ್ಲಿ ಬೇರೆ ಬೇರೆ ಪ್ರದೇಶದ ಜನಪದ ಸಾಹಿತ್ಯ ಕುರಿತು ಸಂಶೋಧನೆ ಮಾಡಿರುವ ಬಿ.ಎಸ್.ಗದ್ದಗೀಮಠ, ಜೀಶಂಪ, ಬಿ.ಎ.ವಿವೇಕ ರೈ, ವೀರಣ್ಣ ದಂಡೆ ಅವರ ಮಹಾಪ್ರಬಂಧಗಳನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಪ್ರಾದೇಶಿಕ ನೆಲೆಯನ್ನು ಚರ್ಚಿಸಲಾಗಿದೆ.

೩.೧.೧. ಕನ್ನಡ ಜಾನಪದ ಗೀತೆಗಳು (೧೯೫೫)

ಸ್ವಾತಂತ್ರ್ಯನಂತರ ಜಾನಪದ ಸಾಹಿತ್ಯ ಸಂಗ್ರಹವನ್ನು ಪರಾಮರ್ಶಿಸುವಾಗ ಪ್ರಮುಖವಾಗಿ ಎದ್ದು ಕಾಣುವ ಹೆಸರೆಂದರೆ ಡಾ.ಬಿ.ಎಸ್.ಗದ್ದಗೀಮಠ ಅವರದು. ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಇವರು ಪ್ರಮುಖರೆನಿಸಿದ್ದಾರೆ. ಉತ್ತರ ಕರ್ನಾಟಕದ ಜನಪದ ಗೀತೆಗಳ ಅಪಾರ ಸಂಗ್ರಹ ಕಾರ್ಯವನ್ನು ವ್ಯವಸ್ಥಿತ ರೂಪದಲ್ಲಿ, ಶಾಸ್ತ್ರೀಯವಾಗಿ, ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ಉತ್ತರ ಕರ್ನಾಟಕದ ಅನೇಕ ಜನಪದ ಸಂಪ್ರದಾಯಗಳನ್ನು, ಅಜ್ಞಾತ ಕಥನ ಗೀತೆಗಳನ್ನೂ, ಅಪಾರ ಸಂಖ್ಯೆಯ ಹಾಡುಗಳನ್ನು ಕುರಿತು ಅಭ್ಯಾಸ ಮಾಡಿ, ವಿಷಯಗಳನ್ನು ಸಂಗ್ರಹಿಸಿ, ಹಲವು ಜನಪದ ಸಂಕಲನಗಳನ್ನು ನೀಡಿದ್ದಾರೆ. ಬಿ.ಎಸ್. ಗದ್ದಗೀಮಠರು 'ಕನ್ನಡ ಜನಪದ ಗೀತೆಗಳು' ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳುವ ಮೊದಲು ಅನೇಕ ಜನಪದ ಸಂಕಲನಗಳನ್ನು ಜಾನಪದ ಲೋಕಕ್ಕೆ ನೀಡಿದ್ದಾರೆ. ನಾಲ್ಕು ನಾಡಪದಗಳು(೧೯೫೨), ಕಂಬಿಯ ಹಾಡುಗಳು(೧೯೫೫), ಜನತಾ ಗೀತೆಗಳು(೧೯೫೬), ಮಲ್ಲ ಮಲ್ಲಾಣಿ(೧೯೫೬), ಕುಮಾರ ರಾಮನ ದುಂದುಮೆ(೧೯೫೯), ಲೋಕಗೀತೆಗಳು(೧೯೬೦). ಉತ್ತರ ಕರ್ನಾಟಕದ ಶಿವಶರಣರ ಹಾಗೂ ಇತರ ಸುದೀರ್ಘ ಕಥನ ಗೀತೆಗಳನ್ನು ತಮ್ಮ ನಿಬಂಧದಲ್ಲಿ ನೀಡಿದ್ದಾರೆ. ಇವರು ಮೊದಲ ಬಾರಿಗೆ ಉತ್ತರ ಕರ್ನಾಟಕದ ಜನಪದ ಕಾವ್ಯಗಳ ಹಿರಿಮೆಯನ್ನು ಪರಿಚಯ ಮಾಡಿಕೊಡುತ್ತಾರೆ.

ಬಿ.ಎಸ್.ಗದ್ದಗೀಮಠ ಅವರು 'ಕನ್ನಡ ಜಾನಪದ ಗೀತೆಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಮೇಲೆ ಮಾಹಿತಿ ಸಂಗ್ರಹಣೆಗಾಗಿ ಉತ್ತರ ಕರ್ನಾಟಕ ಭಾಗದಲ್ಲಿ ವಿಸ್ತೃತವಾದ ಕ್ಷೇತ್ರಕಾರ್ಯವನ್ನು ಮಾಡಿದ್ದಾರೆ. ಬಿಜಾಪುರ, ಬೆಳಗಾವಿ, ಮತ್ತು ಧಾರವಾಡ ಜಿಲ್ಲೆಗಳು ನೂರಾರು ಹಳ್ಳಿಗಳಿಗೆ ಭೇಟಿ ನೀಡಿ ಜನಪದ ಹಾಡುಗಾರರಿಂದ ಸಂದರ್ಶನ ಮಾಡಿ ನೂರಾರು ಹಾಡುಗಳನ್ನು

ಸಂಗ್ರಹಣೆ ಮಾಡಿಕೊಂಡಿದ್ದಾರೆ. ಪ್ರಬಂಧದಲ್ಲಿ ವಿಷಯ ಪ್ರತಿಪಾದನೆಗೆ ಜನಪದ ಗೀತೆಗಳ ಬಿಡಿ ಪದ್ಯಗಳನ್ನು ಉದಾಹರಣೆಯಾಗಿ ನೀಡಿದ್ದಾರೆ.

ಬಿ.ಎಸ್.ಗದ್ದಗಿಮಠ ಅವರಿಗೆ ಕೌಟುಂಬಿಕ ಪರಿಸರದ ಪ್ರಭಾವವು ಬೀರಿದ್ದರಿಂದ ಜನಪದ ಹಾಡುಗಳ ಸಂಗ್ರಹ, ಸಂಪಾದನೆಗಾಗಿ ಊರೂರು ಸುತ್ತುವ ಕಾರ್ಯಕ್ಕೆ ಕೈಹಾಕಿ ಜನಪದ ಸಾಹಿತ್ಯಗಳ ಸಂಗ್ರಹದ ಸಂಕಲನವನ್ನು ಮಾಡಲು ಸಾಧ್ಯವಾಯಿತು. ಕನ್ನಡ-ಕರ್ನಾಟಕದ ಭೌಗೋಳಿಕವಾಗಿ ವಿಜಾಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಹಳ್ಳಿಗಳನ್ನು ಸುತ್ತಾಡಿ ಜನಪದ ಸಂಪ್ರದಾಯ, ಆಚರಣೆ, ಕಲೆ, ಹಾಡು, ಮತ್ತಿತರ ವಿಷಯಗಳನ್ನು ಸಂಗ್ರಹಿಸುತ್ತಾರೆ. ನಂತರ ಉತ್ತರ ಕರ್ನಾಟಕದ ಆಯಾ ಪ್ರದೇಶದ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಪರಿಸರಕ್ಕನುಗುಣವಾಗಿ ಜನಪದ ಸಾಹಿತ್ಯ ವೈವಿಧ್ಯ ಪೂರ್ಣವಾಗಿ ಸೃಷ್ಟಿಗೊಳ್ಳುವ ನೆಲೆಯಲ್ಲಿ ಗದ್ದಗೀಮಠ ಅವರು ವಿಚಾರ ಮಾಡಿದ್ದಾರೆ.

ಬಿ.ಎಸ್.ಗದ್ದಗೀಮಠ ಅವರ ಜನಪದ ಅಧ್ಯಯನವು ಗೀತ ಪ್ರಕಾರಗಳಿಗಷ್ಟೇ ಸೀಮಿತವಾಗಿದ್ದವು. ಕಾರಣ ಜನಪದ ಸಾಹಿತ್ಯವು ಬಿಡಿ ಹಾಡುಗಳು, ಲಾವಣಿಗಳು, ಕಥನ-ಕವನಗಳು, ದುಂದುಮೆಗಳು, ದೊಡ್ಡ ಹಾಡುಗಳು, ಕಥೆ, ಗಾದೆ, ಒಗಟು, ಒಡಪು ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ರಚಿತವಾಗಿರುತ್ತವೆ. ವಿಫುಲವಾದ ಜನಪದ ಸಾಹಿತ್ಯ ರಾಶಿಯಲ್ಲಿ ಬಿ.ಎಸ್.ಗದ್ದಗೀಮಠರು ಜನಪದ ಗೀತೆಗಳ ಸಂಗ್ರಹಗಳಲ್ಲಿ ಹೆಚ್ಚು ಒತ್ತುಕೊಟ್ಟಿರುವುದು ಅವರ ಸಂಗ್ರಹ, ಸಂಕಲನಗಳನ್ನು ಗಮನಿಸಿದಾಗ ತಿಳಿಯುತ್ತದೆ. ಇದು ಗದ್ದಗೀಮಠ ಅವರು ತಮಗೆ ತಾವೇ ವಿಧಿಸಿಕೊಂಡು ಅಧ್ಯಯನ ವಿಧಾನವಾಗಿದೆ. ಜನಪದಗೀತೆಗಳ ಸಂಕಲನಗಳ ಅಧ್ಯಯನಕ್ಕೆ ನ್ಯಾಯವನ್ನು ಒದಗಿಸುವುದು ಇವರ ಅಭಿಲಾಷೆಯಾಗಿತ್ತು. ಹಾಗಾಗಿ ಉತ್ತರ ಕರ್ನಾಟಕದ ಪ್ರಮುಖ ಗೀತ ಪ್ರಕಾರಗಳನ್ನು, ಅವರು ಸಂಗ್ರಹಿಸಿ ಜನತೆಗೆ ನೀಡಲು ಸಾಧ್ಯವಾಯಿತು. ಈ ಮಿತಿ ಮತ್ತು ವ್ಯಾಪ್ತಿಯ ಗಡಿರೇಖೆಯನ್ನು ಗುರುತಿಸಿಕೊಳ್ಳಲು ಹಿಂದಿನ ಅಧ್ಯಯನಗಳ ಪ್ರೇರಣೆಯು ಮತ್ತು ಪ್ರಭಾವ ಬಿ.ಎಸ್. ಗದ್ದಗೀಮಠ ಅವರ ಮೇಲೆ ಬೀರಿತ್ತು. ಬಿ.ಎಸ್. ಗದ್ದಗೀಮಠ ಅವರು ಜಾನಪದ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದು ಮಹತ್ವದ ಸಂಗತಿ ಎಂದು ಹೇಳಬಹುದು. ಹಲಸಂಗಿ ಗೆಳೆಯರನ್ನು ಅನುಕರಣೆ ಮಾಡದೆ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಅಧ್ಯಯನದ ವೈಶಿಷ್ಟತೆಯನ್ನು ಬದಲಾಯಿಸಿಕೊಂಡರು. ಹಲಸಂಗಿ ಗೆಳೆಯರು ಗರತಿ ಹಾಡು, ಮಲ್ಲಿಗೆದಂಡೆಯಂತಹ ಅತ್ಯುತ್ತಮ ಸಂಕಲನಗಳನ್ನು ಜನಪದ ಸಾಹಿತ್ಯವನ್ನು ವಿದ್ವತ್ ವಲಯಕ್ಕೆ ನೀಡಿದರು. ಮುಂದೆ ಬಂದ ಎಲ್ಲಾ ಜನಪದ ಸಂಕಲನಗಳಿಗೆ ಇವು ಮಾದರಿಯಾದವು. ಇವರ ಉದ್ದೇಶ ನಮ್ಮ ಶಿಷ್ಟ ಕವಿಗಳು, ಮಾರ್ಗ ಸಾಹಿತ್ಯ ಅಭ್ಯಾಸ ಮಾಡುವವರಿಗೂ ಅಕ್ಷರಸ್ಥರಿಗೂ ಒಂದು ತಿಳುವಳಿಕೆಯನ್ನು ಪ್ರಚಾರ ಮಾಡುವ ನೆಲೆಯಲ್ಲಿ ಮಾರ್ಗದರ್ಶಿಯಾದವು. ನವೋದಯ ಸಂದರ್ಭದಲ್ಲಿ ಹೊಸ ಕಾವ್ಯದ ರಚನೆಗೆ ಬೇರಾಗಿದ್ದ, ಜನಪದ ಕಾವ್ಯ ಸತ್ವವನ್ನು ಅವರು ಒದಗಿಸಿದರು.

ಹಾಗಾಗಿ ಬಿ. ಎಸ್. ಗದ್ದಗೀಮಠರು ಹಲಸಂಗಿ ಗೆಳೆಯರ ಕೆಲಸವನ್ನು ಮುಂದುವರೆಸಿದರು. ಹಾಗಾಗಿ 'ಗೀತೆ' ಪ್ರಕಾರಗಳನ್ನಷ್ಟೇ ತಮ್ಮ ಅಧ್ಯಯನದ ಚೌಕಟ್ಟನ್ನಾಗಿ ಮಾಡಿಕೊಂಡು ಜನಪದ ಸಾಹಿತ್ಯವನ್ನು ಸಂಗ್ರಹ ಮಾಡಿದರು. ಜನಪದ ಸಾಹಿತ್ಯ ಬಗೆಗಿನ ವಿವರಣೆಯನ್ನು, ಪರಿಶೀಲನೆ ಮಾಡಿಕೊಂಡು ಹಲಸಂಗಿ ಗೆಳೆಯರಿಗಿಂತ ಒಂದು ಹೆಜ್ಜೆ ಮುಂದೆ ಹೋದರು. ತ್ರಿಪದಿ ಮತ್ತು ಬಿಡಿ ಹಾಡುಗಳು ಮಾತ್ರ ಜನಪದ ಸಾಹಿತ್ಯ ಪ್ರಕಾರಗಳು ಎಂದು ಪರಿಗಣಿಸಿದ್ದ ಸಂದರ್ಭದಲ್ಲಿ ಕಥನ ಕವನ, ಜನಪದ ಆಚರಣೆ, ಹಂತಿ ಸಂಪ್ರದಾಯ, ದುಂದುಮೆ, ಕಂಬಿ ಸಂಪ್ರದಾಯ, ಹಾಡುಗಬ್ಬ, ಜೋಗುಳ ಹಾಡುಗಳು, ಇತ್ಯಾದಿ ಗೀತ ಪ್ರಕಾರಗಳ ಸಂಗ್ರಹದ ವೈವಿಧ್ಯತೆಯನ್ನು ಕಟ್ಟಿಕೊಟ್ಟರು. ಹಾಗಾಗಿ ಇವುಗಳ ಕುರಿತು ಅರ್ಥಗರ್ಭಿತವಾದ ವಿಮರ್ಶೆ, ವಿವರಣೆ, ಟೀಕೆ, ಟಿಪ್ಪಣಿಗಳನ್ನು ಬರೆದದರು. ಜನಪದ ಸಾಹಿತ್ಯವನ್ನು ಆ ಕಾಲಘಟ್ಟದಲ್ಲಿ ಅಧ್ಯಯನ ಮಾಡುವ ಜರೂರಿತ್ತು. ಏಕೆಂದರೆ ಜನಪದ ಸಾಹಿತ್ಯದ ಬಗೆಗಿನ ಅಧ್ಯಯನಗಳು ಹುಟ್ಟುಕೊಳ್ಳುವ ಕಾಲಕ್ಕೆ ವಿದ್ಯಾವಂತ ವರ್ಗ ಇನ್ನು ಅವುಗಳ ಕಡೆಗೆ ಅಷ್ಟು ಗಮನ ಹರಿಸಿರಲಿಲ್ಲ. ಈ ನಾಡಿಗೆ ಈ ಜನತೆಗೆ ಅದರ ಮಹತ್ವವನ್ನು, ಸಾಮರ್ಥ್ಯವನ್ನು ತಿಳಿಸುವಂತಹ, ಸಮರ್ಥಿಸುವಂತಹ ವ್ಯಾಖ್ಯಾನಿಸುವಂತಹ ಒಂದು ಪ್ರಯತ್ನ ಬಿ.ಎಸ್. ಗದ್ದಗೀಮಠ ಅವರು ಮಾಡಿದರು. ಇದರ ಫಲವಾಗಿ ಅವರು 'ಕನ್ನಡ ಜಾನಪದ ಗೀತೆಗಳು' ಸಂಶೋಧನಾ ಪ್ರಬಂಧ ಬರೆಯಲು ಕಾರಣವಾಯಿತು. ಬಿ.ಎಸ್.ಗದ್ದಗೀಮಠ ಅವರ ಸಂಶೋಧನಾ ಪ್ರಬಂಧದಲ್ಲಿ ಏನೇ ಕೊರತೆಗಳಿದ್ದರೂ ಮುಂದಿನ ಅಧ್ಯಯನಕಾರರಿಗೆ ಮಾದರಿಯಾಯಿತು.

ಬಿ.ಎಸ್.ಗದ್ದಗಿಮಠರು ಕೈಗೊಂಡ ಜನಪದ ಸಾಹಿತ್ಯ ಅಧ್ಯಯನದ ಮುಖ್ಯ ಉದ್ದೇಶ ಜನ ಜೀವನದ ಸಂಸ್ಕೃತಿಯನ್ನು ಶೋಧಿಸುವುದೇ ಆಗಿದೆ. ಇವರು ತಮ್ಮ ಪ್ರಬಂಧದಲ್ಲಿ ಅಳಸಿಕೊಂಡಿರುವ ಆಕರಗಳು ಜನಪದರ ಸಾಂಸ್ಕೃತಿಕ ನೆಲೆಯಲ್ಲಿ ಕ್ರಿಯಾತ್ಮಕವಾಗಿ ಆಚರಿಸಲ್ಪಡುವ ಸಂಪ್ರದಾಯದ ಬಿಡಿ-ಬಿಡಿ ಹಾಡುಗಳನ್ನು ಬಳಸಿಕೊಂಡು ವಿವರಿಸಿದ್ದಾರೆ. ಆರಂಭದಲ್ಲಿ ಸ್ತುತಿಪದಗಳು, ಸುಗ್ಗಿಯ ಹಾಡುಗಳು, ಹಳ್ಳಿಯ ಕುಣಿತಗಳು, ರಸಾವೇಶದ ಹಾಡುಗಳು, ಬಾಳಿನಲ್ಲಿ ಆಸರಿಕೆ-ಬೇಸರಿಕೆ, ಪ್ರಣಯ ಹಾಗೂ ದಾಂಪತ್ಯ ಮುಂತಾದ ಹಲವು ಉಪಶೀರ್ಷಿಕೆಯಲ್ಲಿ ವಿಷಯ ಮಂಡನೆ ಮಾಡಿಕೊಂಡಿದ್ದಾರೆ. ಜನಪದ ಗೀತೆಗಳನ್ನು ಮೊದಲ ಬಾರಿಗೆ ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿರುವುದನ್ನು ನೋಡಬಹುದು. ಇಡೀ ಕೃತಿಯಲ್ಲಿ ಕನ್ನಡ ಜನಪದ ಸಾಂಸ್ಕೃತಿಯ ಉನ್ನತ ಮೌಲ್ಯಗಳನ್ನು ಅನಾವರಣಗೊಳಿಸುವ ಪ್ರಯತ್ನವಿದೆ. ಜೊತೆಗೆ ಸಂಶೋಧನೆಗೆ ಬೇಕಾದ ಶಿಸ್ತು ಸಂಯಮದ ನಿರೂಪಣೆ ಮತ್ತು ವಿಶಾಲ ದೃಷ್ಟಿಕೋನ ಎಲ್ಲವನ್ನು ಬಿ.ಎಸ್.ಗದ್ದಗೀಮಠರು ಕರಗತ ಮಾಡಿಕೊಂಡಿರುವುದು ಗಮನ ಸೆಳೆಯುತ್ತದೆ.

ಪ್ರಾದೇಶಿಕ ನಿರ್ವಚನ: ಪ್ರಾದೇಶಿಕವಾಗಿ ನೋಡುವುದಾದರೆ ಉತ್ತರ ಕರ್ನಾಟಕ ಉಳಿದ ಪ್ರದೇಶಗಳಾದ ದಕ್ಷಿಣ ಕರ್ನಾಟಕ, ಮಲೆನಾಡು ಕರ್ನಾಟಕ, ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ

ಇತ್ಯಾದಿ ಪ್ರದೇಶಗಳಿಗಿಂತ ಭಿನ್ನವಾಗಿದೆ. ಅಂದರೆ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಭಿನ್ನತೆಯಿಂದ ಕೂಡಿದೆ. ಈ ಭಾಗದಲ್ಲಿ ಒಳಗೊಳ್ಳುವ ವಿಭಿನ್ನ "ಸಂಪ್ರದಾಯ ಹಾಡುಗಳಾದ, ದುಂದುಬಿ ಪದಗಳು, ಕಂಬಿಯ ಪದಗಳು, ಹಂತಿಯ ಪದಗಳು, ಡೊಳ್ಳಿನ ಪದಗಳು, ಹೋಳಿಯ ಪದಗಳು, ಕರ್ಬಲ ಪದಗಳು, ಜೋಗಿಯರು, ಹೆಂಗಸರ ಹಬ್ಬದ ಹಾಡುಗಳು, (ಅರಳೆಲೆ ಬಸವನ ಪೂಜೆಯ ಹಾಡು,) ವಾರದ ಹಾಡುಗಳೂ, ಕೆಲಸದ ಹಾಡುಗಳು, ಕಥನ ಕವನಗಳು (ಹತ್ತಿ ಬಿಡಿಸುವಾಗಲೂ ಗೋಧಿ, ಕೀಳು ಭಕ್ತಿ ನೈವೇದ್ಯವೆಂತಲೂ ಅನೇಕ ಕಥನ ಕವನಗಳನ್ನು ಹಾಡುತ್ತಾರೆ. ಶಿವಶರಣರ ಚರಿತ್ರೆಯನ್ನು ಹಾಡುಗಳನ್ನು ವೀರಶೈವ ಮಹಿಳೆಯರು ಈ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ ಸಹ, ಹಂತಿಯ ಹಾಡುಗಳನ್ನು ಬಳಸುವುದಲ್ಲದೆ ಕಲ್ಪನ ರಮ್ಯವಾದ ಸುಂದರ ವರ್ಣನೆಗಳಿಂದ ಕೂಡಿದ ಅರ್ಜುನ ಜೋಗಿಯ ಹಾಡುಗಬ್ಬವನ್ನು ಹಾಡುತ್ತಾರೆ"[೪] ಉತ್ತರ ಕರ್ನಾಟಕ ಭಾಗದಲ್ಲಿ ಕಂಡು ಬರುವ ಇಂತಹ ವಿಶಿಷ್ಟ ಹಾಡುಗಳಿಗೆ ಬಿ.ಎಸ್.ಗದ್ದಗೀಮಠ ಅವರು ಒತ್ತು ಕೊಟ್ಟಿದ್ದಾರೆ. ಅದರಲ್ಲೂ ಶರಣರ ಬಗೆಗಿನ ಸಂಪ್ರದಾಯದ ಹಾಡುಗಳಿಗೆ ಹೆಚ್ಚು ಮನ್ನಣೆಕೊಟ್ಟಿರುವುದು ಕಾಣುತ್ತದೆ. ಕೃಷಿ, ದೇವರು, ಶರಣರು ಇತ್ಯಾದಿ ಅಂಶಗಳಿಗೆ ಸಂಬಂಧಿಸಿದ ತ್ರಿಪದಿಗಳನ್ನು ಬಳಸಿಕೊಂಡಿದ್ದಾರೆ. ದೈವತ್ವದ ಸಂಗತಿಗಳನ್ನು ಒಳಗೊಂಡಿರುವ ಹಂತಿ ಸಂಪ್ರದಾಯ ಗೀತೆಗಳು ಉತ್ತರ ಕರ್ನಾಟಕದ ಭಾಗದ ವೈಶಿಷ್ಟ್ಯತೆಯಿಂದ ಕೂಡಿವೆ.

ಉತ್ತರ ಕರ್ನಾಟಕದ ಸುಗ್ಗಿಯ ಭಾಗವಾಗಿ ಒಕ್ಕಲಿಗರಲ್ಲಿ ಹಂತಿ ಕಟ್ಟುವ ಕ್ರಮ ವಿಶೇಷ ಅನಿಸುತ್ತದೆ. ಹಗಲು–ರಾತ್ರಿ ಎನ್ನದೆ ಕಾಣಿಸಿಕೊಳ್ಳುವ ರೈತರಿಗೆ ಶ್ರಮ ಸಂಸ್ಕೃತಿಯ ಪ್ರತಿಫಲವಾಗಿ ಹಂತಿ ಪದಗಳನ್ನು ಕಟ್ಟಿ ಹಾಡಲಾಗಿದೆ. ಹಾಗೆಯೇ ಹಂತಿ ಪದಗಳನ್ನು ರಾತ್ರಿಯ ಹೊತ್ತಲ್ಲಿ ನಿದ್ದೆಬಾರದಿರಲು ಹಾಗೂ ಎಲ್ಲಾ ಒತ್ತಡಗಳನ್ನ ನಿವಾರಿಸಿಕೊಳ್ಳಲು ಹಾಡುಗಳನ್ನು ಕಟ್ಟಿ ಹೇಳತೊಡಗಿದರು. ತಾನು ವರ್ಷದುದ್ದಕ್ಕೂ ದುಡಿದು ಬೆಳೆದ ಪೈರಿನಿಂದ ಸರಿಯಾದ ಪ್ರತಿಫಲ ಸಿಗಲೆಂದು ದೇವರನ್ನು ಹಂತಿ ಹಾಡುಗಳಲ್ಲಿ ಸ್ತುತಿಸತೊಡಗಿದರು. ಇದು ಒಂದು ಸಂಪ್ರದಾಯದ ಕ್ರಿಯೆ. ರೈತರಿಂದ ಪ್ರಕ್ರಿಯೆಗೊಳ್ಳಲು ಕ್ರಿಯಾತ್ಮಕ ಆಚರಣೆಯಾಗಿ ಮಾರ್ಪಾಟ್ಟಿದೆ. ಇಂತಹ ಹಂತಿ ಹಾಡುಗಳಲ್ಲಿ ತಾನು ನಂಬಿದ ದೈವದ ಕುರಿತು ಸ್ತುತಿಸುವ ಕ್ರಿಯೆಗಳೇ ಸ್ತುತಿ ಪದಗಳಾಗಿ ಉತ್ತರ ಕರ್ನಾಟಕದ ಬಿಡಿ ಹಾಡುಗಳಾಗಿವೆ. ಬಿ.ಎಸ್.ಗದ್ದಗೀಮಠ ಅವರು ದೇವರು, ದೇವತೆಗಳು, ಭೂತಗಳಿಗೆ ಸಂಬಂಧಿಸಿದ ಹಲವು ಸ್ತುತಿಪದಗಳನ್ನು ಕುರಿತು ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. "ಜನಪದರು ಎಲ್ಲಾ ಬಗೆಯ ದೇವರನ್ನು ಸ್ತುತಿಸುವ ಮನೋಭಾವ ಹೊಂದಿದ್ದಾರೆ. ದೇವತೆಗಳಲ್ಲಿ ಸ್ತ್ರೀ–ಪುರುಷರೆನ್ನದೆ, ಸಂಗಮೇಶ್ವರ, ಮಹಾಕೂಟೇಶ್ವರಿ, ಕಾಳವ್ವ, ದ್ಯಾಮವ್ವ, ದುರುಗವ್ವ ನಂತರ ಗ್ರಾಮದೇವತೆ, ಊರ ದೇವತೆಗಳನ್ನು ಅವರು ಪೂಜಿಸುತ್ತಾ ಬಂದಿದ್ದಾರೆ. ಅಲ್ಲದೇ ಹಿಂದಿನ ಸಂಪ್ರದಾಯದಿಂದ ಬಂದ ಮಳೆರಾಜ, ಭೂತಾಯಿ, ಜೋಕುಮಾರನಂತಹ ದೇವತೆಗಳು, ಬಸವೇಶ್ವರ, ಚನ್ನಬಸವೇಶ್ವರ, ಸಿದ್ಧರಾಮೇಶ್ವರನಂತಹ

ಶಿವಶರಣರು, ಶಿವಯೋಗಿಗಳು, ಸಾಧು ಸತ್ಪುರುಷರೂ ಅವರಿಗೆ ದೇವತೆಗಳೆ. ಜೊತೆಗೆ ಭರಮಪ್ಪ, ಬ್ರಹ್ಮ ರಾಕ್ಷಸ, ಏಳು ಮಕ್ಕಳ ತಾಯಿ, ಕೊಳ್ಳಿಯ ದೆವ್ವದಂತಹ ಭೂತಾದಿ ದೇವತೆಗಳನ್ನು ಅವರು ಮರೆತಿಲ್ಲ. ಏಕದೇವೋಪಾಸನೆಗೆ ವಿರುದ್ಧವಾಗಿ ಬಹುದೇವೋಪಾಸನೆ ಜನಪದರಲ್ಲಿರುವ ಅಂಶವನ್ನು ಚೆನ್ನಾಗಿ ಗುರುತಿಸಿದ್ದಾರೆ"[೫]

ಬಿ.ಎಸ್.ಗದ್ದಗೀಮಠರು ಹಳ್ಳಿಹಳ್ಳಿಗಳಲ್ಲಿ ಆಚರಿಸುವ ಪ್ರತಿಯೊಂದು ಹಬ್ಬಗಳು ಸಂಪ್ರದಾಯ, ಆಚರಣೆಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಇದಕ್ಕೂ ಮೊದಲು ಗೊರೂರು ರಾಮಸ್ವಾಮಿ ಅಯ್ಯಂಗಾರ್, ಆರ್ಚಕ ಬಿ.ರಂಗಸ್ವಾಮಿ ಮೊದಲಾದ ವಿದ್ವಾಂಸರು ಜನಪದ ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ಪರಿಚಯಿಸಲು ಪ್ರಯತ್ನಿಸಿದ್ದರಾದರು ಬಿ.ಎಸ್.ಗದ್ದಗೀಮಠರಷ್ಟು ವಿಸ್ತೃತವಾಗಿ ಕೂಲಂಕಷವಾಗಿ ಜನಪದ ಸಂಸ್ಕೃತಿಯನ್ನು ಅನಾವರಣಗೊಳಿಸಿರಲಿಲ್ಲವೆಂದೇ ಹೇಳಬೇಕು. ತಾವು ಉತ್ತರ ಕರ್ನಾಟಕದ ಹಳ್ಳಿ–ಹಳ್ಳಿಗಳಲ್ಲಿ ಸಂಚರಿಸಿ ಕಲೆಹಾಕಿದ ಅಪೂರ್ವ ಜನಪದ ಗೀತೆಗಳನ್ನೂ ಹಿನ್ನೆಲೆಯಾಗಿ ಉದಾಹರಿಸುತ್ತಾ ಸಂಶೋಧಕರು ಉತ್ತರ ಕರ್ನಾಟಕದ ಜನಪದ ಸಂಸ್ಕೃತಿಯ ಸಮಗ್ರ ಚಿತ್ರಣವನ್ನು ತಮ್ಮ ಮಹಾಪ್ರಬಂಧದಲ್ಲಿ ನೀಡಿದ್ದಾರೆ. ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ ಗದ್ದಗೀಮಠರಿಂದಲೇ ಪ್ರಾರಂಭವಾಯಿತು ಎಂಬುದು ಗಮನೀಯ. ಜನಪದ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನವಷ್ಟೇ ಅಲ್ಲದೇ ಸಾಹಿತ್ಯವನ್ನು ಬಹುಶಿಸ್ತಿಯ ಅಧ್ಯಯನಕ್ಕೆ ಒಳಪಡಿಸಿದ್ದು ಬಿ.ಎಸ್.ಗದ್ದಗೀಮಠರ ವಿದ್ವತ್ತಿಗೆ ಹಿಡಿದ ಕನ್ನಡಿ. ತಮ್ಮ ಮಹಾಪ್ರಬಂಧದಲ್ಲಿ ಜನರಿಂದ ಸಂಪ್ರದಾಯಗಳು, ಆಚರಣೆಗಳನ್ನು, ಜನಪದರ, ನಂಬಿಕೆ, ಶ್ರದ್ದೆಗಳನ್ನು ಆಚಾರ–ವಿಚಾರಗಳನ್ನು ಹಬ್ಬ ಹುಣ್ಣಿಮೆಗಳನ್ನು, ದಾರ್ಮಿಕ, ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಮನೋ–ವೈಜ್ಞಾನಿಕ ಭಾವನಾತ್ಮಕ ಹೀಗೆ ಎಲ್ಲಾ ನಿಟ್ಟಿನಲ್ಲಿಯೂ ವಿಶ್ಲೇಷಣೆ ನಡೆಸಿದ್ದಾರೆ. ಇವುಗಳನ್ನು ವ್ಯಕ್ತಪಡಿಸುವ ಹಳ್ಳಿಗರ ಹಾಡುಗಳನ್ನು ಸಾಂದರ್ಭಿಕವಾಗಿ ಸಮಯೋಚಿತವಾಗಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಪ್ರತಿಯೊಂದು ಆಚರಣೆಗಳು ಸಂಪ್ರದಾಯಗಳ ಹಿನ್ನೆಲೆ ಐತಿಹ್ಯ ಐತಿಹಾಸಿಕತೆ ಮುಂತಾದವುಗಳನ್ನು ಜನರಿಂದ ಗೀತೆಗಳ ಜೊತೆಗೆ ಜನಪದ ಸಾಹಿತ್ಯದ ಇತರ ಪ್ರಕಾರಗಳಾದ ಜನಪದ ಕಥೆ, ಗಾದೆ, ಒಗಟು ಮೂಲಕವೂ ಸಾಂಸ್ಕೃತಿಕ ಅಂಶಗಳನ್ನು ದಾಖಲಿಸುತ್ತಾರೆ. ಇನ್ನೂ ಕೆಲವುಗಳಿಗೆ ಪೌರಾಣಿಕ ಚೌಕಟ್ಟಿನ ಹಿನ್ನೆಲೆಯನ್ನು ಒದಗಿಸುತ್ತಾರೆ. ನಾಗರ ಪಂಚಮಿ, ದಸರಾ ಮುಂತಾದ ಹಬ್ಬ ಹುಣ್ಣಿಮೆಗಳನ್ನು ಭ್ರಾವನಾತ್ಮಕ ಪ್ರಪಂಚಕ್ಕೆ ಕೊಂಡ್ಯೆಯ್ಯುತ್ತಾರೆ. ಇನ್ನೂ ಕೆಲವು ಸಂಪ್ರದಾಯಗಳಿಗೆ ಆಧ್ಯಾತ್ಮಿಕ ಧಾರ್ಮಿಕ ನೆಲೆಯನ್ನೂ ಒದಗಿಸುತ್ತಾರೆ. ಉದಾಹರಣೆಗೆ ಸುಗ್ಗಿಯ ಸಂಪ್ರದಾಯದಲ್ಲಿ ಹಂತಿಯ ಹಾಡುಗಳಲ್ಲಿ ಶಿವಶರಣರ ಪ್ರಭಾವವನ್ನು ಚಿತ್ರಿಸಿರುವುದು. ಮಳೆ ಕರೆಯುವ ಆಚರಣೆಯಾದ ಗುರ್ಜಿ ಸಂಪ್ರದಾಯಕ್ಕೆ ಐತಿಹಾಸಿಕ ಮಹತ್ವವನ್ನು ಬಿ.ಎಸ್.ಗದ್ದಗೀಮಠರು ನೀಡಿದ್ದಾರೆ. ಹೀಗೆ ತಮ್ಮ 'ಕನ್ನಡ ಜಾನಪದ ಗೀತೆಗಳು' ಮಹಾಪ್ರಬಂಧದಲ್ಲಿ ಗದ್ದಗೀಮಠರು ಜನಪದಕ್ಕೆ ಒಂದು ಹೊಸ ಆಯಾಮವನ್ನೇ ಕಲ್ಪಿಸಿದ್ದಾರೆ.

ಹೀಗೆ ಜಾನಪದ ಕ್ಷೇತ್ರಕ್ಕೆ ಸಂಶೋಧನೆ ಆಚಾರ ಸಂಗ್ರಹಗಳ ಮೂಲಕ ಅಮೂಲ್ಯ ಕೊಡುಗೆ ನೀಡಿದವರಲ್ಲಿ ಗದ್ದಗೀಮಠರು ಅಗ್ರಗಣ್ಯರು. ಮಹಾಪ್ರಬಂಧದ ಕೊನೆಯಲ್ಲಿ ಸಮಾರೋಪದ ರೀತಿಯಲ್ಲಿ ಕನ್ನಡ ಜನಪದ ಸಾಹಿತ್ಯದ ಅಳಿವು ಉಳಿವುಗಳನ್ನು ಕುರಿತು ಅವರು ಆಡಿರುವ ಮಾತುಗಳು ಗಮನಾರ್ಹ. ಕನ್ನಡ ಜಾನಪದ ಸಾಹಿತ್ಯ ಪರಿಪೂರ್ಣವಾಗಬೇಕಾದರೆ ಅದರಲ್ಲಿ ಅಡಕವಾದ ಸಂಗತಿಗಳನ್ನು ವಿಂಗಡಿಸಿ ಬಿಡಿ-ಬಿಡಿ ಮಾಡಿ ಜನತೆಯ ಮುಂದೆ ಇಡುವುದೊಂದು ಮಹತ್ವದ ಕೆಲಸ. ಅವುಗಳಲ್ಲಿ ಅಡಕವಾದ ಸಂಸ್ಕೃತಿಯನ್ನು ಎತ್ತಿ ತೋರಿಸುವುದು ಮತ್ತೊಂದು ಕೆಲಸವಾಗಿದೆ.

೫.೧.೨. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು (೧೯೭೨)

ಜೀ.ಶಂ.ಪರಮಶಿವಯ್ಯ ಅವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಪಿಎಚ್.ಡಿ ಮಹಾಪ್ರಬಂಧವಾಗಿದೆ. ಬಿ.ಎಸ್.ಗದ್ದಗೀಮಠರ ನಂತರ ಜಾನಪದ ಸಾಹಿತ್ಯದಲ್ಲಿ ಸಂಶೋಧನೆ ಮಾಡಿ ವೈಜ್ಞಾನಿಕವಾದ ನೆಲೆಯನ್ನು ಜೀಶಂಪ ಅವರು ಕಲ್ಪಿಸಿಕೊಟ್ಟರು. ಇವರ ಅಧ್ಯಯನದ ದೃಷ್ಟಿಧೋರಣೆ ಹೆಚ್ಚು ಕ್ಷೇತ್ರಕಾರ್ಯ ಆಧರಿತವಾಗಿದ್ದು ಇದನ್ನು ಮೈಗೂಡಿಸಿಕೊಂಡಿದ್ದರು. ಹಾಗಾಗಿ ಜೀಶಂಪ ಅವರ ಜನಪದ ಅಧ್ಯಯನದಲ್ಲಿ ಜನಪದ ವ್ಯಾಖ್ಯೆ, ವಿವೇಚನೆ, ವಿಶ್ಲೇಷಣೆಗಳು ಅನ್ವಯಿಕ ಜನಪದದ ವೈಶಿಷ್ಟ್ಯವು ಸಾಪೇಕ್ಷಗೊಳಿಸುತ್ತವೆ. ಜೀಶಂಪ ಅವರು 'ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು' ಮಹಾಪ್ರಬಂಧ ಜನಪದ ಅಧ್ಯಯನಕ್ಕೆ ಒಂದು ಮಹತ್ವದ ಕೃತಿಯಾಗಿದೆ. ತಮ್ಮ ಅಧ್ಯಯನಕ್ಕೆ ದಕ್ಷಿಣ ಕರ್ನಾಟಕ ಭಾಗವನ್ನು ವ್ಯಾಪ್ತಿಗೊಳಿಸಿಕೊಂಡಿದ್ದರೂ, ಇಡೀ ಕರ್ನಾಟಕದ ಜನಪದ ಕಾವ್ಯ ಸಂಪ್ರದಾಯಗಳನ್ನು ಸಮೀಕ್ಷಿಸಿದ್ದಾರೆ. ಅದರಲ್ಲೂ ತಮ್ಮ ಅಧ್ಯಯನದಲ್ಲಿ ಕ್ಷೇತ್ರಕಾರ್ಯವನ್ನು ವೈಜ್ಞಾನಿಕವಾಗಿ ಬಳಸಿಕೊಂಡಿದ್ದಾರೆ.

ಹತ್ತೊಂಬತ್ತನೆ ಶತಮಾನದಲ್ಲಿ ಅಬ್ಬೆದುಬಾಯ್, ಜಾನ್ ಲೇಡನ್, ಮೋಗ್ಲಿಂಗ್, ಜಾನ್ ಫ್ಲೀಟ್, ಮೆರಿ ಫ್ರೀರೆ, ಕಿಟೆಲ್ ಮುಂತಾದ ವಿದೇಶಿ ವಿದ್ವಾಂಸರು ಜಾನಪದ ಕ್ಷೇತ್ರಕಾರ್ಯ ಆರಂಭಿಸಿದರು. ಇವರಲ್ಲಿ ಕೆಲವರು ಜನಪದ ಸಾಹಿತ್ಯ, ಗಾದೆ, ಲಾವಣಿ, ಕಥೆಗಳು ತಮಗೆ ದೊರೆತ ಪ್ರದೇಶಗಳಿಂದ ಸಂಗ್ರಹಿಸಿ ಪ್ರಕಟಿಸಿದರು. ಮೊದಲ ಘಟ್ಟದ ಮೊದಲ ಮೂರು ದಶಕಗಳಲ್ಲಿ ತೀವ್ರಗತಿಯಿಂದ ನಡೆದ ಕ್ಷೇತ್ರಕಾರ್ಯ ಕನ್ನಡ ಜನಪದ ಅಧ್ಯಯನಕ್ಕೆ ಸ್ಫೂರ್ತಿಯಾಯಿತು. ಈ ಪ್ರಭಾವದಿಂದ ಉತ್ತರ ಕರ್ನಾಟಕದ ಹಲಸಂಗಿ ಗೆಳೆಯರು-ಮದುರಚೆನ್ನ ಪಿ.ದೂಲಾ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ-ಇವರುಗಳು 'ಗರತಿಯ ಹಾಡು'(೧೯೩೧) ಕೃತಿಯನ್ನು ಪ್ರಕಟಿಸಿದರು. ಕರ್ನಾಟಕದ ಇತರ ಭಾಗಗಳಲ್ಲಿ ಮಾಸ್ತಿ, ದೇವುಡು, ಗೊರೂರು, ಬೆಟ್ಟಗೇರಿ ಕೃಷ್ಣಶರ್ಮ, ಬೇಂದ್ರೆ, ಅರ್ಚಕ ಬಿ.ರಂಗಸ್ವಾಮಿ, ಮ.ಕೃಷ್ಣಮೂರ್ತಿ ಮುಂತಾದವರು. ಜನಪದ ಸಾಹಿತ್ಯ ಸಂಗ್ರಹಣೆ, ಸಂಪಾದನೆಯನ್ನು ವಿವೇಚನೆಯಿಂದ ಮಾಡಿದ್ದಾರೆ. ೧೯೩೦ರಿಂದ ೧೯೪೭ರ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ಬಗೆಯ ಕಾರ್ಯ ಚಟುವಟಿಕೆಗಳು ನಡೆದವು. ಜನಪದ ಹಾಡು, ಕಥನಗೀತೆ, ಲಾವಣಿ ಮುಂತಾದವುಗಳನ್ನು ವಿಮರ್ಶಿಸುವ

ಕಾರ್ಯ ಚಟುವಟಿಕೆಗಳು ಶುರುವಾದವು. ಅರ್ಚಕ ಬಿ.ರಂಗಸ್ವಾಮಿ, ಸಿಂಪಿ, ಮಾಸ್ತಿ, ದೇವುಡು, ಮುಂತಾದವರು ಜನಪದ ಸಾಹಿತ್ಯ ಕುರಿತು ಬರವಣಿಗೆಗಳಲ್ಲಿ ಅಲ್ಲಲ್ಲಿ ಸಂಸ್ಕೃತಿ ಕುರಿತು ಚರ್ಚಿಸಿದ್ದಾರೆ.

ಸ್ವಾತಂತ್ರ್ಯನಂತರ ಜನಪದ ಸಾಹಿತ್ಯ ಕುರಿತು ವ್ಯಾಪಕವಾದ ಕ್ಷೇತ್ರಕಾರ್ಯ ನಡೆಯಿತು. ಬಿ.ಎಸ್.ಗದ್ದಗೀಮಠರು ಜನಪದ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಬದುಕಿನ ಮೂಲ ಸೆಲೆಗಳನ್ನು ಗುರುತಿಸುವ ಪ್ರಯತ್ನ ಕೈಗೊಂಡರು. ಇದೆ ಅವಧಿಯಲ್ಲಿ ಕ.ರಾ.ಕೃ, ವಿವಿಧ ಬಗೆಯ ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಇವರ ಕಾರ್ಯಕ್ಷೇತ್ರ ಕೆಲವು ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿತ್ತು. ಗದ್ದಗೀಮಠ ಅವರ ನಂತರ ಜಾನಪದದಲ್ಲಿ ಕ್ಷೇತ್ರಕಾರ್ಯವನ್ನು ಗಂಭೀರವಾಗಿ ಮೈಗೂಡಿಸಿಕೊಂಡಿದ್ದವರು ಜೀಶಂಪ ಅವರು. ೧೯೬೦ರಿಂದ ಈಚೆಗೆ ಜೀಶಂಪ ಅವರು ಮಾಡಿದ ಕ್ಷೇತ್ರಕಾರ್ಯ, ಸಂಶೋಧನೆ, ವಿಮರ್ಶೆಗಳು ನಾಡಿನ ಬೇರೆ-ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು.

ಜೀಶಂಪ ಅವರು ಬೇರೇ-ಬೇರೆ ಪ್ರದೇಶದ ಕಡೆ ಕ್ಷೇತ್ರಕಾರ್ಯ ಮಾಡಿ 'ಜನಪದ ಕಾವ್ಯಸಂಪ್ರದಾಯ ಮತ್ತು ಆ ಸಂಪ್ರದಾಯದ ಗಾಯಕರನ್ನು ನೇರವಾಗಿ ಗುರುತಿಸುತ್ತಿದ್ದರು. ಆ ವ್ಯಕ್ತಿಗಳ ಮೂಲಕ ಜನಪದ ಭಾಷೆಯಲ್ಲಿಯೇ ಕಾವ್ಯಗಳನ್ನು ಸಂಗ್ರಹಿಸುತ್ತಿದ್ದರು. ಹಾಗಾಗಿ ಗದ್ದಗೀಮಠ ಅವರು ಸಾಹಿತ್ಯಿಕ ನೆಲೆಯಲ್ಲಿ ಅಧ್ಯಯನ ಮಾಡಿ ಅಪೂರ್ಣಗೊಳಿಸಿದ ಕಾರ್ಯವನ್ನು ಜೀಶಂಪ ಅವರು ಮುಂದುವರಿಸಿದರು. ಅಲ್ಲದೇ ಜನಪದ ಬದುಕಿನ ಬದ್ಧತೆ, ಜನಪದ ಸಂಸ್ಕೃತಿಯ ಗಾಢ ಕಾಳಜಿಗಳಿಂದಾಗಿ ಸಾಹಿತ್ಯಕ ನೆಲೆಯ ಜೊತೆಗೆ ಸಾಹಿತ್ಯೇತರ ಆಯಾಮಗಳನ್ನು ಜಾನಪದ ಅಧ್ಯಯನಕ್ಕೆ ಅಳವಡಿಸಿ ಮುನ್ನಡೆದರು.

೧೯೬೦ರ ದಶಕದಲ್ಲಿ ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕ್ಕೆ ನಿರ್ದಿಷ್ಟವಾದ ವೈಜ್ಞಾನಿಕ ರೂಪಿಸಲಾಯಿತು. ದೇ.ಜ.ಗೌ., ಹಾ.ಮಾ.ನಾ ಮುಂತಾದವರ ಕಾರ್ಯವಿಧಾನಗಳ ಪರಿಸರದಲ್ಲಿ ಜೀಶಂಪ ಅವರು ಜಾನಪದ ಅಧ್ಯಯನಕ್ಕೆ ಪ್ರವೇಶ ಪಡೆದಿದ್ದರು. ಇವರು ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಧೋರಣೆಗಳನ್ನು ರೂಪಿಸಿಕೊಂಡು ತಲಸ್ಪರ್ಶಿಯವಾದ ಅಧ್ಯಯನದ ಮೂಲಕ ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಹಾಗಾಗಿ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಎಂಬ ಮಹಾಪ್ರಬಂಧ ಈ ಮಾದರಿಯಲ್ಲಿ ನಡೆಸಿದ ಅಧ್ಯಯನದ ಫಲವಾಗಿದೆ. ಜನಪದ ಕಾವ್ಯದ ಮಟ್ಟುಗಳು, ಉಪಸಂಹಾರ ಮತ್ತು ಬಂಧಗಳು ಸೇರಿದಂತೆ ಒಟ್ಟು ೧೪ ಭಾಗಗಳನ್ನು ಹೊಂದಿರುವ ಈ ಮಹಾಪ್ರಬಂಧ ಗಾತ್ರದಲ್ಲಿ ದೊಡ್ಡದಾಗಿದ್ದು, ವಸ್ತು ವಿಷಯದಲ್ಲೂ ಉನ್ನತವಾಗಿದೆ.

ಜೀಶಂಪ ಅವರು ಮಹಾಪ್ರಬಂಧದ ಪ್ರಥಮ ಭಾಗದಲ್ಲಿ ಜಾನಪದದ ಸ್ವರೂಪ, ಜಾನಪದ ಸಿದ್ಧಾಂತಗಳು, ಜನಪದ ವರ್ಗೀಕರಣ, ಕನ್ನಡದಲ್ಲಿ ಜಾನಪದ ಅಧ್ಯಯನ ಯಾವ ರೀತಿ ನಡೆದಿದಿದೆ ಎಂದು ಸಮೀಕ್ಷಿಸಿದ್ದಾರೆ. ಜಗತ್ತಿನ ರಾಷ್ಟ್ರಗಳು ಜಾನಪದವನ್ನು ನೋಡಿರುವ ದೃಷ್ಟಿಕೋನವನ್ನು

ಕನ್ನಡದ ಸಂದರ್ಭದಲ್ಲಿ ತೌಲನಿಕವಾಗಿ ವಿಶ್ಲೇಷಿಸಿದ್ದಾರೆ. ಫಿನ್ಲೆಂಡ್, ಜರ್ಮನಿ, ಅಮೇರಿಕಾ, ಇಂಗ್ಲೆಂಡ್ ಮುಂತಾದ ವಿವಿಧ ರಾಷ್ಟ್ರಗಳ ಜಾನಪದ ಕ್ಷೇತ್ರಕಾರ್ಯವನ್ನು ತಮ್ಮ ಅಧ್ಯಯನದಲ್ಲಿ ವಿವೇಚಿಸುತ್ತಾರೆ. ಜಗತ್ತಿನ ವಿವಿಧ ವಿದ್ವಾಂಸರ ಜಾನಪದ ಸಂಶೋಧನ ತೀರ್ಮಾನಗಳು ಭಾರತೀಯ ಜಾನಪದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಣ, ಸಂಪಾದನೆ, ಸಂಶೋಧನೆಗಳಿಗೆ ಹೇಗೆ ಪ್ರಭಾವಿಸಿದೆ ಎಂಬುದನ್ನು ನೋಡುತ್ತಾರೆ. "ಮಾನವಶಾಸ್ತ್ರ ಪ್ರಾಗಿತಿಹಾಸ, ಶಾರೀರಿಕ ಮಾನವಶಾಸ್ತ್ರ ವಿಭಾಗಗಳಲ್ಲಿ ಬಿಟ್ಟು ಸಾಂಸ್ಕೃತಿಕ ಮಾನವಶಾಸ್ತ್ರವನ್ನು ಪರಿಗಣಿಸಿದಾಗ, 'ಜಾನಪದ' ಮೊದಲಿಗೆ ಅದರ ಒಂದು ಅಂಗವಾಗಿಯೇ ಅಧ್ಯಯನಕ್ಕೆ ಒಳಗಾಗಿತ್ತು. ಸಮಗ್ರ ಸಂಸ್ಕೃತಿಯ ಒಂದು ಪ್ರಮುಖ ಅಂಗ ಜನಪದ ಸಂಸ್ಕೃತಿ. ಇದನ್ನು ಜಾನಪದ ವಿದ್ವಾಂಸರು ಪ್ರತ್ಯೇಕಿಸಿಕೊಂಡು ಸ್ವತಂತ್ರ ವಿಷಯವಾಗಿ ರೂಪಿಸಿದರು"[೧] 'ಆದಿಮ ಸಂಸ್ಕೃತಿ' ಕೃತಿಯ ಕರ್ತೃ ಇ.ಬಿ.ಟೈಲರ್, ಹಾಗೂ ಮಾನವಶಾಸ್ತ್ರದ ಜನಕ ಆಂಡ್ರ್ಯೂಲಾಂಗ್ ಇವರು ಜಾನಪದವನ್ನು ಮಾನವಶಾಸ್ತ್ರದ ಸ್ವರೂಪದಲ್ಲಿ ಸೇರಿಸುತ್ತಾರೆ. ಈ ವಿದ್ವಾಂಸರ ಸೈದ್ಧಾಂತಿಕತೆಯನ್ನು ಜೀಶಂಪ ಅವರು ತಮ್ಮ ಅಧ್ಯಯನದಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ.

ಭಾಗ ಎರಡರಲ್ಲಿ ಕಥನ ಕಾವ್ಯಗಳು, ಲಾವಣಿಗಳ ಸ್ವರೂಪ, ಖಂಡಕಾವ್ಯ ಇತ್ಯಾದಿಗಳ ಕುರಿತು ಸುದೀರ್ಘ ಚರ್ಚೆ ನಡೆಸಿದ್ದಾರೆ. ಮುಖ್ಯವಾಗಿ ಲಾವಣಿಗಳು ಪಾಶ್ಚಾತ್ಯ ಮತ್ತು ಭಾರತೀಯ ಅಧ್ಯಯನಗಳಲ್ಲಿ ಒಳಗೊಂಡಿರುವ ಸ್ವರೂಪವನ್ನು ಕುರಿತ ವಿವೇಚನೆ ಮಾಡುತ್ತಾರೆ. ಲಾವಣಿಗಳ ಸ್ವರೂಪ, ಲಾವಣಿಗಳ ಮೂಲ, ಜನಪದ ಖಂಡಕಾವ್ಯಗಳು, ಲಾವಣಿಗಳ ಅಧ್ಯಯನ ಮುಂತಾದವುಗಳನ್ನು ಸಾಹಿತ್ಯಿಕವಾಗಿ ವಿವರಿಸಿದ್ದಾರೆ. "ಕಾವ್ಯಕಲೆಯ ಅತ್ಯಂತ ಪ್ರಾಚೀನ ರೂಪಗಳಲ್ಲಿ ಲಾವಣಿಕೂಡ ಒಂದು. ಪದ್ಯರೂಪದ ಸಣ್ಣಕಥೆ ಎಂದು ಇದನ್ನು ಕರೆಯಬಹುದು. ಜಗತ್ತಿನ ಎಲ್ಲ ಜನಪದ ಸಾಹಿತ್ಯದಲ್ಲೂ ಲಾವಣಿ ಒಂದು ಪ್ರಕಾರ. ಎಲ್ಲ ಜಾನಪದ ಪ್ರಕಾರಗಳಂತೆ ಇದೂ ಸಹ ಸ್ವಭಾವಿಕವಾಗಿ ಹುಟ್ಟಿಕೊಂಡಿದೆ. ಜನಪದ ಲಾವಣಿಗಳ ಮೂಲವನ್ನು ವೇದಗಳ ಕಾಲಕ್ಕೂ ಆರೋಪಿಸುವ ಸಂದರ್ಭಗಳನ್ನು ಕಾಣಬಹುದು. ವೈದಿಕ ಸಾಹಿತ್ಯದ ಗಾಥೆಗಳು ನಮ್ಮ ಲಾವಣಿ ಸಾಹಿತ್ಯದ ಪ್ರಾಚೀನ ರೂಪಗಳೆಂದು ಕರೆಯಲಾಗಿದೆ"[೨] ಹೀಗೆ ಲಾವಣಿಗಳು ಪ್ರಾಚೀನ ಕಾಲದಿಂದಲೂ ಸಾಹಿತ್ಯಿಕವಾಗಿ ಪ್ರಚಲಿತವಾಗಿರುವ ಬಗೆಯನ್ನು ಗುರುತಿಸುತ್ತಾರೆ. ಇದೇ ಭಾಗದಲ್ಲಿ ಜೀಶಂಪ ಅವರು ಮೊಟ್ಟಮೊದಲಿಗೆ 'ವೃತ್ತಿ', 'ಗಾಯಕ' ಮತ್ತು 'ವೃತ್ತಿಗಾಯಕ' ಪದಗಳ ಪ್ರಯೋಗ ಮತ್ತು ಅವುಗಳ ಆನ್ವಯಿಕ ಅಧ್ಯಯನ, ವಿಶ್ವದ ಇತರ ಕಡೆಗಳಲ್ಲಿರುವ ಈ ವೃತ್ತಿಗಾಯಕ ಪರಂಪರೆಯನ್ನು ತೌಲನಿಕವಾಗಿ ವಿವೇಚಿಸುತ್ತಾರೆ.

ಕರ್ನಾಟಕ ವೃತ್ತಿಗಾಯಕರ ಪಟ್ಟಿಯನ್ನು ಆಯಾ ತಂಡಗಳ ರಾಷ್ಟ್ರೀಯ ವರ್ಗೀಕರಣ ಅದರ ಗುಣ ಲಕ್ಷಣಗಳು, ಐತಿಹಾಸಿಕ ಚಾರಿತ್ರಕ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ವೃತ್ತಿಗಾಯಕರು ನಿರ್ವಹಿಸಿದ ಪಾತ್ರ ಮುಂತಾದವುಗಳ ಜೊತೆಗೆ ವೃತ್ತಿಗಾಯಕರನ್ನು ಕುರಿತು (ಅ)ಧಾರ್ಮಿಕವರ್ಗ (ಆ)ಲೌಕಿಕವರ್ಗಗಳ ಕುರಿತು ವಿಭಜನೆಯ ವಿವರಣೆ ನೀಡಿದ್ದಾರೆ. ವೃತ್ತಿಗಾಯಕರನ್ನು

ಕುರಿತು ಅವರು ಮಾಡುವ ಈ ಬಗೆಯ-ಧಾರ್ಮಿಕ, ಲೌಕಿಕ- ವಿಭಜನೆಯಿಂದಾಗಿ ಅಧ್ಯಯನದ ಧೋರಣೆಗೆ ಒಂದು ನಿರ್ದಿಷ್ಟತೆ ಪ್ರಾಪ್ತವಾಗಿದೆ. ವೃತ್ತಿಗಾಯಕರ ಮೂಲನೆಲೆ, ಸ್ವರೂಪ, ಲಕ್ಷಣ ಕುರಿತು ಜೀಶಂಪ ಕೊಟ್ಟಿರುವ ಹತ್ತು ಬಗೆಯ ವಿವರಣೆಗಳನ್ನು 'ದಶಸೂತ್ರ' ಎಂದು ಕರೆಯಬಹುದು. ಆ ಮಾತು ಅಷ್ಟು ಗಟ್ಟಿ ಆ ನಿಲುವು ಅಷ್ಟು ಖಚಿತ. ಗಾಯಕರು ಸಂಚರಿಸುವ ವಿವಿಧ ಪ್ರದೇಶಗಳು, ಕ್ಷೇತ್ರಗಳು, ಅವರು ನಡೆದುಕೊಳ್ಳುವ ದೈವ ಮುಂತಾದವುಗಳ ಅನ್ವಯಿಕ ವಿಧಾನ ಜೀಶಂಪ ಅಧ್ಯಯನ ವೈಶಿಷ್ಟಕ್ಕೆ ನಿದರ್ಶನ. ಜೀಶಂಪ ಅವರ ವೃತ್ತಿಗಾಯಕರ ಅಧ್ಯಯನದ ತಾತ್ವಿಕತೆಯನ್ನು ಈ ರೀತಿ ಪಟ್ಟಿಮಾಡಬಹುದು.

ಅ. ವೃತ್ತಿಗಾಯಕರ ಪರಂಪರೆ; ಪಾತ್ರಗಳನ್ನು ಸಾಂಸ್ಕೃತಿಕ ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ವಿವೇಚಿಸುತ್ತ, ಆ ಪರಂಪರೆಯ ಸ್ವರೂಪ ಮತ್ತು ವ್ಯಾಪ್ತಿಗಳನ್ನು ಖಚಿತಪಡಿಸುವುದು.

ಆ. ಕ್ರಮೋಕ್ತ ಅಧ್ಯಯನ: ವೃತ್ತಿಗಾಯಕರ-ವಿವಿಧ ಬುಡಕಟ್ಟು, ಕುಲಗುಂಪು, ಅಲೆವಾರಿ ಸಮುದಾಯಗಳನ್ನು ಗುರುತಿಸುತ್ತ, ಸಾಹಿತ್ಯಕ ಮತ್ತು ಜನಾಂಗಿಕ ನೆಲೆಗಳನ್ನು ಸಮನ್ವಯಗೊಳಿಸಿರುವುದು.

ಜೀಶಂಪ ಅವರ ಈ ಸಂಶೋಧನೆಯ ಫಲವಾಗಿ ಜಾನಪದ ವ್ಯಾಸಂಗದ ಮೂರು ಅಜ್ಞಾತ ಗವಾಕ್ಷಗಳು ತೆರೆದುಕೊಂಡಿವೆ:

೧. ಜನಪದ ಕಾವ್ಯ-ಕಥನಗೀತೆಗಳನ್ನು ಹಾಡುವ ಮತ್ತು ಹೀಗೆ ಮಾಡುವುದನ್ನೇ ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದ ಅನೇಕ ಜನಪದ ಗುಂಪುಗಳಿವೆ ಎನ್ನುವ ಪರಿಕಲ್ಪನೆ.

೨. ವೃತ್ತಿಗಾಯಕರ ಸಾಂಸ್ಕೃತಿಕ ಗುಂಪುಗಳು ಮತ್ತು ಅವು ಶತಶತಮಾನದಿಂದ ಉಳಿಸಿಕೊಂಡು ಬಂದ ಜನಪದ (ಗೀತ) ಕಾವ್ಯಸಂಪತ್ತು.

೩. ವೃತ್ತಿಗಾಯಕರು ತಮ್ಮ ಕಲೆಯನ್ನು ಪ್ರಸ್ತುತಪಡಿಸುವಾಗ ಅವರಲ್ಲಿ ಕಂಡುಬರುವ ಜನಪದ ವಾದ್ಯ ಪರಿಕರ ವೇಷಭೂಷಣ, ಪ್ರದರ್ಶನ ಕ್ರಮ ಮುಂತಾದವುಗಳ ಹಿನ್ನೆಲೆ. ಈ ಹಿನ್ನಲೆಯ ಬೆಳಕಿನಲ್ಲಿ ವಿವಿಧ ವೃತ್ತಿಗಾಯಕರ ಮೇಳಗಳ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸಿದ್ದು.

ಈ ಮಹಾಪ್ರಬಂಧದ ನಾಲ್ಕರಿಂದ ಒಂಬತ್ತರವರೆಗಿನ ಭಾಗಗಳು ಬಹುಮಹತ್ವದ ಮತ್ತು ವಿಶೇಷವಾದವುಗಳಾಗಿವೆ. ವೃತ್ತಿಗಾಯಕರ ಜನಾಂಗಿಕ ಹಿನ್ನೆಲೆ ಮತ್ತು ಪ್ರತಿ ತಂಡದ ಅಥವಾ ವರ್ಗದ ಕಾವ್ಯಪರಂಪರೆ ಕುರಿತಾದ ಸ್ಫುಟವಾದ ವಿವರಣೆಗಳನ್ನು ಇಲ್ಲಿ ನೀಡಲಾಗಿದೆ. ಮೊದಲಬಾರಿಗೆ ಕನ್ನಡದ ವೃತ್ತಿಗಾಯಕರ ಚರಿತ್ರೆ, ಸಂಪ್ರದಾಯ ಮತ್ತು ಕಲಾಪ್ರಪಂಚದ ಮೇಲೆ ಹೊಸಬೆಳಕು ಚೆಲ್ಲುವ ಅಮೂಲ್ಯ ವಿಷಯಗಳ ವಿವೇಚನೆ ಇಲ್ಲಿ ಕಂಡುಬರುತ್ತದೆ. ಜೀಶಂಪ ತಮ್ಮ ಅಧ್ಯಯನ ಕ್ರಮಕ್ಕೆ ಒಂದು ವಿನೂತನ ಮಾರ್ಗ ರೂಪಿಸಿಕೊಂಡಿರುವುದು ಇಲ್ಲಿ ಸ್ಪಷ್ಟ ವೃತ್ತಿಗಾಯಕರ ಆರ್ಥಿಕ ಶ್ರೇಣಿ, ಸಾಮಾಜಿಕ ಸ್ಥಿತಿಗತಿ, ಸಂಪ್ರದಾಯ, ಆಚರಣೆ, ನಂಬಿಕೆ ಮುಂತಾದ ಧಾರ್ಮಿಕ ಸಂಗತಿಗಳು

ವೃತ್ತಿ ಕಲೆಯ ವೈಶಿಷ್ಟಗಳು – ಹೀಗೆ ಹಲವು ಹತ್ತಾರು ಮೂಲದ ಅಂಶಗಳು ಸಮನ್ವಯಗೊಂಡು ಇಡೀ ಅಧ್ಯಯನಕ್ಕೆ ಒಂದು ಶಾಸ್ತ್ರೀಯ ಸ್ವರೂಪ ಮತ್ತು ಸಾಂಸ್ಕೃತಿಕ ಆಯಾಮ ದೊರಕಿದೆ. ಇನ್ನುಳಿದ ಮಹತ್ವದ ಪೂರಕ ಅಂಶಗಳೆಂದರೆ ಜೀಶಂಪ ಗುರುತಿಸುವ ನೀಲಗಾರ, ಚೌಡಿಕೆ, ಕಾಡುಗೊಲ್ಲ, ಗೊರವ, ದೊಂಬಿದಾಸ, ಹೆಳವ, ಕಿನ್ನರಿಜೋಗಿ, ಕರಪಾಲ ಮುಂತಾದ ವೃತ್ತಿಗಾಯಕ ತಂಡಗಳಲ್ಲಿ ಪರಂಪರಾನುಗತವಾಗಿ ಉಳಿದುಬಂದಿರುವ ಕಾವ್ಯಗಳ ಸಂಖ್ಯೆ, ಸ್ವರೂಪ ಇತ್ಯಾದಿ.

ಜೀಶಂಪ ಅವರ ವೃತ್ತಿಗಾಯಕರ ಸಮಗ್ರ ಅಧ್ಯಯನವು ಜಾನಪದ ಆಸಕ್ತರಿಗೆ ಹೊಸ ಆಕರವನ್ನು ಒದಗಿಸುತ್ತದೆ. ಜೀಶಂಪ ಅವರು ವೃತ್ತಿಗಾಯಕರಲ್ಲದೆ ಇತರ ಹವ್ಯಾಸಿ ಎಂದು ಹೇಳಬಹುದಾದ ಕಾವ್ಯ ಪರಂಪರೆಯನ್ನು ಗುರುತಿಸುತ್ತ ದೈವಸಂಬಂಧಿ ಪ್ರಣಯ ಕಥನ ಗೀತೆಗಳ ಕಡೆ ಗಮನ ಸೆಳೆಯುತ್ತಾರೆ. ಮಾನವ ಲೋಕದ ಶೃಂಗಾರವೇ ಆದರೂ ಜನಪದರಿಗೆ ಅವರ ಅನುಭವ ಗಾಢವಾಗಿ ತಟ್ಟುವುದು ಬಹುಶಃ ಅದು ದೈವೀಕರಣಗೊಂಡಾಗಲೋ ಏನೋ! ಇರಬಹುದು. ವಿಷಯವೊಂದರ ಬೆನ್ನೇರಿ ಹೋಗುವ ಅವರ ಸಾಹಸ ಮನೋಭಾವ ಅವರ ಈ ಎಲ್ಲ ಸಾಧನೆಗಳ ಗುಟ್ಟೆನ್ನಬಹುದು. ಯಾರೇ ಒಬ್ಬ ವ್ಯಕ್ತಿ ಜನಪದ ಗಾಯಕನಂತೆ ಕಂಡಾಗ ಅವನು ಎಲ್ಲಿಯೇ ಸಿಕ್ಕಿದರೂ ಅವನ ಬೆನ್ನು ಹತ್ತಿ ಅವನ ಮೂಲಚೂಲಗಳನ್ನು ವಿಚಾರಿಸಿ ವಿಷಯ ಸಂಗ್ರಹಿಸುವ ಅವರ ಸ್ವಭಾವ ಕುತೂಹಲ ಹುಟ್ಟಿಸುವಂತಹುದು. ಸಿಕ್ಕಿದ ಎಳೆಯನ್ನು ಹಿಡಿದು ಆ ಮೂಲಕ ಸಮಗ್ರ ಕೋಟೆಗೆ ಲಗ್ಗೆ ಇಡುವ ಅವರ ಸಂಶೋಧನ, ಪ್ರವೃತ್ತಿ ಅನನ್ಯ; ಅನುಕರಣೀಯ. ಉದಾ:(ಮೈಲಾರಲಿಂಗ) ರಮ್ಯ ಕಾವ್ಯ ನಿರೂಪಣೆ, ಚಾರಿತ್ರಿಕ ಸಂಗತಿಗಳ ದಾಖಲೆ, ಆತ್ಮಾರ್ಪಣೆಯ ಸಂದರ್ಭ ಗೊರವ ಪರಂಪರೆ, ಕಾರ್ಣಿಕ ಹೀಗೆ ಈ ನಿಟ್ಟಿನಲ್ಲಿ ಗಮನಿಸಬೇಕಾದುದು ಇನ್ನೇನಾದರೂ ಇದೆಯೋ ಎನ್ನುವ ಕುತೂಹಲಕರವಾಗಿ ಮುನ್ನಡೆಯುವ ಅಧ್ಯಯನ, ಏಕಕಾಲಕ್ಕೆ ಆಳ ಮತ್ತು ವಿಸ್ತಾರಗಳನ್ನು ಪಡೆದುಕೊಳ್ಳುತ್ತದೆ. ಜಾನಪದದ ವಿವಿಧ ಸಿದ್ಧಾಂತಗಳ ತಲಸ್ಪರ್ಶಿ ವಿಶ್ಲೇಷಣೆ, ವೃತ್ತಿಗಾಯಕ ತಂಡಗಳ ನೂತನ ಪರಿಕಲ್ಪನೆ, ಜನಾಂಗಿಕ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಾಹಿತ್ಯೇತರ ನೆಲೆಗಳನ್ನು ಸಮನ್ವಯಗೊಳಿಸುತ್ತ ರೂಪಿಸಿದ ಸಾಂಸ್ಕೃತಿಕ ನಿಲುವು ಕ್ಷೇತ್ರ ಕಾರ್ಯಕ್ಕೆ ಖಚಿತತೆ ಒದಗಿಸುವ ಪ್ರಾದೇಶಿಕ ನಕ್ಷೆ, ಅಂಕಿಸಂಖ್ಯೆ ಮತ್ತು ವಕ್ತೃ, ಗಾಯಕ ತಂಡಗಳ ಭಾವಚಿತ್ರ ಹೀಗೆ ಮಹಾಪ್ರಬಂಧ ಜಾನಪದ ಅಧ್ಯಯನದ ಹೆಬ್ಬಾಗಿಲು ತೆರೆದಂತಾಗಿ ಅಧ್ಯಯನದ ಹೊಸ ಕ್ಷಿತಿಜ ಇವರ ಸಂಶೋಧನೆಯ ಮೂಲಕ ಅನಾವರಣಗೊಂಡಿದೆ.

೫.೧.೩. ತುಳು ಜನಪದ ಸಾಹಿತ್ಯ (೧೯೮೧)

ಬಿ.ಎ.ವಿವೇಕ ರೈ ಅವರ 'ತುಳು ಜನಪದ ಸಾಹಿತ್ಯ' ಸಂಶೋಧನಾ ಕೃತಿಯು ಕರಾವಳಿ ಭಾಗದ ತುಳು ಸಂಸ್ಕೃತಿ ಹಾಗೂ ಜನಪದ ಸಾಹಿತ್ಯವನ್ನು ಅನಾವರಣಗೊಳಿಸಿದೆ. ಕನ್ನಡ ಜನಪದ ಅಧ್ಯಯನದಂತೆ ತುಳುನಾಡಿನ ಮೌಖಿಕ ಸಾಹಿತ್ಯವನ್ನು ಸಮಗ್ರವಾಗಿ ದಾಖಲಿಸಿದ ಶ್ರೇಯಸ್ಸು ಬಿ.ಎ.ವಿವೇಕ ರೈ

ಅವರಿಗೆ ಸಲ್ಲುತ್ತದೆ. ಕ್ಷೇತ್ರಕಾರ್ಯದ ಮೂಲಕ ಪಾಶ್ಚಾತ್ಯ ಸಿದ್ಧಾಂತಗಳ ಮಾದರಿಯಲ್ಲಿ ತುಳುನಾಡಿನ ಸಂಸ್ಕೃತಿಯನ್ನು ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ. ಅನ್ಯಜ್ಞಾನಶಿಸ್ತಿನ ಮೂಲಕ ತುಳು ಜನಪದವನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ತುಳುಭಾಷೆಗೆ ಸ್ವತಂತ್ರಲಿಪಿ ಹಾಗೂ ಲಿಖಿತ ಪರಂಪರೆ ಇಲ್ಲ. ಆದರೆ ಮೌಖಿಕ ಸಾಹಿತ್ಯದಲ್ಲಿ ಅಗಾಧವಾದ ಶ್ರೀಮಂತಿಕೆಯನ್ನು ಒಳಗೊಂಡಿದೆ. ೧೯ನೇ ಶತಮಾನದಲ್ಲಿ ಆರ್.ಎ.ಮೇನರ್, ಎ.ಸಿ.ಬರ್ನೆಲ್, ಆರ್.ಸಿ.ಟೆಂಪಲ್, ಡಾ.ಮೊಗ್ಲಿಂಗ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ತುಳು ಜಾನಪದ ಸಂಗ್ರಹ, ಸಂಪಾದನೆ ಅಧ್ಯಯನಗಳನ್ನು ಕೈಗೊಂಡಿದ್ದರು. ತುಳು ಜನಪದ ಸಾಹಿತ್ಯದಲ್ಲಿ ದೊರೆಯುವ ವಿಶಿಷ್ಟವಾದ ಪ್ರಕಾರವೆಂದರೆ ಪಾಡ್ದನಗಳು. ಈ ಪಾಡ್ದನಗಳಲ್ಲಿ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಅಂಶಗಳನ್ನು ಕಾಣಬಹುದು. ಈ ಪಾಡ್ದನಗಳನ್ನು ಪ್ರಾರಂಭದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮಾನವಶಾಸ್ತ್ರ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಇವುಗಳ ಮುಂದುವರಿಕೆಯಾಗಿ ಬಿ.ಎ.ವಿವೇಕ ರೈ ಅವರು ಪಾಡ್ದನ, ಕಬಿತಗಳು, ಗಾದೆ, ಒಗಟು, ಕಥೆ, ಇತ್ಯಾದಿ, ಇವುಗಳನ್ನು ಸಾಹಿತ್ಯಿಕವಾಗಿ ಸಂಶೋಧನೆ ಮಾಡಿದ್ದಾರೆ. ತುಳುವ ಸಂಸ್ಕೃತಿಗೂ ತುಳು ಜನಪದಕಾವ್ಯ ಪಠ್ಯಗಳಿಗೂ ಸಾವಯವ ಸಂಬಂಧವಿದೆ. ಪಾಡ್ದನ, ಕಬಿತ, ಕುಣಿತದ ಹಾಡು ಇವೆಲ್ಲವೂ ಸಾಮಾಜಿಕ ವ್ಯವಸ್ಥೆಯೊಂದರ ಸಾಂಸ್ಕೃತಿಕ ಉತ್ಪನ್ನವಾಗಿದೆ. ಈ ಪಠ್ಯಗಳ ಮೂಲಕ ಸಂಸ್ಕೃತಿಯನ್ನು ವಿಶ್ಲೇಷಿಸುವ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಪಠ್ಯಗಳನ್ನು ಪರಿಭಾವಿಸುವ ಸಂಶೋಧನಾ ವಿನ್ಯಾಸವನ್ನು ಬಿ.ಎ.ವಿವೇಕ ರೈ ಅವರ ಅಧ್ಯಯನದಲ್ಲಿ ಕಾಣಬಹುದು.

ಕ್ಷೇತ್ರಕಾರ್ಯದ ಸ್ವರೂಪ: ಮಾನವಿಕ ವಿಜ್ಞಾನಗಳ ಸಾಲಿನಲ್ಲಿ ಜಾನಪದವನ್ನು 'ಕ್ಷೇತ್ರ ವಿಜ್ಞಾನ' ಎಂದು ಕರೆಯಲಾಗುತ್ತದೆ. ಬಿ.ಎ.ವಿವೇಕ ರೈ ಅವರು 'ತುಳು ಜನಪದ ಸಾಹಿತ್ಯ' ಕೃತಿಯಲ್ಲಿ ಅನುಸರಿಸಿದ ಕ್ಷೇತ್ರಕಾರ್ಯದ ವೈಧಾನಿಕತೆ ಹಾಗೂ ಸ್ವರೂಪವನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಏಕೆಂದರೆ ವಿಶ್ವವಿದ್ಯಾಲಯದ ಅಧ್ಯಯನಗಳು ರೂಪಿಸಿದ ಕ್ಷೇತ್ರಕಾರ್ಯದ ಮಾದರಿಗಳು ನಿಯಮಗಳಿಗೊಳಪಟ್ಟಿರುತ್ತವೆ. ಜಾನಪದವನ್ನು ಅಕಾಡೆಮಿಕ್ ನೆಲೆಯಲ್ಲಿ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಪ್ರಾಮುಖ್ಯತೆ ಪಡೆಯುತ್ತದೆ. ಕ್ಷೇತ್ರಕಾರ್ಯದ ವಿಧಾನ ಕುರಿತು ಬಿ.ಎ.ವಿವೇಕ ರೈ ಅವರು ತಮ್ಮ ಸಂಶೋಧನಾ ಕೃತಿಯಲ್ಲಿ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. "ತುಳು ಜನಪದ ಸಾಹಿತ್ಯದ ಸಂಗ್ರಹಗಳು ವೈಜ್ಞಾನಿಕವಾಗಿ ನಡೆದವುಗಳಲ್ಲ. ಈ ದೃಷ್ಟಿಯಿಂದ ನಾನು ಈ ಪ್ರಬಂಧದ ಅಧ್ಯಯನಕ್ಕೆ ತೊಡಗುವ ಮೊದಲು ತುಳು ಜನಪದ ಸಾಹಿತ್ಯವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲು ಕೆಲವು ವರ್ಷಗಳನ್ನು ವಿನಿಯೋಗಿಸಬೇಕಾಯಿತು. ತುಳು ಮಾತಾಡುವ ಪ್ರದೇಶದ ವ್ಯಾಪ್ತಿಯನ್ನು ಗಮನಿಸಿದರೆ, ಸಮಗ್ರ ತುಳು ಜನಪದ ಸಾಹಿತ್ಯದ ಸಂಗ್ರಹವು ಒಬ್ಬ ವ್ಯಕ್ತಿಯಿಂದ ಕೆಲವು ವರ್ಷಗಳಲ್ಲಿ ಆಗುವಂತದ್ದು ಖಂಡಿತ ಅಲ್ಲ. ವಿಶ್ವವಿದ್ಯಾನಿಲಯದಂತಹ ಸಂಸ್ಥೆಗಳು ನಿರ್ದಿಷ್ಟ ಯೋಜನೆಗಳ ಮೂಲಕ ಕ್ಷೇತ್ರ ಕಾರ್ಯಕರ್ತರ ನೆರವಿನಿಂದ ಮಾಡುವ ಕೆಲಸ ಅದು. ತುಳು ಜನಪದ ಸಾಹಿತ್ಯದ

ಅಗಾಧತೆಯ ಅರಿವಿದ್ದುದರಿಂದಲೆ ನಾನು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಕ್ಷೇತ್ರಕಾರ್ಯವನ್ನು ಮಾಡಿ, ಹೆಚ್ಚಾಗಿ ಧ್ವನಿಮುದ್ರಣ ಯಂತ್ರವನ್ನು ಬಳಸಿ, ಸಾಮಗ್ರಿಗಳನ್ನು ಸಂಗ್ರಹಿಸಿದೆ. ಮುಖ್ಯವಾಗಿ ನನಗೆ ಹೆಚ್ಚು ಪರಿಚಿತವಿರುವ ಪುತ್ತೂರು, ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳ ಕೆಲವು ಗ್ರಾಮಗಳನ್ನು ಅದಕ್ಕಾಗಿ ಉಪಯೋಗಿಸಿಕೊಂಡಿದ್ದೇನೆ. ಆದರೆ ತುಳು ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಸಾಧ್ಯವಾದಷ್ಟು ವೈವಿಧ್ಯ ಸಿಗುವಂತೆ ಸಂಗ್ರಹಿಸಿದ್ದೇನೆ ಎಂದು ಹೇಳುತ್ತಾರೆ"[೮] ಈ ಮೊದಲೆ ತುಳು ಜನಪದ ಸಾಹಿತ್ಯವನ್ನು ಕ್ಷೇತ್ರಕಾರ್ಯದ ಮೂಲಕ ಸೈದ್ಧಾಂತಿಕವಾಗಿ ಪಾಶ್ಚಾತ್ಯ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಪ್ರಮುಖರು ಅಮೆರಿಕೆಯ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪೀಟರ್ ಜೆ.ಕ್ಲಾಸ್(೧೯೮೭) ಹಾಗೂ ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಲಾರಿ ಹಾಂಕೋ(೧೯೮೬). ಇವರು ಪಾಡ್ದನಗಳ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ. ಪೀಟರ್ ಜೆ.ಕ್ಲಾಸ್ ಪಾಡ್ದನ ಸಂಪ್ರದಾಯಗಳ ದಾಖಲಾತಿ, ಅಧ್ಯಯನ ನಡೆಸಿದ್ದಾರೆ. ಪಾಡ್ದನವೊಂದು ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಅಷ್ಟೇ ಅಲ್ಲ ಒಬ್ಬನೇ ವ್ಯಕ್ತಿಯಿಂದ ಭಿನ್ನ ಭಿನ್ನ ಸಂದರ್ಭಗಳಲ್ಲಿ ಹೇಗೆ ಬದಲಾವಣೆಗೆ ಗುರಿಯಾಗುತ್ತದೆ ಹಾಗೂ ಏಕೆ ಬದಲಾವಣೆಯಾಗುತ್ತದೆ ಎನ್ನುವುದನ್ನು ತಿಳಿಯುವ ಸಲುವಾಗಿ ಅವರು ಪಾಡ್ದನದ ನಾಟಿ ಗದ್ದೆಯ ಸಂಪ್ರದಾಯವನ್ನು ತೆಗೆದುಕೊಂಡು ದಾಖಲಾತಿ ನಡೆಸುವ ಮೂಲಕ ಅಧ್ಯಯನ ನಡೆಸಿದರು. ಪಾಡ್ದನಗಳು ಪ್ರದರ್ಶನದಿಂದ ಪ್ರದರ್ಶನಕ್ಕೆ ಬದಲಾಗುವುದಕ್ಕೆ ಹಾಡುವವರು ಮಾತ್ರವಲ್ಲ, ಕೇಳುಗರೂ ಕಾರಣರಾಗುತ್ತಾರೆ ಎನ್ನುವುದನ್ನು ಸೈದ್ಧಾಂತಿಕವಾಗಿ ಹಾಗೂ ಪ್ರಾಯೋಗಿಕವಾಗಿ ಕ್ಲಾಸ್ ಅವರು ವಿವರಿಸುತ್ತಾರೆ. ಹೀಗೆ ಪಾಡ್ದನವೊಂದನ್ನು ಸಾಹಿತ್ಯದ ಭಾಗವಾಗಿ ಪರಿಗಣಿಸದೆ ಪ್ರದರ್ಶನವೊಂದರಲ್ಲಿ ಏರ್ಪಡುವ ಬೃಹತ್ ಪಠ್ಯವನ್ನು ಕುರಿತು ಅವರು ವಿಶ್ಲೇಷಿಸುತ್ತಾರೆ. ಹೀಗೆ ತುಳುನಾಡಿನಲ್ಲಿ ಬಹುಪಠ್ಯಗಳ ದಾಖಲಾತಿ ಮೂಲಕವೇ ಒಂದು ಘಟನೆಯನ್ನು ವಿವರಿಸುವ ತಾತ್ವಿಕತೆಯನ್ನು ರೂಪಿಸಿದವರು ಪೀಟರ್ ಜೆ.ಕ್ಲಾಸ್. ಕರಾವಳಿ ವಲಯದಲ್ಲಿ ತುಳು ಸಾಮಗ್ರಿಯ ಹಿನ್ನೆಲೆಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯ ಹಾಗೂ ಬಹುಮುಖಿ ಕಾರ್ಯವನ್ನು ನಡೆಸಿ ಮೌಖಿಕ ಸಂಪ್ರದಾಯದ ಬಗೆಬಗೆಯ ಹೊಸ ಆಲೋಚನೆಯ ವಿನ್ಯಾಸವನ್ನು ರೂಪಿಸಿದವರು ಫಿನ್ಲೆಂಡಿನ ಲಾರಿ ಹಾಂಕೊ. ವೈಜ್ಞಾನಿಕ ಕ್ಷೇತ್ರಕಾರ್ಯದ ಮೂಲಕ ತುಳುವಿನ ಮೌಖಿಕ ಪರಂಪರೆಯನ್ನು ಪೂರ್ಣಪ್ರಮಾಣದ(full), ಉತ್ತಮ(good) ಹಾಗೂ ಸಾಂದ್ರ(thick) ಮಾದರಿಗಳಲ್ಲಿ ದಾಖಲಿಕರಣ ನಡೆಸಿರುವುದಾಗಿ ಹಾಂಕೋ ಅವರು ಹೇಳುತ್ತಾರೆ. ಸಂಸ್ಕೃತಿ ಅಧ್ಯಯನವೊಂದು ಪರಿಪೂರ್ಣ ಆಗಬೇಕಾದರೆ ಜೀವಂತ ಪ್ರದರ್ಶನ ಹಾಗೂ ವಿಶ್ಲೇಷಕರ ನಡುವಣ ಪರಸ್ಪರ ಒಳಗೊಳ್ಳುವಿಕೆ ಮತ್ತೆ ಮತ್ತೆ ನಡೆಯಬೇಕು. ವಿಶ್ಲೇಷಕನು ತೆರೆದ ಕಣ್ಣು ಕಿವಿಗಳಿಂದ ಘಟನೆಯ ಹಿಂದೆ ಹಾಗೂ ಮುಂದೆ ದಾಖಲಿಸಿಕೊಳ್ಳಬೇಕು ಎನ್ನುತ್ತಾರೆ. ಪ್ರದರ್ಶನವೊಂದರಲ್ಲಿ ಅನೇಕ ಘಟನೆಗಳು ಏಕಕಾಲದಲ್ಲಿ ನಡೆಯುವುದರಿಂದ ಒಬ್ಬನು ಕಣ್ಣು ಕಿವಿಗಳಿಂದ ಎಷ್ಟೋ ಅಂಶಗಳು ಜಾರಿ ಹೋಗುವ ಸಾಧ್ಯತೆ ಇದೆ. ಹೀಗೆ ವೈಜ್ಞಾನಿಕವಾಗಿ ದಾಖಲಿಸಿದ ಮಾಹಿತಿಗಳನ್ನು

ದಾಖಲಾತಿ ಕೇಂದ್ರಗಳಲ್ಲಿ ಶೇಖರಿಸಿಡುವುದರಿಂದ ಮುಂದೆ ಯಾವನಾದರೊಬ್ಬ ವಿದ್ವಾಂಸನು ಬಂದು ಪರಿವೀಕ್ಷಿಸಿ ಹೊಸ ವ್ಯಾಖ್ಯಾನ ನೀಡುವ ಸಾಧ್ಯತೆ ಉಂಟು. ಆದರೆ ಅಪಾರ ಸಂಖ್ಯೆಯ ಪ್ರೇಕ್ಷಕರಿಂದಾಗಿ ಏರ್ಪಡುವ ಭಿನ್ನಭಿನ್ನ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಈ ಬಗೆಯ ಸಾಂಘಿಕ ದಾಖಲೀಕರಣ ತೀರಾ ಮಹತ್ವದ್ದಾಗುತ್ತದೆ ಎಂದು ಲಾರಿ ಹಾಂಕೋ ಅಭಿಪ್ರಾಯ ಪಡುತ್ತಾರೆ"[೯] ಇವರ ಮಾದರಿಯಲ್ಲಿಯೆ ಬಿ.ಎ.ವಿವೇಕ ರೈ ಅವರು ಪಾಡ್ದನಗಳನ್ನು ದಾಖಲಿಸಿದ್ದಾರೆ. ಇವರ ಸಂಶೋಧನೆ ಕ್ಷೇತ್ರಕಾರ್ಯಾಧಾರಿತವಾಗಿದೆ. ಪಾಡ್ದನಗಳು, ಕಬಿತಗಳು, ಕುಣಿತದ ಹಾಡುಗಳು, ತುಳು ಜನಪದ ಕಥೆಗಳು, ತುಳು ಗಾದೆಗಳು, ತುಳು ಒಗಟುಗಳು, ಇತ್ಯಾದಿ. ಇವುಗಳನ್ನು ಪಾಶ್ಚಾತ್ಯ ಸಿದ್ಧಾಂತಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಚಾರಿತ್ರಿಕ-ಭೌಗೋಳಿಕಶಾಸ್ತ್ರ ಸಿದ್ಧಾಂತಗಳ ಮೂಲಕ ಕಥೆಗಳನ್ನು ಸಂಗ್ರಹಿಸಿದ್ದಾರೆ. ಪ್ಯಾರಿ ಲಾರ್ಡ್ ಸಿದ್ಧಾಂತಗಳ ಮೂಲಕ ಪಾಡ್ದನಗಳನ್ನು ದಾಖಲಿಸಿದ್ದಾರೆ. ಸಂಶೋಧಕರೇ ಹೇಳಿರುವಂತೆ-"ತುಳು ಜನಪದ ಪ್ರಕಾರದಲ್ಲಿ ಪಾಡ್ದನಗಳು ಮುಖ್ಯವಾಗುತ್ತವೆ. ಪಾಡ್ದನಗಳು ತುಳುನಾಡಿನ ಸಾಂಸ್ಕೃತಿಕ ಪ್ರತೀಕಗಳಾಗಿವೆ. ಭೂತಾರಾಧನೆಗೆ ಸಂಬಂಧಿಸಿದ ಪಾಡ್ದನಗಳ ಅಧ್ಯಯನದಿಂದ ಇನ್ನೂ ಅನೇಕ ಹೊಸ ವಿಚಾರಗಳು ಹೊಳೆಯುತ್ತವೆ. ಆದರೆ ಇನ್ನೂ ಅಧಿಕ ಪಾಡ್ದನಗಳ ಸಂಗ್ರಹದಿಂದ ಇನ್ನೂ ಹೆಚ್ಚಿನ ಸಂಶೋಧನೆ ನಡೆಸಲು ಅವಕಾಶವಿದೆ ಎಂದು ಹೇಳತ್ತಾರೆ"[೧೦]

ಸಾಹಿತ್ಯಿಕ ಅಂಶಗಳು: ಭೂತಗಳ ಹುಟ್ಟು, ಪ್ರಸರಣ, ಮತ್ತು ಕಾರಣಿಕಗಳನ್ನು ನಿರೂಪಿಸುವ ಪಾಡ್ದನಗಳು ಧಾರ್ಮಿಕ ರಂಗಭೂಮಿಯಾಗಿರುವ ಭೂತಾರಾಧನೆಯ ಸಾಹಿತ್ಯಿಕವಾದ ಭಾಗವಾಗಿದೆ. ಇಂತಹ ಪಾಡ್ದನಗಳನ್ನು ಬಿ.ಎ.ವಿವೇಕ ರೈ ಅವರು ಒಂದೇ ಪಾಡ್ದನದ ಭಿನ್ನ ಪಠ್ಯಗಳ ಪಾಡ್ದನಗಳನ್ನು ಸಾಹಿತ್ಯಿಕವಾಗಿ ವಿವೇಚಿಸಿದ್ದಾರೆ. ಭೌಗೋಳಿಕ-ಚಾರಿತ್ರಿಕ ಸಿದ್ಧಾಂತಗಳ ಮೂಲಕ ಪ್ರಾದೇಶಿಕ ನಲೆಯೊಳಗೆ ಪಾಡ್ದನಗಳನ್ನು ತಾತ್ವಿಕರಿಸಿದ್ದಾರೆ. ಭೂತಾರಾಧನೆಯ ಸಂದರ್ಭದಲ್ಲಿ ಭೂತಕ್ಕೆ ವೇಷ ಹಾಕುವ ಕಲಾವಿದರು ತೆಂಬರೆಯ ಹಿಮ್ಮೇಳದೊಂದಿಗೆ ಈ ಪಾಡ್ದನಗಳನ್ನು ಹಾಡುತ್ತಾರೆ. ಈ ಪಾಡ್ದನಗಳಲ್ಲಿ ಭೂತಗಳ ಚರಿತ್ರೆಯಿರುವುದು ಮಾತ್ರವಲ್ಲದೇ ತುಳುನಾಡಿನ ಜನರ ಬದುಕಿನ ಅನೇಕ ವಿವರಗಳು ದೊರೆಯುತ್ತವೆ. ಪಂಜುರ್ಲಿ, ಮೈಸಂದಾಯ, ಕೋಟಿ ಚೆನ್ನಯ, ಸಿರಿ ಪಾಡ್ದನ, ಕಲ್ಕುಡ-ಕಲ್ಲುರ್ಟಿ, ಬೊಬ್ಬರ್ಯ, ಕೊರಗ ತನಿಯ, ಕೋಡ್ದಬ್ಬು-ತನ್ನಿಮಾನಿಗ, ಆಲಿಭೂತ, ಕಾಂತಾಬಾರೆ ಬೂದಾಬಾರೆ, ಜುಮಾದಿ, ಗುಳಿಗ, ಪಿಲಿಚಾಮುಂಡಿ, ಕಾಳಬೈರವ, ಮಂಡಿಪಾಡಿತ್ತಾಯ, ಮಾರಾವಾಂಡಿ ಭೂತ, ಲೆಕ್ಕೆಸಿರಿ, ತೋಡ ಕುಕ್ಕಿನಾರ್ ಇತ್ಯಾದಿ, ಈ ಪಾಡ್ದನಗಳಲ್ಲಿ ವ್ಯಕ್ತವಾಗುವ ಭೂತಗಳ ಹುಟ್ಟು, ಸಾಹಸ, ಪ್ರಸರಣ ಪ್ರಾದೇಶಿಕತೆ ಕಡೆಗೆ ಹೆಚ್ಚು ಒತ್ತು ನೀಡಿದ್ದಾರೆ. ಎ.ಮ್ಯಾನರ್ 'ಪಾಡ್ದನೊಳು'(೧೮೮೬), ಎ.ಸಿ.ಬರ್ನೆಲ್ 'The Devil worship of the Tuluvas'(೧೮೮೨), ಕೃತಿಗಳಲ್ಲಿ ತುಳು ಪಾಡ್ದನಗಳನ್ನು ಸಂಕಲಿಸಿದ್ದಾರೆ. ಭಿನ್ನ ಪಠ್ಯ, ಆಚರಣೆ, ಆರಾಧನೆ, ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಮೂಲಕ ವಿವರಣೆ ನೀಡಿದ್ದಾರೆ. ಬಿ.ಎ. ವಿವೇಕರೈ ಅವರು ಈ ಪಾಡ್ದನಗಳ ವಸ್ತು ವೈವಿಧ್ಯತೆಯನ್ನು, ಸಾಹಿತ್ಯಿಕ ಮೂಲಕ ಕಟ್ಟಿಕೊಟಿದ್ದಾರೆ. ವಿಶೇಷವಾಗಿ ಪಾಡ್ದನಗಳ ದೀರ್ಘತೆಯ ವಿಶ್ಲೇಷಣೆಯ

ಮೇಲೆ ಮಹಾಕಾವ್ಯಗಳಿಗೆ ಹೋಲಿಸಿ ನೋಡಿದ್ದಾರೆ. ಮುಖ್ಯವಾಗಿ ಪಾಡ್ದನಗಳನ್ನು ಭೌಗೋಳಿಕ–ಚಾರಿತ್ರಿಕ ಸಿದ್ಧಾಂತಗಳ ಮೂಲಕ ಚರ್ಚಿಸಿದ್ದಾರೆ. ತುಳು ಜನಪದ ಸಾಹಿತ್ಯದಲ್ಲಿ ಪಾಡ್ದನಗಳು ವಿಶೇಷವಾದ ಸಾಹಿತ್ಯಿಕ ಆಕರಗಳಾಗಿ ಕಂಡುಬರುತ್ತವೆ. ಇವುಗಳಂತೆಯೇ ಕಬಿತಗಳು, ಗಾದೆ, ಒಗಟುಗಳು, ಕಥೆಗಳು, ಕರಾವಳಿ ಬಾಗದಲ್ಲಿ ಕ್ರಿಯಾತ್ಮಕವಾಗಿ ಚಲನಶೀಲತೆಗೊಳ್ಳುತ್ತವೆ. ಹೊಲದಲ್ಲಿ ನೇಜಿ ನೆಡುವಾಗ ಹೇಳುವ ಹಾಡುಗಳಾದ 'ಕಬಿತಗಳು' ನಿರ್ದಿಷ್ಟ ಕಥಾವಸ್ತುವನ್ನು ಒಳಗೊಂಡಿರುವುದಿಲ್ಲ. ಅವುಗಳಲ್ಲಿ ಶಬ್ದಗಳ ಸರಮಾಲೆ, ಒಂದು ಸಾಮಾನ್ಯ ಘಟನೆ, ಹಾಸ್ಯದ ತುಣುಕು ಇರುತ್ತದೆ. ಕಬಿತಗಳ ವಸ್ತು ವೈವಿಧ್ಯವನ್ನು ಗಮನಿಸಿದಾಗಲೂ ಅದು ಹೆಚ್ಚು ಸ್ತ್ರೀಯರಿಗೆ ಸಂಬಂಧಿಸಿದ್ದೆ ಆಗಿದೆ. ಸ್ತ್ರೀಯರ ವೇಷಭೂಷಣಗಳು, ಪ್ರಣಯ ಭಾವನೆ, ಜಾಣತನ ಇತ್ಯಾದಿ, ಹಾಗಾಗಿ ಕಬಿತಗಳು ಕೆಲಸದ ಸಮಯದಲ್ಲಿ ಹುಟ್ಟಿಕೊಳ್ಳುವ ಹಾಡುಗಳಾಗಿವೆ. ಗಾದೆ, ಒಗಟು, ಕಥೆ ಇವುಗಳನ್ನು ವಸ್ತು ನೆಲೆಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ.

ಮಹಿಳೆ ಮತ್ತು ದಲಿತ ಪ್ರಶ್ನೆಗಳು: ಭೂತಾರಾಧನೆ ವೇಷವನ್ನು ಕಟ್ಟಿಕೊಂಡು ಕುಣಿಯುವ ಧಾರ್ಮಿಕ ಆರಾಧನೆಯಾಗಿದೆ. ಇದರಲ್ಲಿ ಭಗವಹಿಸುವವರು ಹಾಗೂ ವೇಷವನ್ನು ಕಟ್ಟಿಕೊಂಡು ಕುಣಿಯುವವರು ದಲಿತರು ಎಂಬುದು ಗಮನಾರ್ಹವಾಗಿದೆ. ನಲಿಕೆ, ಪಾಣಾರ, ಪರವ, ಪಂಬದ, ಇತ್ಯಾದಿ ಜನಾಂಗದವರು ಮೇಲ್ವರ್ಗದವರ ಪ್ರೇರಣೆಯಂತೆ ಭೂತಾರಾಧನೆಯಲ್ಲಿ ವಿಶೇಷ ಸ್ಥಾನ ಪಡೆಯುತ್ತಾರೆ. ಬಿ.ಎ.ವಿವೇಕ ರೈ ಅವರು ತಮ್ಮ ಅಧ್ಯಯನದಲ್ಲಿ ದಲಿತರ ಸ್ಥಾನಮಾನಗಳ ಕುರಿತು ಪ್ರತ್ಯೇಕವಾಗಿ ಚರ್ಚಿಸಲು ಹೋಗುವುದಿಲ್ಲ. ಆದರೆ ಪಾಡ್ದನ ಕುರಿತು ಚರ್ಚಿಸುವ ಸಂದರ್ಭದಲ್ಲಿ ಈ ಜನಾಂಗದ ಕುರಿತು ಸಾಂದರ್ಭಿಕವಾಗಿ ವಿವರಿಸುತ್ತಾರೆ. "ತುಳು ಮಾತನಾಡುವ ಪ್ರದೇಶದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರನ್ನು ಬಿಟ್ಟು, ಉಳಿದ ವರ್ಗದವರು ಹೆಚ್ಚಾಗಿ ಪಾಡ್ದನಗಳನ್ನು ಹಾಡುತ್ತಾರೆ. ಭೂತದ ಪಾಡ್ದನಗಳನ್ನು ಭೂತಾರಾಧನೆಯ ಸಂದರ್ಭದಲ್ಲಿ ಭೂತ ಕಟ್ಟುವ ವರ್ಗದವರು ಮಾತ್ರ ಹಾಡುತ್ತಾರೆ. ತುಳುನಾಡಿನಲ್ಲಿ ಹರಿಜನ ವರ್ಗಕ್ಕೆ ಸೇರಿದ ಪಂಬದ, ಪರವ, ನಲ್ಕೆಯವ, ಪಾಣಾರ– ಈ ನಾಲ್ಕು ಒಳ ವರ್ಗದವರು ಭೂತದ ವೇಷವನ್ನು ಹಾಕಿ ಭೂತಾರಾಧನೆಯಲ್ಲಿ ಮುಖ್ಯಪಾತ್ರವಹಿಸುತ್ತಾರೆ. ಈಗಲೂ ಈ ಪದ್ಧತಿ ವ್ಯತ್ಯಾಸವನ್ನು ಪಡೆದಿಲ್ಲ. ಇವರು ಭೂತದ ವೇಷವನ್ನು ಹಾಕುವ ಸಂದರ್ಭದಲ್ಲಿ ಆಯಾಯ ಭೂತಕ್ಕೆ ಸಂಬಂಧಿಸಿದ ಪಾಡ್ದನಗಳನ್ನು ಹಾಡುತ್ತಾರೆ. ಈಗ ಪಾಡ್ದನಗಳ ಸಂಪ್ರದಾಯದಲ್ಲಿ ವೃತ್ತಿಗಾಯಕರ ಪರಂಪರೆ ಕಾಣಿಸದಿದ್ದರೂ, ಒಂದು ಕಾಲದಲ್ಲಿ ಈ ಪರವ, ಪಂಬದ, ನಲ್ಕೆಯವ, ಪಾಣಾರರು, ವೃತ್ತಿ ಗಾಯಕರ ರೀತಿಯಲ್ಲಿ ಇದ್ದರೆ ಎನ್ನುವ ಸಂಶಯ ಬರುತ್ತದೆ ಎಂದು ವಿವೇಚಿಸುತ್ತಾರೆ"[೧೧] ಆದರೆ ಪಾಡ್ದನಗಳನ್ನು ಕೆಳವರ್ಗದ ಜನರು ಭೂತಾರಾಧನೆಯ ಸಂದರ್ಭದಲ್ಲಿ ಹಾಡುವ ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸಲು ಹೋಗುವುದಿಲ್ಲ.

ತುಳುನಾಡಿನ ಕೆಲವು ಪಾಡ್ದನಗಳಲ್ಲಿ ಮೇಲ್ವರ್ಗದವರಿಂದ ಕಳವರ್ಗದವರು ಶೋಷಣೆಗೆ ಒಳಗಾಗಿ ದೈವತ್ವಕ್ಕೂ ಹಾಗೂ ಭೂತ ಆಗುವುದರೊಂದಿಗೆ ಪ್ರತಿಭಟಿಸುತ್ತವೆ. ಅಂತಹ ಪಾಡ್ದನಗಳನ್ನು ಲೇಖಕರು

ಜಾತಿಯ ನೆಲೆಯಲ್ಲಿ ನೋಡಿಲ್ಲ. ಕರಾವಳಿ ಬಾಗದಲ್ಲಿ ಎರಡು ಪ್ರಬಲ ವರ್ಗಗಳೆಂದರೆ ಬಿಲ್ಲವ ಮತ್ತು ಬಂಟ. ಕೋಟಿ ಚೆನ್ನಯ ಹಾಗೂ ಸಿರಿಪಾಡ್ದನಗಳು ಈ ಎರಡು ಸಮುದಾಯ ಕೇಂದ್ರಿತವಾಗಿವೆ. ತುಳುನಾಡಿನ ಬಂಟ ಸಮುದಾಯ ಮಾತೃಮೂಲೀಯ ಕುಟುಂಬ ವ್ಯವಸ್ಥೆಗೆ ಅತ್ಯುತ್ತಮ ಪ್ರತಿನಿಧಿ. ಸಿರಿ ಪಾಡ್ದನ ಬಂಟ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಇತಿಹಾಸ ಪುನಾರಚನೆಗೆ ಅನುಕೂಲಕರವಾದ ಒಂದು ಲಕ್ಷ್ಯಕಾವ್ಯ ಎಂದು ಹೇಳಬಹುದು. ಕೋಟಿ ಚೆನ್ನಯ ಪಾಡ್ದನದಲ್ಲೂ ಬಂಟರ ಬಗೆಗೆ ಪ್ರಸ್ತಾಪ ಬರುತ್ತದೆ. ಪಾಡ್ದನವೊಂದರಲ್ಲಿ ಬರುವ 'ಬಂಟ ಮಗ ಬಾರಗ' ಎನ್ನುವ ಪದಸಮುಚ್ಚಯ ಆ ಸಮುದಾಯದ ಶೌರ್ಯ, ಪರಾಕ್ರಮಶೀಲತೆಯನ್ನು ಸೂಚಿಸುತ್ತದೆ. ಹೀಗೆ ಸಿರಿಪಾಡ್ದನ ಹಾಗೂ ಕೋಟಿ ಚೆನ್ನಯ ಪಾಡ್ದನಗಳಲ್ಲಿ ಅನ್ಯಾಯ ವಿರುದ್ಧ ಸೇಡು ತೀರಿಸಿಕೊಳ್ಳುವ ಕಥಾ ವಸ್ತು ಒಳಗೊಂಡಿದೆ. ಬಿ.ಎ.ವಿವೇಕ ರೈ ಅವರು ವಸ್ತು ವಿಶ್ಲೇಷಣೆಗಿಂತ ಪಾಡ್ದನಗಳ ರಚನಾತ್ಮಕ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸಂಶೋಧಕರು ಭೂತಾರಾಧನೆಯ ಸಂದರ್ಭದಲ್ಲಿ ಕೆಳ ಜಾತಿಯ ಭಾಗವಹಿಸುವಿಕೆಯನ್ನು ಚರ್ಚಿಸಲು ಹೋಗುವುದಿಲ್ಲ. ತುಳುವ ಸಮಾಜದಲ್ಲಿ ನಾವಿಂದು ಕಾಣುವ ಕೆಲವೊಂದು ಜಾತಿಗಳ ಹೆಸರುಗಳನ್ನು ಅವರ ಕುಲ ಕಸುಬಿನ, ವಾಸಸ್ಥಾನದ ವಿವರಗಳನ್ನು ಪಾಡ್ದನಗಳು ಹೇಳುತ್ತವೆ. ಬಿಲ್ಲವ, ಬಂಟ, ಬ್ರಾಹ್ಮಣ, ಜೈನ, ಮುಗ್ಗೇರ, ಮಾಪಿಳ್ಳೆ, ಪರವ, ಪಂಬದ, ನಲ್ಕೆ, ಕೊರಗ, ಕುಣುಬಿ, ಬಾಕುಡ, ಜೋಗಿ, ಕ್ಷೌರಿಕ, ಗಾಣಿಗ, ಮಡಿವಾಳ, ಮುಂತಾದ ಜನವರ್ಗಗಳ ಉಲ್ಲೇಖವಿದೆ. ಕಲ್ಕುಡ-ಕಲ್ಲುರ್ಟಿ ಪಾಡ್ದನದಲ್ಲಿ ಅಣ್ಣ-ತಂಗಿ ಸತ್ತು ಕಾರ್ಕಳದ ಬೈರರಸನ ವಿರುದ್ಧ ಸೇಡನ್ನು ತೀರಿಸಿಕೊಳ್ಳುವ ಮೂಲಕ ದೈವತ್ವಕ್ಕೆ ಏರುವ ಪ್ರಸಂಗ ಬರುತ್ತದೆ. ಕರಾವಳಿ ಭಾಗದಲ್ಲಿ ಮಾತೃಪರಿಕಲ್ಪನೆ ಇರುವುದರಿಂದ ಸ್ತ್ರೀ ಪ್ರಮುಖವಾಗಿ ಭಾಗವಹಿಸುತ್ತಾಳೆ. ಹಾಗಾಗಿ ಕಲ್ಲುರ್ಟಿ ತನ್ನ ಅಣ್ಣ ಕಲ್ಕುಡನಿಗೆ ಆದ ಅನ್ಯಾಯದ ವಿರುದ್ಧ ತಾನು ಹೋರಾಟ ಮಾಡುತ್ತಾಳೆ.

ಪ್ರಾದೇಶಿಕ ಸಂಸ್ಕೃತಿಯ ನಿರ್ವಚನ: ಕರ್ನಾಟಕದ ಪಶ್ಚಿಮ ಕರಾವಳಿಯ ಭಾಗವಾಗಿರುವ ತುಳುನಾಡು ಸಾಮಾಜಿಕ ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಪ್ರದೇಶ. ಹಲವು ಭಿನ್ನ ಜನ ಸಮುದಾಯಗಳು ಆಚರಣೆ, ಕಲೆ, ಸಂಪ್ರದಾಯ, ಆರಾಧನೆ, ಮಂತಾದವುಗಳಲ್ಲಿ ಇವತ್ತಿಗೂ ಕುತೂಹಲವನ್ನು ಗೌಪ್ಯತೆಯನ್ನು ಕಾಯ್ದುಕೊಂಡು ಬಂದಿದೆ. ಜನಸಮುದಾಯಗಳು ತಾವಿರುವ ನಿರ್ದಿಷ್ಟ ಪ್ರಾದೇಶಿಕತೆಯಲ್ಲಿ ತನ್ನ ಅನನ್ಯತೆಯನ್ನು ಅಭಿವ್ಯಕ್ತಿಸುವಾಗ ಹಲವಾರು ಸಂವಹನ ಮಾಧ್ಯಮಗಳನ್ನು ಕಂಡುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ತುಳುನಾಡಿನಲ್ಲಿ 'ಭೂತಾರಾಧನೆ' ಅಥವಾ 'ದೈವಾರಾಧಾನೆ'ಯ ಮಹತ್ವದ ಸ್ಥಾನ ಪಡೆದುಕೊಂಡಿದೆ.

ಪ್ರಾದೇಶಿಕವಾಗಿ ದಕ್ಷಿಣ ಕನ್ನಡ ಜಿಲ್ಲೆಯು ವಸಾಹತುಶಾಹಿ ಪ್ರಣೀತ ಆಧುನಿಕ ವಿಚಾರಗಳಿಗೆ ಬಹುಬೇಗ ತನ್ನನ್ನು ತಾನು ತೆರೆದು ಕೊಂಡಿರುವಂತೆ ಆಧುನಿಕ ವಿಚಾರಗಳಿಗೆ ಅಷ್ಟೆ ಕ್ಷಿಪ್ರಗತಿಯಲ್ಲಿ ಪ್ರತಿಕ್ರಿಯಿಸಿದಂತಹ ಜಿಲ್ಲೆಯಾಗಿದೆ. ಶ್ರೇಣೀಕೃತ ಜಾತಿವ್ಯವಸ್ಥೆಯನ್ನು ಹೊಂದಿರುವ ದಕ್ಷಿಣ ಕನ್ನಡ

ಜಿಲ್ಲೆಯು ೧೮ನೇ ಶತಮಾನದ ಆದಿಭಾಗದಲ್ಲಿ ವಸಾಹತು ಭಾರತದಲ್ಲಿ ಬಹಳ ಬಿರುಸಿನಿಂದ ಸಾಗುತಿದ್ದ 'ಆಧುನಿಕರಣ' ಪ್ರಕ್ರಿಯೆಯಲ್ಲಿ ಆಸಕ್ತಿಯನ್ನು ತೋರಿದ್ದು ಕಂಡುಬರುತ್ತದೆ. ಮಾತ್ರವಲ್ಲದೇ ವಿಭಿನ್ನ ಜಾತಿ ಸಮುದಾಯಗಳು ಈ ಪಶ್ಚಿಮ ಪ್ರಣಿತ ಆಧುನಿಕ ಚಿಂತನೆಗಳನ್ನು ವರ್ತಮಾನ ತನ್ನ ಅವಶ್ಯಕತೆಗನುಗುಣವಾಗಿ ಸ್ವೀಕರಿಸಿ ಆಧುನಿಕತೆ ಮತ್ತು ಆಧುನಿಕ ವಿಚಾರವಾದ ರಾಷ್ಟ್ರ ಅನ್ನುವ ಪರಿಕಲ್ಪನೆಗೆ ಭಿನ್ನ ಭಿನ್ನ ಬಗೆಯಲ್ಲಿ ಪ್ರತಿಕ್ರಿಯಿಸಿದ್ದನ್ನು ಕಾಣಬಹುದು. ಕರಾವಳಿ ಮೌಖಿಕ ಅಧ್ಯಯನಕ್ಕೆ ಮಾನವಶಾಸ್ತ್ರದ ವಿದ್ವಾಂಸರು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಚರ್ಚೆಯನ್ನು ಮುಂದುವರೆಸಿದರು. ಮಾನವಶಾಸ್ತ್ರಜ್ಞರು ಹಳ್ಳಿಗಾಡಿಗಿಳಿದು ಅಲ್ಲಿನ ಜಾತಿ ವ್ಯವಸ್ಥೆಯ ಸಂಕೀರ್ಣತೆ ಅದರ ಆರ್ಥಿಕ ಹಾಗೂ ನಡವಳಿಗಳ ಪರಸ್ಪರ ಸಂಬಂಧಗಳನ್ನು ಬೆಳಕಿಗೆ ತಂದರು. ಭಾರತದ ಸಾಮಾಜಿಕ ಬೆಳವಣಿಗೆಯ ಅಧ್ಯಯನದಲ್ಲಿ ಮಾನವಶಾಸ್ತ್ರಜ್ಞರು ಲಿಖಿತ ದಾಖಲೆಗಳಿಗೆ ಹಾಗೂ ವೈಧಿಕ ವಕ್ತೃಗಳಿಗೆ ಮಹತ್ವವನ್ನು ಕೊಡುತ್ತಿದ್ದು, ಮೌಖಿಕ ಸಂಪ್ರದಾಯಗಳನ್ನು ಕಡೆಗಣಿಸುತ್ತಿದ್ದವು ಎಂದು ಡಾ.ಪೀಟರ್ ಜೆ.ಕ್ಲಾಸ್ ಅವರು ಹೇಳುತ್ತಾರೆ"[೨] ಭಾರತದ ನಾಗರೀಕತೆಯ ಬೆಳವಣಿಗೆಯ ಅಧ್ಯಯನದಲ್ಲಿ ಮಾನವಶಾಸ್ತ್ರಜ್ಞರು ತಳೆದಿರುವ ಈ ಧೋರಣೆ ತಪ್ಪಾಗಿದೆ. ವಾಸ್ತವಿಕವಾಗಿ ಮೌಖಿಕ ಸಂಪ್ರದಾಯಗಳು ಭಾರತೀಯ ನಾಗರೀಕತೆಯ ವಿಕಾಸದ ಅಧ್ಯಯನದಲ್ಲಿ ಮಹತ್ವದ ಆಕರಗಳಾಗಿವೆ. ಆದರೆ ಈವರೆಗೆ ಈ ಆಕರಗಳ ಉಪಯೋಗ ನಡೆದಿಲ್ಲ.

ಸಾಂಸ್ಕೃತಿಕ ಅಂಶಗಳು: ತುಳುನಾಡಿನಲ್ಲಿ ಭೂತಾರಾಧನೆ, ನಾಗಾರಾಧನೆ, ಕಾಡ್ಯನಾಟ್ಯ ಇತ್ಯಾದಿ, ಆಚರಣೆಗಳು ವಿಶಿಷ್ಟ್ಯವೆನಿಸಿವೆ. ಪಾಡ್ದನಗಳ ಸ್ವರೂಪ ಕಥನ ಕವನಗಳ ರೀತಿಯದ್ದು ಆಗಿರುವುದರಿಂದ ಮತ್ತು ಪಾಡ್ದನಗಳು ವಿಶೇಷವಾಗಿ ಭೂತಾರಾಧನೆಗೆ ಸಂಬಂಧ ಪಟ್ಟಿರುವುದರಿಂದ ತುಳುನಾಡಿನ ಸಂಸ್ಕೃತಿಯ ಸಮಗ್ರ ಚಿತ್ರಣವನ್ನು ಇಲ್ಲಿ ನೋಡಬಹುದು. ಪ್ರಾದೇಶಿಕವಾಗಿ ಪಾಡ್ದನಗಳು ತುಳುನಾಡಿನ ಸಂಸ್ಕೃತಿಯ ಐತಿಹಾಸಿಕ ದಾಖಲೆಯನ್ನು ನೀಡುವ ದೃಷ್ಟಿಯಿಂದ ಮುಖ್ಯವಾಗಿದೆ. ಪ್ರಾಚೀನ ತುಳುನಾಡಿನ ಭಿನ್ನಭಿನ್ನ ವರ್ಗ-ಜಾತಿಗಳ ಜನರು, ಬೇಸಾಯ ಪದ್ಧತಿ, ವಾಣಿಜ್ಯ ವ್ಯವಹಾರ, ಉಡುಗೆ-ತೊಡುಗೆಗಳು, ಸಾರಿಗೆ ಸಂಪರ್ಕದ ಸ್ವರೂಪ, ಕಂದಾಯ ಪದ್ಧತಿ, ವಿದ್ಯಾಭ್ಯಾಸದ ಕ್ರಮ, ಧರ್ಮಗಳ ರೀತಿಗಳು, ನಂಬಿಕೆಗಳು, ಕೌಟುಂಬಿಕ ವ್ಯವಸ್ಥೆ, ಇಂತಹ ಅನೇಕ ವಿಷಯಗಳ ಮಾಹಿತಿಗಳನ್ನು ಪಾಡ್ದನಗಳಿಂದ ಪಡೆಯಬಹುದು. ಇವತ್ತು ಪಾಡ್ದನಗಳ ಮಹತ್ತ್ವ ಉಳಿದಿರುವುದು ಅವುಗಳ ಆಚರಣೆಯ ಸಂದರ್ಭದಿಂದ ಅಲ್ಲ, ಅವುಗಳಿಂದ ದೊರೆಯುವ ಸಾಂಸ್ಕೃತಿಕ ಇತಿಹಾಸ ಮತ್ತು ಸಾಮಾಜಿಕ ಧ್ವನಿಗಳಿಂದಾಗಿ ಎಂದು ಡಾ.ವಿವೇಕ ರೈ ಅವರು ಹೇಳುತ್ತಾರೆ.

ತುಳುವರು ಬದುಕಿದ ರೀತಿ, ಜೀವನದ ಮೌಲ್ಯ, ನಂಬಿಕೆ ನಡವಳಿಕೆ, ರಂಗು ರಸಿಕತೆ, ಕಲಾಪ್ರಜ್ಞೆ, ಉಡುಪು ತೊಡುಪು, ಆಭರಣ, ಅಲಂಕಾರ, ಆಟಕೂಟಗಳು, ಮನೆಮಾರು, ಬೇಸಾಯ, ವ್ಯಾಪಾರ, ಮದ್ದು ಮಾಯ, ಮದಿಮು, ಬಡವ ಬಲ್ಲಿದರ ಸಂಘರ್ಷ, ಜಾತಿ, ವೈಷಮ್ಯ, ಶೋಷಣೆ, ಮೊದಲಾದವನ್ನು

ಪಾಡ್ದನಗಳು ಸಾಕಷ್ಟು ನಿಚ್ಚಳವಾಗಿ ಚಿತ್ರಿಸುತ್ತವೆ. ಪಾಡ್ದನಗಳಲ್ಲಿ ಬರುವ ಅನೇಕ ವಿವರಗಳು ತುಳುವರ ಬದುಕಿಗೆ ನೇರವಾಗಿ ಸಂಬಂಧಪಟ್ಟಿವೆ ಎಂಬುದನ್ನು ಡಾ.ಅಮೃತಸೋಮೇಶ್ವರ ಅವರು ತಮ್ಮ ಹಲವು ಲೇಖನಗಳಲ್ಲಿ ಪ್ರತಿಪಾದಿಸಿದ್ದಾರೆ. ಪಾಡ್ದನಗಳಲ್ಲಿರುವ ವಿವರಗಳನ್ನು ಪ್ರಾಚೀನ ಕಾಲಘಟ್ಟದ ತುಳು ಸಮಾಜದ ಪುನರ್ ರಚನೆಗೆ ಆಕರಸಾಮಾಗ್ರಿಯಾಗಿ ಬಳಸಿಕೊಳ್ಳಬಹುದೆಂಬ ಸೈದ್ಧಾಂತಿಕ ಗ್ರಹಿಕೆಯು ಇಲ್ಲಿ ಕೆಲಸ ಮಾಡಿದೆ. “ಪಾಡ್ದನಗಳು ಕೇವಲ ನಿಶ್ಚಿತ ಗತವನ್ನು ಪ್ರತಿನಿಧಿಸುವುದಿಲ್ಲ. ಬದಲಾಗಿ ಭೂತ ವರ್ತಮಾನಗಳ ಚಲನಶೀಲ ಸಂಬಂಧಗಳನ್ನು ಪ್ರತಿನಿಧಿಸುತ್ತವೆ”[೧೩] ತುಳುವ ಸಂಸ್ಕೃತಿಯ ಅಧ್ಯಯನ ಹಾಗೂ ಮರುರಚನೆಯಲ್ಲಿ ಪಾಡ್ದನಗಳು ಪ್ರಮುಖ ಮೌಖಿಕ ಆಕರಗಳಾಗಿ ನಿಲ್ಲುತ್ತವೆ. ತುಳು ಪಾಡ್ದನಗಳನ್ನು ಒಂದು ಸಮಾಜದ ರಾಜಕೀಯ ಇತಿಹಾಸ ರಚನೆಗೆ ಹಾಗೂ ಸಾಮಾಜಿಕ ಸಾಂಸ್ಕೃತಿಕ ಇತಿಹಾಸದ ಪುನರ್‌ರಚನೆಗೆ ಹೆಚ್ಚು ಅರ್ಥಪೂರ್ಣವಾಗಿ ಬಳಸಬಹುದಾಗಿದೆ. ಮಾತೃಮೂಲೀಯ ಕುಟುಂಬ ವ್ಯವಸ್ಥೆ, ಬಂಧುತ್ವ ವ್ಯವಸ್ಥೆ, ಅಲ್ಲಿನ ಹೆಣ್ಣುಗಳ ಸ್ಥಿತಿಗತಿ, ಬೇಟೆಯ ಹಿಂದಿನ ರಾಜಕಾರಣ, ಯುದ್ಧತಂತ್ರಗಳು, ಜಾತಿಯ ಕಟ್ಟುಕಟ್ಟಳೆಯ, ಶ್ರೇಣಿಕೃತ ಜಾತಿವ್ಯವಸ್ಥೆ, ದಲಿತ ಸಮುದಾಯದ ಸ್ಥಿತಿಗತಿ, ವಿವಿಧ ವೃತ್ತಿಗಾರರ ಕುಲಕಸುಬುಗಳ, ವಿವರಗಳು–ಹೀಗೆ ಒಂದು ಸಾಂಸ್ಕೃತಿಕ ಜಗತ್ತಿನ ವಿವರಗಳು ತುಳು ಪಾಡ್ದನಗಳಲ್ಲಿ ದೊರೆಯುತ್ತವೆ. ಹೀಗೆ ಪಾಡ್ದನಗಳು ತುಳುವರ ಜೀವನ ಮೌಲ್ಯ, ಸಂಪ್ರದಾಯ, ವ್ಯವಹಾರ, ಮೊದಲಾದ ಮಾಹಿತಿಗಳ ಅಭಿವ್ಯಕ್ತಿಯಾಗಿದ್ದು ತುಳುವರ ಲೋಕದೃಷ್ಟಿಯನ್ನು ತೆರೆದಿಡುತ್ತದೆ. ಡಾ.ವಿವೇಕ ರೈ ಅವರು ತಮ್ಮ ಅಧ್ಯಯನದಲ್ಲಿ ಪಾಡ್ದನಗಳಲ್ಲಿ ವ್ಯಕ್ತವಾಗುವ ಇಂತಹ ಸಾಂಸ್ಕೃತಿಕ ಅಂಶಗಳನ್ನು ಪ್ರತ್ಯೇಕವಾದ ಅಧ್ಯಯನದಲ್ಲಿ ಚರ್ಚಿಸಿದ್ದಾರೆ. ಕಬಿತಗಳು ತುಳು ಜನಪದಗೀತೆಗಳಲ್ಲಿ ಕೆಲಸದ ಹಾಡುಗಳ ಒಂದು ಪ್ರಮುಖ ಪ್ರಕಾರವಾದ ‘ಕಬಿತ’ಗಳನ್ನು ತುಳುನಾಡಿನಲ್ಲಿ ಹೊಲಗಳಲ್ಲಿ ‘ನೇಜಿ’ ನೆಡುವಾಗ ಅಂದರೆ ನಾಟಿ ಮಾಡುವಾಗ ಹಾಡುತ್ತಾರೆ. ಕಬಿತದ ರಚನೆ, ವಸ್ತು, ಲಯ, ವೈವಿಧ್ಯತೆ ಕುರಿತಂತೆ ಬಿ.ಎ.ವಿವೇಕ ರೈ ಅವರು ಚರ್ಚೆಮಾಡಿದ್ದಾರೆ. “ಕಬಿತಗಳಲ್ಲಿ ಶಬ್ದಗಳ ಸರಮಾಲೆ, ಹಾಸ್ಯದ ತುಣುಕು, ಒಂದು ಸಾಮಾನ್ಯ ಘಟನೆ, ಒಂದು ಚಿಕ್ಕ ವಿಚಾರ ಇರುತ್ತದೆ. ಕಬಿತಗಳು ಶುದ್ಧ ಕೆಲಸದ ಹಾಡುಗಳಾಗಿರುವುದರಿಂದ ಇಲ್ಲಿ ಸಾಹಿತ್ಯಿಕ ಮೌಲ್ಯ ವಿಶೇಷವಾಗಿ ಕಂಡುಬರುವುದಿಲ್ಲ”[೧೪] ಕಬಿತಗಳಲ್ಲಿ ತುಳುನಾಡಿನ ಸಂಸ್ಕೃತಿಯ ವಿಚಾರಗಳನ್ನು ಕಾಣಬಹುದು. ಕಬಿತಗಳ ರಾಚನಿಕ ಸ್ವರೂಪ ಮತ್ತು ನೇಜಿ ನೆಡುವ ಕೆಲಸಗಳಿಗೆ ಸಂಬಂಧವಿದೆ. ಅಂತೆಯೆ ಇವುಗಳನ್ನು ಹಾಡುವ ಲಯ ಹಾಗೂ ನೇಜಿ ನೆಡುವ ಕೆಲಸದ ಲಯಕ್ಕೆ ಹೊಂದಿಕೆಯಾಗುತ್ತದೆ. ಈ ಗೀತೆಗಳನ್ನು ಮೇಲ್ನೋಟಕ್ಕೆ ಗಮನಿಸುವಾಗ, ಅವು ಆಯಾಸ ಮರೆಸುವ, ಮನಸ್ಸನ್ನು ಮುದಗೊಳಿಸುವ, ದುಡಿಮೆಯ ಏಕತಾನತೆಯನ್ನು ಹೋಗಲಾಡಿಸಲು ರಚನೆಗಳು ಎಂದೆನಿಸುತ್ತವೆ. ನೇಜಿ ನೆಡುವ ಸಂದರ್ಭ ಹಾಗೂ ಕಬಿತಗಳಲ್ಲಿನ ವಿವರಗಳನ್ನು ಗಮನಿಸಿದಾಗ, ಸ್ತ್ರೀ ರಚನೆಗಳಾಗಿರುವ ಕಬಿತಗಳು ದುಡಿಯುವ ವರ್ಗದ ಹೆಂಗಸರು ದಿನ ನಿತ್ಯ ಎದುರಿಸುವ ಕಷ್ಟ, ನಷ್ಟ, ಸಂಕಟ, ನೋವು, ತಾನು ಕೆಲಸದಲ್ಲಿ ನಿರತಳಾಗಿರುವಾಗ

ಮನಸ್ಸು ಪಟ್ಟ ಪಾಡನ್ನು ತನ್ನ ಬಯಕೆಗಳನ್ನು ಕಬಿತಗಳಲ್ಲಿ ಹಾಡಿನ ಮೂಲಕ ಪ್ರತಿಬಿಂಬಿಸಿರುವುದು ಕಂಡುಬರುತ್ತದೆ. ಹಾಗಾಗಿ ಈ ಗೀತೆಗಳನ್ನು ಶ್ರಮ ಪರಿಹಾರದ ಸಾಧನವೆಂದು ಮಾತ್ರ ಕಾಣದೆ ಅವಳ ಅನುಭವ ಮತ್ತು ಕನಸುಗಳ ಅಭಿವ್ಯಕ್ತಿಯ ಸಾಧ್ಯತೆಯಾಗಿಯು ಗಮನಿಸಬಹುದು. ತುಳು ಬದುಕು ಮತ್ತು ಸಂಸ್ಕೃತಿಯಲ್ಲಿ ಕೃಷಿಗೆ ಅನನ್ಯವಾದ ಮಾತ್ರವಲ್ಲ ಒಂದು ಪಾವಿತ್ರ್ಯತೆಯ ಭಾವವಿದೆ. ಅಕ್ಕಿ ತುಳುವರ ಸಾಂಸ್ಕೃತಿಕ ಬದುಕಿನಲ್ಲಿ ವಿಶೇಷವಾಗಿ ಬಳಕಯಾಗುತ್ತದೆ. ಹಾಗಾಗಿ ಇಂತಹ ಧಾನ್ಯವನ್ನು ಕೃಷಿ ಮಾಡುವ ಸಂದರ್ಭದಲ್ಲಿ ಹಾಡುವ ಹಾಡುಗಳು ಆ ಸಂರ್ಭದ ಆಶಯಕ್ಕೆ ಬದ್ಧವಾಗಿವೆ. ಇಂತಹ ಹಾಡುಗಳಲ್ಲಿ ಮೇಲ್ನೋಟಕ್ಕೆ ಕಾಣುವ ಅರ್ಥವಷ್ಟೇ ಅಲ್ಲದೇ ಹಲವು ಅರ್ಥಗಳನ್ನು ಒಳಗೊಂಡಿದೆ. ಮತ್ತು ಕೆಲವು ಆಶಯಗಳನ್ನು ಸಂವಹನ ಮಾಡುತ್ತದೆ. ಇಂತಹ ಕಬಿತಗಳನ್ನು ಸಂದರ್ಭಸೂಚಿತ ಸಿದ್ಧಾಂತಗಳ ಮೂಲಕ ಸಂಗ್ರಹಿಸಿ ಅವುಗಳ ಒಳ ರಚನೆ ಕುರಿತು ಬಿ.ಎ.ವಿವೇಕ ರೈ ಅವರು ಸಂಶೋಧನೆ ಮಾಡಿದ್ದಾರೆ. 'ಕುಣಿತದ ಹಾಡುಗಳು' ಕುರಿತು ವಿಶೇಷವಾಗಿ ಜನಾಂಗಿಕ ನೆಲೆಯಲ್ಲಿ ಬಿ.ಎ.ವಿವೇಕ ರೈ ಅವರು ಅಧ್ಯಯನ ಮಾಡಿದ್ದಾರೆ. ಭಾಷಿಕವಾಗಿ, ಜನಾಂಗಿಕವಾಗಿ, ಔದ್ಯೋಗಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವೈವಿಧ್ಯಮಯವಾಗಿರುವ ತುಳುನಾಡಿನ ಅತ್ಯಂತ ಶ್ರೀಮಂತ ಪರಂಪರೆಯೆಂದರೆ ಕುಣಿತಗಳು, ಮತ್ತು ಆರಾಧಾನ ಸಂಪ್ರದಾಯಗಳು. ಕುಣಿತಗಳ ದೃಷ್ಟಿಯಿಂದ ತುಳುನಾಡಿನ ನಲಿಕೆ, ಮುಗೇರ, ಕೊರಗ, ನಾಯ್ಕ, ಗೌಡ, ಇಂತಹ ಅನೇಕ ಜನಾಂಗಗಳು ಗಮನ ಸೆಳೆಯುತ್ತವೆ. ಈ ಜನಾಂಗಗಳ ಕುಣಿತಗಳನ್ನು ಆಧರಿಸಿ, ಈ ಪ್ರದೇಶದ ಒಟ್ಟು ಸಾಂಸ್ಕೃತಿಕ ಸ್ವರೂಪವನ್ನು ತಿಳಿಯಲು ಸಾಧ್ಯವಿದೆ. ಈ ಪ್ರದೇಶದಲ್ಲಿ ಆಟಿಕಳೆಂಜ, ಕರಂಗೋಲು, ಚೆನ್ನು ಕುಣಿತ, ದುಡಿ ಕುಣಿತ, ಸಿದ್ಧವೇಷ, ಪಿಲಿಪಂಜಿ, ಕಂಗಿಲು, ಮಾದಿರ, ಹೀಗೆ ಹಲವಾರು ಕುಣಿತಗಳಿವೆ. ಈ ಕುಣಿತಗಳನ್ನು ನಿರ್ವಹಿಸುವವರು ಬೇರೆ ಬೇರೆ ಜನಾಂಗದವರು. ಅಂತೆಯೇ ತುಳುನಾಡಿನ ಎಲ್ಲ ಪ್ರದೇಶಗಳಲ್ಲಿ ಈ ಎಲ್ಲ ಕುಣಿತಗಳು ಸಾರ್ವತ್ರಿಕವಾಗಿ ಒಂದೇ ಆಶಯವನ್ನು ಹೊಂದಿದ್ದರೂ ಕೂಡ ಪ್ರಾದೇಶಿಕವಾಗಿ ಅದರ ವೇಷಭೂಷಣ, ಅಲಂಕಾರ ಸಾಧನಗಳು, ಮುಖವರ್ಣಿಕೆಯಲ್ಲಿ ವ್ಯತ್ಯಾಸಗಳಿರುತ್ತವೆ. ಹಾಡುಗಳು ಕೂಡ ಕೆಲವೊಮ್ಮೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆಗೊಳ್ಳುತ್ತವೆ. ಪ್ರದರ್ಶನದಲ್ಲೂ ತಕ್ಕಮಟ್ಟಿನ ಬದಲಾವಣೆಗಳಿರುತ್ತವೆ. ಆಯಾ ಕುಣಿತಗಳು ನಡೆಯುವ ಪ್ರದೇಶದ ಜನಜೀವನ, ಸಂಸ್ಕೃತಿ ಮತ್ತು ಅಲ್ಲಿ ದೊರೆಯುವ ಪರಿಸರಗಳನ್ನು ಹೊಂದಿಕೊಂಡು ಬದಲಾವಣೆಗಳು ಸಂಭವಿಸುತ್ತವೆ. ಕುಣಿತಗಳು ತುಳುನಾಡಿನಲ್ಲಿ ಪ್ರಾದೇಶಿಕ ಪರಂಪರೆಯಾಗಿ ಕ್ರೀಯಾಶೀಲವಾಗಿವೆ. ಈ ಪರಂಪರೆ ಅಕ್ಷರ ಪರಂಪರೆಗೆ ಸಮನಾಂತರವಾಗಿ ರೂಪುಗೊಂಡಿದೆ. ಅಕ್ಷರ ಬಲ್ಲ ಜನವರ್ಗದ ಲೋಕದೃಷ್ಟಿಗೆ ಭಿನ್ನವಾಗಿ ಜನಪದರು ಕುಣಿತಗಳ ಮೂಲಕ ತಮ್ಮ ಲೋಕದೃಷ್ಟಿಯನ್ನು ಸಾದರಪಡಿಸಿದ್ದಾರೆ. ಈ ಕುಣಿತಗಳು ಈ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಆಕರಗಳಾಗಿವೆ. ಜನಪದ ಕುಣಿತಗಳನ್ನು ಸಮರ್ಥವಾದ ಮತ್ತು ಪ್ರಬಲವಾದ ಸಂವಹನ ಮಾಧ್ಯಮಗಳೆಂಬುದಾಗಿ ಗ್ರಹಿಸಿದಾಗ ಮಾತ್ರ ಈ ಕುಣಿತಗಳನ್ನು ಗಂಭೀರವಾಗಿ ನೋಡಲು ಸಾಧ್ಯ.

ಉದ್ದೇಶಪೂರ್ವಕವಾಗಿಯೇ ಉಗಮಗೊಂಡ ಜನಪದ ಕುಣಿತಗಳು ಒಂದು ಜನಾಂಗದ ಒಂದು ನಾಡಿನ ಚಾರಿತ್ರಿಕ ಸನ್ನಿವೇಷಗಳನ್ನು ಬಿತ್ತರಿಸುವಲ್ಲಿ ಮಾಧ್ಯಮಗಳಾಗಿ ಮಹತ್ತ್ವದ ಸ್ಥಾನ ಪಡೆಯುತ್ತವೆ. ಕುಣಿತಗಳು ಕ್ರಿಯಾತ್ಮಕ ಜಾನಪದದ ಬಹಳ ಮುಖ್ಯ ಅಂಗಗಳು. ಮನುಷ್ಯನ ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಇವು ನಿರ್ದಿಷ್ಟ ಜನಪದದ ಆಶೋತ್ತರಗಳನ್ನು ಈಡೇರಿಸಿ, ಅವರ ಸೃಜನಶೀಲತೆಯ ಅಭಿವ್ಯಕ್ತಿಯಾಗಿ ಸಾಂಸ್ಕೃತಿಕ ಬದುಕನ್ನು ತುಂಬಿದ ಅಂಶಗಳಾಗಿವೆ.

೫.೧.೪. ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು (೧೯೮೩)

ವೀರಣ್ಣ ದಂಡೆಯವರು ಪ್ರಸ್ತುತ ಪಡಿಸಿದ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು' ಪಿಎಚ್.ಡಿ ನಿಬಂಧವಾಗಿದೆ. ಕಲಬುರ್ಗಿ ಪ್ರದೇಶದ ೫೦೦ ಜಾನಪದ ಕಥೆಗಳನ್ನು ಇಟ್ಟುಕೊಂಡು ಶಾಸ್ತ್ರೀಯವಾಗಿ ಸಂಶೋಧನೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಕಲಬುರ್ಗಿಯ ಕಥೆಗಳನ್ನು ಪ್ರಾಣಿಗಳು, ಸಾಮಾನ್ಯ ಜನಪದ ಕಥೆಗಳು, ಹಾಸ್ಯ ಹಾಗೂ ಅಡ್ಡ ಕಥೆಗಳು, ಸೂತ್ರಬದ್ಧ ಕಥೆಗಳು, ಎಂಬುದಾಗಿ ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಬಳಸಿದ ಸಿದ್ಧಾಂತಗಳನ್ನೆ ಕನ್ನಡ ಕಥೆಗಳಿಗೆ ಬಳಸಿದ್ದಾರೆ. ಜೂಲಿಯಸ್ ಕ್ರಾಹ್ನ ಆತನ ಪುತ್ರ ಕಾರ್ಲೆ ಕ್ರಾಹ್ನ, ಆತನ ಶಿಷ್ಯ ಆರ್ನೆ ಆಂಟಿ ಹಾಗೂ ಸ್ಟಿಥ್ ಥಾಮ್ಸನ್ ಅವರು ಜನಪದ ಕಥೆಯೊಂದರ ಸಮಗ್ರ ಜೀವನ ಚರಿತ್ರೆಯನ್ನು ಕಂಡು ಹಿಡಿಯುವುದಕ್ಕೆ 'ಚಾರಿತ್ರಿಕ ಭೌಗೋಳಿಕ ಅಧ್ಯಯನ ವಿಧಾನ' ಸಿದ್ಧಾಂತವನ್ನು ಹುಟ್ಟುಹಾಕಿದರು. ಈ ಮಾದರಿಯಲ್ಲಿಯೇ ವೀರಣ್ಣ ದಂಡೆಯವರು ಕಲಬುರ್ಗಿ ಜಿಲ್ಲೆಯ ಕಥೆಗಳನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಅಲ್ಲದೇ ಆಂಟಿ ಆರ್ನೆ ಹಾಗೂ ಸ್ಟಿಥ್ ಥಾಮ್ಸನ್ ಅವರ ಮಾದರಿ ಸೂಚಿ (The Types of the Folktale) ಮತ್ತು ಥಾಮ್ಸನ್‌ರ 'ಆಶಯ ಸೂಚಿ'(Motif Index of Folk-Literature) ಎಂಬ ಗ್ರಂಥಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ.

ಕನ್ನಡ ಜನಪದ ಕಥೆಗಳ ಅಧ್ಯಯನದ ಹಾದಿಯಲ್ಲಿ ಆಶಯ ಮತ್ತು ಮಾದರಿಗಳ ಅಧ್ಯಯನ ಮಹತ್ವದ ಮೈಲಿಗಲ್ಲು. ಮಾದರಿ ಮತ್ತು ಆಶಯಗಳನ್ನು ಕನ್ನಡಕ್ಕೆ ಮೊದಲು ಪರಿಚಯಿಸಿದವರೆಂದರೆ ಡಾ.ಹಾ.ಮ.ನಾಯಕರು. ಅವರು ೧೯೬೬ ರಲ್ಲಿ ಜರಗಿದ ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಮಾರಂಭದ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನದಲ್ಲಿ 'ಕನ್ನಡ ಜನಪದ ಸಾಹಿತ್ಯದ ವಿವಿಧ ಮುಖಗಳು' ಎಂಬ ವಿಚಾರಗೋಷ್ಠಿಯಲ್ಲಿ 'ಜನಪದ ಸಾಹಿತ್ಯ ಅದರ ಸ್ವರೂಪ' ವಿಷಯವನ್ನು ಕುರಿತು ಮಾತನಾಡುತ್ತಾ ಮಾದರಿ ಮತ್ತು ಆಶಯಗಳ ಪ್ರಸ್ತಾಪ ಮಾಡುತ್ತಾರೆ. ಮಾದರಿಯನ್ನು ವರ್ಗ ಹಾಗೂ ಕಥಾಸೂಚಕವೆಂತಲೂ ಆಶಯವನ್ನು 'ಪ್ರೇರಕ' ಇಲ್ಲ 'ಕಥಾಘಟಕ'ವೆಂತಲೂ ಕರೆಯಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಡಾ.ಹಾ.ಮಾ.ನಾಯಕರ 'ಜಾನಪದ ಸ್ವರೂಪ' ಕೃತಿ ಪ್ರಕಟವಾಗುವ ಮೊದಲೆ ರಾಗೌ ಅವರು ತಮ್ಮ 'ಕರ್ನಾಟಕ ಜನಪದ ಕಥೆಗಳು' ಎಂಬ ಜನಪದ ಕಥಾ ಸಂಕಲನಕ್ಕೆ ಬರೆದ ಪ್ರಸ್ತಾವನೆಯಲ್ಲಿ ಆಶಯ ಮತ್ತು ಮಾದರಿಗಳ ಬಗೆಗೆ

ವಿವರವಾಗಿ ಬರೆದಿದ್ದಾರೆ. ಆ ಸಂಕಲನದ ಕಥೆಗಳನ್ನು ಅನುಲಕ್ಷಿಸಿ ಮಾದರಿ ಮತ್ತು ಆಶಯಗಳನ್ನು ವಿವರಿಸಿದ್ದಾರೆ. ಜನಪದ ಕಥೆಗಳ ಆಶಯ ಮತ್ತು ಮಾದರಿಗಳನ್ನು ಕುರಿತು ಶಾಸ್ತ್ರೀಯ ಅಧ್ಯಯನವನ್ನು ಮಾಡಿದವರೆಂದರೆ ಡಾ.ಜೀಶಂಪ ಅವರು. ತಮ್ಮ 'ಕನ್ನಡ ಜನಪದ ಕಥೆಗಳು' ಎಂಬ ಸಂಕಲನಕ್ಕೆ ಬರೆದ ಪ್ರಸ್ತಾವನೆಯಲ್ಲಿ ಜಗತ್ತಿನಾದ್ಯಂತ ವಿವಿಧ ದೇಶಗಳ ಜನಪದ ಕಥೆಗಳ ವಿಶಿಷ್ಟಾಂಶಗಳನ್ನು ವಿವರಿಸುತ್ತಾ ಆಶಯ ಮತ್ತು ಮಾದರಿಗಳ ಬಗೆಗೆ ಸೈದ್ಧಾಂತಿಕ ಚರ್ಚೆಯನ್ನು ನಡೆಸಿದ್ದಾರೆ"[೧೫] ಪ್ರಪಂಚಾದ್ಯಂತ ಪ್ರಚಲಿತದಲ್ಲಿರುವ ಇಪ್ಪತ್ತೈದು ಕಥಾಮಾದರಿಗಳಿಗೆ ಕನ್ನಡ ಜನಪದ ಕಥೆಗಳನ್ನು ಉದಾಹರಣೆಯಾಗಿ ಗುರುತಿಸಿದ್ದೆ ಸಂಶೋಧನೆಯ ಶಾಸ್ತ್ರೀಯ ಪ್ರಯತ್ನದ ಮೊದಲ ಹೆಜ್ಜೆ ಎನ್ನಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಒಂದು ನಿರ್ದಿಷ್ಟ ಪ್ರದೇಶದ ಜನಪದ ಕಥೆಗಳ ಆಶಯ ಮತ್ತು ಮಾದರಿಗಳ ಅಧ್ಯಯನದ ಮೂಲಕ ಒಂದು ಜನಸಮುದಾಯದ ಸಂಸ್ಕೃತಿಯ ಪುನರ್ರಚನೆಯನ್ನು ಮಾಡುವುದರಲ್ಲಿ ಸಂಶೋಧಕರು ಯಶಸ್ವಿಯಾಗಿದ್ದಾರೆ. ಈ ಮಹಾಪ್ರಬಂಧದಲ್ಲಿ ಕನ್ನಡದ ಜನಪದ ಕಥೆಗಳಿಗೆ ಮಾದರಿಸೂಚಿಯನ್ನು ಸಿದ್ಧಮಾಡಿದ್ದಾರೆ. ಮಾದರಿಸೂಚಿಯಲ್ಲಿರುವ ಒಟ್ಟು ೨೪೧ ಮಾದರಿಗಳಲ್ಲಿ ೮೫ ಮಾದರಿಗಳು ಹೊಸದಾಗಿ ಗೊರುತಿಸಿಕೊಂಡವುಗಳು. ಆಶಯಸೂಚಿಯಲ್ಲಿ ೧೩೦೦ಕ್ಕೂ ಮೇಲ್ಪಟ್ಟು ಹೊಸ ಆಶಯಗಳನ್ನು ಗುರುತಿಸಿದ್ದಾರೆ. ಇದು ಕನ್ನಡ ಮತ್ತು ಭಾರತೀಯ ಜನಪದ ಕಥೆಗಳ ಅಧ್ಯಯನಕ್ಕೆ ನೀಡಿದ ಮಹತ್ವದ ಕೊಡುಗೆ ಎನ್ನಬಹುದು. ವೀರಣ್ಣ ದಂಡೆಯವರು ಆ ಕಾಲಕ್ಕೆ ಪ್ರಕಟವಾಗಿರುವ ಎಲ್ಲಾ ಕಥೆಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಪಾಶ್ಚಾತ್ಯ ಕಥೆಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿರುವುದಲ್ಲದೆ ಪಾಶ್ಚಾತ್ಯ ಕಥೆಗಳನ್ನು ಗಮನಿಸುವ ಸಾಹಸ ಮಾಡಿದ್ದಾರೆ. ಏಕಾಶಯ ಮಾದರಿಯನ್ನು ಕುರಿತು ಸ್ಟಿಥ್ ಥಾಂಸನ್‌ನ ನಿಲುವನ್ನು ದಂಡೆಯವರು ಪುನರ್‌ಪರಿಶೀಲಿಸುವ ಪ್ರಯತ್ನ ಮಾಡಿದ್ದಾರೆ. ಒಂದೆ ಅಶಯ ಕಥೆಯಲ್ಲದ್ದಾಗ ಅದು ಮಾದರಿಯೂ ಆಗುತ್ತದೆ ಎಂದು ಥಾಂಸನ್ನರು ಹೇಳಿದರೆ, ದಂಡೆಯವರು "ಕನಿಷ್ಠ ಒಂದಕ್ಕಿಂತ ಹೆಚ್ಚು ಆಶಯಗಳು ಒಂದು ಮಾದರಿಯಲ್ಲಿ ಕಾಣುತ್ತವೆ ಅಥವಾ ಒಂದೇ ಆಶಯವು ಹಲವು ಸಲ ಪುನರಾವರ್ತನೆ ಹೊಂದಿರುತ್ತವೆ ಎಂದು ಹೇಳಿದ್ದಾರೆ. ಥಾಮ್ಸನ್ನರು ತಮ್ಮ ಮಾದರಿಸೂಚಿ ಕೃತಿಯಲ್ಲಿ ಏಕಾಶಯವುಳ್ಳ ಮಾದರಿಗಳು ಎಂದು ಗುರುತಿಸಿದವುಗಳನ್ನು ಕೂಡ ಅವುಗಳಾವುವು ಏಕಾಶಯದ ಮಾದರಿಗಳಾಗಿಲ್ಲ' ಎಂದು ಬರೆಯುತ್ತಾರೆ. ಥಾಮ್ಸನ್ನರು ಏಕಾಶಯದ ಕಥೆಯೆಂದು ಗುರುತಿಸಿರುವ 'ಜಾಣಕಾಗೆ' ಕಥೆಯನ್ನು ವಿಶ್ಲೇಷಿಸಿ ಏಕಾಶಯವುಳ್ಳ ಕತೆಗಳು ಇರಲು ಸಾಧ್ಯವಿಲ್ಲವೆಂದು ತೋರುತ್ತದೆ. ಬದಲಾಗಿ ಒಂದು ಕತೆಯಲ್ಲಿ ಕನಿಷ್ಠ ಒಂದಕ್ಕಿಂತ ಹೆಚ್ಚು ಆಶಯಗಳು ಇರಲೇಬೇಕು ಅಥವಾ ಒಂದೇ ಆಶಯವು ಒಂದಕ್ಕಿಂತ ಹೆಚ್ಚು ಸಲ ಪುನರಾವರ್ತನೆಯಾಗಬೇಕು ಎನ್ನುವ ಮಹತ್ವ ತೀರ್ಮಾನಕ್ಕೆ ಬರುತ್ತಾರೆ. ದಂಡೆಯವರ ಪ್ರಬಂಧದ ತಿರುಳು ಇರುವುದು 'ಸಾಮಾಜಿಕ ವ್ಯವಸ್ಥೆ' 'ಸಾಮಾಜಿಕ ನಂಜಿಗೆಗಳು ಹಾಗೂ ರೂಢಿಗಳು'. 'ದೇವದೇವತೆಗಳು, ರಾಕ್ಷಸರು ಹಾಗೂ ಇತರ ಶಕ್ತಿಗಳು.' 'ಮಾಟ, ಹಾಸ್ಯ ಹಾಗೂ ಆಡಕತೆಗಳು,

ಪ್ರಾಣಿಕತೆಗಳು ಅನೇಕ ಹೊಸ ಸಂಗತಿಗಳು ಇಲ್ಲಿ ಮೊದಲಬಾರಿಗೆ ಬೆಳಕಿಗೆ ಬಂದಿವೆ. ಮೌಖಿಕ ಆಕರಗಳು ಒಂದು ನೆಲದ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಎಂತಹ ಗಟ್ಟಿ ಆಕರಗಳನ್ನು ಒದಗಿಸಿಕೊಡುತ್ತದೆ ಎನ್ನುವುದಕ್ಕೆ ಇಲ್ಲಿನ ಅಧ್ಯಯನವೇ ಸಾಕ್ಷಿಯಾಗಿದೆ.

೫.೨. ಜನಪದ ಸಾಹಿತ್ಯ ಅಧ್ಯಯನಗಳ ಮಾದರಿಗಳು

'ಜನಪದ ಸಾಹಿತ್ಯ ಪ್ರಧಾನ ಅಧ್ಯಯನಗಳು' ಎಂಬ ಅಧ್ಯಾಯನಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲ ಪ್ರದೇಶವು ಒಳಗೊಳ್ಳುವಂತೆ ಗದ್ದಗೀಮಠ, ಜೀಶಂಪ, ಬಿ.ಎ.ವಿವೇಕ ರೈ, ವೀರಣ್ಣ ದಂಡೆ ಮುಂತಾದವರ ಸಂಶೋಧನಾ ಪ್ರಬಂಧಗಳನ್ನು ವಿಶ್ಲೇಷಿಸಲಾಗಿದ್ದು ಹಾಗೆಯೇ ಈ ವಿದ್ವಾಂಸರ ಅಧ್ಯಯನದ ಮಾದರಿಯನ್ನು ಕುರಿತು ತಾತ್ವಿಕವಾಗಿ ಚರ್ಚಿಸುವುದು ಮುಖ್ಯವಾಗುತ್ತದೆ.

ಆಲನ್ ಡಂಡೆಸ್ ಅವರು ಜಾನಪದೀಯ ಅದ್ಯಯನ ಬಗೆಗಿನ ಎರಡು ಮಹತ್ತರವಾದ ಅಂಶಗಳನ್ನು ಗುರುತಿಸುತ್ತಾರೆ. ಒಂದು, 'ವಸ್ತುನಿಷ್ಠ–ಮಾಹಿತಿ ಆಧಾರಿತವಾದದ್ದು ಮತ್ತು ಎರಡು, ವ್ಯಾಖ್ಯಾನಿಸುವುದು. ಮೊದಲನೆಯ ಅಂಶದಲ್ಲಿ ಸಾಮ್ಯತೆಯನ್ನು ಹುಡುಕುವ ಕೆಲಸ ನಡೆದರೆ, ವ್ಯಾಖ್ಯಾನವು ವ್ಯತ್ಯಾಸಗಳನ್ನು ಗುರುತಿಸುತ್ತವೆ. "ಒಂದು ವಿಷಯವನ್ನು ಅಧ್ಯಯನ ಮಾಡುವಾಗ ಮೊದಲ ಗುರಿ ಏನೆಂದರೆ ಅದು ಹೇಗೆ ಈ ಹಿಂದೆ ವಿವರಿಸಲಾದ ಪ್ರಕಾರಗಳನ್ನು ಹೋಲುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಎರಡನೇ ಹಂತದಲ್ಲಿ ಅದು ಹೇಗೆ ಹಿಂದೆ ವಿವರಿಸಲಾದ ಪ್ರಕಾರಗಳಿಂದ ವಾಸ್ತವವಾಗಿ ಭಿನ್ನವಾಗಿರುತ್ತದೆ ಎಂಬುದನ್ನೂ ತೋರಿಸುವ ಪ್ರಯತ್ನವಿದೆ. ಪ್ರಕಾರಗಳನ್ನು ಗುರುತಿಸುವುದೇ ಅಧ್ಯಯನವಾದಾಗ ಅದು ಮುಂದಿನ ಯಾವುದಕ್ಕೂ ಸಹಾಯಕವಾಗದ ಒಂದು ಅಧ್ಯಯನವಾಗಿದೆ. ಅಂಥವರಿಗೆ ಅದೇ ಗುರಿಯಾಗಿದೆವೇ ಹೊರತು ವ್ಯಾಖ್ಯಾನಿಸುವುದಕ್ಕೆ ಎಡೆ ಮಾಡಿಕೊಡುವ ಮಾರ್ಗವಾಗಿಲ್ಲ. ಗುರುತಿಸುವಿಕೆಯ ಆರಂಭ ಮಾತ್ರ. ಅದು ಮೊದಲ ಹೆಜ್ಜೆ ಬರೀ ಗುರುತಿಸುವಿಕೆಗೆ ತನ್ನ ಅಧ್ಯಯನವನ್ನ ಸೀಮಿತಗೊಳಿಸಿಕೊಂಡ ಜಾನಪದ ತಜ್ಞ ತಾನು ಸಂಗ್ರಹಿಸಿದ ಸಾಮಗ್ರಿಯ ಬಗ್ಗೆ ಮುಖ್ಯವಾದ ಪ್ರಶ್ನೆಗಳನ್ನು ಕೇಳುವುದೇ ಇಲ್ಲ, ಈ ರೀತಿಯ ಪ್ರಶ್ನೆಗಳನ್ನು ಕೇಳಿಕೊಳ್ಳದ ತಜ್ಞ ಈ ಕ್ಷೇತ್ರದ ಅಂಚಿನಲ್ಲಿಯೇ ಉಳಿದುಬಿಡುತ್ತಾನೆ ಆಲನ್ ಡಂಡೆಸನ ಈ ಅಧ್ಯಯನ ಮಾದರಿಗಳು ನಮ್ಮಲ್ಲಿನ ವಿದ್ವಾಂಸರಿಗೆ ಅನ್ವಯಿಸುತ್ತವೆ"[೬] ಜಾನಪದ ಸಂಶೋಧನೆ ಮಾಡಿರುವ ಕನ್ನಡ ವಿದ್ವಾಸರುಗಳಿಗೆ ಆಲನ್ ಡಂಡೆಸ್ ಹೇಳಿರುವ ಈ ಮಾದರಿಗಳು ಒಪ್ಪುತ್ತದೆ. ಈ ನೆಲೆಯಲ್ಲಿ ಬಿ.ಎಸ್.ಗದ್ದಗೀಮಠ ಅವರನ್ನು ಮೊದಲು ಗುರುತಿಸಬಹುದು. ಗದ್ದಗೀಮಠರು ಅವರ ಸಂಶೋಧನೆಯಲ್ಲಿ ಯಾವುದೇ ವೈಜ್ಞಾನಿಕ, ಶಾಸ್ತ್ರೀಯ ಅಂಶಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಹೆಚ್ಚು ಕ್ಷೇತ್ರಕಾರ್ಯವನ್ನೆ ಅಳವಡಿಸಿಕೊಂಡು ಮಾಹಿತಿ ಪ್ರಧಾನವಾಗಿ ಸಂಶೋಧನೆಯನ್ನು ಮಾಡಿದ್ದಾರೆ. ಇದು ಇವರ ಅಧ್ಯಯನದ ಮಾದರಿಯಾಗಿದೆ. ಜನಪದ ಸಾಹಿತ್ಯಕ್ಕೆ ಒಂದು ಸಾಮಾಜಿಕ ಸ್ಥಾನಮಾನ ದೊರೆಯುವ ಹೊತ್ತಿಗೆ ತಮ್ಮ ಪಿಎಚ್.ಡಿ ಸಂಶೋಧನಾ ವಿಷಯಕ್ಕೆ ಜಾನಪದವನ್ನು ಆಯ್ಕೆ ಮಾಡಿಕೊಂಡು ಜಾನಪದವು ಅಕಾಡೆಮಿಕ್

ಅಧ್ಯಯನಕಕೆ ವಿಷಯವಾಗಬಲ್ಲದು ಎಂಬುದನ್ನು ತೋರಿಸಿಕೊಡುವುದು ಅಂದಿನ ಜರೂರಾಗಿತ್ತು. ಹಾಗಾಗಿ ಗದ್ದಗೀಮಠ ಅವರ ಅಧ್ಯಯನ ಮಾದರಿಯಲ್ಲಿ ಯಾವುದೇ ಶಾಸ್ತ್ರ ಸಿದ್ಧಾಂತಗಳು ಗೋಚರಿಸುವುದಿಲ್ಲ. ಗೀತೆಗಳನ್ನೆ ಪ್ರಮುಖ ಆಕರಗಳನ್ನಾಗಿ ಮಾಡಿಕೊಂಡು ಅವುಗಳನ್ನು ವಿವರಣಾತ್ಮಕವಾಗಿ ತಮ್ಮ ಅಧ್ಯಯನದಲ್ಲಿ ಚರ್ಚಿಸಿದ್ದಾರೆ.

ಜೀಶಂಪ ಅವರ ಜಾನಪದ ಅಧ್ಯಯನ ಕ್ರಮವು ವಿಶ್ಲೇಷಣಾತ್ಮಕವಾಗಿಯೂ, ವಿವರಣಾತ್ಮಕವಾಯೂ ಪರಿಚಯಾತ್ಮಕವಾಗಿಯೂ ಇರುವುದನ್ನು ನೋಡಬಹುದು. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಸಂಪ್ರದಾಯಗಳನ್ನು ಗುರುತಿಸಿಕೊಂಡು ಹೆಚ್ಚು ಕ್ಷೇತ್ರಕಾರ್ಯ ಮಾಡಿ ದಾಖಲಿಸಿದ್ದಾರೆ. ಅಲ್ಲದೇ ತಮ್ಮ ಸಂಶೋಧನೆಗೆ ಪಾಶ್ಚಾತ್ಯ ಸಿದ್ಧಾಂತಗಳನ್ನು ಬಳಸಿಕೊಂಡಿದ್ದಾರೆ. ಚಾರಿತ್ರಿಕ ಭೌಗೋಳಿಕ ಸಿದ್ಧಾಂತ ಪ್ರಮುಖವಾಗಿ ಬಳಸಿಕೊಂಡು ಜನಪದ ಸಂಪ್ರದಾಯ ಕಾವ್ಯಗಳ ವಿವಿಧ ಭಿನ್ನ ಪಠ್ಯಗಳನ್ನು ಸಂಗ್ರಹಿಸಿ ಒಂದು ಪಠ್ಯಗಳಾಗಿ ಗುರುತಿಸುತ್ತಾರೆ. ಒಂದು ಕಾವ್ಯಕ್ಕೆ ಸಂಬಂಧಿಸಿದ ಹಲವು ಕಥೆಗಳನ್ನು ಸೇರಿಸಿ ಒಂದು ಕಥಗಳಾಗಿ ವಿಶ್ಲೇಷಿಸುತ್ತಾರೆ. ಕ್ಷೇತ್ರಕಾರ್ಯ, ವರ್ಗೀಕರಣ, ವಿಶ್ಲೇಷಣೆ, ವಿಮರ್ಶೆ ಈ ನೆಲೆಗಳಲ್ಲಿ ತಮ್ಮ ಅಧ್ಯಯನದ ಮಾದರಿಯನ್ನು ಜೀಶಂಪ ಅವರು ಸ್ಪಷ್ಟಪಡಿಸುತ್ತಾರೆ. ಜಾನಪದ ಸಾಹಿತ್ಯದ ಸ್ವರೂಪ, ಕನ್ನಡ ಜಾನಪದ ಅಧ್ಯಯನದ ಬೆಳವಣಿಗೆ, ಲಾವಣಿ, ವೃತ್ತಿಗಾಯಕರು, ಮಲೆಮಾದೇಶ್ವರ ಸಂಪ್ರದಾಯ, ಮಂಟೇಸ್ವಾಮಿ ಸಂಪ್ರದಾಯ, ಎಲ್ಲಮ್ಮನ ಚೌಡಿಕೆ ಸಂಪ್ರದಾಯ, ಜುಂಜಪ್ಪನ ಸಂಪ್ರದಾಯ, ಜನಪದ ಲೌಖಿಕ ಸಂಪ್ರದಾಯಗಳು, ಲೌಖಿಕ ಕಾವ್ಯಗಳು, ಮುಂತಾದವುಗಳನ್ನು ವೈಜ್ಞಾನಿಕತೆಯ ಕ್ಷೇತ್ರಕಾರ್ಯದ ಮೂಲಕ ಕಟ್ಟಿಕೊಟ್ಟಿದ್ದರೆ. ಜೀಶಂಪ ಅವರ ಅಧ್ಯಯನ ಮಾದರಿಯಲ್ಲಯೇ ಬಿ.ಎ.ವಿವೇಕ ರೈ ಅವರನ್ನು ಗುರುತಿಸಬಹುದು. ತುಳು ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ತಮ್ಮ ಪ್ರಬಂಧದಲ್ಲಿ ವರ್ಗೀಕರಿಸಿಕೊಂಡು ಸಂಶೋಧನೆಯನ್ನು ಮಾಡಿದ್ದಾರೆ. ಚಾರಿತ್ರಿಕ ಭೌಗೋಳಿಕ ಸಿದ್ಧಾಂತಗಳ ಮೂಲಕ ತುಳು ನಾಡಿನ ಜನಪದ ಕಥೆಗಳನ್ನು ವಿವೇಚಿಸಿದ್ದಾರೆ. ಬಿ.ಎ.ವಿವೇಕ ರೈ ಅವರು ಪಾಶ್ಚಾತ್ಯ ಸಿದ್ಧಾಂತಗಳ ಮಾದರಿಯಲ್ಲಿ ತಮ್ಮ ಅಧ್ಯಯನವನ್ನು ಮಾಡಿದ್ದಾರೆ. ಪಾಡ್ದನಗಳು, ಗಾದೆಗಳು, ಕಬಿತಗಳು, ಒಗಟುಗಳು, ಮುಂತಾದ ತುಳು ಜನಪದ ಸಾಹಿತ್ಯದ ಪ್ರಕಾರಗಳನ್ನು ಕರಾವಳಿ ಭಾಗದ ತುಂಬಾ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿ ಸಂಶೋಧನೆಯನ್ನು ಮಾಡಿದ್ದಾರೆ. ವೀರಣ್ಣ ದಂಡೆ ಅವರ ಅಧ್ಯಯನ ಮಾದರಿಯನ್ನು ಪಾಶ್ಚಾತ್ಯ ಸಿದ್ಧಾಂತಗಳ ಮೂಲಕ ಗುರುತಿಸಬಹುದು. ಒಂದು ಪ್ರದೇಶದ ಜನಪದ ಕಥೆಗಳನ್ನು ಆಶಯ ಮತತು ವರ್ಗಗಳಾಗಿ ನೋಡಿದ್ದಾರೆ. ಆರ್ನೆ ಥಾಂಸನ್ ಅವರ ಸಿದ್ಧಾಂತವನ್ನು ನೇರವಾಗಿ ತಮ್ಮ ಅಧ್ಯಯನದಲ್ಲಿ ಬಳಸಿಕೊಂಡಿದ್ದಾರೆ. ಹೀಗೆ ಜನಪದ ಸಾಹಿತ್ಯ ಅಧ್ಯಯನಗಳ ಮಾದರಿಗಳನ್ನು ಗುರುತಿಸುವುದರ ಜೊತೆಗೆ ಜಾನಪದವು ಇತಿಹಾಸಕ್ಕೆ ಹೇಗೆ ಆಕರಗಳಾಗಿ ಒಳಗೊಳ್ಳುತ್ತವೆ ಎಂಬುದನ್ನು ಜನಪದ ಅಧ್ಯನಕಾರರು ಬಳಸಿರುವ ಆಖರಗಳ ಮೂಲಕ ಚರ್ಚಿಸಬಹುದು. "ಮೌಖಿಕ ಇತಿಹಾಸ ಮತ್ತು ಜಾನಪದ ಬೇರೆ-ಬೇರೆಯಲ್ಲಿ "In a

Purely oral culture euerything' ಎಂದು ಹೇಳುವ ಸಂದರ್ಭದಲ್ಲಿ ಇಡೀ ಜಾನಪದ ಒಂದು ಮೌಖಿಕ ಇತಿಹಾಸ ಲಿಖಿತ ಪರಂಪರೆಯ ಆಗಮನದೊಂದಿಗೆ ಅದು ಒಡೆದುಕೊಳ್ಳುತ್ತದೆ. ಆಗ ಜಾನಪದ ಇತಿಹಾಸ ಸಂಪನ್ಮೂಲವಾಗುತ್ತದೆ. ಬರಹದ ಇತಿಹಾಸ ಅಧಿಕೃತ ಎನಿಸಿಕೊಳ್ಳುತ್ತದೆ. ಜಾನಪದವನ್ನೂ ನಾವು ಜನಸಾಮಾನ್ಯರ ಸಂಸ್ಕೃತಿ–ಇತಿಹಾಸ ಪರಂಪರೆ ಎಂದು ಕರೆಯುತ್ತೇವೆ”[೧೭] ಐತಿಹಾಸಿಕ ಪರಂಪರೆಗೆ ಲಿಖಿತ ಬರಹಗಳನ್ನು ಆಧಾರವನ್ನಾಗಿ ಮಾಡಲಾಯಿತು. ಆದರೆ ಜನಪದ ಪರಂಪರೆಗೆ ಅಲಿಖಿತ ಮೌಖಿಕವೆ ಮೂಲಾಧಾರವಾಗಿದೆ. ಏಕೆಂದರೆ ಜನಪದರು ಸಾಮುದಾಯಿಕ ನೆಲೆಯಲ್ಲಿ ಐತಿಹಾಸಿಕ ಸಂಗತಿಗಳನ್ನು ಕಾಲಕಾಲಕ್ಕೆ ನಿರಂತರವಾಗಿ ತಮ್ಮದೊಂದಿಗೆ ತಂದುಕೊಂಡಿರುತ್ತಾರೆ. ಹಾಗಾಗಿ ಯಾವುದೇ ವ್ಯಕ್ತಿಯಾಗಿರಬಹುದು, ಸ್ಥಳ ಆಗಿರಬಹುದು, ಇವುಗಳನ್ನೆಲ್ಲ ಐತಿಹಾಸಿಕವಾಗಿ ನೋಡದೆ ತಮ್ಮದೊಂದಿಗೆ ಜೀವಂತಿಕೆಯ ಅಂಶಗಳಾಗಿ ನೋಡಿರುತ್ತಾರೆ. “ಜನಪದರೇ ಆಗಲಿ ಶಿಷ್ಟ ಕವಿಗಳೇ ಆಗಲಿ, ಇತಿಹಾಸವನ್ನು ಅಥವಾ ಕಳೆದ ಘಟನೆಗಳನ್ನು ಶತಮಾನಗಳ ಹಿಂದೆ ಘಟಿಸಿ ಹೋದದು ಎಂದು ಪರಿಭಾವಿಸುವುದಿಲ್ಲ. ಅದು ಕಣ್ಣ ಮುಂದೆ ನಡೆದಿರುವ, ನಡೆಯುತ್ತಿರುವ ಸಂಗತಿ ಎಂದು ಗ್ರಹಿಸುವುದುಂಟು”[೧೮] ಹಾಗಾಗಿ ಜನಪದ ಸಾಹಿತ್ಯವು ಮಾನವನ ಬದುಕಿನ ಕತೆಯನ್ನು ನಿರೂಪಿಸಿದರೂ ಅದರ ಉದ್ದೇಶ ಇತಹಾಸಕ್ಕಿಂತ ಭಿನ್ನವಾದುದು. ಮಾನವ ತನ್ನ ಬದುಕಿನಲ್ಲಿ ಕಂಡು ಕೇಳಿದ ಅನುಭವಿಸಿದ ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ಇನ್ನೊಬ್ಬರ ಮನಮುಟ್ಟುವಂತೆ ಜನಪದ ಸಾಹಿತ್ಯ ಹೇಳುತ್ತದೆ. ಹಾಗಾಗಿ ಜನಪದರು ಹನ್ನೊಂದನೆಯ ಶತಮಾನದ ಬಸವಣ್ಣರಾಗಲಿ, ೧೫ನೇ ಶತಮಾನದ ಮಂಟೇಸ್ವಾಮಿಯಾಗಲಿ, ಬೇರೆ–ಬೇರೆ ಕಾಲದವರು ಎಂದು ತಿಳಿಯದಿಲ್ಲ. ಜನಪದರಿಗೆ ಕಾಲ, ಸನ್ನಿವೇಶ, ಸ್ಥಳ ಇವೆಲ್ಲವೂ ತುಂಬ ಹತ್ತಿರದಲ್ಲಿ ಇರುತ್ತವೆ. ಅವು ಎಂದಿಗೂ ಪರಸ್ಪರ ದೂರದ ಸಂಗತಿಗಳಾಗುವುದಿಲ್ಲ. ಇತಿಹಾಸವಾಗಲೀ, ಪುರಾಣ ಸಂಗತಿಯಾಗಲಿ, ದೈವ ಸ್ವರೂಪವಾಗಲಿ, ಜನಪದರಿಗೆ ಅಮೂರ್ತ ರೂಪಗಳಾಗದೇ ಕಣ್ಣ ಮುಂದಿನ ವಿವರಗಳಾಗುತ್ತವೆ. ಈ ಅರ್ಥದಲ್ಲಿ ಜನಪದರು ಇತಿಹಾಸದ ಘಟನೆಗಳನ್ನು ಅವರ ಆಯುಧಗಳನ್ನು ರಕ್ಷಿಸುವುದರ ಮೂಲಕ, ವೀರಗಲ್ಲು ಕಥನ ಗೀತೆಗಳು, ಆಚರಣೆಗಳ ಮೂಲಕ, ಜಾತ್ರೆ ಹಬ್ಬಗಳ ರೂಪದಲ್ಲಿ ಕೊನೆಗೆ ಅದೇ ವೀರರ ನಂತರ ಹೆಸರನ್ನೂ ಒಂದು ಸಮೂಹದಲ್ಲಿ ಇಟ್ಟುಕೊಳ್ಳುವುದರ ಮೂಲಕ ಇತಿಹಾಸವನ್ನು ಉಳಿಸಿಕೊಳ್ಳುತ್ತ ಹೋಗುತ್ತದೆ.

“ಮಲೆಮಹದೇಶ್ವರ, ಮಂಟೇಸ್ವಾಮಿ, ಸಿದ್ದಪ್ಪಾಜಿ, ತಿಪ್ಪೆಸ್ವಾಮಿ ಈ ಬಗೆಯ ಸಂತರ ಅಥವಾ ಯಾವುದೇ ವೀರರ ಹೆಸರಿನಲ್ಲಿ ಜನಪದರು ತಮ್ಮನ್ನು ಗುರುತಿಸಿಕೊಳ್ಳುವುದು ಅದರ ಹಿಂದೆ ಒಂದು ಐತಿಹಾಸಿಕ ಸಂಕಥನವೇ ಆಗಿರುತ್ತದೆಂದು ಪರಿಭಾಪಿಸಬೇಕಾಗುತ್ತದೆ. ಈ ಬಗೆಯಲ್ಲಿ ಕೇವಲ ಶಿಷ್ಟ ಜಗತ್ತಲ್ಲದೇ ಜನಪದರೂ ಕೂಡ ತಮ್ಮದೇ ಆದ ಒಂದು ಇತಿಹಾಸವನ್ನೂ ಕಾಪಾಡಿಕೊಂಡು ಬಂದಿರುತ್ತಾರೆ. ಆದರೆ ಹಾಗೆ ಜನಪದರು ಕಾಪಾಡಿಕೊಂಡು ಬಂದಿರುವ ಇತಿಹಾಸಕ್ಕೂ ಶಿಷ್ಟರು ಹಾಡಿಕೊಂಡು ಬಂದಿರುವ ಚರಿತ್ರೆಗೂ ಕೆಲವು ವ್ಯಾತ್ಯಾಸಗಳಿವೆ”[೧೯] ಇತಿಹಾಸಕ್ಕೆ ವಸ್ತುವಾಗುವ

ಅನೇಕ ವಿಚಾರಗಳು ಜನಪದ ಸಾಹಿತ್ಯದ ಒಂದು ಅಂಗವಾಗಿರುವ ಜನಪದ ಗೀತೆಗಳಲ್ಲಿ ಕಂಡುಬಂದರೂ ಆ ವಿಚಾರಗಳನ್ನು ತಳಮಟ್ಟ ಶೋಧಿಸುವ ಅದರ ಸತ್ಯಾಂಶಗಳನ್ನು ನೋಡುವ ಉದ್ದೇಶ ಅದಕ್ಕಿಲ್ಲ. ಅದೇನಿದ್ದರೂ ಐತಿಹಾಸಿಕ ವಿಚಾರಗಳನ್ನೂ ಅವುಗಳ ಮೇಲ್ಪದರದಲ್ಲಿ ಮಾತ್ರ ಅವಲೋಕಿಸುವಂತದ್ದು. ಇಲ್ಲಿ ನಿರೂಪಿತವಾಗುವ ಎಷ್ಟೋ ವಿಚಾರಗಳು ಅಂದರೆ ಇತಿಹಾಸದ ಒಂದು ಭಾಗವಾಗಿರುವ ಇತಿಹಾಸದ ಸ್ಪರ್ಷ ಪಡೆದುಕೊಂಡಿರುವ ವಿಚಾರಗಳು ಇತಿಹಾಸ ಸಂಶೋಧಕನಿಗೆ ನೆರವಾಗುತ್ತವೆ. ಇವುಗಳು ಸಾಮಗ್ರಿಯಾಗಬಲ್ಲವೇ ಹೊರತು ಅದೇ ಪೂರ್ಣಪ್ರಮಾಣದಲ್ಲಿ ಐತಿಹಾಸಿಕ ಸತ್ಯಗಳಾಗಲಾರವು, ಆಧಾರಗಳಗಲಾರವು. ಜನಪದ ಸಾಹಿತ್ಯವು ಅನೇಕ ಶತಮಾನಗಳಿಂದ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕಂಠಸ್ಥ ಸಂಪ್ರದಾಯದ ರೂಪದಲ್ಲಿ ಸರಿದುಕೊಂಡು ಬಂದಿರುವಂತದ್ದು. ಜನಪದ ಗೀತೆಗಳ ನಿಜವಾದ ಕರ್ತೃ ಯಾರು ಅಲ್ಲ. ಅದರಲ್ಲಿ ಅಡಕವಾಗಿರುವುದು ಸಾಮೂಹಿಕ ಭಾವನೆಗಳು ಸಮೂಹದ ಚಿಂತನೆಗಳು ಸಮಾಜದ ಎಲ್ಲರದ್ದು ಆಗಬಹುದಾದ ಸಾಮಾನ್ಯ ಅನುಭವಗಳಿವೆ. ಇದು ಜನರ ನೆನಪಿನ ಶಕ್ತಿ ಮತ್ತು ಪುನರುಚ್ಚರಿಸುವುದರ ಸಾಮರ್ಥ್ಯ ಮೇಲೆ ಉಳಿದುಕೊಂಡಿರುವಂತಹುದು. ಇಂತಹ ಹಲವು ಐತಿಹಾಸಿಕ ಸಂಗತಿಗಳು ಜನಪದಗೀತೆಗಳಲ್ಲಿ ಅಡಕಗೊಂಡಿರುತ್ತವೆ. ಅಲ್ಲದೇ, ಕಥೆ, ಗಾದೆ, ಒಗಟು, ಐತಿಹ್ಯ, ಪುರಾಣ, ಸಂಪ್ರದಾಯ ನಂಬಿಕೆ ಮೊದಲಾದ ಜಾನಪದ ಪ್ರಕಾರಗಳಲ್ಲಿ ಐತಿಹಾಸಿಕ ಅಂಶಗಳನ್ನು ಕಾಣಬಹುದು.

ಉಪಸಂಹಾರ

ಯಾವುದೇ ದೇಶದ ಭಾಷೆಯ ಸಾಹಿತ್ಯ ಸಂಸ್ಕೃತಿ ಜಾನಪದ ಸಂಶೋಧನಾ ವಿಧಾನ ಬದಲಾಗುವುದು ಬದಲಾಗುತ್ತಿರುವುದು ಸಹಜ ಮತ್ತು ಅಧ್ಯಯನದ ಶೀಲರು ಒಪ್ಪಿಕೊಳ್ಳಬೇಕಾಗುವ ಪ್ರಕ್ರಿಯೆ. ಕನ್ನಡ ಅಥವಾ ಇತರೆ ಯಾವುದೇ ಪ್ರದೇಶಿಕ ಭಾಷಾ ಜಾನಪದಗಳ ಸಂಗ್ರಹ ಸಂಶೋಧನೆಯ ವಿಧಿ ವಿಧಾನ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಈ ಶತಮಾನದ ಆರಂಭದ ದಶಕಗಳಲ್ಲಿ ಪ್ರಾರಂಭಗೊಂಡ ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂಬ ನೆಲೆಯಲ್ಲಿ ಗುರುತಿಸುವುದಾದರೂ ಮೊದಲೆಲ್ಲ ಸಂಗ್ರಹಗೊಂಡದೂ ಜನಪದ ಗೀತೆಗಳ ಮಾತ್ರ. ಸಮಾಗ್ರವಾಗಿ ಜನಪದ ಬದುಕನ್ನು ಶೋಧಿಸುವ ಕಾರ್ಯ ತುಂಬ ಆಧುನಿಕ ಆಲೋಚನೆ. ಅದು ಬದಲಾಗುತ್ತಾ ಬಂದ ಅಧ್ಯಯನ ಶಿಸ್ತಿನ ಕೊಡುಗೆ. ಈಗಿನ ಬಹುಮುಖ ವಿಧಾನಗಳಿಂದ ಜಾನಪದ ಜಗತ್ತಿನ್ನೂ ಸಂಗ್ರಹ ಮಾಡಲು ಸಾಧ್ಯವಾಗಿದೆ. ಅದುದರಿಂದ ಸಂಧೋಧನೆಗಳು ನವೀನ ಗ್ರಹಿಕೆಯಿಂದ ವೈಶಿಷ್ಟ್ಯಪೂರ್ಣವಾದ ವಿಶಾಲವಾದ ಒಳ ನೋಟಗಳನ್ನು ಬಿಂಬಿಸುವಂತಾಗಿದೆ. ಆದರೆ ಮೊದಲ ಘಟ್ಟದ ಜಾನಪದ ಸಂಗ್ರಹ ಕಾರ್ಯಗಳಿಗೆ ಅದರದ್ದೇ ಆದ ಮಹತ್ವವಿದೆ. ಭಿನ್ನತೆಯಲ್ಲಿ ಏಕತೆಯಲ್ಲಿ ಗುರುತಿಸಲಾಗುವ ಇಡಿಯಾದ ಸಂಸ್ಕೃತಿಯಲ್ಲಿ ವಿಶಿಷ್ಟವಾಗಿ ಕಂಡುಬರುವ ಪ್ರಾದೇಶಿಕ

ಬದುಕಿಗೆ ಅದು ಒಳಗೊಂಡಿರುವ ಬದುಕಿನ ರೀತಿ, ನೀತಿ, ನಂಬಿಕೆ, ಆಚಾರ ವಿಚಾರ ಪದ್ಧಗಳಿಗೆ ಸಾಹಿತ್ಯ ಮುಂತಾದ ಸೃಜನಶೀಲ ವಿಚಾರಗಳಿಗೆ ಪ್ರಾತಿನಿದ್ಯವಿದೆ. ಬೇರೆ ಜೊತೆ ರಾಜ್ಯ ಪ್ರಾಂತ್ಯ ಜಿಲ್ಲೆಗಳಲ್ಲಿ ವಾಸಿಸುವ ಭಿನ್ನ-ಭಿನ್ನ ಸಂಸ್ಕೃತಿಯ ಜನಾಂಗದ ಬದುಕನ್ನು ಅವರ ನಡುವೆ ಇರುವ ಮೌಖಿಕ ಜಗತ್ತು ಒಳಗೊಂಡು ಜೀವಂತ ಪ್ರಕ್ರಿಯೆಯಾಗುತ್ತದೆ. ಈ ಮೌಖಿಕ ಜಗತ್ತು ಆಯಾಯ ಜನವರ್ಗದ ಪರಂಪರೆಯನ್ನು ಗುರುತಿಸುವ ಉದ್ದೇಶದಲ್ಲಿ ಪ್ರದಾನ ಪಾತ್ರ ವಹಿಸುತ್ತದೆ. ಸಂಗ್ರಹದ ರೀತಿ ವಿಧಾನ ಮತ್ತು ಪರಿಕಲ್ಪನೆಯಲ್ಲಿ ಸೀಮಿತ ಆಲೋಚನೆ ಇದ್ದರೂ, ಮೊದಲ ಘಟ್ಟದ ಜಾನಪದ ಸಂಗ್ರಹ ವಿಶಿಷ್ಟವೆನಿಸುವ ಪ್ರಾದೇಶಿಕ, ಜನಾಂಗಿಯ ಹಿನ್ನೆಲೆಯನ್ನೂ ಪ್ರತಿನಿಧಿಸುವುದರಿಂದ ಆ ಜನ ವರ್ಗದ ಸಂಸ್ಕೃತಿಯನ್ನೂ ಬಿಂಬಿಸುವ ಜಾನಪದ ಸಂಗತಿಗಳನ್ನು ಅವಲೋಕಿಸುವುದು ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅಗತ್ಯವಾದ ಕೆಲಸವಾಗಿದೆ.

ಜನಪದ ಸಾಹಿತ್ಯವನ್ನು ಲಿಖಿತ ಮತ್ತು ಮೌಖಿಕ ಕೃತಿಗಳಲ್ಲಿ ಕಾಣಬಹುದು. ಕಾವ್ಯಗಳು ಆಯಾ ಪ್ರದೇಶದ ಸಾಂಸ್ಕೃತಿಕ ನಾಯಕರ ಮೇಲೆ ಕಾಣಿಸಿಕೊಳ್ಳುತ್ತವೆ. ಆದರೆ ಲಿಖಿತ ಬರೆಹಗಳು ಸಾಂಸ್ಕೃತಿಕ ನಾಯಕರ ಸುತ್ತಲು ಸತ್ಯ ಸತ್ಯತೆಗಳನ್ನು ಎತ್ತಿ ಹಿಡಿಯುತ್ತವೆ. ಜನಪದ ಸಾಹಿತ್ಯ ಬಗೆಗಿನ ಅಧ್ಯಯನಕಾರರ ವ್ಯಾಖ್ಯಾನಗಳ ಮೂಲಕ ಕೆಲವು ವಿವರಗಳನ್ನು ಸಾಹಿತ್ಯ ಪ್ರಧಾನ ಅಧ್ಯಯನಗಳಲ್ಲಿ ಗುರುತಿಸಬಹುದು. ಸಂಶೋಧನೆಯ ಮೂಲಕ ಒಂದು ಪ್ರದೇಶದ ಜನಪದ ಸಂಗ್ರಹದ ಜೊತೆಗೆ ಅವುಗಳ ವಿಶ್ಲೇಷಣಾ ಕಾರ್ಯವನ್ನು ಈ ಅಧ್ಯಯನಗಳು ಮಾಡಿವೆ. ಗದ್ದಗೀಮಠ ಅವರನ್ನು ಬಿಟ್ಟು ಉಳಿದ ಅಧ್ಯಯನಕಾರರಲ್ಲಿ ಈ ಬಗೆಯ ಮಾದರಿಗಳನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು

೧. ದೇಜಗೌ, ಜಾನಪದ ಅಧ್ಯಯನ, ಪು, ೩೭

೨. ಪರಮಶಿವಯ್ಯ.ಜೀ.ಶಂ, ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು, ೧೦೫

೩. ಪೋತೆ.ಎಚ್.ಟಿ, ಜಾನಪದ ಆಯಾಮಗಳು, ಪು.೨೩೮

೪. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಪು, ೧೧೧

೫. ಬಿ.ಎಸ್.ಗದ್ದಗೀಮಠ, ಕನ್ನಡ ಜಾನಪದ ಗೀತೆಗಳು, ಪು, ೧೨,೧೩

೬. ಪರಮಶಿವಯ್ಯ.ಜೀ.ಶಂ, ಪೂರ್ವೋಕ್ತ, ೩೪

೭. ಅದೇ, ಪು, ೮೮

೮. ವಿವೇಕ ರೈ.ಬಿ.ಎ, ತುಳು ಜನಪದ ಸಾಹಿತ್ಯ, ಪ್ರಸ್ತಾವನೆ

೯. ನಾವಡ.ಎ.ವಿ. ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಪು. ೧೯೩

೧೦. ವಿವೇಕ ರೈ.ಬಿ.ಎ. ಪೂರ್ವೋಕ್ತ, ಪು. ೫

೧೧. ಅದೇ, ಪು, ೩೧

೧೨. ನಾವಡ.ಎ.ವಿ, ಸುಭಾಶ್ಚಂದ್ರ(ಅನು), ತುಳುವ ದರ್ಶನ, ಪು, ೩೫

೧೩. ಅದೇ, ಪು, ೪೨

೧೪. ವಿವೇಕ ರೈ.ಬಿ.ಎ, ಪೂರ್ವೋಕ್ತ, ಪು, ೨೩೭

೧೫. ಪರಮಶಿವಯ್ಯ.ಜೀ.ಶಂ, ಕನ್ನಡ ಜನಪದ ಕಥೆಗಳು, ಪ್ರಸ್ತಾವನೆ

೧೬. ಗೌರೀಶ.ಪಿ(ಸಂ), ಜಾನಪದ, ಪು, ೬೧

೧೭. ನಾವಡ.ಎ.ವಿ, ಕರ್ನಾಟಕ ಸಂಶೋಧನಾ ಜಾನಪದ, ಪು, ೮೩೭

೧೮. ಕೃಷ್ಣಮೂರ್ತಿ ಹನೂರು, ಐತಿಹಾಸಿಕ ಕಥನಗೀತೆಗಳು, ಪು, ೨೯

೧೯. ಅದೇ, ಪು, ೨೯

ಅಧ್ಯಾಯ : ಆರು
ಸಮುದಾಯ ಪ್ರಧಾನ ಅಧ್ಯಯನಗಳು

೬.೧.ಸಮುದಾಯಗಳ ಅಧ್ಯಯನದ ಹಿಂದಿನ ಉದ್ದೇಶ
೬.೨.ಜಾನಪದ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ: ಅಂತರ್ ಸಂಬಂಧ
೬.೩.ಸಮುದಾಯ ಕೇಂದ್ರಿತ ಅಧ್ಯಯನಗಳ ವಿಶ್ಲೇಷಣೆ

ಅಧ್ಯಾಯ : ಆರು

ಸಮುದಾಯ ಪ್ರಧಾನ ಅಧ್ಯಯನಗಳು

ಪ್ರಸ್ತಾವನೆ

ಭಾರತದಲ್ಲಿ ಸಮುದಾಯ ಅಧ್ಯಯನಗಳ ಪರಿಕಲ್ಪನೆಯನ್ನು ಬ್ರಿಟಿಷರು ಹುಟ್ಟುಹಾಕಿದರು. ಸ್ಥಳೀಯ ಚರಿತ್ರೆಯನ್ನು ಗ್ರೀಕ್‌ರು ಆದಿಯಾಗಿ, ಪೋರ್ಚ್‌ಗೀಸ್, ಡಚ್ಚರು, ಸಹ ಅಧ್ಯಯನ ಮಾಡಿದ್ದಾರೆ. ಬ್ರಿಟಿಷರು ಇಲ್ಲಿನ ಜನಾಂಗ, ಧರ್ಮ, ಭಾಷೆ, ಕಲೆ, ಸಂಸ್ಕೃತಿಯನ್ನು ಭಾರತೀಯ ಬುಡಕಟ್ಟುಗಳನ್ನು ಅಧ್ಯಯನ ಮಾಡುವುದರ ಮೂಲಕ ಗ್ರಹಿಸಿದರು. ಬ್ರಿಟಿಷರು ಇಲ್ಲಿನ ಮಣ್ಣಿನ ಗುಣದ ಹಲವು ತಿಳುವಳಿಕೆಯನ್ನು ಪರಿಚಯಾತ್ಮಕವಾಗಿ ನೋಡುವ ಮನೋಭಾವನೆ ಬೆಳೆಸಿಕೊಂಡಿದ್ದರು. ಹಾಗಾಗಿ ಆರಂಭ ಕಾಲಘಟ್ಟದಲ್ಲಿ ಬ್ರಿಟಿಷರ ಪಾದ್ರಿಯಾಗಿ ಬಂದ ಅನೇಕ ಮಿಷನರಿಗಳು ಪ್ರಮುಖ ಪಾತ್ರವಹಿಸಿದ್ದರು. ಅವರಲ್ಲಿ 'ವೆರಿಯರ್ ಎಲ್ವಿನ್' ಮುಖ್ಯರಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಭಾರತದ ಮಧ್ಯವಲಯ ಹಾಗೂ ಈಶಾನ್ಯ ವಲಯದ ಬುಡಕಟ್ಟುಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಅದರಲ್ಲಿಯೂ ಮಧ್ಯವಲಯಕ್ಕೆ ಸೇರಿದ ಬುಡಕಟ್ಟುಗಳ ಬಗ್ಗೆ ಇವರು ಮಾಡಿರುವ ಕೆಲಸ ಹೆಚ್ಚು. ಮೇರಿಯಾ, ಮುರಿಯಾ, ಸವೋರಾ, ಅಗೇರಿಯಾ, ಬೈಗಾ, ಬೊಂಡೋ ಈ ಬುಡಕಟ್ಟುಗಳ ಬಗ್ಗೆ ಒಂದೊಂದು ಕೃತಿಯನ್ನು ಪ್ರಕಟಿಸಿದ್ದಾರೆ. ಹೀಗೆ ಎಲ್ವಿನ್ ಅವರು ಮಾನವ ವಿಜ್ಞಾನದಲ್ಲಿ ವಿಭಿನ್ನ ದೃಷ್ಟಿಕೋನವನ್ನು ಹೊಂದಿದ್ದರು. ಇವರಿಗೆ ಗಿರಿಜನರು ಕೇವಲ ಸಂಶೋಧನೆಯ ವಸ್ತು ಮಾತ್ರವಾಗಿರದೆ ತಮ್ಮ ಜೀವನದ ಅವಿಭಾಜ್ಯವಾದ ಒಂದು ಅಂಗವಾಗಿದ್ದರು. ಗಿರಿಜನರ ಜನಜೀವನದ ಅಧ್ಯಯನ, ಸಂಶೋಧನೆ ಹಾಗೂ ಅಭಿವೃದ್ಧಿಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಣೆ ಮಾಡಿಕೊಂಡಿದ್ದರು.

ಕರ್ನಾಟಕದಲ್ಲಿ ಸಮುದಾಯಗಳ ಅಥವಾ ಬುಡಕಟ್ಟುಗಳ ಅಧ್ಯಯನವು ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಚಾರಿಯವರ ಅಧ್ಯಯನಗಳ ಮುಖಾಂತರ ಪ್ರಾರಂಭಗೊಂಡವು. "ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದೆರನ್ ಇಂಡಿಯಾ"(೧೯೦೯) ಎಂಬ ಏಳು ಸಂಪುಟಗಳಲ್ಲಿ ಕರ್ನಾಟಕದ ಬುಡಕಟ್ಟು ಸಮುದಾಯಗಳ ಆಚರಣೆ, ಸಂಪ್ರದಾಯ, ಸಾಹಿತ್ಯ, ಕುಲಮೂಲ ನೆಲೆಗಳನ್ನು ಪರಿಚಯಾತ್ಮಕವಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ೧೯೩೫ರಲ್ಲಿ ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರ "ದಿ ಮೈಸೂರು

ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್" ಶೀರ್ಷಿಕೆಯ ನಾಲ್ಕು ಸಂಪುಟ ತಂದರು. ವೈಜ್ಞಾನಿಕವಾಗಿ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕ ಜೀವನವನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ೧೯೫೫ರಲ್ಲಿ ಮೈಸೂರು ರಾಜ್ಯದ ವಾರ್ತಾ ಇಲಾಖೆ ಪ್ರಕಟಿಸಿದ ಸಂಪುಟದಲ್ಲಿ ಡಿ.ಕೃಷ್ಣ ಅಯ್ಯರ್ ಅವರು "ಕನ್ನಡ ನಾಡಿನ ಆದಿವಾಸಿಗಳು" ಎಂದು ಲೇಖನ ಬರೆದಿದ್ದಾರೆ. ಬುಡಕಟ್ಟುಗಳ ಕುರಿತಾದ ಮೊದಲ ಲೇಖನ ಇದು. ೧೯೭೬ರಲ್ಲಿ ಕರ್ನಾಟಕದ ಸಿದ್ಧಿಯರ ಬಗ್ಗೆ ಇಂಗ್ಲಿಷ್ ಕೃತಿ ರಚಿಸಿದ್ದಾರೆ. ವಸಾಹತುಕಾಲದಲ್ಲಿ ಕರ್ನಾಟಕದ ಪ್ರಾರಂಭದ ಅಧ್ಯಯನಗಳು ಬುಡಕಟ್ಟುಗಳನ್ನು ಸಾಮಾಜಿಕವಾಗಿ ಮತ್ತು ಮಾನವಶಾಸ್ತ್ರೀಯ ನೆಲೆಯಲ್ಲಿ ನೋಡಿದ್ದವು.

ಜಾನಪದ ಅಧ್ಯಯನದ ಸಂದರ್ಭದಲ್ಲಿ ಸಮುದಾಯವನ್ನು ಜಾಗತಿಕ ಜ್ಞಾನಶಿಸ್ತಾಗಿ ಪರಿಭಾವಿಸಿ ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸಲಾಯಿತು. ವಸಾಹತುಶಾಹಿ ಸಂದರ್ಭದ ಆಡಳಿತಗಾರರು, ಮಿಶನರಿಗಳು ತಮ್ಮದಲ್ಲದ ಹೊರಗಿನ ಸಮಾಜವನ್ನು ಅಧ್ಯಯನ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಅವರು ಮಾಡಿದ 'ಎಥ್ನೋಗ್ರಫಿ' ಮೂಲದ ಮಾಹಿತಿಗಳು ಆರಂಭ ಕಾಲದ ನಮ್ಮ ಜಾನಪದ ವಿದ್ವಾಂಸರಿಗೆ ಮೂಲ ಆಕರ-ಪರಿಕರಗಳಾದವು. ನಾಗರೀಕರಾದ ನಾವು ಅನಾಗರೀಕರನ್ನು ಕುರಿತು ದೊರೆವ ಮಾಹಿತಿಗಳನ್ನು ಅಕ್ಷರದಲ್ಲಿ ಹಿಡಿದಿಡುವುದು, ಕೈಗಾರಿಕಾ ಕ್ರಾಂತಿ ಹಾಗೂ ಆಧುನಿಕ ವಿದ್ಯಮಾನಗಳಿಂದ ಮರೆಯಾಗುತ್ತಿರುವ ಸ್ಥಳೀಯ ಜ್ಞಾನಪರಂಪರೆಯನ್ನು ಸಂಗ್ರಹಿಸುವುದು ಜಾನಪದ ಅಧ್ಯಯನದ ಮುಖ್ಯಕಾರ್ಯವಾಗಿದೆ.

ವಸಾಹತುಶಾಹಿನಂತರ ಜಾನಪದವು ಮಾನವಶಾಸ್ತ್ರೀಯ ಶಾಖೆಯಲ್ಲಿ ಒಂದಾಗಿ ಬರುವುದರಿಂದ ಸಾಂಸ್ಕೃತಿಕ ಮಾನವಶಾಸ್ತ್ರ ಸಿದ್ಧಾಂತಗಳ ಮೂಲಕ ಸಮುದಾಯಗಳ ಅಧ್ಯಯನಗಳು ಶುರುವಾದವು. ಕನ್ನಡದಲ್ಲಿ ಸಮುದಾಯ ಅಧ್ಯಯನವೆಂದರೆ ಹವ್ಯಾಸಿ, ಬರಹ, ನಿಘಂಟು, ಕಾವ್ಯ, ಸಂಪಾದನೆ, ಸಂಗ್ರಹ, ದಾಖಲೀಕರಣ, ವಿವಿಧ ಅಕಾಡೆಮಿ ಯೋಜನೆ, ಮತ್ತು ಪದವಿಗಾಗಿ ಮಾಡಿದ ಅಧ್ಯಯನಗಳು ಗಮನಾರ್ಹ ಎನಿಸಿವೆ. ಸಮುದಾಯ ಅಧ್ಯಯನದಲ್ಲಿ ಅನೇಕ ಜ್ಞಾನಶಿಸ್ತು ಪರಿಕಲ್ಪನೆ ಕಾಣಬಹುದು. ಸಾಂಸ್ಕೃತಿಕತೆ, ಸಾಮಾಜಿಕ, ಮಾನವಶಾಸ್ತ್ರ, ಮಹಿಳಾ ಅಧ್ಯಯನ, ಭಾಷಿಕ ಅಧ್ಯಯನ, ಸಮಾಜೋ ಮತ್ತು ಸಾಂಸ್ಕೃತಿಕ ಇತ್ಯಾದಿ ಪರಿಕಲ್ಪನೆಗಳಲ್ಲಿ ಸಮುದಾಯ ಅಧ್ಯಯನಗಳನ್ನು ಹುಟ್ಟು ಹಾಕಿರುವುದನ್ನು ನೋಡಬಹುದು.

ಕನ್ನಡ-ಕರ್ನಾಟಕ-ಸಂದರ್ಭದಲ್ಲಿ ಹವ್ಯಾಸಿ ಸಂಸ್ಕೃತಿ ಸಂಶೋಧಕರು ಹುಟ್ಟಿಕೊಳ್ಳುತ್ತಾರೆ. ಮುಖ್ಯವಾಗಿ ಶಂಬಾ ಜೋಶಿ, ಎಸ್.ಎಸ್.ಹಿರೇಮಠ, ತೀ.ನಂ.ಶಂಕರನಾರಾಯಣ, ಬರಗೂರು ರಾಮಚಂದ್ರಪ್ಪ, ಕೃಷ್ಣಮೂರ್ತಿ ಹನೂರು, ಹಿ.ಚಿ.ಬೋರಲಿಂಗಯ್ಯ, ಇತ್ಯಾದಿಯಾಗಿ ಗಮನಿಸಬಹುದು. ಶಂಬಾಜೋಶಿರವರ ಕನ್ನಡ-ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದ ಆರು ಸಂಪುಟಗಳಲ್ಲಿ ಜನಾಂಗದ ಶೋಧನೆಗಳು ಕಾಣಿಸಿಕೊಳ್ಳುತ್ತವೆ. ಕುರುಬರು ಮಲೆಯರೂ. ಗೊಲ್ಲರೂ ಹೊಲೆಯರು ಮತ್ತು

ಕುರುಬರು, ಹಳಬರು,(ಹಳಪೈಕರು) ಸಮುದಾಯಗಳ ಸಂಸ್ಕೃತಿಯನ್ನು ಪ್ರಾದೇಶಿಕವಾಗಿ ಕಟ್ಟಿಕೊಡುತ್ತಾರೆ. ಹಟ್ಟಿಕಾರ, ದನಗಾರರು ಸಮುದಾಯಗಳನ್ನು ಚರ್ಚೆಮಾಡಿದ್ದಾರೆ. ಜೊತೆಗೆ ಹಾಲುಮತ ದರ್ಶನ ಸಂಪುಟ ಹುಟ್ಟಿಹಾಕುತ್ತಾರೆ. ಎಸ್.ಎಸ್.ಹಿರೆಮಠರು ಹಬ್ಬಗಳು ಮತ್ತು ಜಾತ್ರೆಗಳ ಅಧ್ಯಯನದ ಜೊತೆಗೆ ಅನೇಕ ಕುಲಕಸುಬುಗಳ ಸಮುದಾಯಗಳನ್ನು ಗುರುತಿಸಿದ್ದಾರೆ. ಎಸ್.ಎಸ್.ಹೀರೆಮಠ ಅವರು ಕುರುಬ, ಬೇಡ, ಗೊಲ್ಲ, ಕೊರಚ, ಹೊಲೆಯ, ಮಾದಿಗ ಇತ್ಯಾದಿ ಸಮುದಾಯಗಳನ್ನು ಗುರುತಿಸುತ್ತಾರೆ. ಕನ್ನಡ ಸಂಸ್ಕೃತಿ ಚಿಂತಕರಾದ ಬರಗೂರು ರಾಮಚಂದ್ರಪ್ಪ ಅವರು ನೆಲಮೂಲ ಸಂಸ್ಕೃತಿಯಲ್ಲಿ ಅನೇಕ ತಳಸಂಸ್ಕೃತಿಯ ಸಮುದಾಯಗಳನ್ನು ಗುರುತಿಸುತ್ತಾರೆ. ಸಿಂಧೊಳ್, ಕಪ್ಪುಹೊಲೆಯ ಇತ್ಯಾದಿ ಸಮುದಾಯಗಳನ್ನು ಗುರುತಿಸುತ್ತಾರೆ. ಕನ್ನಡ ಅಧ್ಯಯನ ಸಂದರ್ಭದಲ್ಲಿ ರಹಮತ್ ತರೀಕೆರೆ ಅವರು ಪ್ರತಿಸಂಸ್ಕೃತಿ ಹುಟ್ಟು ಹಾಕಿದ್ದಾರೆ. ರಹಮತ್ ತರೀಕೆರೆ ಅವರು ಅಲಕ್ಷಿತ ಸಮುದಾಯಗಳ ಚಹರೆ ಮತ್ತು ಕುರುಹುಗಳನ್ನು ಹಬ್ಬ, ಜಾತ್ರೆ, ಆಚರಣೆ, ಸಂಪ್ರದಾಯ, ನಂಬಿಕೆ, ಇತ್ಯಾದಿ ನೆಲೆಯಲ್ಲಿ ಗುರುತಿಸಿದ್ದಾರೆ. ಹೀಗೆ ಕನ್ನಡ ಸಂದರ್ಭದಲ್ಲಿ ಸುಮುದಾಯಗಳ ಕುರಿತು ಅನೇಕರು ಸಂಸ್ಕೃತಿ ಚಿಂತನೆಯಾಗಿ ರೂಪಿಸಿ ನೋಡಿದ್ದಾರೆ. ಇನ್ನೂ ಕೆಲವು ವಿದ್ವಾಸರು ಸಮುದಾಯಗಳನ್ನೆ ಪ್ರಾತಿನಿಧಿಕವಾಗಿಟ್ಟುಕೊಂಡು ಜಾನಪದೀಯ ನೆಲೆಯಲ್ಲಿ ಸಮುದಾಯಗಳನ್ನು ದೃಷ್ಟಿಕರಿಸಿದ್ದಾರೆ. ಅವರಲ್ಲಿ ಮುಖ್ಯವಾಗಿ ನೋಡುವುದಾದರೆ, ತೀ.ನಂ.ಶಂಕರನಾರಾಯಣ, ಕೃಷ್ಣಮೂರ್ತಿ ಹನೂರು, ಪಿ.ಕೆ.ಖಂಡೋಬ, ಕಾಳೇಗೌಡ ನಾಗವಾರ, ಮುಂತಾದವರು ಸಮುದಾಯಗಳನ್ನು ಕುರಿತು ಜಾನಪದದ ಹಿನ್ನೆಲೆಯಲ್ಲಿ ಸಂಶೋಧನ ಮಾಡಿದ್ದಾರೆ. ೧೯೯೧ರಲ್ಲಿ ಹೊರಬಂದ 'ಕರ್ನಾಟಕದ ಲಂಬಾಣಿಗಳು–ಒಂದು ಸಾಂಸ್ಕೃತಿಕ ಅಧ್ಯಯನ' ಪಿ.ಕೆ.ಖಂಡೋಬ ಅವರ ಮಹಾಪ್ರಬಂಧವಾಗಿದೆ. ಬುಡಕಟ್ಟುಗಳನ್ನು ಕುರಿತು ನಡೆಸುತ್ತಿರುವ ಅಧ್ಯಯನಗಳಲ್ಲಿ ಗಮನಾರ್ಹವಾದುದು. ಒಟ್ಟು ಆರು ಅಧ್ಯಾಯಗಳಲ್ಲಿ ಹರಡಿರುವ ಲಂಬಾಣಿಯ ಸಂಸ್ಕೃತಿಯ ಅಧ್ಯಯನ ಸಮರ್ಪಕವಾಗಿ, ಸಮರ್ಥವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ವಿಶಿಷ್ಟ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಲಂಬಾಣಿಗಳ ಬದುಕನ್ನು ಅರ್ಥೈಸಿದ್ದಾರೆ. ಹೀಗೆ ಎಪ್ಪತ್ತರ ದಶಕದಲ್ಲಿ ಬುಡಕಟ್ಟುಗಳನ್ನು ಸಮಗ್ರವಾಗಿ ದಾಖಲಿಸುವ ಪ್ರಕ್ರಿಯೆಗಳು ನಡೆದವು. ಅಂತಹ ಸಂಶೋಧನಾ ಪ್ರಬಂಧಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೇ ಸಮುದಾಯಗಳು ಮಾನವಶಾಸ್ತ್ರದಲ್ಲಿ ಒಳಗೊಳ್ಳುವ ಬಗೆ ಹಾಗೂ ಸಮುದಾಯಗಳ ಅಧ್ಯಯದ ಉದ್ದೇಶವನ್ನು ಕೂಡ ಈ ಅಧ್ಯಾಯದಲ್ಲಿ ನೋಡಲಾಗಿದೆ.

೬.೧. ಸಮುದಾಯಗಳ ಅಧ್ಯಯನದ ಹಿಂದಿನ ಉದ್ದೇಶ

ಸಮಾಜದ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ, ಬುಡಕಟ್ಟುಗಳಿಗೆ ಸೇರಿದ ಸಮುದಾಯಗಳು ಸಾಂಸ್ಕೃತಿಕವಾಗಿ ತಮ್ಮ ಪರಂಪರೆಗಳನ್ನು ಕಟ್ಟಿಕೊಳ್ಳಬೇಕಾಗಿದೆ. ಪ್ರತಿಯೊಂದು ಸಮುದಾಯಕ್ಕೂ ಒಂದು ಮಹತ್ವದ ಇತಿಹಾಸವಿದೆ. ಪ್ರತಿಯೊಂದು ಸಮುದಾಯಗಳಿಗೂ ಸಾಂಸ್ಕೃತಿಕ ಪರಂಪರೆ

ಇದೆ ಎಂಬುದನ್ನು ತೋರಿಸಿಕೊಡಬೇಕಿದೆ. ಪ್ರತಿಯೊಂದು ಸಮುದಾಯವು ಜಾತಿ ವ್ಯವಸ್ಥೆಯ ಮೇಲು-ಕೀಳು ಧೋರಣೆಯಿಂದ ಬೆಳೆಸಿಕೊಂಡ ಕೀಳರಿಮೆಯನ್ನು ಮೀರಿ ತಾವು ಯಾರಿಗಿಂತಲೂ ಕಡಿಮೆಯಲ್ಲ, ಎಲ್ಲ ಸಮುದಾಯಗಳಂತೆಯೇ ತಮ್ಮ ಸಮುದಾಯವು ಸಮಾಜದಲ್ಲಿ ತಲೆಯೆತ್ತಿ ನಿಲ್ಲಬೇಕು, ಒಳ್ಳೆಯ ಜೀವನ ಸಾಗಿಸಬೇಕೆಂಬ ವಿಚಾರಗಳಿಂದ ಮಾನಸಿಕ ಸ್ಥೈರ್ಯವನ್ನು ಗಳಿಸಿಕೊಳ್ಳುವಂತೆ ಮಾಡುವುದು ತಮ್ಮ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ತೋರಿಸುವುದು ಮುಖ್ಯವಾಗುತ್ತದೆ.

ಜಗತ್ತಿನ ಮಟ್ಟದಲ್ಲಿಯೂ ವಸಾಹತುಶಾಹಿಯ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರವಾಗಿರುವ ಏಷ್ಯ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳು ಹಾಗೂ ರಾಷ್ಟ್ರಗಳೊಳಗೆ ಇರುವ ವಿವಿಧ ಸಮುದಾಯಗಳು ತಮ್ಮ-ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಕಟ್ಟಿಕೊಂಡು ಸಾಂಸ್ಕೃತಿಕ ಅನನ್ಯತೆಯನ್ನು ಖಚಿತಪಡಿಸಿರುವುದು ಒಂದು ವಿಶಿಷ್ಟ ಪ್ರಕ್ರಿಯೆಯಾಗಿದೆ. ಇಂತಹ ಸಮುದಾಯಗಳು ಜನಪದ ಮಹಾಕಾವ್ಯಗಳ ಮೂಲಕ ತಮ್ಮ ಅನನ್ಯತೆಯನ್ನು ಕಟ್ಟಿಕೊಂಡಿವೆ. ಜನಪದ ಮಹಾಕಾವ್ಯಗಳು ನಿರ್ದಿಷ್ಟ ಸಮುದಾಯಗಳ ಧಾರ್ಮಿಕ ಪರಂಪರೆಗಳಿಗೆ ಸೇರಿವೆ ಎಂಬ ಕಾರಣಕ್ಕೆ ಇತರ ಮಹಾಕಾವ್ಯಗಳಿಗಿಂತ ಭಿನ್ನವಾಗಿವೆ. ಇವು ತಲೆಮಾರಿನಿಂದ ತಲೆಮಾರಿಗೆ, ಹಾಡುಗಾರರಿಂದ, ಕಥೆಗಾರರಿಂದ ಮೌಖಿಕ ಸಂಪ್ರದಾಯದ ಮೂಲಕ ಮುಂದುವರೆದುಕೊಂಡು ಬಂದಿವೆ. ಇವು ಒಂದು ಸಮುದಾಯದ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನು ಒಳಗೊಂಡಿದ್ದು ಅವುಗಳ ಅನನ್ಯತೆಯ ಅಭಿವ್ಯಕ್ತಿಗಳಾಗಿವೆ. ಕನ್ನಡ ಜಾನಪದ ಅಧ್ಯಯನದಲ್ಲಿ ಕಳೆದ ಮೂರು ದಶಕಗಳಲ್ಲಿ ಒಂದು ಪ್ರಮುಖವಾದ ಬೆಳವಣಿಗೆಯಾಗಿದೆ. ಮೊದಲಿಗೆ ಜಾನಪದದ ವಿವಿಧ ಪ್ರಕಾರಗಳ ಸಂಗ್ರಹ ಅಧ್ಯಯನ ಮತ್ತು ಸಂಶೋಧನೆಗಳು ಪ್ರದೇಶ ಕೇಂದ್ರಿತವಾಗಿದ್ದಂತವು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಕೊಡಗು ಬಯಲು ಸೀಮೆ, ಜಿಲ್ಲೆಗಳು ತಾಲೂಕುಗಳು ಹಾಗೂ ಹಳ್ಳಿಗಳ ಶೀರ್ಷಿಕೆಗಳಲ್ಲಿ ಜಾನಪದ ಸಂಗ್ರಹ ಮತ್ತು ಅಧ್ಯಯನಗಳು ನಡೆಯುತ್ತಿದ್ದವು. ಇವುಗಳಲ್ಲಿ ಬಿಡಿ ಗೀತೆಗಳು, ಕಥನಗೀತೆಗಳು ಕಥೆಗಳು, ಗಾದೆಗಳು, ಒಗಟುಗಳು ಹಾಗೂ ವಿವಿಧ ಕಲಾಪ್ರಕಾರಗಳ ಅಧ್ಯಯನಗಳು ನಡೆಯುತ್ತಿದ್ದವು. ಆದರೆ ಕಳೆದ ಮೂರು ದಶಕಗಳಿಂದೀಚೆಗೆ ಸಮುದಾಯಗಳ ಬಗ್ಗೆ ಮತ್ತು ಸಮುದಾಯ ಕೇಂದ್ರಿತ ಕಥನಗೀತೆಗಳು, ಖಂಡಕಾವ್ಯಗಳು, ಮಹಾಕಾವ್ಯಗಳು ಇವುಗಳ ಬಗ್ಗೆ ಹೆಚ್ಚು ಕೆಲಸ ನಡೆಯುತ್ತಿವೆ.

ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು, ಕಲೆ ರಂಗಭೂಮಿ, ಮುಂತಾದ ಸಾಹಿತ್ಯೇತರ ಅಂಶಗಳು ಜಾನಪದದೊಳಗೆ ಒಳಗೊಳ್ಳುವ ಮಹತ್ವವನ್ನು ಹಾ.ಮಾ.ನಾ ವಿವರಿಸಿದ ಮೇಲೆ ಅನೇಕ ವಿದ್ವಾಂಸರು ಇವುಗಳ ಕಡೆ ಗಮನ ಹರಿಸಿದರು. ಈ ಪ್ರಕಾರಗಳು ಒಂದು ಸಮುದಾಯದ ಒಳಗೆ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಬರುವುದರಿಂದ ಸಮುದಾಯಗಳ ಅಧ್ಯಯನದ ಕಡೆಗೆ ವಾಲಿದರು. ಹಾಗಾಗಿ ೭೦-೮೦ರ ದಶಕದಿಂದ ಇಲ್ಲಿಯವರೆಗೂ ಸಮುದಾಯವನ್ನು ಜಾನಪದೀಯ ಒಂದು

ಅಧ್ಯಯನ, ಗ್ರಾಮದೇವತೆಗಳು, ಜಾನಪದೀಯ ಅಧ್ಯಯನ ಎಂಬ ಲೇಬಲ್(ಸಂಕೇತ)ಗಳ ಮೂಲಕ ಸಮಗ್ರ ಜಾನಪದೀಯ ಅಂಶಗಳನ್ನು ಚರ್ಚಿಸಿದರು. ಸಾಂಸ್ಕೃತಿಕ ಮಾನವ ಶಾಸ್ತ್ರದ ಶಾಖೆಯಲ್ಲಿ ಸಮುದಾಯಗಳ ಜಾನಪದ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿದರು. ಜನಪದವನ್ನು ಮಾನವಿಕ ಶಾಸ್ತ್ರದ ನೆಲೆಯಲ್ಲಿ ಅಧ್ಯಯನ ಮಾಡಲಾಗಿದ್ದು, ಆಧುನಿಕ ಪರಿಸರದ ಸಾಂಸ್ಕೃತಿಕ ಭಾಗವಾಗಿ ನೋಡಲಾಗಿದೆ. ಮಾನವ ಶಾಸ್ತ್ರ, ಭಾಷಾ ವಿಜ್ಞಾನ, ಜಾನಪದ ಇವೆಲ್ಲಾ ನಮ್ಮನ್ನು ಅರ್ಥಮಾಡಿಕೊಳ್ಳುವ ಮುಖ್ಯ ಅಧ್ಯಯನ ಶಿಸ್ತುಗಳಾಗಿವೆ.

೬.೨. ಜಾನಪದ ಮತ್ತು 'ಸಾಂಸ್ಕೃತಿಕ ಮಾನವಶಾಸ್ತ್ರ'ದ ಅಂತರ್‌ಸಂಬಂಧ

ಜಾನಪದವು ಒಂದು ಸ್ವತಂತ್ರವಾದ ಅಧ್ಯಯನ ವಿಷಯವಾಗಿದ್ದರೂ ಅದು ಸಂಸ್ಕೃತಿಯ ಒಂದು ಅಂಗವಾಗಿರುವುದರಿಂದ ಹಾಗೂ ಒಂದು ಜನಪದ ವರ್ಗದ ಮಾನವಕುಲಶಾಸ್ತ್ರಕ್ಕೆ ಸಂಬಂಧಿಸಿದ ಅಂಶಗಳನ್ನು ಅತಿಸೂಕ್ಷ್ಮವಾಗಿ ಪರಿಶೀಲಿಸುವುದರಿಂದ ನಿಜಕ್ಕೂ ಅದೂ ಸಾಂಸ್ಕೃತಿಕ ಮಾನವಶಾಸ್ತ್ರದ ನೇರವಾದ ಸಂಬಂಧವನ್ನಿರಿಸಿಕೊಂಡಿದೆ. ಅದರೂ ಇವೆರಡರಲ್ಲಿ ಪ್ರಮುಖ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದಾಗಿದೆ. ಮಾನವ ಶಾಸ್ತ್ರಕ್ಕೂ ಒಂದು ರೀತಿಯಿಂದ ಶುದ್ಧ ಜನಪದ ಸಂಸ್ಕೃತಿ ಅಥವಾ ಅನಕ್ಷರಸ್ಥ ಸಮಾಜದ ಘಟಕದಲ್ಲಿ ನಿರತ ಅಧ್ಯಯನವನ್ನೂ ಕೈಗೊಂಡರೇ ಅಥವಾ ತನ್ನ ಕಾರ್ಯ ಚಟುವಟಿಕೆಗಳನ್ನು ಸೀಮಿತಗೊಳಿಸಿ ಜಾನಪದ ವಿಜ್ಞಾನ ಕೇಲವು ಶಾಸ್ತ್ರ ಜಾನಪದ ಸಾಹಿತ್ಯದಲ್ಲಿ ಅಂಟಿಕೊಳ್ಳದೇ ತನ್ನ ಕಾರ್ಯಕ್ಷೇತ್ರವನ್ನು ವಿಸ್ತೃತಗೊಳಿಸಿಕೊಂಡು ಸಮಗ್ರ ಮಾನವ ಕುಲದ ವಿವಿಧ ಸ್ತರಗಳನ್ನು ಎತ್ತಿಕೊಂಡು ಅಧ್ಯಯನ ಕೈಗೊಳ್ಳುತ್ತದೆ. ಮಾನವ ವಿಜ್ಞಾನದಲ್ಲಿ ಬುಡಕಟ್ಟುಗಳ ಜೀವನದ ವಿವರಗಳಿಗೆ ಮಹತ್ವಕೊಟ್ಟರೆ, ಜಾನಪದ ಅಧ್ಯಯನದಲ್ಲಿ ಸಾಹಿತ್ಯ ಮತ್ತು ಕಲೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಲಾಗುತ್ತದೆ. ಮಾನವಶಾಸ್ತ್ರ ಇಂತಹ ಹಲವು ಶಾಖೆಗಳನ್ನು ಹೊಂದಿದೆ. ಅದರೊಳಗೆ 'ಜಾನಪದವು' ಒಂದು ಭಾಗವಾಗಿ ಬರುತ್ತದೆ. ಇದನ್ನು ಸಾಂಸ್ಕೃತಿಕ ಮಾನವ ಶಾಸ್ತ್ರದ ಒಳಗೆ ಅಧ್ಯಯನ ಮಾಡಲಾಗುವುದು.

ಮಾನವಶಾಸ್ತ್ರದ ಪ್ರತಿಪಾದಕ ಆಡ್ರ್ಯೋಲಾಂಗ್ ಸಂಸ್ಕೃತಿ ಚಿಂತಕ ಇ.ಬಿ.ಟೈಲರ್ ಮುಂತಾದ ವಿದ್ವಾಂಸರು ಜನಾಂಗಿಯ ಅಧ್ಯಯನಗಳಿಗೆ ಸಾಂಸ್ಕೃತಿಕ ಸ್ವರೂಪದೊಂದಿಗೆ ಚರ್ಚಿಸಿದರು. ಹಾಗಾಗಿ ಇವರು 'ಸಂಸ್ಕೃತಿ'ಗೆ ಹೊಸ ವ್ಯಾಖ್ಯಾನ ನೀಡಿದರು. 'ಸಂಸ್ಕೃತಿ' ಜನಾಂಗದ ಚಲನಶೀಲತೆಯಲ್ಲಿ ಇರುತ್ತದೆ. ಒಂದು ಜನಾಂಗ ನಂಬಿಕೆ, ಸಂಪ್ರದಾಯ, ಜನಪದ ಆಚರಣೆ, ಸಾಹಿತ್ಯ, ಪುರಾಣ, ಐತಿಹ್ಯ ಅಂಶಗಳನ್ನು ಒಳಗೊಳ್ಳುತ್ತದೆ. ಇಂತಹ ಸಮುದಾಯಗಳನ್ನು ಪ್ರಾರಂಭದಲ್ಲಿ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಅಧ್ಯಯನ ಮಾಡಿದರು. ತದನಂತರ ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ಅಧ್ಯಯನಗಳು ಶುರುವಾದವು. ಸಮುದಾಯಗಳನ್ನು ಅಧ್ಯಯನ ಮಾಡುವುದರೊಂದಿಗೆ ಸಂಸ್ಕೃತಿ ಕಟ್ಟುವುದಾಗಿತ್ತು. ತಳಸಮುದಾಯಗಳು ಯಜಮಾನ್ಯ ಸಂಸ್ಕೃತಿಯೊಂದಿಗೆ ಎದುರಿಸಿದ ಬಿಕ್ಕಟ್ಟುಗಳಿಂದ ಬಗೆಹರಿಸಿಕೊಳ್ಳಲು

ಇಂತಹ ಅಧ್ಯಯನಗಳು ನಡೆದವು. ಯಾವುದೇ ಒಂದು ಬುಡಕಟ್ಟಿನ ಇಲ್ಲವೇ ಜನಾಂಗದ ಸಾಂಸ್ಕೃತಿಕ ಅಧ್ಯಯನವೆಂದರೆ, ಅದು ಪರಂಪರೆಯಿಂದ ರೂಪಿಸಿಕೊಂಡು ಬಂದ ರೀತಿ, ನೀತಿ, ಆಚಾರ, ವಿಚಾರ, ರೂಢಿ, ಸಂಪ್ರದಾಯ, ಹಾಗೂ ನಂಬಿಕೆ, ಮೊದಲಾದ ಒಟ್ಟು ಜೀವನದ ಆಶಯವಾಗಿದೆ. ಈ ದೃಷ್ಟಿಯಿಂದ 'ಸಂಸ್ಕೃತಿ' ಎಂಬುದು ಒಂದು ಪರಂಪರೆಗೆ ಸೇರಿದ ಜನ ಸಮೂಹದ ಸಮಗ್ರಜೀವನದ ವಿಧಾನ ಅಥವಾ ಜೀವನ ಮೌಲ್ಯವೇ ಆಗಿದೆ. ಸಂಸ್ಕೃತಿಯೊಂದರಲ್ಲಿ ಮನುಷ್ಯ ಹಾಸುಹೊಕ್ಕಾಗಿರುವುದರಿಂದ ಸಮಾಜ ಜೀವಿ ಎಂದು ಪರಿಗಣಿಸಲಾಗುತ್ತದೆ.

ಭಾರತದಲ್ಲಿ ಕಂಡು ಬರುವ ಜನಸಮುದಾಯಗಳು ಜಗತ್ತಿನ ಇತರೆ ಸಮುದಾಯಗಳಿಗಿಂತ ಭಿನ್ನವಾದವುಗಳು ಮತ್ತು ವಿಶಿಷ್ಟ ಸಂಸ್ಕೃತಿಯನ್ನುಳ್ಳವುಗಳಾಗಿವೆ. ಇಂತಹ ಸಮುದಾಯಗಳನ್ನು ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ವಿದ್ವಾಂಸರುಗಳು ಬಹಳ ಹಿಂದಿನಿಂದಲೂ ಅಧ್ಯಯನ ಮಾಡುತ್ತ ಬಂದಿದ್ದಾರೆ. ಇಂತಹ ಸಮುಧಾಯಗಳು ದಲಿತ ಸಮುದಾಯಗಳು, ಬುಡಕಟ್ಟು ಸಮುದಾಯಗಳು, ಹಿಂದುಳಿದ ಸಮುದಾಯಗಳು ಮತ್ತು ಅಲೆಮಾರಿ ಸಮುದಾಯಗಳು ಮುಖ್ಯವಾದವುಗಳಾಗಿವೆ. ಈ ಸಮುದಾಯಗಳ ಅಭಿವೃದ್ಧಿ ಪರಿವರ್ತನೆ, ಸಾಮಾಜಿಕ ಚಲನೆ, ಅನನ್ಯತೆ ಸಾಂಸ್ಕೃತಿಕ ವಿಷಯಗಳಿಗೆ, ಸಂಬಂಧಿಸಿದಂತೆ ಅಧ್ಯಯನಗಳು ನಡೆದಿವೆ. ಸಮುದಾಯ ಎಂಬ ಪದವನ್ನು ಒಂದು ನಿರ್ದಿಷ್ಟ ಜಾತಿ, ಸಮೂಹ, ಒಂದು ಪಂಥವನ್ನು ನಂಬುವ ಆಚರಿಸುವ ಮುಂದುವರೆಸುವ ಜನ ಒಂದು ನಿರ್ದಿಷ್ಟ ಕಾರಣಕ್ಕಾಗಿ ಒಂದಾಗುವ ಸಮೂಹ, ತಮ್ಮದೇ, ಲೋಕಜ್ಞಾನವುಳ್ಳ, ಜನರ ಪಂಗಡ ಎಂಬ ಅರ್ಥದಲ್ಲಿ ಇಲ್ಲಿ ಬಳಸಲಾಗಿದೆ. ಒಂದು ಸಮುದಾಯ ಶತಮಾನಗಳಿಂದ ರೂಪಿಸಿಕೊಂಡು ಬಂದ ಜೀವನ ವಿಧಾನವನ್ನು ಸಂಸ್ಕೃತಿ ಎನ್ನಬಹುದು. ಸಂಸ್ಕೃತಿ ಆ ಸಮುದಾಯದ ಸಮೂಹದ ಸಮಸ್ತವಾಗಿರುತ್ತದೆ.

ಜನಪದ ಮಹಾಕಾವ್ಯಗಳ ಕೇಂದ್ರ ಪಾತ್ರಗಳಾಗಿರುವ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಬೀರಪ್ಪ, ಸಿರಿ, ಕೋಟೆ ಚೆನ್ನಯ್ಯ, ಅವರನ್ನು ಈ ಮೇಲಿನ ನೆಲೆಯಲ್ಲಿ ನೋಡಬಹುದಾಗಿದೆ. ಒಂದು ರೀತಿ ಸಮುದಾಯವನ್ನು ಪ್ರತಿನಿಧಿಸುವ ಸಮುದಾಯದ ಆಶಯ, ಅಭಿವ್ಯಕ್ತಿಯನ್ನು ಬಿಂಬಿಸುವ ಈ ಕಾವ್ಯಗಳು ಪರಂಪರೆಯ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ಸಮುದಾಯದ ಆಶಯ ಆಲೋಚನೆ ಅಭಿವ್ಯಕ್ತಿಯನ್ನು ಬಿಂಬಿಸುವ ಈ ಕಾವ್ಯಗಳು ಪರಂಪರೆಯ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ಸಮುದಾಯದ ಜನರ ಲೋಕದೃಷ್ಟಿಯನ್ನು ತೋರುತ್ತವೆ.

ಮಾನಸಶಾಸ್ತ್ರದ ಶೈಕ್ಷಣಿಕ ಆದ್ಯತೆಗಳಲ್ಲಿ ಮೊದಲನೆಯದು. ಮಾಹಿತಿಯನ್ನು ಕ್ರೋಢಿಕರಿಸವುದು. ಸಂಗ್ರಹಿಸಿದ ಮಾಹಿತಿಯನ್ನು ಮಹತ್ವದ್ದೆಂದು ಸಂರಕ್ಷಿಸುವುದು. ತಾವು ಅಧ್ಯಯನ ಮಾಡುವ ಜನರ ಮೇಲ್‌ಸ್ತರದ ವಿವರಗಳನ್ನೇ ಅತ್ಯಂತಿಕ ಸತ್ಯಗಳೆಂದು ಪರಿಗಣಿಸುವುದು ಅಭಿಜಾತ ಮಾನಸಶಾಸ್ತ್ರದ

ಗುಣ. ಇಲ್ಲಿ ಪಡೆದ ಮಾಹಿತಿಯ ಮರುಪರಿಶೀಲನೆ ಇರುವುದಿಲ್ಲ. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೇಜಗೌ ಮತ್ತು ಹಾಮಾನಾ ಅವರುಗಳ ಪ್ರಯತ್ನದಿಂದ ಜಾನಪದ ಒಂದು ಶೈಕ್ಷಣಿಕ ಅಧ್ಯಯನ ಶಿಸ್ತಾಯಿತು. ಇಲ್ಲಿ ಕಲಿತು ತರಬೇತಿ ಪಡೆದ ಯುವ ವಿದ್ವಾಂಸರು ವೈಜ್ಞಾನಿಕ ಕ್ರಮದಲ್ಲಿ ಜಾನಪದ ಕೆಲಸ ಮಾಡಲು ಅನುಕೂಲವಾಯಿತು. ೧೯೬೮ರಲ್ಲಿ ಜೀಶಂಪ ಜಾನಪದ ಬೋಧಕರಾಗಿ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಜಾನಪದ ಬಹುಮುಖವಾಗಿ ಬೆಳಯಿತು. ಜಾನಪದದಲ್ಲಿ ಎಂ.ಎ ಶಿಕ್ಷಣ, ಸ್ನಾತಕೋತ್ತರ ಡಿಪ್ಲೊಮೊ ಶಿಕ್ಷಣ ೧೯೮೬ ರಿಂದ ಬಿ.ಎ ಪದವಿಯಲ್ಲಿ ಜಾನಪದವು ಐಚ್ಛಿಕ ವಿಷಯವಾಗಿ ಕಲಿಯಲು ಅವಕಾಶ ನಿಡಲಾಯಿತು. ಈ ವಿಚಾರಗಳಿಗಾಗಿ ಇವರು ಶ್ರಮಿಸಿದರು. ಈ ಅವಧಿಯ ಇನ್ನೊಂದು ಅತ್ಯಂತ ಮುಖ್ಯ ಬೆಳವಣಿಗೆ ಎಂದರೆ, ಜಾಗತಿಕ ಜಾನಪದ ಅಧ್ಯಯನ ಹಾಗೂ ಜಾನಪದೀಯ ಸಿದ್ಧಾಂತಗಳ ಆನ್ವಯಿಕತೆಯ ಅನುಸರಣೆಯನ್ನು ಪ್ರಾರಂಭಿಸಿದ್ದು. ಅನೇಕ ಸಂಶೋಧನೆಗಳು ಮಾನವಶಾಸ್ತ್ರೀಯ ಸಿದ್ಧಾಂತದ ಅಧ್ಯಯನದ ಹಿನ್ನೆಲೆಯಲ್ಲಿ ಮೂಡಿಬಂದು ಇವುಗಳಲ್ಲಿ ಮುಖ್ಯವಾಗಿ ಬುಡಕಟ್ಟುಗಳ ಅಧ್ಯಯನ, ಜಾತಿ, ಸಮುದಾಯಗಳ ಅಧ್ಯಯನಗಳು ಸೇರಿವೆ. ತೀ.ನಂ.ಶಂಕರನಾರಾಯಣ(೧೯೭೮) ಅಂಬಳಿಕೆ ಹಿರಿಯಣ್ಣ(೧೯೮೨) ಪುರುಷೋತ್ತಮ ಬಿಳಿಮಲೆ(೧೯೮೫) ಪಿ.ಕೆ. ಖಂಡೋಬ(೧೯೮೭) ಮುಂತಾದವರು ಇವುಗಳ ಕರಿತು ಅಧ್ಯಯನ ಮಾಡಿದರು.

೬.೩. ಸಮುದಾಯ ಕುರಿತ ಅಧ್ಯಯನಗಳ ವಿಶ್ಲೇಷಣೆ

"ಕನ್ನಡ ಜಾನಪದ ಅಧ್ಯಯನಗಳಲ್ಲಿ ಸಮುದಾಯ ಅಧ್ಯಯನಗಳು ವಿಫುಲವಾಗಿವೆ. ಬುಡಕಟ್ಟು ಸಮುದಾಯ, ಜಾತಿ ಸಮುದಾಯ, ಒಳಪಂಗಡದ ಸಮುದಾಯ, ಧಾರ್ಮಿಕ ಸಮುದಾಯ, ಭಾಷಿಕ ಸಮುದಾಯ, ಹೀಗೆ ಬೇರೆ ಬೇರೆ ನೆಲೆಗಳಲ್ಲಿ ಅಮುದಾಯಗಳ ಅಧ್ಯಯನಗಳು ನಡೆದಿವೆ ನಡೆಯುತ್ತಿವೆ. ಮತ್ತು ನಡೆಯುತ್ತಿವೆ."[೧] ಕನ್ನಡದಲ್ಲಿ ಮೊದಲಿಗೆ ಜಾತಿಗಳ ಅಧ್ಯಯನ ಸಮಾಜ–ವಿಜ್ಞಾನ ವಿಭಾಗಗಳಲ್ಲಿಯೂ, ಬುಡಕಟ್ಟುಗಳ ಅಧ್ಯಯನ ಮಾನವ ವಿಜ್ಞಾನ ವಿಭಾಗಗಳಲ್ಲಿಯೂ ಇಂಗ್ಲಿಷ್ ಮಾಧ್ಯಮದಲ್ಲಿ ನಡೆಯುತ್ತಿದ್ದವು. ಆದರೆ ಇದು ಕನ್ನಡ ಮತ್ತು ಜಾನಪದ ವಿಭಾಗಗಳಲ್ಲಿ ಕನ್ನಡ ಮಾಧ್ಯಮದಲ್ಲಿ ನಡೆಯಲು ಆರಂಭವಾದದ್ದು ಕಳೆದ ನಾಲ್ಕು ದಶಕಗಳ ಹಿಂದೆ. ಎಪ್ಪತ್ತರ ದಶಕದಲ್ಲಿ ಸಮುದಾಯಗಳ ಜಾನಪದೀಯ ಒಂದು ಅಧ್ಯಯನ ಎಂಬ ಶೀರ್ಷಿಕೆಗಳಲ್ಲಿ ಅಧ್ಯಯನಗಳು ಪ್ರಾರಂಭಗೊಂಡವು. ಇವುಗಳನ್ನು ಸಾಂಸ್ಕೃತಿಕ ಮಾನವ ಶಾಸ್ತ್ರಗಳ ಮುಖೇನ ಸಮಕಾಲಿನ ಸಾಂಸ್ಕೃತಿಕ ಘಟಕಗಳ ಮೂಲಕ ತೋರಿಸಿದರು.

ಕನ್ನಡ ಸಂದರ್ಭದಲ್ಲಿ ಜಾನಪದೀಯ ಹಾಗೂ ಸಾಹಿತ್ಯಿಕವಾಗಿ ಸಮುದಾಯಗಳ ಸಂಶೋಧನೆ ಮಾಡಿರುವುದನ್ನು ಕಾಣಬಹುದು. ಅಂತಹ ಕೃತಿಗಳನ್ನು ಹೆಸರಿಸುವುದಾದರೆ, ಜೀ.ಶಂ.ಪರಮಶಿವಯ್ಯ ಅವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು', ಬಿ.ಎ.ವಿವೇಕ ರೈ ಅವರ 'ತುಳು

ಜನಪದ ಸಾಹಿತ್ಯ', ಈ ಎರಡು ಸಂಶೋಧನಾ ಪ್ರಬಂಧಗಳಲ್ಲಿ ದಕ್ಷಿಣ ಮತ್ತು ಕರಾವಳಿ ಈ ಪ್ರದೇಶಗಳ ಜನಪದ ಸಾಹಿತ್ಯದ ಮೂಲಕ ಅಲ್ಲಿನ ಸಮುದಾಯಗಳ ಪರಿಚಯಿಸುವ ನೆಲೆ ಕಾಣಬಹುದು. ಇನ್ನೂ ಸಮುದಾಯವನ್ನೇ ಪ್ರತಿನಿಧಿಸಿಕೊಂಡು ಅಧ್ಯಯನ ಮಾಡಿರುವ ತೀ.ನಂ.ಶಂಕರನಾರಾಯಣ ಅವರ 'ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು', ಮತ್ತು ಕೃಷ್ಣಮೂರ್ತಿ ಹನೂರ ಅವರ 'ಮ್ಯಾಸಬೇಡರು', ಈ ಎರಡು ಸಂಶೋಧನಾ ಕೃತಿಗಳಲ್ಲಿ ಕರ್ನಾಟಕದ ಎರಡು ಬುಡಕಟ್ಟುಗಳಾದ ಪಶುಪಾಲನ ವೃತ್ತಿಯ ಹಿನ್ನೆಲೆಯ, ವಿಶಿಷ್ಟ ಜನಾಂಗಿಕ ಸಂಸ್ಕೃತಿ ಭಾಷೆ, ಆಚಾರ, ವಿಚಾರ, ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಹೊಂದಿರುವ 'ಕಾಡುಗೊಲ್ಲ' ಮತ್ತು 'ಮ್ಯಾಸಬೇಡರ ಕುರಿತು ಮಾನವಶಾಸ್ತ್ರಿಯ ಹಾಗೂ ಜಾನಪದೀಯ ನೆಲೆಯಲ್ಲಿ ಚರ್ಚಿಸಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ, ಜಾನಪದೀಯ, ಸಾಹಿತ್ಯಿಕ ಈ ಅಂಶಗಳ ಮೂಲಕ ಸಂಶೋಧನಾ ಕೃತಿಗಳಲ್ಲಿ ಸಮುದಾಯಗಳನ್ನು ನೋಡಿರುವ ಬಗೆಯನ್ನು ವಿಶ್ಲೇಷಿಸಲಾಗಿದೆ.

೬.೪.೧. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು(೧೯೭೭)

ವಸಾಹತೋತ್ತರ ಕಾಲದ ಬುಡಕಟ್ಟು ಅಧ್ಯಯನದ ಮೊದಲ ಸಂಶೋಧಕರಾಗಿ ಡಾ.ತೀ.ನಂ.ಶಂಕರನಾರಾಯಣರು ಕಾಣಿಸಿಕೊಳ್ಳುತ್ತಾರೆ. "ಜಾನಪದವೆಂದರೆ, ಜನಪದ ಸಾಹಿತ್ಯ ಅದರಲ್ಲೂ ಗೀತಸಾಹಿತ್ಯ ಕೇಂದ್ರಿತವಾಗಿದ್ದ ಕರ್ನಾಟಕ ಜಾನಪದ ಅಧ್ಯಯನಕ್ಕೆ ಎಪ್ಪತ್ತರ ದಶಕದಲ್ಲೇ ಹೊಸ ತಿರುವು ನೀಡಿದ ವಿದ್ವಾಂಸರಾಗಿದ್ದಾರೆ. ಜಾನಪದವನ್ನು ಸಾಹಿತ್ಯ ಕೇಂದ್ರಿತ ದೃಷ್ಟಿಕೋನದಿಂದಲೇ ಪರಿಶೀಲಿಸುತ್ತಿದ್ದಾಗ ಸಾಂಸ್ಕೃತಿಕ ಮಾನವಶಾಸ್ತ್ರ ಹಿನ್ನಲೆಯಿಂದ ಅಧ್ಯಯನ ಮಾಡುವ ಯಶಸ್ವಿ ಪ್ರಯತ್ನ ಮಾಡಿದರು."[೨] ಎಂಬತ್ತರ ದಶಕದಲ್ಲಿ 'ಜಾನಪದವು ವೈಜ್ಞಾನಿಕತೆಗೆ' ಜನ ಸಮುದಾಯಗಳ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆಗಳು, ಮುಂತಾದ ಅಂಶಗಳಿಂದ, ಒಂದು ಸಮುದಾಯದ ಒಳಗೆ ಇರುತ್ತವೆ. ಇಂತಹ ಅಂಶಗಳನ್ನು ಒಟ್ಟಾರೆಯಾಗಿ ಅಧ್ಯಯನ ಮಾಡುವ ಇರಾದೆಯನ್ನು ಈ ಕಾಲಘಟ್ಟದ ಅನ್ವಯಿಸುತ್ತುಗಳ ಮೂಲಕ ಜಾನಪದವನ್ನು ಅಭ್ಯಾಸಿಸಲು ಹೊರಟಾಗ ಜಾನಪದಕ್ಕೆ ಹತ್ತಿರವಾದ ಶಾಖೆ ಮಾನವಶಾಸ್ತ್ರ ಕಂಡುಬರುವುದನ್ನು ವಿದ್ವಾಂಸರು ಗುರುತಿಸಿದರು. ಈ ಮಾನವಶಾಸ್ತ್ರದ ಪ್ರಮುಖ ಶಾಖೆಯಾದ 'ಸಾಂಸ್ಕೃತಿಕ ಮಾನವಶಾಸ್ತ್ರ' ವಿವಿಧ ಜನ ಸಮುದಾಯಗಳ ಕುರಿತು ಅಧ್ಯಯನ ಮಾಡುವಂತಹದ್ದು, ಒಂದು ಸಮುದಾಯಗಳ ಅಧ್ಯಯನವೆಂದರೆ, ಸಾಂಸ್ಕೃತಿಕ ಅಧ್ಯಯನವಾಗಿದೆ. ಈ ಸಂಸ್ಕೃತಿಯ ಅಂಶಗಳು ಆ ಸಮುದಾಯ ಒಳಗೊಳ್ಳುವ ಸಂಪ್ರದಾಯ, ನಂಬಿಕೆ, ಆಚರಣೆ, ಜನಪದ ಸಾಹಿತ್ಯ, ಮುಂತಾದ ಅಂಶಗಳನ್ನು ಅಧ್ಯಯನ ಮಾಡುವುದು. ಹಾಗಾಗಿ, ಇಂತಹ 'ಸಾಂಸ್ಕೃತಿಕ ಮಾನವಶಾಸ್ತ್ರ'ದ ಹಿನ್ನಲೆಯಲ್ಲಿ 'ಕರ್ನಾಟಕ ಬುಡಕಟ್ಟು ಅಧ್ಯಯನವನ್ನು ಕಟ್ಟುವ ಕೆಲಸವನ್ನು ತೀ.ನಂ ಶಂಕರನಾರಾಯಣರು ಮಾಡಿದ್ದಾರೆ.

೧೯೭೦ರ ದಶಕದಲ್ಲಿ ಮೈಸೂರು ವಿಶ್ವವಿದ್ಯಾಲಯದ ಮೂಲಕ ತೀ.ನಂ.ಶಂಕರನಾರಾಯಣ ಅವರು 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ಮಹತ್ವವಾದ ಸಂಶೋಧನಾ

ಪ್ರಬಂಧವನ್ನು ಹುಟ್ಟುಹಾಕುತ್ತಾರೆ. ಈ ಕೃತಿಯಲ್ಲಿ ಅಧ್ಯಯನಕಾರರು ಕಾಡುಗೊಲ್ಲರ ಪುರಾಣ, ನಂಬಿಕೆ, ಸಂಪ್ರದಾಯ, ಆಚರಣೆ, ಕಲೆ, ಕುಣಿತ, ಆಹಾರ, ಕಸುಬು, ಜಾತ್ರೆ ಉತ್ಸವ, ಮಾಟ, ಮಂತ್ರ, ಸಾಮಾಜಿಕ ಮತ್ತು ಆರ್ಥಿಕ, ಸಾಂಸ್ಕೃತಿಕ, ಬುಡಕಟ್ಟು, ವೀರರು, ಇತ್ಯಾದಿ ವಿವರಗಳನ್ನು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಈ ಅಧ್ಯಯನದಲ್ಲಿ ಅವರು ಯಾವುದೇ ಪ್ರಕಾರಗಳನ್ನು ಗಂಭೀರವಾಗಿ ಎತ್ತಿಕೊಂಡು ವೈರುಧ್ಯಗಳ ಮೂಲಕವಾಗಿ ಸಂಸ್ಕೃತಿ ಕೊಡುಕೊಳ್ಳುವಿಕೆ, ಆಗಲಿ, ಸಿದ್ಧಾಂತವಾಗಲಿ ಮಂಡಿಸಲಿಕ್ಕೆ ಹೋಗುವುದಿಲ್ಲ. ಇಡೀ ಕಾಡುಗೊಲ್ಲರ ಸಮುದಾಯಗಳ ಒಂದು ಜೀವನ ವಿಧಾನ ಕಟ್ಟಿಕೊಟ್ಟಿರುವುದನ್ನು ಇವರ ಅಧ್ಯಯನದಲ್ಲಿ ಕಾಣಬಹುದು.

ತೀ.ನಂ.ಶಂಕರನಾರಾಯಣರು ತಮ್ಮ ಸಂಶೋಧನಾ ಪ್ರಬಂದಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯವನ್ನು ಅವಲಂಬಿಸಿ ಅಧ್ಯಯನ ಮಾಡಿದ್ದಾರೆ. ಅವರೆ ಹೇಳುವಂತೆ ಸಾಂಸ್ಕೃತಿಕ ಮಾನವಶಾಸ್ತ್ರದ ನೆಲೆಯಲ್ಲಿ ಬೆರೆತು, ಅಲ್ಲಿನ ಆಚಾರ ವಿಚಾರಗಳನ್ನು ಸಮಗ್ರವಾಗಿ ತಿಳಿದುಕೊಂಡಾಗ ಮಾತ್ರ ಸಮುದಾಯಗಳ ಒಟ್ಟು, ಸಾಂಸ್ಕೃತಿಕ ಚಹರೆಗಳನ್ನು ಕಟ್ಟಬಹುದಾಗಿದೆ ಎಂದು ಹೇಳುತ್ತಾರೆ. ಹಾಗಾಗಿ ಇವರು ಕಾಡುಗೊಲ್ಲರ ಅಧ್ಯಯನಕ್ಕೆ ಪ್ರಯೋಗ ಮಾಡಿದಾಗ ಮೊದಲು ಕಾಡುಗೊಲ್ಲರ ಹಟ್ಟಿ ಸಂಸ್ಕೃತಿಗಳನ್ನು ಕ್ಷೇತ್ರಕಾರ್ಯ ವ್ಯಾಪ್ತಿಗೆ ಒಳಪಡಿಸಿದರು. ಮುಖ್ಯವಾಗಿ ಕರ್ನಾಟಕದಲ್ಲಿ ಕಾಡುಗೊಲ್ಲರು, ೫ ಪ್ರದೇಶಗಳಲ್ಲಿ ವಾಸಿಸುವುದನ್ನು ಸಂಶೋಧಕರು ಗುರುತಿಸುತ್ತಾರೆ. ಹಾಗಾಗಿ ಇವರು ಬೇರೆ-ಬೇರೆ ಜಿಲ್ಲೆಗಳಿಂದ ಪ್ರಾತಿನಿಧಿಕವಾದ ಹಟ್ಟಿಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳುತ್ತಾರೆ. ಅದಕ್ಕೆ ಸಂಶೋಧಕರು ಕೊಡುವ ಕಾರಣ, "ಒಂದು ಕಟ್ಟೆಮನೆಗೆ ಅಥವಾ ಒಂದು ಗುಡಿಕಟ್ಟೆಗೆ ನೂರಾರು ಹಟ್ಟಿಗಳು ಸೇರಿರುತ್ತವೆ. ಕಟ್ಟೆಮನೆಯಲ್ಲಾಗಲಿ, ಗುಡಿಕಟ್ಟೆಯಲ್ಲಾಗಲಿ, ಆಚರಿಸುವ ಸಂಪ್ರದಾಯಗಳನ್ನೇ, ಅವುಗಳಿಗೆ ಸೇರಿದ ಹಟ್ಟಿಯ ಜನ ಆಚರಿಸುತ್ತಾರೆ. ಇದರಿಂದಾಗಿ ಒಂದು ಗುಡಿಕಟ್ಟೆಯಲ್ಲಿ ವಿಷಯ ಸಂಗ್ರಹಿಸಿದಾಗ ಕೇವಲ ಪುನರಾವರ್ತನೆಯಾಗುತ್ತದೆ. ಹೆಚ್ಚಿನ ವಿಷಯಗಳು ಲಭ್ಯವಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಕಾಡುಗೊಲ್ಲರ ಸಂಸ್ಕೃತಿಯನ್ನು ಮೂಲರೂಪದಲ್ಲಿ ಉಳಿಸಿಕೊಂಡಿರುವ ಕೆಲವು ಪ್ರಮುಖವಾದ ಹಟ್ಟಿಗಳನ್ನು ನಾಗರಿಕತೆಯ ತೀವ್ರ ಪ್ರಭಾವದಿಂದಾಗಿ ರೂಪಾಂತರಗೊಂಡ ಸಂಸ್ಕೃತಿಯನ್ನು ಹೊಂದಿರುವ ಕೆಲವು ಪ್ರಮುಖ ಹಟ್ಟಿಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ."[೩] ಹಟ್ಟಿ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಕಾಡುಗೊಲ್ಲರ ಪ್ರಾದೇಶಿಕ, ಸಾಂಸ್ಕೃತಿಕ ಅಂಶಗಳನ್ನು ವಿವರಣಾತ್ಮಕವಾಗಿ ಕಟ್ಟಿಕೊಡುತ್ತಾರೆ. ಕಾಡುಗೊಲ್ಲರ ಎಲ್ಲ 'ಬೆಡಗು'ಗಳನ್ನು ಪ್ರತಿನಿಧಿಸುವ ಹಟ್ಟಿಗಳನ್ನು ಪ್ರಮುಖವಾದ ಕಟ್ಟೆ ಮನೆಗಳನ್ನು ಗುಡಿಕಟ್ಟೆಗಳನ್ನು ಅಧ್ಯಯನಕ್ಕೆಂದೆ ಆರಿಸಿಕೊಳ್ಳಲಾಗಿದೆ ಎಂದು ಅಧ್ಯಯನದ ವ್ಯಾಪ್ತಿಯನ್ನು ಸ್ಪಷ್ಟಪಡಿಸುತ್ತಾರೆ. ಕಾಡುಗೊಲ್ಲರ ಸಂಸ್ಕೃತಿಯನ್ನು ಮೂಲ ರೂಪದಲ್ಲಿ ಉಳಿಸಿಕೊಂಡಿರುವ ಕೆಲವು ಪ್ರಮುಖವಾದ ಹಟ್ಟಿಗಳನ್ನು ನಾಗರಿಕತೆಯ ತೀವ್ರ ಪ್ರಭಾವದಿಂದಾಗಿ ರೂಪಾಂತರಗೊಂಡ ಸಂಸ್ಕೃತಿಯನ್ನು ಹೊಂದಿರುವ ಕೆಲವು ಪ್ರಮುಖ ಹಟ್ಟಿಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ.

ಕಾಡುಗೊಲ್ಲ ಸಮುದಾಯವು ಪ್ರತ್ಯೇಕವಾದ ಮತ್ತು ವೈವಿಧ್ಯಮಯವಾದ ಆಚರಣೆ, ನಂಬಿಕೆ, ಪದ್ಧತಿಗಳು, ಭಾಷೆ ಹಾಗೂ ಹಲವು ಬಗೆಯ ಕಟ್ಟುಪಾಡುಗಳಿಗೆ ಒಳಪಡುತ್ತದೆ. ನಾಗರಿಕರೆಂದುಕೊಂಡಿರುವ ಜನರ ಕಣ್ಣಿಗೆ ಅನಾಗರಿಕರೆಂಬಂತೆ ಕಾಣಿಸಿಕೊಂಡು ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಜೀವನ ಸಾಗಿಸುತ್ತಿರುತ್ತದೆ. ಒಂದು ಜನಾಂಗದ ಇತಿಹಾಸ, ಪರಂಪರೆ, ಸಂಸ್ಕೃತಿಯನ್ನು ಆ ಜನಾಂಗ ನಂಬಿಕೊಂಡಿರುವ ಸಂಪ್ರದಾಯ, ಆಚರಣೆಗ, ಕಲೆ, ಆಚಾರ ವಿಚಾರ ಮುಂತಾದವುಗಳನ್ನು ಅಧ್ಯಯನ ಮಾಡಿದಾಗ ಮಾತ್ರ ತಿಳಿಯುತ್ತದೆ. ಬುಡಕಟ್ಟು ಸಂಸ್ಕೃತಿಯು ಈ ನೆಲೆಯಲ್ಲಿ ಒಳಗೊಂಡಿರುತ್ತದೆ. ಹಾಗಾಗಿ ಪುರಾಣ, ಜನಪದ ಕಾವ್ಯ, ಐತಿಹ್ಯ ಇವುಗಳ ಮೂಲಕ ಹಲವಾರು ಸಂಗತಿಗಳನ್ನು ಕಲೆಹಾಕಬೇಕಾಗುತ್ತದೆ. ಅವರ ಭಾಷೆಯನ್ನು ಬಲ್ಲರಾಗಿದ್ದೊ ಅವರ ಬದುಕಿನ ರೀತಿ-ನೀತಿಗಳನ್ನು ಅವಲೋಕಿಸುತ್ತಾ ಸಮಗ್ರ ಅಧ್ಯಯನ ಮಾಡಬೇಕಾಗುತ್ತದೆ. ಅವರ ಕುರಿತ ಕಲೆ, ಸಾಹಿತ್ಯ ನಡಾವಳಿಕೆಗಳು, ಸಂಪ್ರದಾಯ, ಆಚರಣೆಗಳ ಬಗೆಗಿನ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ.

ತೀ.ನಂ.ಶಂಕರನಾರಾಯಣ ಅವರು ಪ್ರಸ್ತುತ ನಿಬಂಧದಲ್ಲಿ ಕಾಡುಗೊಲ್ಲರ ಬುಡಕಟ್ಟಿನ ಸಂಪ್ರದಾಯಗಳ ಮತ್ತು ನಂಬಿಕೆಗಳ ವಿವರಣಾತ್ಮಕವಾದ ಅಧ್ಯಯನವನ್ನು ಕೈಗೊಂಡಿದ್ದಾರೆ. ಈ ಅಧ್ಯಯನಕ್ಕೆ ಹಿನ್ನೆಲೆಯಾಗಿ ಬುಡಕಟ್ಟುಗಳ ಸ್ವರೂಪ, ಬುಡಕಟ್ಟುಗಳ ಅಧ್ಯಯನದ ಕ್ರಮ, ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಬುಡಕಟ್ಟುಗಳ ಬಗ್ಗೆ ನಡೆದಿರುವ ಕೆಲಸ ಇವುಗಳ ಬಗ್ಗೆ ಸ್ಥೂಲವಾದ ವಿವರಣೆ ನೀಡಿದ್ದಾರೆ. ಕನ್ನಡದಲ್ಲಿ ಸಮುದಾಯಗಳ ಸಂಬಂಧವಾದ ಬರಹಗಳು ಹೆಚ್ಚು ಇಲ್ಲದಿರುವುದರಿಂದ ಈ ವಿಷಯಗಳ ಬಗ್ಗೆ ಕೊಟ್ಟಿರುವ ವಿವರಗಳು ಪ್ರಸ್ತುತ ನಿಬಂಧಕ್ಕೆ ಅಗತ್ಯವಾದ ತಾತ್ವಿಕ ಹಿನ್ನೆಲೆಯನ್ನು ರೂಪಿಸುತ್ತವೆ ಎಂದು ಹೇಳಬಹುದು. ಪ್ರಬಂಧದ ಪ್ರಾರಂಭದಲ್ಲಿಯೆ ಸಂಶೋಧಕರು ತಮ್ಮ ಅಧ್ಯಯನವನ್ನು ಮಾನವಶಾಸ್ತ್ರಿಯ ನೆಲೆಯಲ್ಲಿ ಅಧ್ಯಯನ ಮಾಡಿರುವ ಬಗ್ಗೆ ಸ್ಪಷ್ಟೀಕರಿಸಿದ್ದಾರೆ. "ಕಾಡುಗೊಲ್ಲರ ಬಗ್ಗೆ ಕಾಲು ಶತಮಾನದ ಹಿಂದೆ ಸಂಶೋಧನೆ ನಡೆದಿದ್ದರೆ ಅವರ ಸಂಸ್ಕೃತಿಯ ಮೂಲ ಸ್ವರೂಪವನ್ನು ಇಂದಿಗಿಂತಲೂ ಸುಲಭವಾಗಿ ಗುರುತಿಸಲು ಸಾಧ್ಯವಾಗುತಿತ್ತು"[೪]

ಕಾಡುಗೊಲ್ಲ ಸಮುದಾಯವು ತನ್ನದೇ ಆದ ವಿಶಿಷ್ಟ ಬಗೆಯ ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು, ದೈವತ್ವದ ಪರಿಕಲ್ಪನೆ, ಪುರಾಣ, ಐತಿಹ್ಯ, ನೆಲೆಯಲ್ಲಿ ಸಾಂಸ್ಕೃತಿಕ ವಲಯವನ್ನು ಹೊಂದಿದೆ. ಈ ಸಮುದಾಯದ ಸಾಂಸ್ಕೃತಿಕ ನಾಯಕರಾದ ಜುಂಜಪ್ಪ, ಎತ್ತಪ್ಪ, ಇವರ ಕುರಿತು ಇರುವ ಜನಪದ ಕಥನಗಳು, ಮಹಾಕಾವ್ಯಗಳು, ಕಾಡುಗೊಲ್ಲರ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಹಾಗಾಗಿ ಅಧ್ಯಯನಕಾರರು ತಮ್ಮ ಸಂಶೋಧನೆಯಲ್ಲಿ ಮೌಖಿಕ ಪರಂಪರೆಯ ಜೊತೆಗೆ 'ಸಂಪ್ರದಾಯ ಮತ್ತು ನಂಬಿಕೆಗಳನ್ನು' ಮಾತ್ರ ಪ್ರಮುಖ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. "ಕಾಡುಗೊಲ್ಲರ

ಸಂಪ್ರದಾಯಗಳು ಮತ್ತು ನಂಬಿಕೆಗಳು ಪರಂಪರಾನುಗತವಾದ ಸ್ವರೂಪವನ್ನು ಗುರುತಿಸುವುದು ಮಾತ್ರ ಈ ನಿಬಂಧದ ಉದ್ದೇಶ ಎಂದು ಲೇಖಕರು ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ"[೫] ಒಬ್ಬ ಸಂಶೋಧಕನು ಸಂಶೋಧನೆಯನ್ನು ಕೈಗೊಳ್ಳುವುದಕ್ಕೂ ಮೊದಲು ಅದಕ್ಕೆ ಹಲವು ಬಗೆಯ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಸಂಶೋಧನೆಗೆ ಪೂರಕವಾಗುವಂತಹ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಬೇಕಾಗುತ್ತದೆ.

ತೀ.ನಂ.ಶಂಕರನಾರಾಯಣರು ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕುವುದಕ್ಕೆ ಮಾತ್ರ ಸೀಮಿತ ಮಾಡಿಕೊಳ್ಳಲಿಲ್ಲ. ತಮ್ಮ ಪ್ರಬಂಧಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಹಲವು ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿಕೊಂಡಿದ್ದರು. "ಸಾಂಸ್ಕೃತಿಕ ಮಾನವ ವಿಜ್ಞಾನ ಸಂಸ್ಕೃತಿಯನ್ನು ಅಭ್ಯಾಸ ಮಾಡುವ ವಿಜ್ಞಾನವಾಗಿದೆ. ಇದರಲ್ಲಿ ಮಾನವಕುಲ ವಿಜ್ಞಾನ ಮತ್ತು ಮಾನವಕುಲ ವಿವರಣ ಜ್ಞಾನ ಈ ಎರಡು ಅಧ್ಯಯನದ ವಿಷಯಗಳು, ಬುಡಕಟ್ಟುಗಳ ಸಂಸ್ಕೃತಿಯನ್ನು ಅಭ್ಯಾಸ ಮಾಡುವ ವಿಷಯಗಳಾಗಿವೆ. ಸಂಸ್ಕೃತಿಯಲ್ಲಿ ವಿಕಾಸದ ಮೂರು ಹಂತಗಳನ್ನು ಗುರುತಿಸಲಾಗಿದೆ. ಆದಿವಾಸಿ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ನಗರ ಸಂಸ್ಕೃತಿ, ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಸಂಸ್ಕೃತಿಯ ಅಧ್ಯಯನದಲ್ಲಿ ಸಾಂಸ್ಕೃತಿಕ ವ್ಯತ್ಯಾಸ ಬಹುಮುಖ್ಯವಾದ ಅಧ್ಯಯನದ ವಿಷಯ. ಸಂಸ್ಕೃತಿಯನ್ನು ಅಧ್ಯಯನ ಮಾಡುವುದು ಮಾನವ ವಿಜ್ಞಾನಿಗಳಿಗೆ ಅನಿವಾರ್ಯವಾಯಿತು"[೬] ಲೇಖಕರು ತಮ್ಮ ಪ್ರಬಂಧದ ರಚನೆಗೆ ಸಮಾಜಶಾಸ್ತ್ರ, ಮಾನವ ಸಾಂಸ್ಕೃತಿ ವಿಜ್ಞಾನ, ಹಾಗೂ ಜಾನಪದ ಶಾಸ್ತ್ರ ಸಿದ್ಧಾಂತವನ್ನು ಈ ಮೂಲಕ ಅನುಸರಿಸಿರುವುದನ್ನು ನೋಡಬಹುದು. ಜಾಗತೀಕವಾಗಿ ಬುಡಕಟ್ಟುಗಳಿಗೆ ಸಂಬಂಧಪಟ್ಟಂತೆ ನಡೆದ ಅಧ್ಯಯನವನ್ನು ತಮ್ಮ ಪ್ರಬಂಧದಲ್ಲಿ ತಡಕಾಡಿದ್ದಾರೆ. "ರ್‍ಯಾಡ್ಕ್ಲಿಪ್, ಬ್ರೌನ್, ರಿವರ್ಸ್, ಸೆಲಿಗ್ಮನ್, ಫ್ರಾಂಜ್ ಬೋಆಸ್, ಫೋರ್ಟೆಸ್, ಲೋವಿ, ಐಸಾಕ್ ಶೆಪೇರಾ, ಮ್ಯಾಲಿನೋಸ್ಕಿ, ಏವಾನ್ಸ್, ಪ್ರಿಚರ್ಡ್, ರೇಮಂಡ್, ಫರ್ತ್, ನಾಡೆಲ್ ಮೊದಲಾದ ಹಲವಾರು ಮಾನವ ವಿಜ್ಞಾನಿಗಳು, ಆದಿವಾಸಿ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನದ ಶ್ರೇಷ್ಠ ಮಾದರಿಯನ್ನು ಒದಗಿಸಿದ್ದಾರೆ."[೭] ಸಮುದಾಯಗಳ ಕುರಿತು ಅಧ್ಯಯನ ಮಾಡುವ ಮುಂದಿನ ಅಧ್ಯನಕಾರರಿಗೆ ಇವರ ಪ್ರಬಂಧ ಮಾದರಿಯಾಗಿದೆ.

ಯಾವುದೆ ಒಂದು ಅಧ್ಯಯನವನ್ನು ಕೈಗೊಳ್ಳುವಾಗ ಆ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು, ಲೇಖನಗಳನ್ನು, ವಿಮರ್ಶೆಗಳನ್ನು ಓದಿಕೊಳ್ಳಬೇಕಾಗುತ್ತದೆ. ಪ್ರಸ್ತುತವಾಗಿ ತಾನು ಏನು ಹೇಳಲು ಹೊರಟ್ಟಿದ್ದೇನೆ ಎಂಬುದನ್ನು ಹಿಂದಿನ ಅಧ್ಯಯನಕಾರರು ಯಾವ ಬಗೆಯಲ್ಲಿ ಹೇಳಿದ್ದಾರೆ? ಏನನ್ನು ಹೇಳಿದ್ದಾರೆ? ಯಾವ ಬಗೆಯಲ್ಲಿ ಹೇಳಿದ್ದಾರೆ? ಎಂಬುದನ್ನು ಗುರುತು ಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಎಂ.ಚಂದ್ರಪೂಜಾರಿ ಅವರ ಮಾತನ್ನು ಉಲ್ಲೇಖಿಸಬಹುದು. "ವಿಷಯ ಆಯ್ಕೆ ಮಾಡಿಕೊಂಡವರು ತಾವು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಈಗಾಗಲೇ ಮಂಡಿತವಾದ

ಪ್ರಬಂಧಗಳನ್ನು ಮತ್ತು ಇತರ ಸಂಶೋಧನಾ ಬರಹಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ಈಗಾಗಲೇ ಮಂಡಿತವಾದ ಪ್ರಬಂಧಗಳಲ್ಲಿ ಎತ್ತಿದ ಮುಖ್ಯ ಪ್ರಶ್ನೆಗಳಾವು ಮತ್ತು ಅವುಗಳಿಗೆ ಕಂಡುಕೊಂಡ ಉತ್ತರಗಳೇನೆಂದು ಪಟ್ಟಿ ಮಾಡಬೇಕು. ಈಗಾಗಲೇ ಎತ್ತಿದ ಪ್ರಶ್ನೆಗಳು ಮತ್ತು ಅವುಗಳಿಗೆ ಪಡೆದ ಉತ್ತರಗಳಲ್ಲಿನ ದೋಷಗಳನ್ನು ಪಟ್ಟಿ ಮಾಡಬೇಕು. ಈ ಎರಡರ ಹಿನ್ನೆಲೆಯಲ್ಲಿ ಸಂಶೋಧಕರು ಎತ್ತಲು ಅಥವಾ ಕೇಳಲು ಅಪೇಕ್ಷಿಸುವ ಪ್ರಶ್ನೆಗಳನ್ನು ಗುರುತಿಸಬೇಕು”[೮] ತೀ.ನಂ.ಶಂಕರನಾರಾಯಣರು 'ಬುಡಕಟ್ಟು' ಸಮುದಾಯಗಳನ್ನು ಜಾಗತಿಕವಾಗಿ ಮಾನವಶಾಸ್ತ್ರಜ್ಞರು ಯಾವ ರೀತಿ ಗ್ರಹಿಸಿದ್ದಾರೆ ಎಂಬುದನ್ನು ಚರ್ಚಿಸುತ್ತಾರೆ. ಅದಕ್ಕಾಗಿ ಇವರು ಮ್ಯಾಲಿನೋಸ್ಕಿ, ಐವಾನ್ಸ್, ಪ್ರಿಚರ್ಡ್, ರೇಮಂಡ್ ಫರ್ತ್, ಹಾಗೂ ನಾಡೆಲ್ ಇವರ ಅಧ್ಯಯನವನ್ನು ಉಲ್ಲೇಖಿಸುತ್ತಾರೆ. 'ಸಾಮಾಜಿಕ ಮಾನವ ವಿಜ್ಞಾನ ಸಿದ್ಧಾಂತ'ದಲ್ಲಿ ಬುಡಕಟ್ಟುಗಳನ್ನು ಅಧ್ಯಯನ ಮಾಡಿರುವ ಈ ನಾಲ್ವರ ಅಧ್ಯಯನಗಳಲ್ಲಿ ವಿವಿಧ ಬಗೆಯ ನೆಲೆಗಳನ್ನು ತೀ.ನ.ಶಂಕರನಾರಾಯಣರು ಗುರುತಿಸಿದ್ದಾರೆ. ಹಾಗಾಗಿ ತಮ್ಮ ಅಧ್ಯಯನಕ್ಕೆ ಇವರ ಗ್ರಂಥಗಳನ್ನು ಪರಾಮರ್ಶಿಸಿ ಕಾಡುಗೊಲ್ಲರ ಅಧ್ಯಯನವನ್ನು ಮುಂದುವರೆಸಿದ್ದಾರೆ.

ಭಾರತವು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಅನೇಕ ಬುಡಕಟ್ಟು ಸಮುದಾಯಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ವಸಾಹತು ಕಾಲಾವಧಿಯಲ್ಲಿ ಎಡ್ಗರ್ ಥರ್ಸ್ಟನ್, ಅನಂತಕೃಷ್ಣ ಅಯ್ಯರ್ ಮುಂತಾದವರು ಬ್ರಿಟಿಷ್ ಆಡಳಿತದ ಸುಗಮಕ್ಕಾಗಿ ಬರೆದ ಜಾತಿ ಹಾಗೂ ಬುಡಕಟ್ಟುಗಳ ಅಧ್ಯಯನದ ದೃಷ್ಟಿದೋರಣೆ, ತಾತ್ವಿಕತೆ, ಬಳಸಿದ ವೈಧಾನಿಕತೆ ಇಂದಿಗಿಂತ ತೀರಾ ಬೇರೆಯಾದುದು. ಅಂದಿನವರ ನಿರೂಪಣೆಗಳಲ್ಲಿ ಸಮುದಾಯಗಳ ಅಮಾಯಕತೆ, ಮುಗ್ಧತೆಗಳನ್ನು ಅನುಮಾನದ ಕಣ್ಣುಗಳಿಂದ ನೋಡುವ, ಅವರ ನಡವಳಿಕೆಗಳನ್ನು ದೂರದಿಂದ ಬೆರಗುಗಣ್ಣುಗಳಿಂದ ಗಮನಿಸುವುದಾಗಿತ್ತು. ಅಧ್ಯಯನಕಾರ ಹಾಗೂ ಅಧ್ಯಯನಕ್ಕೆ ಗುರಿಯಾಗಿಸಿಕೊಂಡ ಮಂದಿಗಳ ನಡುವೆ ಯಾವುದೇ ಭಾವನಾತ್ಮಕ ಸಂಬಂಧವಿಲ್ಲದೆ ಅವರನ್ನು ಬರಿಯ ಮಾಹಿತಿದಾರರೆಂಬ ನಿಲುವಿನಿಂದ ನೋಡುವ ಧೋರಣೆ ಕಂಡುಬರುತ್ತಿತ್ತು. ಆರಂಭಿಕ ಕಾಲದ ಭಾರತೀಯ ಅಧ್ಯಯನಕಾರರಲ್ಲೂ ಇದೇ ನಿಲುವು ಮುಂದುವರಿಯಿತು.

ಕರ್ನಾಟಕದ ಆರಂಭಕಾಲದ ಬುಡಕಟ್ಟು ಅಧ್ಯಯನ ಮಾಹಿತಿ ಸಂಗ್ರಹಗಳನ್ನು ಬರಿಯ ಬೌದ್ಧಿಕ ಶೈಕ್ಷಣಿಕ ಚಟುವಟಿಕೆ ಎಂದೇ ಭಾವಿಸಲಾಗುತಿತ್ತು. ಆದಿವಾಸಿ ಸಮಾಜದ ಸಂಸ್ಕೃತಿಯ ವಿವರಣಾತ್ಮಕ ಅಧ್ಯಯನವೂ ಒಂದು ಸಂಶೋಧನ ಕೃತಿ ಎನಿಸಿಕೊಳ್ಳುತ್ತಿತ್ತು. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಪ್ರಕಟವಾದ ಕಾಲದಲ್ಲಿ ನೆಲಸಿದ್ದ ಆಲೋಚನೆ ಹಾಗೂ ಬಳಕೆಯಲ್ಲಿದ್ದ ವೈಧಾನಿಕತೆಗೆ ತಕ್ಕಂತೆ ಸಂಸ್ಕೃತಿಯ ಏಕಕಾಲಿಕ(ಸಿಂಕ್ರೋನಿಕ್)ಅಧ್ಯಯನ ತೀ.ನಂ.ಶಂಕರನಾರಾಯಣರ ಅಧ್ಯಯನಕ್ಕೆ ಪೂರ್ವದಲ್ಲಿ ಡಾ.ಜೀ.ಶಂ ಪರಮಶಿವಯ್ಯ ಅವರು 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ಸಂಶೋಧನ ಗ್ರಂಥವನ್ನು ಪ್ರಕಟಿಸಿದ್ದರು. ಅದರೊಳಗೆ ಐದು ಧಾರ್ಮಿಕ ಸಂಪ್ರದಾಯಗಳನ್ನು ಪರಿಶೀಲಿಸಿದ್ದು ಅವುಗಳಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನ ಸಂಪ್ರದಾಯವೂ ಒಂದು. ಆದರೆ ಅವರ ವಸ್ತು ನಿರ್ವಹಣೆಗಿಂತ ಬೇರೆ ಹಾದಿಯಲ್ಲಿ ನಡೆದು ತೀ.ನಂ.ಶಂಕರನಾರಾಯಣ

ಅವರು 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಮಹಾಪ್ರಬಂಧವನ್ನು ರಚಿಸಿದ್ದಾರೆ. ಹೀಗಾಗಿ ತೀ.ನಂ.ಶಂಕರನಾರಾಯಣ ಅವರು ಜೀಶಂಪ ಅವರ ಅಧ್ಯಯನವನ್ನು ಇನ್ನೊಂದು ದಿಕ್ಕಿನಲ್ಲಿ ಕೊಂಡೊಯ್ಯುವ ಯಶಸ್ವೀ ಪ್ರಯತ್ನ ನಡೆಸಿದ್ದಾರೆ. ಸಮುದಾಯವನ್ನು ಕುರಿತಂತೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಅಧ್ಯಯನಗಳಲ್ಲಿ ಗುರುತಿಸಬಹುದಾದ ಸಂಗತಿಯೆಂದರೆ ನಿನ್ನೆಯ ಬಗೆಗಿನ ಹಳಹಳಿಕೆ, ಸಂಸ್ಕೃತಿ ನಾಶವಾಗುತ್ತಿದೆ, ವಿಕಾರಗೊಳ್ಳುತ್ತಿದೆ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿದೆ ಎನ್ನುವುದು. ವಾಸ್ತವಿಕವಾಗಿ ಸಂಸ್ಕೃತಿ ಎನ್ನುವುದು ನಾಶವಾಗುವುದಿಲ್ಲ. ವಿಕಾರಗೊಳ್ಳುವುದಿಲ್ಲ. ಅದೊಂದು ಸದಾ ಚಲನಶೀಲವಾಗಿರುವ ಪ್ರಕ್ರಿಯೆ. ಈ ದಿಸೆಯಲ್ಲಿ ಶ್ರೀ ಶಂಕರನಾರಾಯಣರು ಸರಿಯಾಗಿಯೇ ವಿಚಾರ ಮಾಡಿದ್ದಾರೆ. ಸಂಸ್ಕೃತಿಯ ಚಲನಶೀಲತೆಯನ್ನು ಅವರು ಒಪ್ಪಿಕೊಂಡಂತೆ ಕಾಣುತ್ತದೆ. ರೂಪಾಂತರಗೊಂಡ ಸಂಸ್ಕೃತಿಯನ್ನು ಹೊಂದಿರುವ ಪಟ್ಟಿಗಳನ್ನೂ ಅಧ್ಯಯನಕ್ಕೆ ಒಳಪಡಿಸಿರುವುದು ಸ್ವಾಗತಾರ್ಹ ಬೆಳವಣಿಗೆ ಹಾಗೂ ಅತ್ಯಂತ ವೈಜ್ಞಾನಿಕ ನಿಲುವು.

ಈ ಮಹಾಪ್ರಬಂಧದಲ್ಲಿ ಸಂಶೋಧಕರು ವ್ಯಾಪಕ ಕ್ಷೇತ್ರಕಾರ ನಡೆಸಿ ಕಾಡುಗೊಲ್ಲ ಸಮುದಾಯದ ಸಂಪ್ರದಾಯ, ನಂಬಿಕೆಗಳನ್ನು ಸವಿವರವಾಗಿ ದಾಖಲಿಸಿದ್ದಾರೆ. ಇದರಿಂದ ಅವರ ಸೂಕ್ಷ್ಮ ಅವಲೋಕನ ಸಾಮರ್ಥ್ಯವನ್ನು ಗುರುತಿಸಲು ಸಾಧ್ಯವಾಗುತ್ತದೆ. ಅನೇಕ ಬಾರಿ ಕೆಲವು ಸಂಶೋಧಕರು ತಾವು ಹೊಸತೊಂದನ್ನು ಹೇಳುತ್ತಿದ್ದೇವೆ ಎನ್ನುವ ಸಂಭ್ರಮದಿಂದ ಮಾಹಿತಿಗಳನ್ನು ಉತ್ಪ್ರೇಕ್ಷಿಸಿ ದಾಖಲಿಸುವುದುಂಟು ಅಥವಾ ಏನನ್ನೂ ಕಳೆದುಕೊಳ್ಳುತ್ತಿರುವ ತಲ್ಲಣ, ಆತಂಕಗಳನ್ನು ವ್ಯಕ್ತಪಡಿಸುವುದುಂಟು .

ತೀನಂ.ಶಂಕರನಾರಾಯಣರು ತಮ್ಮ ಪ್ರಬಂಧದಲ್ಲಿ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳನ್ನು' ಮೂರು ಭಾಗವಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲ ಭಾಗದಲ್ಲಿ ಕಾಡುಗೊಲ್ಲರಿಗೆ ಸಂಬಂಧಿಸಿದ ಹಬ್ಬಗಳು, ಜಾತ್ರೆಗಳು, ಬಲಿ, ಎಡೆ ಹಾಕುವುದು, ಕಾಣಿಕೆ, ಹರಕೆಗಳು, ವ್ರತಗಳು, ಪೂಜೆ, ಚೆನ್ನಿಗೆ ಕುರಿ, ಪಟ್ಟದ ಬಸವ, ಈ ಪ್ರಕಾರಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ಕಾಡುಗೊಲ್ಲರು ಹಬ್ಬಗಳನ್ನು ಮಾಡುತ್ತಾರೆ. ಜಾತ್ರೆಗಳನ್ನು ನಡೆಸುತ್ತಾರೆ. ಹಬ್ಬಗಳ ಸಂದರ್ಭದಲ್ಲಿಯೂ ಜಾತ್ರೆಗಳನ್ನು ಮಾಡುವುದುಂಟು. ಹಬ್ಬಗಳನ್ನು ಬಿಟ್ಟು ಇತರ ಸಂದರ್ಭಗಳಲ್ಲಿಯೂ ಜಾತ್ರೆಗಳನ್ನು ಮಾಡುವುದುಂಟು. ಇಂತಹ ಹಬ್ಬಗಳಲ್ಲಿ ಬರುವ ಆಚರಣೆಗಳನ್ನು ಅಧ್ಯಯನದ ನೆಲೆಯಲ್ಲಿ ಗುರುತಿಸಬಹುದಾಗಿದೆ. ಕಾಡುಗೊಲ್ಲರಿಗೆ ವಿಶಿಷ್ಟವಾಗಿರುವ ಯಾವ ಹಬ್ಬವೂ ಇಲ. ಅವರು ಉಳಿದ ಜನರೆಲ್ಲರೂ ಆಚರಿಸುವಂತೆಯೇ ಯುಗಾದಿ, ದೀಪಾವಳಿ, ಬಸವನ ಹಬ್ಬ, ಶಿವರಾತ್ರಿ ಹಬ್ಬ, ನಾಗರಹಬ್ಬಗಳನ್ನು, ಆಚರಿಸುತ್ತಾರೆ. ಈ ಹಬ್ಬಗಳಲ್ಲಿ ಅವರು ಸ್ನಾನ ಮಾಡಿ, ಒಗೆದ ಬಟ್ಟೆಗಳನ್ನು ಧರಿಸಿ, ದೇವರಿಗೆ ಹಣ್ಣುಕಾಯಿ ಮಾಡಿಸುತ್ತಾರೆ. ತಮ್ಮ ಕೈಲಾದ ಅಡುಗೆಮಾಡಿ, ದೇವರಿಗೆ ಎಡೆ ಇಟ್ಟು ಊಟ ಮಾಡುತ್ತಾರೆ.

ಭಾಗ ಎರಡರಲ್ಲಿ ಕಾಡುಗೊಲ್ಲರ ಜನನ, ಋತುಶಾಂತಿ, ದೀಕ್ಷೆ, ಮದುವೆ, ಸಾವು, ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಕಾಡುಗೊಲ್ಲರಲ್ಲಿ ಜನನದ ಸಂಪ್ರದಾಯ ಕಟ್ಟುನಿಟ್ಟಾಗಿರುತ್ತದೆ. ಇಂತಹ ಸಂಪಾಯವನ್ನು ಅಧ್ಯಯನಕಾರರು ವೈಜ್ಞಾನಿಕ ನೆಲೆಯಲ್ಲಿ ನೋಡದೆ ಮಾಹಿತಿ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಇನ್ನೂ ಹೆಣ್ಣು ಮಗಳು ಮೈನೆರೆದ ಸಂದರ್ಭದಲ್ಲಿ ಹೆಂಗಸರು ಅವಳನ್ನು ಹಟ್ಟಿಯಿಂದ ಹೊರಕ್ಕೆ ಕಳುಹಿಸುವುದು. ಆ ದಿನ ನೀರು ಹುಯ್ದು, ಅಗಸರವಳು ಮಡಿಮಾಡಿ ತಂದುಕೊಟ್ಟ ಬಟ್ಟೆಗಳನ್ನು ಉಡಲು ಕೊಡುತ್ತಾರೆ. ಹೊಂಗೆಸೊಪ್ಪು ಹೊದಿಸಿದ ಹಸಿರು ಚಪ್ಪರವನ್ನು ಕಟ್ಟಿ ಮೈನೆರೆದ ಹುಡುಗಿಯನ್ನು ಅಲ್ಲಿ ಬಿಡುತ್ತಾರೆ. ಆ ದಿನ ರಾತ್ರೆಯೆಲ್ಲಾ ಅವಳು ಎಚ್ಚರವಾಗಿರಲೆಂಬ ಉದ್ದೇಶದಿಂದ ಅವಳೊಡನೆ ಮಾತನಾಡಲು ಒಬ್ಬ ಹೆಂಗಸನ್ನು ಕೂಡಿಸಿರುತ್ತಾರೆ. ಮೂರು ನಾಲ್ಕು ಜನ ಹೆಂಗಸರು ಒಸಗೆಯ ಹಾಡುಗಳನ್ನು ಹಾಡುತ್ತಾರೆ. ಅವಳಿಗೆ ಉತ್ತುತ್ತೆ, ದ್ರಾಕ್ಷಿ, ಬಾಳೆಹಣ್ಣು, ಕೊಬ್ಬರಿ, ಕಡಲೆ, ಹೂವು, ಹಣ್ಣುಹಳಿಂದ ಮಡಿಲು ತುಂಬುತ್ತಾರೆ. ಆ ದಿನ ಅವಳಿಗೆ ಪಾಯಸವನ್ನು ಮಾಡಿ ಊಟಕ್ಕೆ ಹಾಕುತ್ತಾರೆ. ಮಾರನೇ ದಿನ ಹಸಿರು ಚಪ್ಪರ ಜಾಗವನ್ನು ಬದಲಾಯಿಸುತ್ತಾರೆ. ಉಳಿದೆಲ್ಲ ಕಾರ್ಯಗಳೂ ಮೊದಲನೆಯ ದಿನದಂತೆಯೇ ನಡೆಯುತ್ತದೆ. ಐದು ದಿನಗಳ ಕಾಲ ಈ ಕಾರ್ಯಗಳನ್ನೇ ಮಾಡುತ್ತಾರೆ. ಈ ಸಂಪ್ರದಾಯಗಳನ್ನು ಕಾಡುಗೊಲ್ಲರು ಆಚರಣೆಯ ಭಾಗವಾಗಿ ಅಳವಡಿಸಿಕೊಂಡಿದ್ದಾರೆ. ಈ ಆಚರಣೆಗಳನ್ನು ಲೇಖಕರು ತಮ್ಮ ಪ್ರಬಂಧದಲ್ಲಿ ಯಥಾವತ್ತಾಗಿ ದಾಖಲಿಸುತ್ತಾರೆ. ಕಾಡುಗೊಲ್ಲರಲ್ಲಿ ಮದುವೆ ಆಚರಣೆಯು ಒಂದು ಪದ್ಧತಿಯಾಗಿದೆ. ಗಂಡು ತನಗೆ ಬೇಕಾದ ಕನ್ಯೆಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗುವ ಪದ್ಧತಿ ಅವರಲ್ಲಿ ಕಾಣಬಹುದು ಇದಕ್ಕೆ ಆಧಾರಗಳು ದೊರೆತಿರುವುದನ್ನು ನೋಡಬಹುದು. ಸಾಂಪ್ರದಾಯಿಕವಾದ ವಿವಾಹ ಐದು ದಿನಗಳ ಕಾಲ ನಿಶ್ಚಿತಾರ್ಥ, ಅರುಣೆ ತರುವ ಮತ್ತು ಚಪ್ಪರ ಹಾಕುವ ಶಾಸ್ತ್ರ, ಮದಲಿಂಗನ ಶಾಸ್ತ್ರ, ಧಾರೆ, ಓದೋಅಕ್ಕಿ ಶಾಸ್ತ್ರ, ಬೂವಮಾಡುವ ಶಾಸ್ತ್ರ, ಜಾಡಿತೀರಿಸುವ ಶಾಸ್ತ್ರ, ಪ್ರಸ್ತ, ಮುಂತಾದ ಆಚರಣೆಗಳು ಈ ಸಮುದಾಯಗಳಲ್ಲಿ ನಡೆಯುತ್ತವೆ. ಇವುಗಳನ್ನು ಅಧ್ಯಯನಕಾರರು ವಿವರವಾಗಿ ಮಾಹಿತಿ ಕಲೆಹಾಕಿದ್ದಾರೆ. ಆದರೆ ಈ ಆಚರಣೆಗಳ ಹಿಂದಿನ ತಾತ್ವಿಕತೆಯನ್ನು ಗ್ರಹಿಸಲು ಹೋಗುವುದಿಲ್ಲ. ಸಮಾಜಶಾಸ್ತ್ರದ ಅಧ್ಯಯನಗಳು ಕೇವಲ ಮಾಹಿತಿಯನ್ನಷ್ಟೆ ದಾಖಲಿಸುತ್ತವೆ. ಅದನ್ನು ತೀ.ನಂ.ಶಂಕರನಾರಾಯಣ ಯಥಾವತ್ತಾಗಿ ಬಳಸಿಕೊಂಡಿದ್ದಾರೆ. ಪ್ರಾರಂಭದಲ್ಲಿ ಸಮುದಾಯಗಳ ಅಧ್ಯಯನವು ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರ ಬಗೆಯಲ್ಲಿ ನಡೆದಿದ್ದವು. ಇವುಗಳು ಮೇಲ್‌ಸ್ತರದ ಅಧ್ಯಯನಕ್ಕೆ ಒತ್ತುಕೊಟ್ಟಿದ್ದವು. ಆದರೆ ತೀ.ನಂ.ಶಂಕರನಾರಾಯಣರು ಅಕಾಡೆಮಿಕ್ ಭಾಗವಾಗಿ ಕಾಡುಗೊಲ್ಲ ಸಮುದಾಯವನ್ನು ಆಯ್ಕೆ ಮಾಡಿಕೊಂಡು ಮಾನವಶಾಸ್ತ್ರದ ಭಾಗವಾಗಿ ಅಧ್ಯಯನ ಮಾಡಿದ್ದಾರೆ.

ಭಾರತದಲ್ಲಿ ವೇದಗಳ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು ಅಸ್ತಿತ್ವದಲ್ಲಿದ್ದವು. ಆದರೆ ಈ ವರ್ಣವ್ಯವಸ್ಥೆಗೆ ಸೇರದೆ ಪ್ರತ್ಯೇಕವಾಗಿರುವಂತಹ ಬುಡಕಟ್ಟು

ಸಮುದಾಯಗಳು ಸಾಕಷ್ಟು ಸಂಖ್ಯೆಯಲ್ಲಿದ್ದವು. ಈ ಬುಡಕಟ್ಟು ಸಮುದಾಯಗಳು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯಗಳು, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಆಚರಣೆ, ಕುಶಲತೆ ಮುಂತಾದ ಹಲವಾರು ಅಂಶಗಳಿಂದ ಭಾರತದ ಸಂಸ್ಕೃತಿಯನ್ನು ಸಂಕೀರ್ಣಗೊಳಿಸಿವೆ ಹಾಗೂ ಶ್ರೀಮಂತಗೊಳಿಸಿವೆ. ಆದರೆ ಶಿಷ್ಟ ಜನರು ಭಾರತೀಯ ಸಂಸ್ಕೃತಿಯ ಬಗ್ಗೆ ವಿಚಾರ ಮಾಡುವಾಗ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬುಡಕಟ್ಟು ಸಮುದಾಯಗಳ ಸಂಸ್ಕೃತಿಯನ್ನು ಕಡೆಗಣಿಸಿರುವುದು ಕಂಡುಬರುತ್ತದೆ. ಹಾಗಾಗಿ ಈ ಕೊರತೆಯನ್ನು ೭೦ರ ದಶಕದಲ್ಲಿ ಬಂದಂತಹ ಬುಡಕಟ್ಟು ಸಂಶೋಧನಾ ಅಧ್ಯಯನಗಳು ತುಂಬಿದವು. ತೀ.ನಂ.ಶಂಕರನಾರಾಯಣರು ಆ ನಿಟ್ಟಿನಲ್ಲಿ ಈ ಕೆಲಸ ಮಾಡಿದ್ದಾರೆ.

ಈ ನಿಟ್ಟಿನಲ್ಲಿ ತೀ.ನಂ.ಶಂಕರನಾರಾಯಣ ಸಂಶೋಧನೆಯ ಒಟ್ಟಾರೆ ಉದ್ದೇಶಗಳನ್ನು ಈ ರೀತಿಯಾಗಿ ನೋಡಬಹುದು,

- ಕಾಡುಗೊಲ್ಲರ ನೆಲಮೂಲ ಸಂಸ್ಕೃತಿಯನ್ನು ಕಟ್ಟುವ ಕೆಲಸ
- ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳನ್ನು ಪ್ರಶ್ನೆ ಮಾಡದಿರುವುದು.
- ಕಾಡುಗೊಲ್ಲರ ಜೀವನ ವಿಧಾನವನ್ನು ಅತ್ಯಂತ ವಿನಯದಿಂದಲೇ ಒಪ್ಪಿಕೊಳ್ಳುವುದು.
- ತಮ್ಮ ಇಡೀ ಅಧ್ಯಯನದಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಪ್ರತಿಪಾದಿಸುವುದು.
- ಅನ್ಯಜ್ಞಾನ ಶಿಸ್ತಿನ ಮೂಲಕ ಸಮರೋಪಾದಿಯಾಗಿ ಕಾಡುಗೊಲ್ಲರ ಸಾಂಸ್ಕೃತಿಕ ಬಗೆಯ ಅನೇಕ ತಿಳುವಳಿಕೆಯನ್ನು ಕಟ್ಟಿಕೊಟ್ಟಿರುವುದು.

೮೦ರ ದಶಕದಲ್ಲಿ ಜಾನಪದ ಅಧ್ಯಯನಕ್ಕೆ ಸಮುದಾಯಗಳ ಜನಪದ ಸಾಹಿತ್ಯವು ಸಮಗ್ರ ಸಂಸ್ಕೃತಿಯನ್ನು ಕಟ್ಟಿಕೊಡುವಂತಹ ಅಧ್ಯಯನಗಳು ನಡೆದವು. 'ಸಂಸ್ಕೃತಿ'ಯನ್ನು ಹೊಸದಾಗಿ ವ್ಯಾಖ್ಯಾನಿಸಿದ ಬಳಿಕ ಅದನ್ನು ಕುರಿತು ಹಲವು ಮಗ್ಗುಲುಗಳಲ್ಲಿ ಅಧ್ಯಯನಗಳು ನಡೆದವು. 'ಸಂಸ್ಕೃತಿ' ಎಂದರೆ ಏನು ಎಂದು ವಿವೇಚಿಸಲು ಹೊರಟ ವಿದ್ವಾಂಸರು ಜನಾಂಗದಲ್ಲಿರುವ ನಾನಾ ಕುಲಗಳು ಆಚಾರ, ವ್ಯವಹಾರಗಳು, ಹಾಡು, ಕತೆ, ಗಾದೆಗಳು, ಆಟ, ಪಾಟ, ಊಟ, ಮೊದಲಾದವು. ವಿಶೇಷ ಪದ್ಧತಿಗಳು ಇವುಗಳಲ್ಲಿ ಅಡಗಿ ಕುಳಿತಿರುವ ಸಂಸ್ಕೃತಿಯನ್ನು ಈಚೆಗೆ ಹಿಡಿದೆಳೆದು ಪ್ರದರ್ಶಿಸುವ ಉದ್ದೇಶದಿಂದ ಇವುಗಳನ್ನೆಲ್ಲ ವಿಮರ್ಶೆ ಮಾಡುತ್ತ, ಸಾಧ್ಯವಾದ ಮಟ್ಟಿಗೂ ಸಾಧಾರಣವಾಗಿ ವಿವೇಚಿಸುತ್ತ ಮುಂದುವರೆಸಿದರು. ಜನಾಂಗದಲ್ಲಿರುವ ಸಂಸ್ಕೃತಿಯ ಮೂಲ ನೆಲೆಯನ್ನು ಶೋಧಿಸುವ ಕೆಲಸವನ್ನು ಗಮನಾರ್ಹವಾಗಿ ಮಾಡಿದರು."[೯] ಈ ಬಗೆಯ ಅಧ್ಯಯನಗಳು ಮಾನವಶಾಸ್ತ್ರದ ವಿದ್ವಾಂಸರಿಗಿಂತ 'ಸಾಂಸ್ಕೃತಿಕ ಮಾನವಶಾಸ್ತ್ರ' ನೆಲೆಯ ವಿದ್ವಾಂಸರು ಮಾಡಿದರು. ಈ ಮಾದರಿಯಲ್ಲಿ ತೀ.ನಂ.ಶಂಕರನಾರಾಯಣರು 'ಕಾಡುಗೊಲ್ಲ' ಸಮುದಾಯದ ಬಗ್ಗೆ ಕಟ್ಟಿಕೊಡುವ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸಬಹುದು.

ದಕ್ಷಿಣ ಕರ್ನಾಟಕದಲ್ಲಿ ಜನಪದ ಸಂಸ್ಕೃತಿಯನ್ನು ವಿಪುಲವಾಗಿ ಉಳಿಸಿಕೊಂಡು ಬಂದ ಜನಾಂಗಗಳಲ್ಲಿ ಕಾಡುಗೊಲ್ಲರು ಮುಖ್ಯರಾಗುತ್ತಾರೆ. ಪುರಾಣ, ಐತಿಹ್ಯ, ಕಾವ್ಯ, ಗಾದೆ, ಒಗಟು, ಸಂಪ್ರದಾಯ, ನಂಬಿಕೆಗಳು ಆಚರಣೆಗಳು, ಕಲೆ, ಹಬ್ಬಗಳು, ಜಾತ್ರೆಗಳು ಇತ್ಯಾದಿ. ಎಲ್ಲಾ ಭಿನ್ನ ಬಗೆಯ ಜನಪದ ಪ್ರಕಾರಗಳನ್ನು ಒಳಗೊಂಡಿರುವ ಈ ಸಮುದಾಯವು ಹೆಚ್ಚು ಪ್ರಸಿದ್ಧಿ ಪಡೆದಿರುವ ಜನಪದ ಪ್ರಕಾರಗಳಲ್ಲಿ ಪುರಾಣ, ಐತಿಹ್ಯಗಳು ಅದರಲ್ಲೂ 'ಜುಂಜಪ್ಪನ ಕಾವ್ಯ' ಸಂಪ್ರದಾಯ ಕುರಿತು ಜೀ.ಶಂ.ಪರಮಶಿವಯ್ಯ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. ತೀ.ನಂ.ಶಂಕರನಾರಾಯಣರು 'ಪುರಾಣ–ಐತಿಹ್ಯ' ಎಂಬ ಭಾಗದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರುಗಳಾದ 'ಜುಂಜಪ್ಪ ಎತ್ತಪ್ಪ, ಚಿತ್ರ ದೇವರು, ಕಾಟಯ್ಯದೇವರು, ಪಾತೇದೇವರು, ಕುರಿತು ಪುರಾಣ–ಐತಿಹ್ಯಗಳನ್ನು ಭಿನ್ನಪಠ್ಯಗಳ ನೆಲೆಯಲ್ಲಿ ವಿವರಸಿದ್ದಾರೆ. ಯಾವುದೇ ಒಂದು ಬುಡಕಟ್ಟಿನ ಸಂಪ್ರದಾಯಗಳ ಮತ್ತು ನಂಬಿಕೆಗಳ ಅಧ್ಯಯನದಲ್ಲಿ ಆ ಬುಡಕಟ್ಟಿನ ಪುರಾಣಗಳು ಮತ್ತು ಐತಿಹ್ಯಗಳು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತವೆ. ಆ ಬುಡಕಟ್ಟಿನ ಜನರ ಜೀವನವನ್ನು ನಿರ್ದೇಶಿಸುತ್ತವೆ. ಆ ಬುಡಕಟ್ಟಿನ ಸಂಪ್ರದಾಯಗಳಿಗೆ ಮತ್ತು ನಂಬಿಕೆಗಳಿಗೆ ಸಮರ್ಥನೆ ನೀಡುತ್ತವೆ. ಹಾಗಾಗಿ ಕಾಡುಗೊಲ್ಲರ ಸಮುದಾಯಗಳಿಗೆ 'ಪುರಾಣ–ಐತಿಹ್ಯ'ಗಳು ಪ್ರಮುಖ ನೆಲೆಯಾಗಿ ಕಂಡುಬರುವ ಸ್ಥಾನವನ್ನು ತೀ.ನಂ.ಶಂಕರನಾರಾಯಣರು ಗುರುತಿಸುತ್ತಾರೆ. ಮುಖ್ಯವಾಗಿ ಕಾಡುಗೊಲ್ಲರ ಸಂಸ್ಕೃತಿಯನ್ನು 'ಜುಂಜಪ್ಪನ ಪುರಾಣ'ದ ಮೂಲಕ ಇಡೀ ಕಾಡುಗೊಲ್ಲರ ಸಂಪ್ರದಾಯ–ನಂಬಿಕೆಗಳ ಕಟ್ಟುಪಾಡುಗಳನ್ನು ಗುರುತಿಸಿ ಸಾಂಸ್ಕೃತಿಕ ವಿಶಿಷ್ಟತೆಯನ್ನು ತಿಳಿಸುತ್ತಾರೆ. ಸಂಪ್ರದಾಯಗಳು ಪುರಾಣಗಳಿಂದ ಮತ್ತು ಐತಿಹ್ಯಗಳಿಂದ ಪ್ರಭಾವಿತವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಇವುಗಳ ಮುಖೇನ ಕಾಡುಗೊಲ್ಲರ ಸಂಪ್ರದಾಯಗಳನ್ನು ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಕಾಡುಗೊಲ್ಲರು ಅನುಸರಿಸುವ ಸಂಪ್ರದಾಯಗಳಲ್ಲಿ ಉಪಾಸನೆ ಪ್ರಧಾನ ಪಾತ್ರವಹಿಸುತ್ತದೆ. ಈ ಉಪಾಸನೆಗಳಿಗೆ ಅಗತ್ಯವಾದ ತಾತ್ವಿಕ ಹಿನ್ನಲೆ ಪುರಾಣಗಳಲ್ಲಿ ಲಭ್ಯವಾಗುತ್ತದೆ. ಕಾಡುಗೊಲ್ಲರಲ್ಲಿ ವಾರ್ಷಿಕಾವರ್ತನಗಳಲ್ಲಿ ನಡೆಯುವ ಹಬ್ಬಗಳು, ಜಾತ್ರೆಗಳು, ಆಚರಣೆಗಳನ್ನು ಪುರಾಣಗಳಲ್ಲಿ ಬರುವ ಸಾಂಸ್ಕೃತಿಕ ನಾಯಕರುಗಳನ್ನು ಕೇಂದ್ರಿಕರಿಸಿಕೊಂಡು ಅಧ್ಯಯನ ನಡೆಸಿರುವುದನ್ನು ನೋಡಬಹುದು.

ತೀ.ನಂ.ಶಂಕರನಾರಾಯಣರು ಕಾಡುಗೊಲ್ಲರ ಸಂಪ್ರದಾಯಗಳು–ನಂಬಿಕೆಗಳನ್ನು ವಿವರಿಸುವ ಜೊತೆಗೆ ಅವರು ಮೂಲತಃ ಬುಡಕಟ್ಟಿನ ಪರಂಪರೆಯುಳ್ಳವರು, ವಲಸೆಗಾರರಾಗಿದ್ದು, ಪಶುಪಾಲಕರಾಗಿದ್ದು ನಂತರ ಹಟ್ಟಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರೆಂದು ತಮ್ಮ ಅಧ್ಯಯನದಲ್ಲಿ 'ಸಮಾಜಶಾಸ್ತ್ರ' ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. "ಕಾಡುಗೊಲ್ಲ ನಿಷ್ಪತ್ತಿ" ಕುರಿತು ಬೇರೆ–ಬೇರೆ ಮಾನವಶಾಸ್ತ್ರಜ್ಞರು ಜಾನಪದ ತಜ್ಞರು ಹೇಳಿಕೆಗಳನ್ನು ದಾಖಲಿಸಿದ್ದಾರೆ. ಕೊನೆಯದಾಗಿ ಕಾಡುಗೊಲ್ಲರ ವೈಶಿಷ್ಟ್ಯ ಇರುವುದು ಅವರು ಊರುಗಳಲ್ಲಿ ವಾಸಮಾಡದೆ ಅಡವಿನಂಚಿನಲ್ಲಿ ವಾಸಮಾಡುವುದು. ಊರುಗಳ ಮುಖವನ್ನೇ ಕಾಣದ ಎಷ್ಟೋ ಜನ ಕಾಡುಗೊಲ್ಲರು ಇಂದಿಗೂ ಇದ್ದಾರೆ. ಅವರ

ಸಂಸ್ಕೃತಿ ರೂಪಿತವಾಗಿರುವುದು ಕಾಡುಗಳಿಂದ. ಇದರಿಂದಾಗಿ ಅವರನ್ನು ಕಾಡುಗೊಲ್ಲರು ಎಂಬ ಹೆಸರಿನಿಂದ ಕರೆಯುವುದೇ ಸೂಕ್ತವಾದದೆಂದು ಹೇಳುತ್ತಾರೆ. ಕಾಡುಗೊಲ್ಲರ ಬಹುಮುಖ್ಯ ಪುರಾಣವಾದ ಜುಂಜಪ್ಪನ ಕಥೆಯಲ್ಲಿಯೂ ಕಾಡುಗೊಲ್ಲ ಎಂಬ ಪದ ಪ್ರಯೋಗ ಇದೆ. ಈ ಎಲ್ಲ ಕಾರಣಗಳಿಂದಾಗಿ ನಿಬಂಧಕ್ಕು ಕಾಡುಗೊಲ್ಲ ಪದ ಬಳಸಲಾಗಿದೆ ಎಂದು ಸ್ಪಷ್ಟೀಕರಣ ನೀಡುತ್ತಾರೆ."[೧೦]

ಕಾಡುಗೊಲ್ಲರ ಸಂಸ್ಕೃತಿಯ ವಿವರಗಳನ್ನು 'ಜುಂಜಪ್ಪನ ಕಾವ್ಯದ ಮೂಲಕ ಹೆಚ್ಚು ತಿಳಿಯಬಹುದು. 'ಎತ್ತಪ್ಪ-ಜುಂಜಪ್ಪ' ಮಹಾಕಾವ್ಯ 'ಮಂಟೇಸ್ವಾಮಿ ಕಾವ್ಯ' ಹಾಗೂ 'ಮಾದೇಶ್ವರ ಕಾವ್ಯ'ದಷ್ಟೇ ಗಾತ್ರವಿದೆ. "ಜುಂಜಪ್ಪ ನಾಯಕನಾಗಿರುವ ಕಾಡುಗೊಲ್ಲರ ಜನಪದ ಕಾವ್ಯವು ಒಂದೇ ಜನಾಂಗದ ಒಳಗಡೆಯೇ ವ್ಯಕ್ತಿತ್ವ ವಿಕಸನ ಹಾಗೂ ಸಾಮೂಹಿಕ ಏಳ್ಗೆಯನ್ನು ಸಹಿಸದೇ ದಬ್ಬಾಳಿಕೆ ಮತ್ತು ದೌರ್ಜನ್ಯದ ದಾರಿಯನ್ನು ಹಿಡಿದ ಶಕ್ತಿಗಳ ವಿರುದ್ಧ ಬಾಲಕನೊಬ್ಬ ಸಿಡಿದೇಳುವ ಕಥೆಯನ್ನು ಒಳಗೊಂಡಿದೆ. ಮುಗ್ಧರ ಅವಕಾಶ ಹೀನರ, ಮೂಕವೇದನೆಯೇ ಮಡುಗೊಂಡು ನೈತಿಕ ಧೈರ್ಯದ ರೂಪವಾಗಿ, ಗಟ್ಟಿಯಾಗುತ್ತಾ ಹೋದ ವಿವಿಧ ಹಂತಗಳನ್ನು, ಈ ಜನಪದ ಕಾವ್ಯವು ಸ್ಪಷ್ಟಪಡಿಸುತ್ತದೆ"[೧೧] ಕಾಡುಗೊಲ್ಲರಲ್ಲಿ ಜುಂಜಪ್ಪ ಹಾಗೂ ಎತ್ತಪ್ಪನ ಪುರಾಣಗಳು ಹಲವು ನೆಲೆಯಲ್ಲಿ ಸಾಮಾಜಿಕ, ಹಾಗೂ ಸಾಂಸ್ಕೃತಿಕ, ಸಾಹಿತ್ಯಿಕವಾಗಿ ಪರಿಣಾಮ ಬಿರುತ್ತವೆ. ಎತ್ತಯ್ಯ ಪುರಾಣದಲ್ಲಿ ಎತ್ತಯ್ಯ-ಬೇಡರ ನಡುವಣ ಸಂಘರ್ಷದ ಕಥೆಯಾಗಿದೆ. ಪಶುಪಾಲನ ವೃತ್ತಿ ಹಿನ್ನೆಲೆಯುಳ್ಳ ಎರಡು ಪ್ರಬಲ ಬುಡಕಟ್ಟು ಸಮುದಾಯಗಳ ನಡುವೆ ಇಂತಹ ತಾತ್ವಿಕ ಸಂಘರ್ಷಗಳನ್ನು ಕಾವ್ಯದಲ್ಲಿ ಕಾಣಬಹುದು. ತೀ.ನಂ.ಶಂಕರನಾರಾಯಣರು ಇಂತಹ ತಾತ್ವಿಕ ಸಂಘರ್ಷಗಳನ್ನು ಬೇರೆ ಬೇರೆ ಆಯಾಮದಲ್ಲಿ ಗುರುತಿಸಿ ಚರ್ಚಿಸುವುದಿಲ್ಲ. ಅವರು ಅಧ್ಯಯನ ಮಾದರಿ ಒಂದು ಸಮುದಾಯವನ್ನು ದಾಖಲೀಕರಣ ಮಾಡಿ ಕಾಡುಗೊಲ್ಲ ಬುಡಕಟ್ಟು ಸಮುದಾಯ ವಿಭಿನ್ನ ಬಗೆಯ ಸಂಸ್ಕೃತಿಯನ್ನು ಹೊಂದಿದೆ ಎಂಬುದನ್ನು ತೋರಿಸುವುದಾಗಿತ್ತು.

ತೀ.ನಂ.ಶಂಕರನಾರಾಯಣರು ಕಾಡುಗೊಲ್ಲರ ನೆಲಮೂಲ ಸಾಂಸ್ಕೃತಿಕ ಅಂಶಗಳನ್ನು ಪ್ರತಿಪಾದಿಸಲು ಮುಖ್ಯವಾಗಿ ಅವರು ಬಳಸಿಕೊಂಡಿರುವ ಆಕರಗಳು, 'ಪುರಾಣ ಮತ್ತು ಐತಿಹ್ಯಗಳು' ನಂತರ ಹಟ್ಟಿ-ಮನೆಗಳಲ್ಲಿ ಈ ಕಾವ್ಯಗಳ ಸಾಂಸ್ಕೃತಿಕ ನಾಯಕರ ಕುರಿತು ಅನುಸರಿಸುವ 'ಸಂಪ್ರದಾಯ ಮತ್ತು ನಂಬಿಕೆಗಳ' ಮೂಲಕ ಚರ್ಚಿಸುತ್ತಾರೆ. ಕಾಡುಗೊಲ್ಲರು ಡೆಲ್ಲಿಯಿಂದ ವಲಸೆಬಂದ ಪ್ರಸಂಗ ಐತಿಹ್ಯದಲ್ಲಿ ದೊರೆಯುತ್ತದೆ. ಡೆಲ್ಲಿಯ ಬಳಿ ಕಾಡುಗಳಲ್ಲಿ ವಾಸಮಾಡುತ್ತಾ, ಪಶುಪಾಲನೆಯಿಂದ ಜೀವನ ಮಾಡುತ್ತಿದ್ದರು ಎಂದಿದೆ. ಆದರೆ ಸಂಶೋಧಕರು ಗುರುತಿಸಿರುವಂತೆ "ಕಾಡುಗೊಲ್ಲರು ಡೆಲ್ಲಿ ಎಂಬ ಪದವನ್ನು ಗಂಗೆ ಎಂಬ ಪದವನ್ನು ನಿರ್ದಿಷ್ಟವಾಗಿ ಬಳಸಿರುವ ಸಾಧ್ಯತೆ ಕಡಿಮೆ. ಕಾರಣ, ಅವರು ಕಂಡಿರುವ ಪ್ರಪಂಚ ಪರಿಮಿತವಾದುದು ಯಾವುದೇ ದೊಡ್ಡ ಪಟ್ಟಣವನ್ನು ಡೆಲ್ಲಿ ಎಂದು ಯಾವುದೇ ನದಿಯನ್ನು ಗಂಗೆಯೆಂದು ಕರೆದಿರಬಹುದು ಎಂದು ಶಬ್ದವಾಚಕ ನೆಲೆಯಲ್ಲಿ

ಗುರುತಿಸುತ್ತಾರೆ."[೧೨] "ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ಗೊಲ್ಲ' ಎಂಬ ಶಬ್ದಕ್ಕೆ ಸರಾಫನ ಹಾಳದ ಚೀಲ ಒಯ್ಯುವ ಅಧಿಕಾರಿ ಇಲ್ಲವೇ ಸೇವಕ; ದನಕರು ಕಾಯುವವನು; ಮತ್ತು ಒಂದು ದೇಶದ ಹೆಸರು ಎಂಬ ಪ್ರಮುಖವಾದ ಮೂರು ಅರ್ಥಗಳನ್ನು ನೇಗಿನಹಾಳ ಅವರು ಚಾರಿತ್ರಿಕವಾಗಿ ವಿವೇಚಿಸುತ್ತಾರೆ."[೧೩]

"೧೦ನೆಯ ಶತಮಾನದ ಸುಮಾರಿನಲ್ಲಿ ರಾಜ್ಯಾಧಿಕಾರಿಗಳಾಗಿದ್ದ ಗೊಲ್ಲರು ವೈರಿ ರಾಜರಿಂದ ಸೋಲಿಸಲ್ಪಟ್ಟು ತಮ್ಮ ದೇಶ–ಕೋಶಗಳನ್ನು ಕಳೆದುಕೊಂಡು ಗೌಡ ಮುಂತಾದ ಗ್ರಾಮಾಧಿಕಾರಿಗಳಾದರು, ಬರಬರುತ್ತ ತಮ್ಮ ಸ್ಥಾನಮಾನಗಳಿಂದ ಅಚ್ಯುತರಾಗಿ, ದೇವಾಲಯದ ಸೇವಕರೋ ಖಜಾನೆ, ಕಾಯುವ ಉದ್ಯೋಗದವರೋ ದ್ವಾರ ಪಾಲಕರೋ, ಆಗಿ ಕಾಲ ಉರುಳಿದಂತೆ ಕೇವಲ ಪಶುಪಾಲಕರಾಗಿ ಮಾರ್ಪಟ್ಟರು, ಆಧುನಿಕ ಕಾಲದಲ್ಲಿ ಸಾಮಾಜಿಕವಾಗಿ ಇನ್ನೂ ಕೆಳಗೆ ಇಳಿದು ಸಂಚಾರಿ ಅರೆ ಸಂಚಾರಿ ಜನಾಂಗಗಳ ಸಾಲಿಗೆ ಸೇರಿದರು."[೧೪] ಚಾರಿತ್ರಿಕವಾಗಿ ಸ್ಥಿತ್ಯಂತರಗೊಂಡ ವಲಸೆ ನೆಲೆಯಲ್ಲಿ ಗುರುತಿಸಲ್ಪಡುವ ಕಾಡುಗೊಲ್ಲರ ಕುರಿತು ಈ ವ್ಯಾಖ್ಯಾವನ್ನು ಉಲ್ಲೇಖಿಸಬಹುದು.

ಹೀಗೆ ತೀ.ನಂ.ಶಂಕರನಾರಾಯಣರು ಕಾಡುಗೊಲ್ಲರ ನೆಲಮೂಲ ಸಂಸ್ಕೃತಿಯನ್ನು ಕಟ್ಟಲು, ಐತಿಹ್ಯ, ಪುರಾಣ ಹಾಗೂ ಸಾಹಿತ್ಯ, ಸಂಪ್ರದಾಯಗಳು ಈ ನಾಲ್ಕು ಅಂಶಗಳಿಂದ ಕಾಡುಗೊಲ್ಲ ಸಮುದಾಯಗಳ ಅನನ್ಯತೆಯನ್ನು ಗುರುತಿಸುತ್ತಾರೆ. "ಕಾಡುಗೊಲ್ಲರು ಮೂಲತಃ ಶೈವರು ಎಂದು, ಐದು ಪುರಾಣಗಳು ಸಹ ಶೈವ ಧರ್ಮದ ಪ್ರಭಾವವನ್ನು ಗುರುತಿಸುತ್ತಾರೆ. ಐದು ಪುರಾಣಗಳ ಕಥಾಸಾರಾಂಶವನ್ನು ಭಿನ್ನ ಪಠ್ಯಗಳ ನೆಲೆಯಲ್ಲಿ ಚರ್ಚಿಸುತ್ತಾರೆ."[೧೫] ಮೂಲತಃ ಒಂದೇ ಆಶಯ ಈ ಪುರಾಣಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳನ್ನು ಪಡೆದುಕೊಂಡಿದೆ. ಜುಂಜಪ್ಪ, ಎತ್ತಪ್ಪ, ಚಿತ್ತಯ್ಯ, ಕಾಟಯ್ಯ, ಕೇತೇದೇವರು, ಪಾತೇದೇವರು ಇವರೆಲ್ಲರೂ ಶೈವಪಂಥದವರು. ಚಿತ್ರಲಿಂಗ, ಕಾಟಮಲಿಂಗ, ಕೇತೇಲಿಂಗ, ಪಾತೇಲಿಂಗ, ಎಂಬ ಮಾತುಗಳು ಬಳಕೆಯಾಗಿರುವುದು ಈ ವಾದಕ್ಕೆ ಹೆಚ್ಚು ಸಮರ್ಥನೆ ನೀಡುತ್ತವೆ, ಜುಂಜಪ್ಪ, ಎತ್ತಪ್ಪ ಇಬ್ಬರೂ ವೀರಭದ್ರನ ಅವತಾರ, ಈ ಎಲ್ಲ ದೇವತೆಗಳಿಗೂ ಈಶ್ವರಲಿಂಗವೇ ಸಂಕೇತ, ಜುಂಜಪ್ಪನ ಹೊರಿ ಬಡಮ್ಮೈಲನಿಗೆ ಈಶ್ವರ ನಂದಿ ಮೂಲ ರೂಪ ಇರಬೇಕು ಎಂದು ತಾತ್ವಿಕರಿಸುತ್ತಾರೆ."[೧೬] ಮುಖ್ಯವಾಗಿ ಕಾಡುಗೊಲ್ಲರ ಸಂಸ್ಕೃತಿಯ ಸಮಗ್ರ ನೋಟವು 'ಜುಂಜಪ್ಪನ ಪುರಾಣ'ದಲ್ಲಿ ಸಿಗುತ್ತವೆ. ಈ ನೆಲೆಯಲ್ಲಿ ಸಂಶೋಧಕರು ಅವಲೋಕಿಸಿದ್ದಾರೆ.

ಅರಣ್ಯ ಪ್ರದೇಶಗಳಲ್ಲಿ ಹುಟ್ಟಿ ಸಂಸ್ಕೃತಿಯಲ್ಲಿ ನಾಗರಿಕ ಸಮಾಜದಿಂದ ಇಂದಿಗೂ ಅಂತರ ಉಳಿಸಿಕೊಂಡಿರುವ ಬುಡಕಟ್ಟುಗಳ ಸಂಸ್ಕೃತಿಯು ವಿಭಿನ್ನತೆಯಿಂದ ಕೂಡಿದೆ. ಈ ಸಮುದಾಯಗಳಲ್ಲಿನ ಸಾಂಸ್ಕೃತಿಕ ಭಿನ್ನತೆಗಳು, ಬೇರೆ ಸಮುದಾಯಗಳಲ್ಲಿ ಕಾಣದೇ ಇರಬಹುದು. ಈ ಸಂಸ್ಕೃತಿಯನ್ನು ಹೊಂದಿರುವ, ಕಾಡುಗೊಲ್ಲ, ಮ್ಯಾಸಬೇಡ, ಕುರುಬ ಇತ್ಯಾದಿ ಬುಡಕಟ್ಟುಗಳು ಹೊಂದಿವೆ. ಹೀಗಾಗಿ ಹಲವು ಸಾಂಸ್ಕೃತಿಕ ಚಹರೆಗಳನ್ನು ಹೊಂದಿರುವ ಕರ್ನಾಟಕದ ಕಾಡುಗೊಲ್ಲ ಸಮುದಾಯವು ಈ

ನಿಟ್ಟಿನಲ್ಲಿ ವಿಧಿ ವಿಧಾನ, ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಈ ಬುಡಕಟ್ಟು ಸಮುದಾಯವು ಕಟ್ಟುನಿಟ್ಟಿನಿಂದ ಆಚರಿಸುತ್ತವೆ. ಮೂಲತಃ ಬುಡಕಟ್ಟು ಕಾಡುಗೊಲ್ಲ ಸಮುದಾಯವು ಅಪ್ಪಟ ಸಂಪ್ರದಾಯವಾದಿಗಾಳಗಿವೆ. ಕಾಡುಗೊಲ್ಲರ ಪುರಾಣಗಳಲ್ಲಿ ಬರುವ ಸಾಂಸ್ಕೃತಿಕ ನಾಯಕರ ಕುರಿತು ವಾರ್ಷಿಕವಾಗಿ ಹೇಗೆ ಕಾಡುಗೊಲ್ಲರ ಆಚರಣೆಗಳ ಸಂದರ್ಭದಲ್ಲಿ ಕಾಡುಗೊಲ್ಲರ ಕೆಲವು ಕಟ್ಟುಪಾಡುಗಳು ಇರುವುದನ್ನು ಗುರುತಿಸುವ ತೀ.ನಂ.ಶಂಕರನಾರಾಯಣರು ಅವುಗಳ ಕುರಿತು ವೈಜ್ಞಾನಿಕವಾಗಿ ಪ್ರಶ್ನೆಮಾಡುವುದಿಲ್ಲ. ತಾವು ಹೇಗೆ ಕ್ಷೇತ್ರಕಾರ್ಯದಲ್ಲಿ ತಂದಿದ್ದಾರೋ ಹಾಗೆಯೇ ಮಾಹಿತಿಯನ್ನು ಇಡುವಂತದ್ದಾಗಿದೆ. "ಸಂಪ್ರದಾಯ ಮತ್ತು ಆಚರಣೆಯ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು, ಕೆಲವರು ವ್ಯಕ್ತಿಗಳನ್ನು ಮುಟ್ಟುವಂತಿಲ್ಲ, ಕೆಲವರು ವ್ಯಕ್ತಿಗಳನ್ನು ಮುಟ್ಟುವಂತಿಲ್ಲ, ಕೆಲವು ಆಹಾರ ಪದಾರ್ಥಗಳನ್ನು ತಿನ್ನುವಂತಿಲ್ಲ, ಕೆಲವು ಸ್ಥಳಗಳಿಗೆ ಪ್ರವೇಶ ಮಾಡುವಂತಿಲ್ಲ, ಈ ನಿಷೇಧಗಳು ಕಾಡುಗೊಲ್ಲರ ಕಟ್ಟುನಿಟ್ಟಿನ ನಿಷಿದ್ಧಗಳಾಗಿವೆ."[೧೭] ಕಾಡುಗೊಲ್ಲರು ನಿಷಿದ್ಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಸಮುದಾಯದ ಪಾವಿತ್ರ್ಯವನ್ನು ಕಾಪಾಡಲು ಎಂಬ ಉದಾರ ನೆಲೆಯಲ್ಲಿ ತೀ.ನಂ.ಶಂಕರನಾರಾಯಣರು ವಿವರವನ್ನು ನೀಡುತ್ತಾರೆ.

ಜುಂಜಪ್ಪ, ಎತ್ತಪ್ಪ, ಚಿತ್ರದೇವರ ಜಾತ್ರೆ ಈ ಸಂದರ್ಭದಲ್ಲಿ ಕಾಡುಗೊಲ್ಲರು ಅನುಸರಿಸುವ ಕಟ್ಟುನಿಟ್ಟುಗಳನ್ನು ವಿವರಣಾತ್ಮಕವಾಗಿ ದಾಖಲಿಸುತ್ತಾರೆ. ಕಾಡುಗೊಲ್ಲರಲ್ಲಿ ಮಹಿಳೆಗೆ ಸಂಬಂಧಿಸಿದ ಕಟ್ಟುನಿಟ್ಟಿನ ಸಂಪ್ರದಾಯಗಳು ಹಾಗೂ ಆಚರಣೆಗಳನ್ನು ತಮ್ಮ ಪ್ರಬಂಧದ ಎರಡನೇ ಭಾಗದಲ್ಲಿ ತೀ.ನಂ.ಶಂಕರನಾರಾಯಣ ಅವರು ದಾಖಲಿಸುತ್ತಾರೆ. ಆದರೆ ವೈಜ್ಞಾನಿಕವಾಗಿ ಪ್ರಶ್ನೆಮಾಡುವುದಿಲ್ಲ. ಕಾಡುಗೊಲ್ಲರಲ್ಲಿ 'ಜನನದ' ಸಂದರ್ಭದಲ್ಲಿ ಆಚರಿಸುವ ಸಂಪ್ರದಾಯ ತುಂಬಾ ಕಟ್ಟುನಿಟ್ಟಾಗಿ ಇರುತ್ತದೆ. ಸೃಷ್ಟಿಕರ್ತ ಹೆಣ್ಣನ್ನು 'ಸೂತಕ'ವೆಂಬ ಬಗೆಯಲ್ಲಿ ಮನೆಯಿಂದ ಹೊರಗೆ ಹಾಕುವುದು ಕಾಡುಗೊಲ್ಲರು ದೈವದ ನಂಬಿಕೆಯೇ ಕಾರಣವಾಗಿರುತ್ತದೆ. ಆದರೆ, ಲೇಖಕರು ಈ ಸಂಪ್ರದಾಯವನ್ನು ಬೇರೆ ಬೇರೆ ಆಯಾಮದಲ್ಲಿ ಚರ್ಚಿಸಿ ದಾಖಲಿಸಬಹುದಿತ್ತು, ಆದರೆ 'ಸೂತಕ' ಕ್ರಿಯೆಯನ್ನು ಯಥಾವತ್ತಾಗಿ ಒಪ್ಪಿಕೊಂಡಿದ್ದಾರೆ. ಕಾಳೇಗೌಡ ನಾಗಾವರ ಅವರು ಸಹ, ಜಾನಪದೀಯ ನೆಲೆಯಲ್ಲಿ ದಾಖಲಿಸಿದ್ದಾರೆ. "ಸೂತಕ'ದ ಈ ಕ್ರಿಯೆಯು 'ಜುಂಜಪ್ಪ'ನ ಕಾವ್ಯದಲ್ಲಿ ಬರುತ್ತದೆ. ಮಗು ಹುಟ್ಟಿದಾಗ ಮಾಡುವ ಆಚರಣೆಗಳು ಮದುವೆ, ಸಾವಿನ, ಸಂದರ್ಭದಲ್ಲಿ ಮಾಡುವ ಆಚರಣೆಗಳು ತುಂಬಾ ವಿವರವಾಗಿ ಬರುತ್ತವೆ. ಈ ವಿವರಗಳನ್ನು ಕಾವ್ಯದಲ್ಲಿ ಬರುವ ಸಂಪ್ರದಾಯಗಳು ಪ್ರಸ್ತುತ ಕಾಡುಗೊಲ್ಲರಲ್ಲಿ ಚಾಲ್ತಿಯಲ್ಲಿದ್ದಂತಿದೆ. ಹಾಗಾಗಿ ಮೂರು ಗಂಡು ಮಕ್ಕಳು ಹುಟ್ಟಿದ ನಂತರ ನಾಲ್ಕನೆಯ ಹೆಣ್ಣು ಮಗು ಹುಟ್ಟುವುದು ಒಳ್ಳೆಯದಲ್ಲವೆಂಬ ನಂಬಿಕೆ ಇಂದಿಗೂ ಕಾಡುಗೊಲ್ಲರಲ್ಲಿ ಪ್ರಚಲಿತವಾಗಿದೆ. ಈ ನಂಬಿಕೆಯ ಮೂಲ ಜುಂಜಪ್ಪನ ಪುರಾಣದಲ್ಲಿದೆ."[೧೮]

ಕಾಡುಗೊಲ್ಲರು ತಮ್ಮ ಹಟ್ಟಿಯಲ್ಲಿ ಆಚರಿಸುವ ಇಂತಹ ಎಷ್ಟೋ ಸಂಪ್ರದಾಯಗಳು ಪುರಾಣಗಳಲ್ಲಿ ಬಂದಿರುವವು. "ಕಾಡುಗೊಲ್ಲರ ಪ್ರಭಾವ ದೈವನಾದ ಜುಂಜಪ್ಪ, ವಲಸೆಗಾರರ, ಪಶುಪಾಲನಾ

ವರ್ಗಕ್ಕೆ, ಸೇರಿದ ಒಬ್ಬ, ಸಾಂಸ್ಕೃತಿಕ ನಾಯಕ, ಜುಂಜಪ್ಪನ ಹಟ್ಟಿ ಮಾನವ ಅಸಹಜ ಕ್ರಿಯೆಯಲ್ಲಿ ನಡೆದಿದೆ. ಬಹುಶಃ ಯೋನಿ ಪೂಜಕರಾಗಿದ್ದ, ಈ ಕಾಡುಗೊಲ್ಲರು ವಲಸೆಗಾರ, ವರ್ಗ, ಹೆಣ್ಣಿನ, ಸ್ಥಾನವನ್ನು ಪವಿತ್ರವೆಂದೂ, ಪೂಜವೆಂದೂ ಭಾವಿಸಿದ್ದಂತೆ ಹಿನ್ನೆಲೆಯಾಗಿ ಹುಟ್ಟಿಕೊಂಡಿದೆ. ಹೆರಿಗೆಯಾದ ಹೆಣ್ಣು ಮಗಳು ಮೂರು ತಿಂಗಳ ಕಾಲ ಪ್ರತ್ಯೇಕವಾಗಿ ಒಂಟಿ ಗುಡಿಸಲಲ್ಲಿ, ಬಾಳಬೇಕಾದ ದಾರುಣ ಸ್ಥಿತಿ ಕಾಡುಗೊಲ್ಲರಲ್ಲಿ ಇಂದಿಗೂ ರೂಢಿಯಲ್ಲಿದೆ. ಕಾಡುಗೊಲ್ಲರಿಗೆ ಪ್ರಕೃತಿ, ಹಾಗೂ ಅದರ ಸಂಪತ್ತಾದ ದನಕರುಗಳೆಂದರೆ, ಎಲ್ಲಿಲ್ಲದ ಪ್ರೀತಿ, ಹಾಗಾಗಿಯೇ ಅವರು ಹುತ್ತ, ದನಗಳ ಗೂಡು, ಮತ್ತು ದೇವರ ಗುಡಿಗಳನ್ನು ಪವಿತ್ರವಾದ ಸ್ಥಳಗಳೆಂದು ಭಾವಿಸಿ ಪೂಜಿಸುವುದು ನೋಡಬಹುದು."[೧೯]

ಹೀಗೆ, ಜನನ, ಋತುಮತಿ ಸಂದರ್ಭದಲ್ಲಿನ ಸಂಪ್ರದಾಯಗಳು ಹೊರಗಿನಿಂದ ನಿಂತು ನೋಡುವವರಿಗೆ ಕ್ರೂರವಾಗಿ ಕಂಡರು, ಕಾಡುಗೊಲ್ಲ ಸಮುದಾಯವು ಅತೀ ಸಂಭ್ರಮದಿಂದ ಸ್ವಾಗತಿಸುವ ಕ್ರಿಯೆಯು ಇನ್ನೊಂದು ನೆಲೆಯದ್ದಾಗಿದೆ. ಆದರೆ ತೀ.ನಂ.ಶಂಕರನಾರಾಯಣರು ತಮ್ಮ ಅಧ್ಯಯನದಲ್ಲಿ ಇಂತಹ ಯಾವುದೇ ಸಂಪ್ರದಾಯಗಳ ವೈಜ್ಞಾನಿಕ ಚರ್ಚೆಗೆ ಅವಕಾಶ ನೀಡದಿರುವುದು ಮತ್ತೊಂದು ಸಂಗತಿಯಾಗಿದೆ. 'ಜನ್ನಿಗೆ' ಕುರಿ ದೇವರ ಹೆಸರಿನಲ್ಲಿ ಬಿಡುವ ಈ ಸಂಪ್ರದಾಯದಲ್ಲಿ ಹೆಣ್ಣಿನ ಸೂತಕವನ್ನು ಕಳೆಯುವ ಕ್ರಿಯೇ ಒಂದು ತೆರನಾಗಿ ದೈವ ನಂಬಿಕೆಯಾಗಿದೆ.

ಸಂಶೋಧಕರು ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳನ್ನು ಪ್ರಧಾನವಾಗಿ ವಿವರಿಸಿದ್ದರೂ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ಸಾಮಾಜಿಕವಾಗಿ ಕಾಡುಗೊಲ್ಲರಲ್ಲಿ ಮಹಿಳೆಯು ಎದುರಿಸುವ ಪರಿಸ್ಥಿತಿಯನ್ನು ವಿವರಿಸುತ್ತಾರೆ. "ಮುಟ್ಟಾದ ಹೆಂಗಸರು ಮೂರು ದಿನಗಳ ಕಾಲ ಹಟ್ಟಿಯೊಳಕ್ಕೆ ಪ್ರವೇಶಿಸುವಂತಿಲ್ಲ, ಹಟ್ಟಿನಿಂದ ಹೊರಗೆ, ಮೂರು ದಿನ ಕಳೆಯಬೇಕು ಈ ವಿಷಯದಲ್ಲಿ ಕಾಡುಗೊಲ್ಲರು ಬ್ರಾಹ್ಮಣರಿಗಿಂತಲೂ ಕಟ್ಟುನಿಟ್ಟಾಗಿದ್ದಾರೆ, ತಾವು ಬ್ರಾಹ್ಮಣರಿಗಿಂತಲೂ ಸಂಪ್ರದಾಯಗಳಲ್ಲಿ ಹೆಚ್ಚು ಕಟ್ಟುನಿಟ್ಟೆಂದು ಕಾಡುಗೊಲ್ಲರು ಭಾವಿಸುವುದರಿಂದ ತಮ್ಮ ಮದುವೆಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಸುವುದಿಲ್ಲ. ಅವರನ್ನು ತುಂಬಾ ಸಂಶಯದಿಂದ ಕಾಣುತ್ತಾರೆ. ಹತ್ತಿರದಲ್ಲಿ ನಡೆಯುವ ಸಂತೆಗಳಿಗೆ ಹೋಗಿ ಅಲ್ಲಿ ಎಲ್ಲರೊಡನೆ ಬೆರೆತರೂ ತಮ್ಮ ಹಟ್ಟಿಗಳಲ್ಲಿ ಮಾತ್ರ ಕಟ್ಟು ನಿಟ್ಟಾದ ನಿಯಮಗಳನ್ನು ಪಾಲಿಸುತ್ತಾರೆ."[೨೦] ಎಂಬ ಸಾಮಾಜಿಕ ನಿಯಮಗಳನ್ನು ನೇರವಾಗಿ ಸಂಪ್ರದಾಯಗಳನ್ನು ಪರಿಚಯ ಮಾಡಿಕೊಡುತ್ತಾರೆ.

ತೀ.ನಂ.ಶಂಕರನಾರಾಯಣ ಅವರು ಸಮರೋಪಾದಿಯಾಗಿ ಅನ್ಯಜ್ಞಾನ ಶಿಸ್ತಿನ ಮೂಲಕ ಕಾಡುಗೊಲ್ಲರ ಸಾಂಸ್ಕೃತಿಕ ಬಗೆಯ ಅನೇಕ ತಿಳುವಳಿಕೆಯನ್ನು ಕಟ್ಟಿಕೊಟ್ಟಿದ್ದಾರೆ.

ಪರಂಪರೆಯ ಮೂಲದಲ್ಲಿ ಬುಡಕಟ್ಟು ಆದ ಕಾಡುಗೊಲ್ಲ ಸಮುದಾಯವು ಆಧುನಿಕತೆಗೆ ಮುಖಮಾಡಿದಂತೆ ನಾಗರೀಕತೆಗೆ ಕಡೆಗೆ ಚಲನೆ ಮಾಡಿರುವುದು ಕಾಣಬಹುದು. ಸಾಮಾಜಿಕವಾಗಿ

ಅಶುದ್ಧ ಕಾಡುಗೊಲ್ಲರು ಅನ್ಯ ತಳಸಮುದಾಯಗಳನ್ನು ಅಸ್ಪೃಶ್ಯರಂತೆ ಕಂಡಿರುವುದು ಗುರುತಿಸಲಾಗಿದೆ. ತೀ.ನಂ ಶಂಕರನಾರಾಯಣರು ಸಾಮಾಜೋ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕುರುಬ, ಬೇಡ ಮತ್ತು ಇತರ ಸಮುದಾಯಗಳ ಸಾಮ್ಯತೆಗಳೊಂದಿಗೆ ಗುರುತಿಸುವುದನ್ನು ಕಾಣಬಹುದು. ಕಾಡುಗೊಲ್ಲರ ಕೆಲವು ಪುರಾಣಗಳಿಂದ ಈ ಸಂಬಂಧವನ್ನು ಗುರುತಿಸಿದ್ದಾರೆ. ಆ ಕಾಲಕ್ಕಾಗಲೇ ಅವರಲ್ಲಿ ವಿವಾಹ ಸಂಬಂಧ ಮಾಡುವ ಪದ್ಧತಿ ನಿಂತು ಹೋಗಿರಬೇಕು. ಆದರೆ ಚಿತ್ರದೇವರು ಕಥೆಯಲ್ಲಿ ಚಿತ್ತಯ್ಯ ಬೇಡರ ಮಗಳಾದ ಗಂಗೆ, ಮಾಳಮ್ಮ ಮದುವೆಯಾಗುವುದು ಅಪವಾದವಾಗಿದೆ ಎಂದು ತೀ.ನಂ.ಶಂಕರನಾರಾಯಣರು ಗುರುತಿಸುತ್ತಾರೆ.

ಕಾಡುಗೊಲ್ಲರಲ್ಲಿ ಬ್ರಾಹ್ಮಣರಿಂದ ಪ್ರಭಾವಿತವಾಗಿರುವ ವರ್ಗಗಳಿವೆ. ವೀರಶೈವರಿಂದ ಪ್ರಭಾವಿತವಾಗಿರುವ ವರ್ಗಗಳಿವೆ. ಮೂಲ ಲಕ್ಷಣಗಳನ್ನು ಉಳಿಸಿಕೊಂಡಿರುವ ವರ್ಗಗಳಿವೆ. ಹಾಗೆಯೇ ಯಾರಿಂದಲೂ ಪ್ರಭಾವಿತವಾಗದೇ ತಮ್ಮ ಬುಡಕಟ್ಟಿನ ಮೂಲ ಲಕ್ಷಣಗಳನ್ನು ಉಳಿಸಿಕೊಂಡಿರುವ ವರ್ಗಗಳಿವೆ. ಇಂತಹ ಸ್ಥಿತ್ಯಂತರದ ಸಾಮಾಜಿಕ ಬದಲಾವಣೆಯು ತೀ.ನಂ.ಶಂಕರನಾರಾಯಣರು ಆಯ್ಕೆ ಮಾಡಿಕೊಂಡಿರುವ ಹಟ್ಟಿಗಳಲ್ಲಿ ಕಂಡುಬರುವುದನ್ನು ಗುರುತಿಸುತ್ತಾರೆ."[೨೧] ಮುಖ್ಯವಾಗಿ ಸಾಮಾಜಿಕ ಕಟ್ಟುಪಾಡು ಕಾಡುಗೊಲ್ಲರಲ್ಲಿ ತಮ್ಮ ಸಮುದಾಯದ ಮಹಿಳೆಗೆ ಸಂಬಂಧಿಸಿದ 'ಸೂತಕ'ವನ್ನು ಅತ್ಯಂತ ಕೀಳಾಗಿ ಕಾಣುವರು ಒಂದು ಕಡೆಯಾದರೆ, 'ಹರಿಜನರನ್ನು ಅಸ್ಪೃಶ್ಯರೆಂದು ಪರಿಗಣಿಸುವುದು ಮತ್ತೊಂದೆಡೆ, ಅವರನ್ನು ತಮ್ಮ ಹಟ್ಟಿಯ ಒಳಗಡೆ ಸೇರಿಸುವುದಿಲ್ಲ ಹಾಗೂ ಮುಟ್ಟಿಸಿಕೊಳ್ಳುವುದಿಲ್ಲ. ಈ ವಿಷಯದಲ್ಲಿ ಕಾಡುಗೊಲ್ಲರ ಧೋರಣೆ, ಉಳಿದ ಜಾತಿಯ ಜನರಂತೆಯೋ ಇದೆ. ಕಾಡುಗೊಲ್ಲರು ತಾವು ಹರಿಜನರಿಗಿಂತ ಸಾಮಾಜಿಕವಾಗಿ ಮೇಲ್ವರ್ಗದವರೆಂದು ಭಾವಿಸಿಕೊಂಡು ಅದರಂತೆಯೇ ವರ್ತಿಸುತ್ತಾರೆ, ಆದರೆ, ಕಾಡುಗೊಲ್ಲರ ಸಾಮಾಜಿಕ, ಆರ್ಥಿಕ, ಪರಿಸ್ಥಿತಿಗಳು ಹರಿಜನರಿಗಿಂತ ಉತ್ತಮ ಮಟ್ಟದಲಿಲ್ಲ, ಎಷ್ಟೋ ಜನ ಕಾಡುಗೊಲ್ಲರು ಹರಿಜನರಿಗಿಂತಲೂ ಕೆಳಮಟ್ಟದಲ್ಲಿ ಬದುಕುತ್ತಿವೆ."[೨೨] ಇಂತಹ ಸಾಮಾಜಿಕ ಅಂಶಗಳನ್ನು ತೀ.ನಂ.ಶಂಕರನಾರಾಯಣರು ಪ್ರಶ್ನೆಮಾಡದೇ ಮೃದುವಾಗಿ ಒಪ್ಪಿಕೊಂಡಂತೆ ಅಧ್ಯಯನ ಮಾಡಿದ್ದಾರೆ.

೬.೪.೨. ಮ್ಯಾಸಬೇಡರು(೧೯೮೯)

೮೦ರ ದಶಕದಲ್ಲಿ ಸಮುದಾಯ ಕೇಂದ್ರಿತವಾಗಿ ಸಾಂಸ್ಕೃತಿಕ ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದವು. ಇವುಗಳ ಮೂಲಕ ಸಮುದಾಯಗಳ ಅದರಲ್ಲೂ ವಿಶೇಷ ಬುಡಕಟ್ಟು ಸಮುದಾಯಗಳ ಕುರಿತು ಮಹತ್ವರದ ಸಂಗತಿಗಳು ಈ ಅಧ್ಯಯನಗಳ ಮೂಲಕ ಬೆಳಕಿಗೆ ಬಂದವು. ನಿರ್ವಸಾಹತೀಕರಣ ವ್ಯವಸ್ಥೆಯಲ್ಲಿ ಪುನರ್ ಸಂಸ್ಕೃತಿ ಕಟ್ಟುವಲ್ಲಿ ಆದ್ಯತೆ ನೀಡಿದವು. ಸಮುದಾಯ ಅಧ್ಯಯನ ಕುರಿತು ಕೆಲವು ಅಂಶಗಳನ್ನು ಗಮನಿಸಬಹುದು. ಒಂದು. ಸಮುದಾಯ ಅಧ್ಯಯನ ಎಂಬುದು ಸಾಂಸ್ಕೃತಿಕ ರಾಜಕಾರಣವನ್ನು ಉಂಟುಮಾಡುವಂತದ್ದು. ಎರಡು. ಕನ್ನಡ-ಕರ್ನಾಟಕ

ಸಂದರ್ಭದಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿ ಬಲಿಷ್ಠವಾದ ಸಮುದಾಯಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಅಧ್ಯಯನಗಳು ಕಾಣಿಸಿಕೊಂಡಿರುವುದನ್ನು ನೋಡಬಹುದು. ಉದಾಹರಣೆ, ಕಾಡುಗೊಲ್ಲರು, ಮ್ಯಾಸಬೇಡರು, ಒಕ್ಕಲಿಗರು, ಲಂಬಾಣಿ, ಇತ್ಯಾದಿ ಜನಾಂಗಗಳ ಕುರಿತು, ಜಾನಪದೀಯ, ಜನಾಂಗಿಕ, ನೆಲೆಯಲ್ಲಿ ಒಬ್ಬೊಬ್ಬ ವಿದ್ವಾಂಸನು ಅಧ್ಯಯನ ಕೈಗೊಂಡು ಸಾಂಸ್ಕೃತಿಕತೆಯನ್ನು ಪ್ರತಿಪಾದಿಸಿದರು. ತಮ್ಮ ಅಧ್ಯಯನಗಳಲ್ಲಿ ಸಮುದಾಯಗಳನ್ನು ಸಮಗ್ರವಾಗಿ ಕ್ಷೇತ್ರಕಾರ್ಯದ ಮೂಲಕ ಕಟ್ಟಿಕೊಡುವಂತದ್ದು.

ಮುಖ್ಯವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಬಲಿಷ್ಠವಾದ ಸಮುದಾಯಗಳ ಅಧ್ಯಯನಗಳು ನಡೆದಿರುವ ಕಾರಣವನ್ನು ಪ್ರಶ್ನೆಮಾಡಿಕೊಳ್ಳಬೇಕಾಗಿದೆ. ಬೇಡ, ನಾಯಕರ ಕುರಿತು ತುಂಬಾ ಅಧ್ಯಯನಗಳು ನಡೆದಿವೆ. ಇವೆಲ್ಲ ಮೇಲ್ಮುಖವಾಗಿ, ನಡೆದಿರುವಂತಹ ಅಧ್ಯಯನಗಳು. ಈ ಸಮುದಾಯ ಕುರಿತು ಕರ್ನಾಟಕದ ಸಂದರ್ಭದಲ್ಲಿ ತುಂಬಾ ಅಧ್ಯಯನಗಳು ಕಾಣಿಸಿಕೊಂಡಿವೆ ಎಂದು ಹೇಳಲಾಗುತ್ತದೆ. ಚಿತ್ರದುರ್ಗ ಪ್ರದೇಶದ ಮ್ಯಾಸಬೇಡರ ಕುರಿತು ಅಧ್ಯಯನಗಳು ಕಾಣಿಸಿಕೊಂಡಷ್ಟು ಇತರೆಡೆ ಪ್ರಾದೇಶಿಕವಾಗಿ ಯಾವ ಅಧ್ಯಯನಗಳು ಕಾಣಿಸಿಕೊಂಡಿಲ್ಲ. ಬೆಳಗಾವಿ, ಸುರಪುರ, ಕೋಲಾರ, ಮೈಸೂರು, ದಾವಣಗೆರೆ, ಮುಂತಾದ ಪ್ರದೇಶಗಳ ಬೇಡನಾಯಕರ ಬಗ್ಗೆ ಸಮುದಾಯಗಳ ಬಗ್ಗೆ ಅಷ್ಟಾಗಿ ಅಧ್ಯಯನಗಳು ಕಾಣಿಸಿಕೊಂಡಿಲ್ಲ. ಏಕೆಂದರೆ ಯಾವುದೇ ಸಮುದಾಯವು ಒಂದು ನೆಲೆಯಲ್ಲಿ ನಿಂತು ನಂತರ ಬೇರೆ ಪ್ರದೇಶಗಳಿಗೆ ವಲಸೆ ಹೋಗಿರುತ್ತವೆ. ಹಾಗಾಗಿ ಚಿತ್ರದುರ್ಗ ಪ್ರದೇಶಗಳಲ್ಲಿ ಕಾಡುಗೊಲ್ಲರು ಮತ್ತು ಮ್ಯಾಸನಾಯಕರು ತಮ್ಮದೆ, ನೆಲಮೂಲ ಸಂಸ್ಕೃತಿಯ ಬುಡಕಟ್ಟು ಸಂಪ್ರದಾಯಗಳ ಮುಖೇನ, ಹಟ್ಟಿ ಸಂಸ್ಕೃತಿಯನ್ನು ಇಟ್ಟುಕೊಂಡಿವೆ. ಈ ಪ್ರದೇಶದಲ್ಲಿ ವಾಸವಾಗಿದ್ದರಿಂದ ಈ ಪ್ರದೇಶವು ಇವರ ಪ್ರಮುಖ ನೆಲೆಯಾಯಿತು. ಕಾಡುಗೊಲ್ಲರ ಒಂದು ಐತಿಹ್ಯದ ಪ್ರಕಾರ ಡೆಲ್ಲಿಯಿಂದ ಬಂದು ಹಿರಿಯೂರು, ಚಿತ್ರದುರ್ಗ, ತುಮಕೂರು, ಪ್ರದೇಶದಲ್ಲಿ ಪಶುಪಾಲನಾ ವೃತ್ತಿ, ಹಾಗೂ ಕುರಿ ಸಾಕಾಣಿಕೆ ಮೂಲಕ ನೆಲೆಯೂರಿದರು. ಹಾಗೆಯೇ ಮ್ಯಾಸನಾಯಕರು ಶ್ರೀಶೈಲದ ಮೂಲಕ ವಲಸೆ ಬಂದು ಚಿತ್ರದುರ್ಗ ಪರಿಸರದಲ್ಲಿ ಮೂಲತಃ ಬೇಟೆಗಾರರಾಗಿದ್ದ ಇವರು, ಪಶುಪಾಲನಾ ವೃತ್ತಿಯನ್ನು ಅನುಸರಿಸಿ ಚಿತ್ರದುರ್ಗದ ಪರಿಸರದಲ್ಲಿ ವ್ಯಾಪಕವಾಗಿ ಹರಡಿದ್ದಾರೆ. ಆದ್ದರಿಂದ ಈ ಪ್ರದೇಶದಲ್ಲಿ ಬುಡಕಟ್ಟು ಸಂಸ್ಕೃತಿಯ ಎರಡು ಪ್ರಭಾವ ಸಮುದಾಯಗಳಾದ ಕಾಡುಗೊಲ್ಲರು, ಮತ್ತು ಮ್ಯಾಸ ನಾಯಕರು ನೆಲೆಗೊಂಡಿದ್ದಾರೆ. ಈ ಎರಡು ಸಮುದಾಯಗಳ ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯಗಳು ಸಾಂಸ್ಕೃತಿಕ ನಾಯಕರ ಬಗೆಗಿನ ಪುರಾಣ, ಕಾವ್ಯ, ಕಥನಗಳು, ಒಂದೇ ಸಾಮ್ಯತೆಯುಳ್ಳವಾಗಿವೆ.

ಇಂತಹ ಭೌಗೋಳಿಕ ಪ್ರದೇಶದಲ್ಲಿ ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಹರಡಿಕೊಂಡಿರುವ 'ಮ್ಯಾಸನಾಯಕರ' ಜನಾಂಗಿಕ ಅಧ್ಯಯನ, ಜಾನಪದೀಯ ಅಧ್ಯಯನ, ಸಾಮಾಜಿಕ ಅಧ್ಯಯನ

ನಡೆದಿವೆ. ಪ್ರಾರಂಭದಲ್ಲಿ ಮಾನವಶಾಸ್ತ್ರ ಅಧ್ಯಯನಗಳು, ದಾಖಲೀಕರಣದ ನೆಲೆಯಲ್ಲಿ 'ಮ್ಯಾಸಬೇಡರ' ಅಧ್ಯಯನ ಮಾಡಿದ್ದಾರೆ. ಅದರಲ್ಲಿ ಕೃಷ್ಣಮೂರ್ತಿ ಹನೂರ ಅವರು 'ಮ್ಯಾಸಬೇಡ' ಎಂಬ ಪಿಎಚ್.ಡಿ ಸಂಶೋಧನಾ ಕೃತಿಯಲ್ಲಿ ಚಿತ್ರದುರ್ಗ ಪರಿಸರದ ಮ್ಯಾಸಬೇಡರ ಆಚಾರ, ವಿಚಾರ, ಸಾಹಿತ್ಯ, ಸಂಸ್ಕೃತಿ ಕುರಿತು ದಾಖಲಿಸಿರುವುದನ್ನು ಗುರುತಿಸಬಹುದು.

ಕೃಷ್ಣಮೂರ್ತಿ ಹನೂರು ಅವರು ಕನ್ನಡ ಸಮುದಾಯಗಳ ಚರಿತ್ರೆಯನ್ನು ಸಾಮಾಜಿಕ ನೆಲೆಯಲ್ಲಿ ಕಟ್ಟುವ ಕೆಲಸ ಮಾಡುತ್ತಾರೆ. ಇದೇ ನೆಲೆಯಲ್ಲಿ ಅವರು ಕತ್ತಾಲದಾರಿ ದೂರ, ಕಾಲುದಾರಿಯ ಕಥನಗಳು, ಸಾವಿರ ಸಿರಿಬೆಳಗು, 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಂಶೋಧನೆಯ ಸಂದರ್ಭದಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಶೋಧನೆ ಮಾಡಿರುವುದು ಕಾಣಬಹುದು. ಕಾಲುದಾರಿಯ ಕಥನಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಉದ್ದಕ್ಕೂ ವ್ಯಾಪಕವಾದ ಕ್ಷೇತ್ರಕಾರ್ಯ ಮೂಲಕ ಅಲಕ್ಷಿತ ತಸಮುದಾಯಗಳ ಬಗ್ಗೆ ಚಿಂತನೆ ಮಾಡಿದ್ದಾರೆ. ಹಾಡು, ಪುರಾಣ ಚರಿತ್ರೆ ಮಹಿಳೆ, ಶಾಸನ, ನಂಬಿಕೆ, ಸಂಪ್ರದಾಯ ಸೋಬಾನೆ ಇತ್ಯಾದಿ ವಿವರಗಳನ್ನು ದಾಖಲಿಸಿದ್ದಾರೆ. ಒಟ್ಟಾರೆಯಾಗಿ ಕಾಲುದಾರಿ ಕಥನಗಳು ಜನಸಮುದಾಯಗಳ ಸಾಮಾಜಿಕ ಚರಿತೆಯನ್ನು ಪ್ರತಿಪಾದಿಸುತ್ತದೆ.

ಕೃಷ್ಣಮೂರ್ತಿ ಹನೂರವರ 'ಕತ್ತಾಲದಾರಿ ದೂರ' ಎಂಬ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಪರಿಸರದ ಸಿರಿಯಜ್ಜಿ ಮತ್ತು ಇತರೆ ಹಿರಿಯ ದಾನಮ್ಮ, ಹನುಮಜ್ಜಿ, ಚೆನ್ನಮ್ಮ ಇವರು ಹುಟ್ಟುಹಾಕಿದ ಮಹಾಸತಿ ಹಾಡುಗಳನ್ನು ಕಾಣಬಹುದು. ಈ ಕೃತಿಯ ಮೂಲಕ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯು ಪ್ರೇರಣೆ ಮತ್ತು ಪ್ರಭಾವಗಳನ್ನು ಗುರುತಿಸಬಹುದು. ಉತ್ತರ ಭಾರತದಲ್ಲಿ ಪುರೋಹಿತಶಾಹಿಯು ಮೇಲ್ವರ್ಗದಲ್ಲಿ ಮಹಾಸತಿ ಸಂಪ್ರದಾಯವು ಜೀವಂತವಾಗಿ ನೆಲೆಗೊಂಡಿತ್ತು. ಪುರೋಹಿತಶಾಹಿ ಮತ್ತು ರಾಜಶಾಹಿ ವರ್ಗಗಳಲ್ಲಿ ಜೀವಂತವಾಗಿರುವಂತ ಮಹಾಸತಿ ಸಂಪ್ರದಾಯ ಮತ್ತು ದಕ್ಷಿಣ ಭಾರತದ ಸಂದರ್ಭದಲ್ಲಿ ಕಾಡುಗೊಲ್ಲರು ಮತ್ತು ಮ್ಯಾಸಬೇಡರ ಬುಡಕಟ್ಟು ಸಮುದಾಯಗಳ ಮಹಾಸತಿ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿರುವುದನ್ನು 'ಕತ್ತಲದಾರಿ ದೂರ' ಕೃತಿಯ ಮೂಲಕ ಕಾಣಬಹುದು. ಬಹುತೇಕ ಭಾರತೀಯ ಹಿಂದೂ ಸಮಾಜದಲ್ಲಿ ಜೀವಂತವಾಗಿರುವ ನಂಬಿಕೆ, ಆಚಾರ, ವಿಚಾರ, ಸಂಪ್ರದಾಯಗಳು, ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಶೋಷಣೆಹಾಗಿ ಕಂಡವು. ಬಾಲ್ಯವಿವಾಹ ಮತ್ತು ಮಹಾಸತಿ ಸಂಪ್ರದಾಯ, ಬ್ರಿಟಿಷರು ನಮ್ಮಲ್ಲಿಗೆ ಬಂದ ಮೇಲೆ ಅವರಿಗೆ ಶೋಷಣೆಯಾಗಿ ಕಂಡವು. ವಸಾಹತುಶಾಹಿ ಶಿಕ್ಷಣದಿಂದ ರಾಜರಾಮ್‌ಮೋಹನರಾಯ್, ಲಾರ್ಡ್ ವಿಲಿಯಂ ಬೆಂಟಿಂಕ್, ಅವರ ಸಹಾಯದಿಂದ ಉತ್ತರ ಭಾರತದಲ್ಲಿ ಜೀವಂತವಾಗಿರುವ ಸಂಪ್ರದಾಯವನ್ನು ಮೊಟಕುಗೊಳಿಸುತ್ತಾರೆ. ಹೀಗೆ ಸಾಮಾಜಿಕವಾಗಿ ಬದಲಾದ ಸಂಗತಿಗಳನ್ನು ತಳಸ್ತರದ ಜನಪದರ ಅಧ್ಯಯನಗಳಲ್ಲಿ ಕಾಣಬಹುದಾಗಿದೆ. ಹೀಗೆ ಜಾನಪದ ಅಧ್ಯಯನಕಾರರು

ಸಮುದಾಯಗಳ ಅಧ್ಯಯನಗಳಲ್ಲಿ ಸಮುದಾಯಗಳ ಸಾಮಾಜಿಕ ಸಂಗತಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಮುಂತಾದ ಅಂಶಗಳನ್ನು ಗುರುತಿಸಿದ್ದಾರೆ. ಇಲ್ಲಿಯವರೆಗೂ ನಂಬಿಕೆಗೊಂಡು ಬಂದಂತಹ ಎಷ್ಟೋ ಸಾಮಾಜಿಕ ಸಂಗತಿಗಳು, ಅಕ್ಷರವಂತರ ಅಧ್ಯಯನಗಳಿಂದ ಶೋಷಣೆಯ ನೆಲೆಯಾಗಿ ಕಂಡವು. ಇದು ಒಂದು ಬಗೆಯ ಸಮುದಾಯಗಳ ಅನನ್ಯತೆಯನ್ನು ಕಟ್ಟಿಕೊಡುವುದರ ಜೊತೆಗೆ ಆ ಸಮುದಾಯಗಳ ಒಳಗಿರುವ ಅನಿಷ್ಟ ಸಂಪ್ರದಾಯ, ನಂಬಿಕೆಗಳನ್ನು ಎತ್ತಿ ಹಿಡಿಯುವುದಾಗಿದೆ.

ಕೃಷ್ಣಮೂರ್ತಿ ಹನೂರರು 'ಮ್ಯಾಸಬೇಡ' ಸಮುದಾಯವು ನೆಲಮೂಲ ಸಂಸ್ಕೃತಿಯನ್ನು ಹಾಗೂ ಈ ಸಮುದಾಯವು ಚಿತ್ರದುರ್ಗದ ಪರಿಸರದಲ್ಲಿ ಯಾಕೆ ನೆಲೆಗೊಂಡಿತು ಎಂಬುದನ್ನು ಭೌಗೋಳಿಕ ನೆಲೆಯಲ್ಲಿ ವಿವರಿಸಿದ್ದಾರೆ. ಆಂಧ್ರಪ್ರದೇಶ ಮತ್ತು ಕರ್ನಾಟಕ ಗಡಿಭಾಗದ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ರಾಯಚೂರು, ಪ್ರದೇಶಗಳಲ್ಲಿ ಪಶುಪಾಲನೆಗೆ ಬೇಕಾದ ಕುರುಚುಲು ಕಾಡನ್ನು ಕಾಣಬಹುದು. ಜೊತೆಗೆ ಆದಿಮ ಮೂಲಕ ಬೇಟೆ ಸಂಸ್ಕೃತಿಗೆ ಈ ಪ್ರದೇಶವು ಮೂಲ ನೆಲೆಯಾಗಿತ್ತು ಎಂಬುದು ಮರೆಯಬಾರದು. ಹಾಗಾಗಿ ಬೇಟೆ ಪಶುಪಾಲನೆ, ಯೋಗ್ಯವಾದ ಈ ಮಣ್ಣಿನಲ್ಲಿ ನೆಲೆಸಲು ಪ್ರಮುಖ ಕಾರಣವಾಯಿತು ಎಂಬುದನ್ನು ನೋಡಬಹುದು.

ಕರ್ನಾಟಕದ ಸಂದರ್ಭದಲ್ಲಿ ಪಶುಪಾಲಕ ಸಮುದಾಯಗಳಾದ ಮ್ಯಾಸಬೇಡರು, ಕಾಡು ಕುರುಬರು, ಕಾಡುಗೊಲ್ಲರು, ಸಾಮ್ಯತೆ ಹೊಂದಿರುವ ನೆಲಮೂಲ ಸಂಸ್ಕೃತಿಯ ಅಂಶಗಳನ್ನು ಕಾಣಬಹುದು. ವಲಸೆಗಾರರಾಗಿ ಕಾಣಿಸಿಕೊಂಡ ಪಶುಪಾಲಕರು ಆಶ್ರಯ ತಾಣಗಳಾದ ಬೆಟ್ಟ, ಗುಡ್ಡ, ಕಾಡು, ನದಿ, ಹಳ್ಳ, ಹುಲ್ಲುಗಾವಲು ಪ್ರದೇಶಗಳಿಗೆ ಹರಸಿ ಬಂದು ನೆಲೆಸಿದವು. ಪಶುಪಾಲಕ ಸಮುದಾಯಗಳು ನಂಬಿಕೆ, ಆಚರಣೆ, ಸಂಪ್ರದಾಯಗಳು ಪಶುಪಾಲನೆಯ ಮೂಲಕ ಪಳೆಯುಳಿಕೆಗಳು ಎಂಬುದಾಗಿ ಹೇಳಬೇಕಾಗಿದೆ. ಉದಾಹರಣೆ ಕಾಡುಗೊಲ್ಲರ ಸಮುದಾಯದಲ್ಲಿ ಋತಿಮತಿ, ಹೆರಿಗೆ, ಮುಟ್ಟು ಮುಂತಾದ ಸೂತಕಕ್ಕೆ ಸಂಬಂಧಿಸಿದ ಮೂಲದ ಸಂಪ್ರದಾಯಗಳನ್ನು ಅವರ ಹಟ್ಟಿಗಳಾಚೆ ಕಾಣಲು ಸಾಧ್ಯವಿದೆ. ವಲಸೆ ಮೂಲ ಸಂಸ್ಕೃತಿ, ನೆಲ ಸಂಸ್ಕೃತಿಯಾಗಿರುವುದನ್ನು ಗುರುತಿಸಬಹುದು. ಅಂದರೆ, ಪ್ರಾಕೃತಿಕವಾಗಿ ಭೂಮಿ, ಪ್ರಕೃತಿ, ಸಂಸ್ಕೃತಿ ನಡುವೆ ಹೆಣ್ಣಿನಲ್ಲಿ ಆಗುವಂತಹ ನೈಸರ್ಗಿಕವಾಗಿ ಕಾಣಿಸಿಕೊಳ್ಳುವ ಜೈವಿಕವಾಗಿ ಸಾಮ್ಯತೆ ಹೊಂದಿರುವುದನ್ನು ಗುರುತಿಸಬಹುದು. ಇವುಗಳನ್ನು ವೈಜ್ಞಾನಿಕವಾಗಿ ನೋಡಬೇಕೇ ಹೊರತು ಶೋಷಣೆಯ ನೆಲೆಯಲ್ಲಿ ನೋಡಲು ಸಾಧ್ಯವಿಲ್ಲ.

ಕೃಷ್ಣಮೂರ್ತಿ ಹನೂರವರು ಒಂದು ಭೌಗೋಳಿಕ ಪ್ರದೇಶವನ್ನು ಇಟ್ಟುಕೊಂಡು ಮ್ಯಾಸಬುಡಕಟ್ಟು ಸಮುದಾಯವನ್ನು ಕುರಿತು ಸಂಶೋಧನೆ ಮಾಡಿದ್ದಾರೆ. ಮ್ಯಾಸಬೇಡರ ಜೀವನ, ಸಾಮಾಜಿಕ ವ್ಯವಸ್ಥೆ ಕುರಿತು ಅಧ್ಯಯನ ಮಾಡಿದ್ದಾರೆ. ಮುಖ್ಯವಾಗಿ ಮ್ಯಾಸಬೇಡರ ಆಚರಣೆಗಳನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಈ ಸಮುದಾಯದಲ್ಲಿ ಜನನದ ಆಚರಣೆಯನ್ನು

ಸಾಂಸ್ಕೃತಿಕ ನೆಲೆಯಲ್ಲಿ ನೋಡಿದ್ದಾರೆ. "ಹೆಣ್ಣುಮಗಳು ಗರ್ಭಿಣಿಯಾಗಿ ಮಗುವನ್ನು ಪಡೆಯುವ ಸಂದರ್ಭವನ್ನು ಬೇಡನಾಯಕರು ಮೈಲಿಗೆ ಸೂತಕ ಎಂದು ಭವಿಸಿರುವುದರಿಂದ, ಗರ್ಭಿಣಿಯನ್ನು ಒಂಭತ್ತು ತಿಂಗಳು ತುಂಬುತ್ತಲೆ, ಅಂದರೆ ಹೆರಿಗೆಯ ಸಂದರ್ಭಕ್ಕೆ ಮನೆಯ ಹೊರಗಡೆ ಬೇವಿನಸೊಪ್ಪು ಮತ್ತು ಹೊಂಗೆಸೊಪ್ಪು ಬೆರೆಸಿ ಕಟ್ಟಿದ ಗುಡಿಸಿಲಿನಲ್ಲಿ ಕೂರಿಸುವರು."[೨೩] ಈ ಆಚರಣೆಯು ಜನನ ಸಂದರ್ಭದಲ್ಲಿ ಅಷ್ಟೇ ಅಲ್ಲದೇ ಹೆಣ್ಣು ಮೈ ನೆರೆದಾಗ ಅವಳನ್ನು ಈ ಪದ್ಧತಿಯಂತೆ ಹೊರಗೆ ಸೊಪ್ಪಿನ ಗುಡಿಸಲಿನಲ್ಲಿ ಕೂರಿಸುವರು. ಇಂತಹ ಆಚರಣೆಗಳನ್ನು ವೈಜ್ಞಾನಿಕವಾಗಿ ಬಿಡಿಸಿದಾಗ ಮಾತ್ರ ಅದರ ಹಿಂದಿನ ಸತ್ಯವನ್ನು ನೋಡಬಹುದು. ಏಕೆಂದರೆ ಮ್ಯಾಸಬುಡಕಟ್ಟು ಜನರು ಮೂಲತಃ ಅರಣ್ಯವಾಸಿಗಳಾಗಿದ್ದು, ಅವರ ಪ್ರತಿಯೊಂದು ಆಚರಣೆಗಳು ಪರಿಸರದೊಂದಿಗೆ ಸಂಬಂಧವನ್ನು ಹೊಂದಿರುತ್ತವೆ. ಇದನ್ನೆ ಹನೂರವರು ದಾಖಲಿಸಿದ್ದಾರೆ. ಈ ಆಚರಣೆಯನ್ನು ಕಾಡುಗೊಲ್ಲರ ಸಮುದಾಯಗಳಲ್ಲಿ ಕಾಣಬಹುದು. ಚಿತ್ರದುರ್ಗದ ಕಡೆಯ ಕಾಡುಗೊಲ್ಲರಲ್ಲಿಯೂ ಸಹ ತಮ್ಮ ಗುಂಪಿನಲ್ಲಿಯ ಹೆಣ್ಣುಮಗಳು ಋತುಮತಿಯಾಗಲಿ, ಅಥವಾ ಹೆಣ್ಣು ಮಗಳೊಬ್ಬಳು ಮಗುವನ್ನು ಪಡೆಯುವ ಸಂದರ್ಭದಲ್ಲಿಯಾಗಲಿ ದೀಪವೊಂದನ್ನು ಕೈಯಲ್ಲಿ ಹಿಡಿಸಿಕೊಂಡು, ಆ ಸಂದರ್ಭಕ್ಕೆ ತಕ್ಕುದಾದಂಥ ಹತ್ತಾರು ತ್ರಿಪದಿಗಳನ್ನು ಹಾಡಿಕೊಂಡು ಹಟ್ಟಿಯಿಂದೀಚೆ ಇರುವ ಗುಡಿಸಲಿಗೆ ಬರುವರು. ಹೀಗೆ ಮ್ಯಾಸಬುಡಕಟ್ಟು ಸಮುದಾಯ ಮತ್ತು ಕಾಡುಗೊಲ್ಲರ ಸಮುದಾಯಗಳಲ್ಲಿ ಜನನದ ಆಚರಣೆಗಳು ಮತ್ತು ಹೆಣ್ಣಿನ ಸೂತಕದ ಆಚರಣೆಗಳನ್ನು ಹನೂರವರು ಅದರ ಹಿಂದಿನ ತಾತ್ವಿಕತೆಯನ್ನು ಹೇಳಿದ್ದಾರೆ. ಈ ಸಮುದಾಯದಲ್ಲಿ ಋತುಮತಿ ಆಚರಣೆಯು ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿದೆ. ಹನೂರವರು ಈ ಆಚರಣೆಯನ್ನು ಹೆಣ್ಣು ತನಗೆ ಮಕ್ಕಳನ್ನು ಪಡೆಯವು ಬಯಕೆಗಾಗಿ ಪ್ರಚೋದಿಸುವುದಕ್ಕೋಸ್ಕರ ಅವಳಿಗೆ ಅವಕಾಶ ಮಾಡಿಕೊಡಲಾಗಿರುತ್ತದೆ ಎಂದು ಹೇಳಿದ್ದಾರೆ. ಆದರೆ ಅವರ ಈ ಹೇಳಿಕೆಯು ಬುಡಕಟ್ಟು ಸ್ತ್ರೀಯರು ತಮ್ಮ ಬಯಕೆಯನ್ನು ಪಡೆಯಲು ಈ ಮಾರ್ಗವೇ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ ಜನಪದರು ಯಾವುದೆ ಆಚರಣೆ ಮಾಡುವುದರ ಹಿಂದೆ ಉದ್ದೇಶವಿರುತ್ತದೆ. ಅವರ ದೃಷ್ಟೀಕೋನವನ್ನು ಅಧ್ಯಯನಕಾರರು ಸರಿಯಾಗಿ ಗ್ರಹಿಸಬೇಕಾಗುತ್ತದೆ. ಹೆಣ್ಣು ಋತುಮತಿಯಾದಾಗ ಅವಳು ನಿಶ್ಯಕ್ತಿ ಹೊಂದಿದ ಸಂದರ್ಭದಲ್ಲಿ ಅವಳಿಗೆ ಶಕ್ತಿಯನ್ನು ಪಡೆಯಲು ಪ್ರೋಟಿನ್ ಆಹಾರವನ್ನು ನೀಡುತ್ತಾರೆ. ಅದನ್ನು ಅವರ ಸಂಬಂಧಿಕರು ಇಲ್ಲವೇ ಹತ್ತಿರದ ಬಂಧುಗಳು ನೀಡುವರು. ಇದು ಒಂದು ಆಚರಣೆಯಾಗಿ ಮಾರ್ಪಾಡು ಹೊಂದುತ್ತಾ ಬಂದಿರುತ್ತದೆ. ಆದರೆ ಅಧ್ಯಯನಕಾರರು ಇವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡದೆ ಮಾಹಿತಿ ನೆಲೆಯಲ್ಲಿ ದಾಖಲಿಸಿದ್ದಾರೆ. ಧಾರ್ಮಿಕ ಆಚರಣೆಗಳು ಮತ್ತು ಉತ್ಸವಗಳು ಮ್ಯಾಸಬೇಡರ ಸಾಂಸ್ಕೃತಿಕ ಪ್ರತೀಕಗಳಾಗಿವೆ. ಇವುಗಳನ್ನು ಹನೂರರವರು ಅಧ್ಯಯನ ಮಾಡಿದ್ದಾರೆ. ಮ್ಯಾಸಬೇಡರು ಕೃತಿಯಲ್ಲಿ ಒಂದು ಪ್ರದೇಶದ ಆಚರಣೆಯನ್ನು ವಿವರಣಾತ್ಮಕವಾಗಿ ವಿವರಿಸಿದ್ದಾರೆ.

ಉಪಸಂಹಾರ

ಬ್ರಿಟಿಷರ ಮೂಲಕ ಪ್ರಾರಂಭವಾದ ಜನಪದ ಸಾಹಿತ್ಯ ಅಧ್ಯಯನ ಇದರ ಮುಖೇನ ಸಮುದಾಯಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಇದರಿಂದ ಭಾರತವನ್ನು ವಶಪಡಿಸಿಕೊಂಡು ರಾಜಕೀಯವಾಗಿ ಆಳಲು ಹಾಗೂ ಆರ್ಥಿಕವಾಗಿ ಲೂಟಿ ಮಾಡಲು ಅಗತ್ಯವಾದ ತಿಳುವಳಿಕೆಗಾಗಿ ಈ ಬಗೆಯ ಅದ್ಯಯನಗಳು ನಡೆದವು. ಇದೇ ಮಾದರಿಯಲ್ಲಿ ಸಮುದಾಯ ದೃಷ್ಟಿಧೋರಣೆ, ಅಧ್ಯಯನ ಮಾದರಿಗಳಿಂದ ದೇಶಿ ಸಮುದಾಯ ಅಧ್ಯಯನಗಳು ಬಿಡಿಸಿಕೊಂಡಿಲ್ಲ. ತಳವರ್ಗಗಳು ಸಮುದಾಯದ ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ಮಾತ್ರ ನೋಡುತ್ತಿವೆ. ಅಂತೆಯೇ ಸಮುದಾಯಗಳ ಅಧ್ಯಯನವೂ ಈ ಬಗೆಯಲ್ಲಿ ಕೆಲಸ ಮಾಡಿವೆ. ಸಮುದಾಯಗಳನ್ನು ಸಮಾಜಶಾಸ್ತ್ರೀಯ, ಚಾರಿತ್ರಿಕ ಜಾನಪದೀಯ, ಈ ಎಲ್ಲವನ್ನು ಒಳಗೊಂಡ 'ಸಾಂಸ್ಕೃತಿಕ' ಎಂಬ ಪರಿಭಾಷೆಗಳಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಜಾನಪದ ಅಧ್ಯಯನಗಳಲ್ಲಿ ಸಮುದಾಯಗಳನ್ನು 'ಜಾನಪದೀಯ ಅಧ್ಯಯನ' ಎನ್ನುವ ಚೌಕಟ್ಟಿಗೆ ಸಿಲುಕಿಸಿ ನೋಡಲಾಗುತ್ತಿದೆ. ಇಲ್ಲಿ ಸಮುದಾಯಗಳ ಮೂಲ, ವಲಸೆ, ನೆಲೆ, ವಾರ್ಷಿಕಾವರ್ತನ ಆಚರಣೆಗಳು, ಜೀವನಾವರ್ತನ ಆಚರಣೆಗಳು, ಆ ಸಮುದಾಯಗಳಲ್ಲಿರುವ ಜನಪದ ಸಾಹಿತ್ಯ, ಕಲೆ, ನಂಬಿಕೆ, ವಿಧಿನಿಷೇಧಗಳನ್ನು ಒಂದೆಡೆ ಸಂಗ್ರಹಿಸಲಾಗುತ್ತಿದೆ. ಕೆಲವೊಮ್ಮೆ ಈ ಮಾದರಿಯನ್ನೆ ಸಾಂಸ್ಕೃತಿಕ ಅಧ್ಯಯನ ಎನ್ನು ಚೌಕಟ್ಟಿಗೂ ಸಿಲುಕಿಸುವುದಿದೆ. ಹೆಚ್ಚಾಗಿ ಪಿಎಚ್.ಡಿ ಎಂ.ಫೀಲ್ ಸಂಶೋಧನೆಗಾಗಿ ಸಮುದಾಯಗಳನ್ನು ಆಯ್ದುಕೊಳ್ಳಲಾಗುತ್ತಿದೆ. ಇಂತಹ ಸಂಶೋಧನೆಗಳಲ್ಲಿ ಅಕಡೆಮಿಕ್ ವಲಯದಲ್ಲಿ ರೂಪಿಸಲಾದ ಚೌಕಟ್ಟುಗಳಿಗೆ ಸಮುದಾಯಗಳ ಮಾಹಿತಿಯನ್ನು ಒರಟಾಗಿ ತುರುಕುವುದು ನಡೆಯುತ್ತಿದೆ. ಇದರಲ್ಲೂ ಕೆಲವು ಸೂಕ್ಷ್ಮ ಅಧ್ಯಯನಗಳು ನಡೆಯುತ್ತಿವೆ. ಈ ಬಗೆಯ ಅಧ್ಯಯನಗಳನ್ನು 'ಮಾನವಶಾಸ್ತ್ರ'ದ ಅಧ್ಯಯನ ವಿಧಾನಗಳು ಗಾಢವಾಗಿ ಪ್ರಭಾವಿಸಿವೆ. ಈ ಅಧ್ಯಾಯದಲ್ಲಿ ಸಮುದಾಯಗಳ ಸಂಶೋಧನಾ ಪ್ರಬಂಧಗಳು ಈ ಮಾದರಿಯಲ್ಲಿ ನೋಡಲಾಗಿದೆ. ತೀ.ನಂ.ಶಂಕರನಾರಾಯಣ. ಕೃಷ್ಣಮೂರ್ತಿ ಹನೂರು, ಕಾಳೇಗೌಡ ನಾಗಾವರ, ಪಿ.ಕೆ.ಖಂಡೋಬ, ಮೀರಸಾಬಿಹಳ್ಳಿ ಶಿವಣ್ಣ ಇತ್ಯಾದಿ ಅಧ್ಯಯನಕಾರರು ಮಾನವ ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ.

ಕೊನೆ ಟಿಪ್ಪಣಿಗಳು

೧. ಅರುಣ ಜೋಳದಕೂಡ್ಲಿಗಿ, ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು, ಪು. ೧೭೦

೨. ನಾವಡ ಎ.ವಿ, ಜಾನಪದ ಸ್ವರೂಪ ಮತ್ತು ವ್ಯಾಖ್ಯೆ, ಪು, ೯೮

೩. ಶಂಕರನಾರಾಯಣ.ತೀ.ನಂ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು. ಪು. ೯೭

೪. ಅದೇ. ಪು. ೨೫

೫. ಅದೇ, ಪು, ೨೫

೬. ಅದೇ, ಪು, ೨೨

೭. ಅದೇ, ಪು, ೨೭

೮. ಚಂದ್ರಪೂಜಾರಿ.ಎಂ, ಸಂಶೋಧನೆ ಏನು? ಏಕೆ? ಹೇಗೆ?, ಪು, ೧೫೪

೯. ಪರಮಶಿವಯ್ಯ.ಜೀ.ಶಂ, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪು, ೭೬

೧೦. ಶಂಕರನಾರಾಯಣ.ತೀ.ನಂ, ಪೂರ್ವೋಕ್ತ, ಪು, ೩೦

೧೧. ಸ್ವಾಮಿ.ಬಿ.ಎಸ್, ಕನ್ನಡ ಜಾನಪದ ಸಾಹಿತ್ಯ, ಪು, ೧೧೦

೧೨. ಶಂಕರನಾರಾಯಣ.ತೀ.ನಂ, ಪೂರ್ವೋಕ್ತ, ಪು, ೧೭

೧೩. ನೇಗಿನಹಾಳ.ಎಂ.ಬಿ, ನೇಗಿನಹಾಳ ಪ್ರಬಂಧಗಳು, ಪು, ೧೭೫

೧೪. ಅದೇ, ಪು, ೧೭೭

೧೫. ಶಂಕರನಾರಾಯಣ.ತೀ.ನಂ, ಪೂರ್ವೋಕ್ತ, ಪು, ೭೮

೧೬. ಅದೇ, ಪು, ೧೬

೧೭. ಅದೇ, ಪು, ೧೯೩-೨೧೯

೧೮. ಶಂಕರನಾರಾಯಣ.ತೀ.ನಂ, ೨೦೦೪, ಪು, ೧೪

೧೯. ನಂಜಯ್ಯ ಹೊಂಗನೂರು, ಜಾನಪದ ಮತ್ತು ಚಲನಶೀಲತೆ, ಪು, ೬೧

೨೦. ಶಂಕರನಾರಾಯಣ.ತೀ.ನಂ, ಪೂರ್ವೋಕ್ತ, ಪು, ೫೨

೨೧. ಅದೇ, ಪು, ೨೮೦-೨೮೧

೨೨. ಅದೇ, ಪು, ೨೮೦-೨೮೧

೨೩. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರು, ಪು, ೬೮

ಅಧ್ಯಾಯ : ಏಳು
ಆಚರಣಾತ್ಮಕ ಅಧ್ಯಯನಗಳು

೭.೧. ಜನಪದ ಆಚರಣೆಗಳ ವಿವಿಧ ಬಗೆಗಳು

೭.೨. ಕರಾವಳಿ ಭಾಗದಲ್ಲಿ ಕಂಡು ಬರುವ ವಿಶಿಷ್ಟ ಆಚರಣೆಗಳು

೭.೩. ಆಚರಣೆಗಳ ಕುರಿತ ಅಧ್ಯಯನಗಳ ವಿಶ್ಲೇಷಣೆ

ಅಧ್ಯಾಯ : ಏಳು

ಆಚರಣಾತ್ಮಕ ಅಧ್ಯಯನಗಳು

ಪ್ರಸ್ತಾವನೆ

ಜಾನಪದೀಯ ಅಧ್ಯಯನಗಳ ತಾತ್ವಿಕ ಸ್ವರೂಪದಲ್ಲಿ ಸಂಪ್ರದಾಯ ಮತ್ತು ಆಚರಣೆಗಳ ವಿನ್ಯಾಸಗಳು ವಿಶಿಷ್ಟವೆನಿಸಿವೆ. ಜಾನಪದ ಎಂಬುದು ಕೇವಲ ಬುಡಕಟ್ಟು, ಅಲೆಮಾರಿ, ಕೃಷಿ, ಕುಲಕಸುಬು, ಇತ್ಯಾದಿ ಸಮುದಾಯಗಳಲ್ಲಿ ಇರುವಂತದ್ದಲ್ಲ. ಅದು ಮೇಲ್ವರ್ಗ ಜಾತಿ ಸಮುದಾಯಗಳಲ್ಲಿರುವ ಜಾನಪದೀಯ ವಿವರಗಳನ್ನು ಅಧ್ಯಯನಕಾರರು ಗುರುತಿಸಿರುವುದನ್ನು ನೋಡಬಹುದಾಗಿದೆ. ಜ್ಞಾನ ಎನ್ನುವಂತದ್ದು ಇರುವಂತದ್ದಲ್ಲ, ಅದು ರೂಪಗೊಳ್ಳುವಂತದ್ದು. ಜ್ಞಾನ ಸೃಷ್ಟಿ ಪ್ರಕ್ರಿಯೆಯನ್ನು ವಿವಿಧ ನೆಲೆಗಳಲ್ಲಿ ಕಾಣಬಹುದು. ಅವುಗಳ ರೂಪಗೊಳ್ಳುವಿಕೆಯನ್ನು ಹೀಗೆ ನೋಡಬಹುದು. ಉದಾಹರಣೆ: ಅನುವಾದ, ನಿಘಂಟು, ಸಂಪಾದನೆ, ವಿಮರ್ಶೆ, ಕಾವ್ಯ, ಗುಡಿ, ಕುಣಿತ, ಕಲೆ, ಆಚರಣೆ, ನಂಬಿಕೆ, ಗುಡ್ಡ, ಕೆರೆ, ಇತ್ಯಾದಿ ವಿವರಗಳು ಜನಪದರ ಬದುಕಿನ ಮೇಲೆ ಗಮನ ಸೆಳೆಯುತ್ತವೆ. ಇಂತಹ ಮಹತ್ತರವಾದ ಸಂಗತಿಗಳನ್ನು ಅಧ್ಯಯನಗಳಲ್ಲಿ ದಾಖಲೆಗೊಳಿಸಿ ಈ ಮೂಲಕ ಎತ್ತಿ ಹಿಡಿಯುವ ಪ್ರಯತ್ನಗಳಿವೆ. ಪರಂಪರೆಯಿಂದ ಬಂದ ಒಂದು ಗುಂಪಿನ ರೂಢಿ ಪದ್ಧತಿ ಆಚರಣೆಗಳ ಒಟ್ಟು ಮೊತ್ತವೇ ಸಂಪ್ರದಾಯ. ಅದು ವ್ಯಕ್ತಿ ಆಚರಿಸುವ ವ್ಯಕ್ತಿಗತ ನಡವಳಿಕೆಯಾಗಿರದೆ ಒಂದು ಗುಂಪು ಒಪ್ಪಿಕೊಂಡು ರೂಢಿಸಿಕೊಂಡು ಬಂದುದಾಗಿರುತ್ತದೆ. ಇವು ಜನಪದರ ಪ್ರಜ್ಞೆಯ ನೆಲೆಯಲ್ಲಿ ಪರಂಪರೆಯಾಗಿ ಮುಖಾಮುಖಿಯಾಗುತ್ತಲೆ ಅನುಸಂಧಾನಗೊಳ್ಳುತ್ತವೆ. ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು ಆಯಾ ಕಾಲದ ಪ್ರದೇಶ ಮತ್ತು ಸಂಸ್ಕೃತಿಗೆ ಅನುಸಾರವಾಗಿ ಸೃಷ್ಟಿ ಮತ್ತು ಪ್ರಕ್ರಿಯೆಗಳಿಗೆ ಒಳಪಟ್ಟಿವೆ. ಆಚರಣೆಗಳು ಗ್ರಾಮೀಣ ಭಾಗಗಳ ಜನರ ಸಾಂಸ್ಕೃತಿಕ ಜೀವನಾಡಿಗಳಾಗಿವೆ. ಇವುಗಳು ಜನಪದರ ನಂಬಿಕೆ, ಸಂಪ್ರದಾಯಗಳಲ್ಲಿ ಆದಿಕಾಲದಿಂದಲೂ ನಡೆದುಕೊಂಡು ಬಂದಿವೆ. ಇಂತಹ ಆಚರಣೆಗಳು ದೈವ ಸ್ವರೂಪದಲ್ಲಿ ಒಳಗೊಂಡಿರುತ್ತವೆ. ದೇವರ ಹೆಸರಿನಲ್ಲಿ ಆಚರಣೆ ಮಾಡುವುದು. ಜೊತೆಗೆ ಹಬ್ಬ ಹರಿದಿನಗಳಲ್ಲಿ ಸಂಪ್ರದಾಯವನ್ನು ವಿಶೇಷವಾಗಿ ಆಚರಿಸುವುದು ಮುಖ್ಯವಾಗುತ್ತದೆ. ಇವೆಲ್ಲವೂ ಜನಪದರ ನಿತ್ಯ ಬದುಕಿನ ನಂಬಿಕೆಗಳಾಗಿರುತ್ತವೆ. ಇಂತಹ ಆಚರಣಾತ್ಮಕ ಜನಪದರ ಅಧ್ಯಯನಗಳನ್ನು ಸಂಶೋಧಕರು ಅಕಾಡೆಮಿಕ್ ವಲಯದಲ್ಲಿ ಅಧ್ಯಯನ ಮಾಡಿರುವ ಸಂಗತಿಗಳು ಗಮನ ಸೆಳೆಯುತ್ತವೆ.

ಆಚರಣೆಗಳು ಮತ್ತು ನಂಬಿಕೆಗಳು ಇಂದು ಹುಟ್ಟಿದವುಗಳಲ್ಲ. ಅವುಗಳಿಗೆ ತನ್ನದೇ ಆದ ಪರಂಪರೆ ಅಥವಾ ಇತಿಹಾಸವೂ ಇದೆ. ಅವುಗಳ ಹಿಂದೆ ಜನಪದರ ದೈವದ ನಂಬಿಕೆಯು ಕೆಲಸ ಮಾಡುತ್ತದೆ. ಜನರು ತಮ್ಮ ಇಷ್ಟವಾದ ದೈವದ ಆವಗಾಹನೆಗಾಗಿ ಇಂತಹ ಆಚರಣೆಗಳ ಮಾಡುತ್ತ ಬಂದಿರುವುದನ್ನು ಕಾಣಬಹುದು. ದೇವರಿಗೆ ಅರಕೆ ಮಾಡಿಕೊಳ್ಳುವುದು ಜನಪದರ ನಂಬಿಕೆಯಾಗಿದೆ. ಜನಪದ ಸಂಸ್ಕೃತಿಗೆ ಆಚರಣೆಯೆ ಬೆನ್ನೆಲಬು. ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಆಚರಣೆ ಮತ್ತು ಸಂಪ್ರದಾಯಗಳು ಜನ ಸಮೂಹದಿಂದ ರೂಪಗೊಳ್ಳುತ್ತವೆ. ದೈವಕ್ಕೂ ಮತ್ತು ಸಮಾಜಕ್ಕೂ ಇರುವ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ಸಂಬಂಧಗಳು ವಿಶಿಷ್ಟತೆಯಿಂದ ಕೂಡಿವೆ. ಸಂಪ್ರದಾಯ ವೈಯಕ್ತಿಕವಾದುದಲ್ಲ, ಸಾಮೂಹಿಕವಾದದ್ದು. ಆಚರಣೆ ಮತ್ತು ನಂಬಿಕೆ ಸುತ್ತ ಜನಪದರ ಸಾಹಿತ್ಯ ಸೃಷ್ಟಿ ಪ್ರಕ್ರಿಯೆಯನ್ನು ಕಾಣಬಹುದು. ಆಚರಣೆಯನ್ನು ವಿವರಿಸುವ ಮತ ಧರ್ಮಗಳಿಗೆ, ಸಂಬಂಧಿಸಿದ ಅಗೋಚರ ದೈವಶಕ್ತಿಗಳಿಗೆ, ಪ್ರೀತ್ಯರ್ಥವಾಗಿ ಮಾನವರ ಸುತ್ತಲೂ ಬಂದಿರುವ ಮತಾಚಾರಗಳಿಗೆ ಮತ್ತು ಕರ್ಮವಿಧಿಗಳಿಗೆ ಇವುಗಳು ಜನಪದರ ಬದುಕಿನೊಂದಿಗೆ ಹಾಸುಹೊಕ್ಕಾಗಿವೆ. ಸಂಪ್ರದಾಯ, ಆಚರಣೆ, ನಂಬಿಕೆ ಈ ಮೂರಕ್ಕೂ ಆಚರಣಾತ್ಮಕವಾದ ಸಾಂಸ್ಕೃತಿಕವಾಗಿರುವ ಸಂಬಂಧಗಳಿರುವುದನ್ನು ಕಾಣಬಹುದು.

ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ವಿವಿಧ ಬಗೆಯ ಆಚರಣೆಗಳು, ಸಂಪ್ರದಾಯಗಳು ಹಾಸುಹೊಕ್ಕಾಗಿವೆ. ಸಮುದಾಯಗಳಿಗೆ ಸಂಬಂಧಿಸಿದ ಆಚರಣೆಗಳು ಕರ್ನಾಟಕದಲ್ಲಿ ಅತಿಹೆಚ್ಚಾಗಿ ಸಿಗುತ್ತವೆ. ಉದಾಹರಣೆಗೆ–ಕಾಡುಗೊಲ್ಲ ಹಾಗೂ ಮ್ಯಾಸಬೇಡ ಸಮುದಾಯಗಳಲ್ಲಿ ಸಿಗುವ ಹಟ್ಟಿಯ ಆಚರಣೆಗಳು ತುಂಬಾ ನಂಬಿಕೆಯುಳ್ಳುವು ಆಗಿರುತ್ತವೆ. ತೀ.ನಂ.ಶಂಕರನಾರಾಯಣ ಮತ್ತು ಕೃಷ್ಣಮೂರ್ತಿ ಹನೂರ ಅವರು ತಮ್ಮ ಸಮುದಾಯ ಅಧ್ಯಯನಗಳಲ್ಲಿ ಈ ಕುರಿತು ಚರ್ಚಿಸಿದ್ದಾರೆ. ಹಾಗೆಯೆ ಪ್ರಾದೇಶಿಕವಾಗಿ ಸಿಗುವ ಆಚರಣೆಗಳು ತುಂಬಾ ವಿಶಿಷ್ಟವೆನಿಸಿವೆ. ಉತ್ತರ ಕರ್ನಾಟಕದಲ್ಲಿ ಕೃಷಿಗೆ ಸಂಬಧಿಸಿ ಆಚರಣೆಗಳು ಹೆಚ್ಚು ಕಂಡು ಬರುತ್ತವೆ. ಸುಗ್ಗಿಯ ಸಂಪ್ರದಾಯಗಳು, ಹಂತಿ ಸಂಪ್ರದಾಯಗಳು ವಿಶಿಷ್ಟವೆನಿಸಿವೆ. ಬಿ.ಎಸ್.ಗದ್ದಗೀಮಠರು ಈ ಸಂಪ್ರದಾಯ ಮತ್ತು ಆಚರಣೆಗಳನ್ನು ಸಾಂಸ್ಕೃತಿಕವಾಗಿ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಅಧ್ಯಯನ ಮಾಡಿದ್ದಾರೆ. ಅಲ್ಲದೇ ಹಲವು ಲೇಖನಗಳಲ್ಲಿ ಸಂಪ್ರದಾಯ, ಆಚರಣೆಗಳ ಕುರಿತ ಹಾಡುಗಳನ್ನು ಸಂಗ್ರಹಿಸಿ ದಾಖಲಿಸಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ದೈವ ನೆಲೆಯ ಸಂಪ್ರದಾಯ ಮತ್ತು ಆಚರಣೆಗಳು ವಿಶಿಷ್ಟವೆನಿಸಿವೆ. ಜೀಶಂಪ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಸಂಪ್ರದಾಯಗಳಿಗೆ ಸಂಬಂಧಿಸಿದ ಮಹಾಕಾವ್ಯಗಳನ್ನು ಸಂಗ್ರಹಿಸುವುದರ ಮೂಲಕ ಸಮುದಾಯಗಳ ಆಚರಣೆಗಳನ್ನು ಕಟ್ಟಿಕೊಟ್ಟಿದ್ದಾರೆ. ಇವೆಲ್ಲಾ ಪ್ರಾದೇಶಿಕವಾಗಿ ಅಲ್ಲಿನ ಜನ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಯನ್ನು ಕಟ್ಟಿಕೊಡುತ್ತವೆ.

ಕರ್ನಾಟಕದಲ್ಲಿ ತುಳುನಾಡೆಂದು ಕರೆಯುವ ಕರಾವಳಿ ಪ್ರದೇಶವು ಸಾಂಸ್ಕೃತಿಕವಾಗಿ ವಿಶಿಷ್ಟವೆನಿಸಿದೆ. ಕರ್ನಾಟಕದ ಎಲ್ಲ ಆಚರಣೆಗಳಿಗಿಂತ ಇಲ್ಲಿನ ಆಚರಣೆಗಳು ಪಾಶ್ಚಾತ್ಯ ಮತ್ತು ದೇಶಿ ವಿದ್ವಾಂಸರಿಗೆ ಆಕರ್ಷಣೆಯಾಗಿ ಕಂಡಿವೆ. "ತುಳುವ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವವರು ಅಲ್ಲಿನ ವಿಶಿಷ್ಟವಾದ ನಾಗಾರಾಧನೆ, ಭೂತಾರಾಧನೆ ಮತ್ತು ಯಕ್ಷಗಾನಗಳ ಬಗ್ಗೆ ಗಮನ ಹರಿಸುತ್ತಾರೆ. ಇಲ್ಲಿನ ಜನ ಸಾಮಾನ್ಯವಾಗಿ ನಾಗನ ಭಕ್ತರು. ಇಲ್ಲಿ ಬಗೆಯ ಭೂತಗಳಿವೆ. ಈ ದೈವಗಳ ಹುಟ್ಟು ಸಾಧನೆ ಮತ್ತು ಸಾವಿಗೆ ಸಂಬಂಧಿಸಿದ ಕಥನಗಳನ್ನು ಪಾಡ್ದನಗಳೆಂದು ಕರೆಯುತ್ತಾರೆ. ಪಾಡ್ದನಗಳು ತುಳುವಿನ ಅತ್ಯಂತ ಶ್ರೀಮಂತವಾದ ಮೌಖಿಕ ಮಹಾಕಾವ್ಯಗಳು. ತುಳುವರು ಯಕ್ಷಗಾನದ ಮೂಲಕ ಭಾರತೀಯ ಪುರಾಣಗಳನ್ನು ಪುನಾರಚಿಸಿಕೊಂಡಿದ್ದಾರೆ. ತುಳುನಾಡಿಗೆ ಮಾತ್ರ ಸೀಮಿತವಾಗಿರುವ ಕಂಬುಳ, ಆಟಿ ಕಳೆಂಜ, ಕಂಗಿಲು, ಸಿದ್ಧವೇಶ ಇತ್ಯಾದಿಗಳು ತುಳು ಸಂಸ್ಕೃತಿಯ ಅನನ್ಯತೆಗೆ ಸಾಕ್ಷಿ, ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇನ್ನೂ ಚಾಲ್ತಿಯಲ್ಲಿರುವ ಪ್ರದೇಶವಿದು. ತುಳುನಾಡಿನ ಅನೇಕ ಸ್ಥಳ ನಾಮಗಳು ಮೂಲದ್ರಾವಿಡದಲ್ಲಿ ಮಾತ್ರ ಸಿಗುತ್ತವೆ"[೧] ನೀಲಗಾರರು, ದೇವರಗುಡ್ಡರು, ಗೊರವರು, ಚೌಡಿಕೆಮೇಳ, ಜುಂಜಪ್ಪನ ಸಂಪ್ರದಾಯ, ಇತ್ಯಾದಿ. ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಈ ಸಂಪ್ರದಾಯಗಳನ್ನು ಜೀ.ಶಂ.ಪ ಅವರು 'ದಕ್ಷಿಣ ಕರ್ನಟಕದ ಜನಪದ ಕಾವ್ಯ ಸಂಪ್ರದಾಯಗಳು' ಸಂಶೋಧನ ಗ್ರಂಥದಲ್ಲಿ ಚರ್ಚಿಸಿದ್ದಾರೆ. ಹೀಗೆ ವಸಾಹತೋತ್ತರ ಕಾಲದಲ್ಲಿ ಕರ್ನಾಟಕದ ಒಂದೊಂದು ಭಾಗದಲ್ಲಿ ಕಂಡುಬರುವ ಆಚರಣೆಗಳನ್ನು ಅನೇಕರು ಅಧ್ಯಯನ ಮಾಡಿದ್ದಾರೆ. ಈ ಅಧ್ಯಾಯದಲ್ಲಿ ಕರಾವಳಿ ಭಾಗದ ಜನಪದ ಆಚರಣೆಗಳನ್ನು ಹಾಗೂ ಜನಪದ ಸಾಹಿತ್ಯ ಕುರಿತ ಅಧ್ಯಯನ ಮಾಡಿರುವ ಮಹಾಪ್ರಬಂಧಗಳ ಮುಖೇನ ಜನಪದ ಆಚರಣೆಗಳು, ಸಂಪ್ರದಾಯಗಳ ಅಧ್ಯಯನದ ಸ್ವರೂಪ, ಪ್ರಾದೇಶಿಕ ಸಾಂಸ್ಕೃತಿಕ ಅನನ್ಯತೆಯನ್ನು ಹಾಗೂ ಸಂಶೋಧಕರ ಅಧ್ಯಯನದ ತಾತ್ವಿಕತೆಯನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

೭.೧. ಜನಪದ ಆಚರಣೆಗಳ ವಿವಿಧ ಬಗೆಗೆಗಳು

ಆಚರಣೆಗಳ ಮೂಲ ಉದ್ದೇಶ ಒಂದೇ ಆಗಿದ್ದರೂ ಆಚರಣೆಯ ರೀತಿಗಳಲ್ಲಿ, ಆಚರಣೆಯ ಕಾಲಗಳಲ್ಲಿ ಇಲ್ಲವೇ, ಆಚರಣೆಯ ಹೆಸರುಗಳಲ್ಲಿ ವ್ಯತ್ಯಾಸಗಳಿವೆ. ಪ್ರಾದೇಶಿಕವಾದ ಮತ್ತು ಮಳೆಬೆಳೆಗಳಿಗೆ ಸಂಬಂಧಿಸಿದಂತೆ ಕಾಲಮಾನದ ವ್ಯತ್ಯಾಸಗಳು ಇದಕ್ಕೆ ಮುಖ್ಯ ಕಾರಣವೆಂಬುದನ್ನು ಗುರುತಿಸಬಹುದಾಗಿದೆ. ಜೊತೆಗೆ ಜನಾಂಗೀಯವಾದ ವ್ಯತ್ಯಾಸಗಳೂ ಕಂಡುಬರುತ್ತವೆ. "ಒಂದು ಸಮಾಜ ತನ್ನ ಸಂಸ್ಕೃತಿಯನ್ನು ಲಿಖಿತ ಮತ್ತು ಮೌಖಿಕ ರೂಪದಲ್ಲಿ ಸಂರಕ್ಷಿಸುತ್ತದೆ. ಲಿಪಿಯುಳ್ಳ ಸಮಾಜಗಳು ಇದನ್ನೆ ಬರೆದು ಮುದ್ರಿಸಿ, ಸಂಗ್ರಹಿಸಿಡುತ್ತವೆ. ಮತ್ತು ಪ್ರಚಾರ ಮಾಡಲು ಬಳಸುತ್ತವೆ. ಲಿಪಿ ಪೂರ್ವದ ಸಮಾಜ ತನ್ನ ಸಂಸ್ಕೃತಿಯನ್ನು ಅಂದರೆ ತನ್ನ ಆಚಾರ, ವಿಚಾರ, ನಂಬಿಕೆ, ಕಾನೂನು, ಮೌಲ್ಯಗಳು, ಧಾರ್ಮಿಕ ವಿಚಾರಗಳು, ಜನಪದ ಕಲೆ, ಮುಂತಾದವನ್ನು ಮೌಖಿಕವಾಗಿ

ಅಂದರೆ ಬಾಯಿಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಹೇಳುತ್ತಾ, ಕೇಳುತ್ತಾ, ಕಲಿಯುತ್ತಾ, ಕಲಿಸುತ್ತಾ, ಮುಂದಿನ ಪೀಳಿಗೆಗೆ ಪ್ರಸರಣ ಮಾಡುತ್ತದೆ. ಇದರಿಂದಾಗಿ ಸಮಾಜವು ತನ್ನ ಕಲೆ, ಕುಶಲತೆ ಮತ್ತು ನಿತ್ಯ ಜೀವನದಲ್ಲಿ ಬೇಕಾದ ಆಚಾರಗಳನ್ನು, ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದೆ"[೨] ಕೆಲವು ಆಚರಣೆಗಳು ಆಧುನಿಕತೆಗಳನ್ನು ರೂಢಿಸಿಕೊಂಡಿರುವುದನ್ನು ನೋಡಬಹುದು. ಇಂತಹ ಆಚರಣೆಗಳನ್ನು ಮಾನವಶಾಸ್ತ್ರಜ್ಞರು ಮುಖ್ಯ ವಿಭಾಗಗಳನ್ನಾಗಿ ಮಾಡಿಕೊಂಡಿರುವ ಬಗ್ಗೆ ಕನ್ನಡ ವಿಶ್ವಕೋಶದಲ್ಲಿ ವಿವರಣೆಯಿದೆ"[೩] ೧. ಧಾರ್ಮಿಕ ಆಚರಣೆ ೨. ಮಾಂತ್ರಿಕ ಆಚರಣೆ ೩. ಮಾಟ, ಮೋಡಿ ಇತ್ಯಾದಿ. ಈ ಮೂರು ಬಗೆಗಳೂ ಒಂದೇ ಸಂಸ್ಕೃತಿಯಲ್ಲಿ ಕಂಡು ಬರಬಹುದು. ಜನತೆಯ ಜೀವನ ದೃಷ್ಟಿ, ನಂಬಿಕೆ, ಆಶೋತ್ತರಗಳು ಸ್ಪಷ್ಟವಾಗಿ ಈ ಆಚರಣೆಗಳಲ್ಲಿ ಕಂಡು ಬರುತ್ತವೆ. ಆಚರಣೆಗಳ ಈ ಮೂರೂ ವಿಭಾಗಗಳನ್ನು ಮಾನವನ ಬದುಕಿಗೆ ಸಂಬಂಧಿಸಿದಂತೆ ಪುನಃ ನಾಲ್ಕು ವರ್ಗಗಳಲ್ಲಿ ಈ ಕೆಳಗಿನಂತೆ ವಿಭಾಗಿಸಿಕೊಳ್ಳಬಹುದೆಂದೂ ಕನ್ನಡ ವಿಶ್ವಕೋಶದಲ್ಲಿ ತಿಳಿಸಿರುವುದನ್ನು ಗಮನಿಸಬೇಕು"[೪] ಅವುಗಳೆಂದರೆ ೧. ಮಾನವನ ಬದುಕಿಗೆ ಅವನ ಭಾವ ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು ೨. ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳು ೩. ಆರ್ಥಿಕ ಚಟುವಟಿಕೆಗೆ ಸಂಬಂಧಿಸಿದ ಆಚರಣೆಗಳು ೪. ಸಾಮಾಜಿಕ ರಚನೆಗೆ ಸಂಬಂಧಿಸಿದ ಆಚರಣೆಗಳು. ಹೀಗೆ ಆಚರಣೆಗಳು ಹುಟ್ಟಿಕೊಳ್ಳಬಹುದಾದ ಬೇರೆ ಬೇರೆ ಮೂಲದ ಸಾಧ್ಯತೆಗಳನ್ನು ಗುರುತಿಸಬಹುದು.

ಹಾಗೆಯೇ "ಮಾನವ ಒಂದೇ ದೈವದ ಕಟ್ಟಿಗೆ ಒಳಗಾಗಬೇಕಾದ ಅಗತ್ಯವಿಲ್ಲ. ದೇವ ಮಹಾ ದೇವರುಗಳ ಸಾಲಿನಲ್ಲಿ ಅನೇಕ ಕ್ಷುದ್ರದೇವತೆಗಳನ್ನೂ ಶಕ್ತಿಗಳನ್ನೂ ಅರ್ಚಿಸುವ ಸ್ವಾತಂತ್ರ್ಯ ಅವನಿಗಿದೆ. ಈ ಸಂಬಂಧವಾದ ಅನೇಕ ಆಚರಣೆಗಳನ್ನು ಆತ ನಡೆಸುತ್ತಾನೆ. ಹರಸೇವೆ, ಹರಿಸೇವೆಗಳನ್ನು ಮಾಡುವಂತೆಯೇ ಸಣ್ಣ ಪುಟ್ಟ ದೇವತೆಗಳ ಹೆಸರಿನಲ್ಲಿ ಅನೇಕ ಆಚರಣೆಗಳನ್ನು ನಡೆಸುತ್ತಾನೆ. ಹರಕೆಯ ಕುರಿಗಳನ್ನು ಕಡಿಯುತ್ತಾನೆ ಮಾನವ ಬಲಿಯ ಇದ್ದಿತೆನ್ನುವುದಕ್ಕೆ ಆಧಾರಗಳಿವೆ"[೫] ಎಂಬುದಾಗಿಯೂ ಇರುವ ವಿವರಣೆ ಗಮನಾರ್ಹವಾಗಿದೆ. ಮುಂದುವರಿದು ಮಾನವನ ಬದುಕಿನಲ್ಲಿ ಹುಟ್ಟು, ಪ್ರೌಢಾವಸ್ಥೆ, ಮದುವೆ, ಮರಣಗಳಿಗೆ ಸಂಬಂಧಿಸಿದ ಹಾಗೂ ಪ್ರಕೃತಿ ವಿಸ್ಮಯಗಳಿಗೆ ಸಂಬಂಧಿಸಿದ ಆಚರಣೆಗಳೂ ಅನೇಕ ಬಗೆಯಲ್ಲಿವೆ ಎಂಬುದನ್ನು ಈ ರೀತಿ ವಿವರಿಸಲಾಗಿದೆ. ಬಸುರಿ, ಬಾಣಂತಿಯರಿಗೆ ನಡೆಸುವ ಶಾಸ್ತ್ರಗಳೆಲ್ಲ ಆಚರಣೆಗಳೇ. ಗುಣಿಗಿಕ್ಕುವ ಶಾಸ್ತ್ರ, ಹೆಸರಿಡುವ ಶಾಸ್ತ್ರಗಳಂತೆಯೇ ಋತುಮತಿಯಾದ ಹೆಣ್ಣು ಮಗಳಿಗೆ ಮಾಡುವ ಗುಡಿಲು ಕೂಡುವ ಶಾಸ್ತ್ರ ಮದುವೆಯಲ್ಲಿ ನಡೆಯುವ ಶಾಸ್ತ್ರ ನೀರು ತರುವ ಶಾಸ್ತ್ರ, ಭತ್ತ ಕುಟ್ಟುವ, ಭೂತ ಉಣ್ಣುವ, ಬಾಗಿಲು ತಡೆಯುವ, ಹೂವಿನ ಚೆಂಡಾಡುವ ಶಾಸ್ತ್ರಗಳೆಲ್ಲ ಬಗೆಬಗೆಯ ಆಚರಣೆಗಳೇ. ಶವಸಂಸ್ಕಾರಗಳಲ್ಲೂ ಅನೇಕ ಆಚರಣೆಗಳನ್ನು ಕಾಣಬಹುದು. ಹೂಳುವ, ಸುಡುವ, ಕಲ್ಲಿಗೆಸೆಯುವ ಸಂಪ್ರದಾಯಗಳ ಹಿನ್ನೆಲೆಯಲ್ಲಿ ನಡೆಸುವ ಆಚರಣೆಗಳು ಅನೇಕವಾಗಿವೆ. ಮಳೆಯಾಗದಿದ್ದರೆ ಹೂತ ಹೆಣವನ್ನು ಹೊರ ತೆಗೆದು ನಡೆಸುವ

ಕ್ರಿಯೆಗಳು, ಸುಟ್ಟ ಬೂದಿ, ಸತ್ತವರೊಡನೆ ಹೂತ ವಸ್ತ್ರ, ಆಭರಣ, ವಸ್ತು ವಿಶೇಷಗಳನ್ನು ಪಡೆಯುವ ಆಚರಣೆಗಳು ಜನಾಂಗದಿಂದ ಜನಾಂಗಕ್ಕೆ ಅನೇಕ ವಿಧವಾಗಿ ಹಬ್ಬಿವೆ.

ಕಾಡುಗೊಲ್ಲರು ಋತುಮತಿಯಾದ ಹೆಣ್ಣುಮಕ್ಕಳನ್ನು ಬಾಣಂತಿಯರನ್ನು ಹೆಚ್ಚಿಗೆ ದೂರವಾಗಿ ಬೆಟ್ಟದ ತಪ್ಪಲಲ್ಲಿ ಗುಡಿಸಲು ಹಾಕಿ ಬಿಡುವ ಆಚರಣೆ ವಿಚಿತ್ರವಾದುದು. ಅಂಥ ಹೆಣ್ಣಿಗೆ ಊಟವನ್ನು ಕೊಡಬೇಕಾದರೂ ದೊಡ್ಡ ಗಳುವಿನಿಂದ ಒಳಗೆ ನೂಕುವ ಪದ್ಧತಿಯಿದೆ. ಯುರೋಪಿನಲ್ಲಿ ಬಾಣಂತಿ ಗೊತ್ತಾದ ದಿನಗಳಲ್ಲಿ ಚರ್ಚಿಗೆ ಹೋಗಿ ಶುದ್ಧಳಾಗಿ ಬರೆದಿದ್ದರೆ ಅಪವಿತ್ರಳು. ಆ ಮಧ್ಯೆ ಅನೇಕ ಅನರ್ಥಗಳು ಸಂಭವಿಸಬಹುದು. ಕಿನ್ನರಿಯರು ಬಂದು ಅವಳನ್ನು ಹೊತ್ತುಕೊಂಡು ಹೋಗಬಹುದು. ಅವಳ ಮಗುವನ್ನು ಅಪಹರಿಸಿ ಮಾಯದ ಶಿಶುವನ್ನು ತೊಟ್ಟಿಲಲ್ಲಿ ಬಿಡಬಹುದು. ಹೀಗೆ ಬಿಟ್ಟರೆಂದು ಭಾವಿಸಲಾದ ಅನೇಕ ಸಂದರ್ಭಗಳಲ್ಲಿ ಹಸುಳೆಗಳಿಗೆ ಕ್ರೂರ ಹಿಂಸೆಯನ್ನು ಕೊಟ್ಟು ನ್ಯಾಯಾಲಯಕ್ಕೆ ದೂರು ಹೊತ್ತ ಪ್ರಸಂಗಗಳೂ ತಾಯಿ ಶುದ್ಧಳಾಗಲು ನಡೆಸುವ ಆಚರಣೆ ಬಹುಮುಖ್ಯವಾದುದು"[೬] ಎಂಬ ಆಚರಣೆಗಳಿಗೆ ಸಂಬಂಧಿಸಿದ ಸಂಗತಿಗಳು ಅತ್ಯಂತ ರೋಚಕವಾದುದು.

ಮರ, ನೀರು, ಗಾಳಿ, ಆಕಾಶಗಳಲ್ಲಿ ಅನೇಕ ಶಕ್ತಿಗಳಿರಬಹುದು. ಸಾಂಸ್ಕೃತಿಕ ವೀರರು. ಧಾರ್ಮಿಕ ಪುರುಷರು, ಮಹಿಮಾವಂತರು, ಪ್ರಾಣಿ ವಿಶೇಷಗಳು ಅನೇಕ ವ್ಯಕ್ತಿ ವಿಶೇಷಗಳಿಗೆ ಸಂಬಂಧಿಸಿದಂತೆ ಆಚರಣೆಗಳು ನಡೆಯಬಹುದು. ಬಸವನ ಪೂಜೆ, ಸೀಬೆಗೌರಿ ಪೂಜೆ, ತಿಂಗಳು ಮಾವನ ಪೂಜೆ, ಕೊಂತಿ ಪೂಜೆಗಳು ವಿಶಿಷ್ಟ ಆಚರಣೆಗಳು, ಧಾರ್ಮಿಕ ಪುರುಷರು, ಕೆಲವು ಪ್ರಭುಗಳು ಆಹಾರ, ಬದುಕು, ನಿದ್ರೆ. ಲೈಂಗಿಕಕ್ರಿಯೆ ಇವುಗಳಿಗೆ ಸಂಬಂಧಿಸಿದಂತೆ ಕ್ರಮ ಬದ್ಧ ಆಚರಣೆಗಳಿಗೊಳಪಡುತ್ತಾರೆ. ಕೆಲವರಿಗೆ ಸ್ವಾಭಾವಿಕ ಮರಣ ಇಲ್ಲ. ಕೆಲವರನ್ನು ಉತ್ತರಾಧಿಕಾರಿ ಕ್ರಮದಂತೆ ಕೊಲ್ಲಬಹುದು. ವಂಶ ಪಾರಂಪರ್ಯವಾಗಿ ನೇಮಕಗೊಂಡ ಕಟುಕರು ಆ ಕಾರ್ಯವನ್ನು ಮಾಡಬಹುದು. ಸಜೀವ ಸಮಾಧಿಯಾದ ಅನೇಕ ಧಾರ್ಮಿಕ ಪುರುಷರ ನಿದರ್ಶನಗಳು ಇಂದಿಗೂ ಇವೆ. ಈ ಕ್ರಿಯೆಗಳ ಹಿನ್ನೆಲೆಯಲ್ಲಿ ವಿಶಿಷ್ಟವಾದ ಆಚರಣೆಗಳಿವೆ.

ಬೇಟೆ, ಮೀನುಗಾರಿಕೆ, ವ್ಯವಸಾಯ, ತೋಟಗಾರಿಕೆ, ಕಟ್ಟಡ, ಯುದ್ಧ, ಕಳ್ಳತನ ಮುಂತಾದವಕ್ಕೆ ಹೊರಡುವ ಸಂದರ್ಭದಲ್ಲಿ ಉತ್ತಮ ಆಚರಣೆಗಳಿವೆ. ಅತಿಮಾನುಷ ಶಕ್ತಿಗಳು ತಮ್ಮ ಕಾರ್ಯದಲ್ಲಿ ಜಯವನ್ನು ಕೊಡಲೆಂದು ಹರಸಿಕೊಳ್ಳುವುದೇ ಅಲ್ಲದೆ ಉತ್ತಮ ಆಚರಣೆಗಳನ್ನು ನಡೆಸುವ ಪದ್ಧತಿಯೂ ಇದೆ. ಆಚರಣೆಯ ಸಂದರ್ಭದಲ್ಲಿ ಕತ್ತಿ, ಭಲ್ಲೆ, ಬೆತ್ತ, ತ್ರಿಶೂಲ, ಖಂಡೆಯ(ಕಂದಾಯ) ಮುಂತಾದ ಗೊತ್ತಾದ ವಸ್ತುಗಳು ಆಯುಧ ವಿಶೇಷಗಳು ಹೌದು. ಆಚರಣೆಯ ಸಾಧನಗಳೂ ಹೌದು. ಅವನ್ನು ಪೂಜಿಸದೆ ಆ ಶಕ್ತಿಯ ಆವಿಷ್ಕಾರವಿಲ್ಲ. ಕಾಡುಗೊಲ್ಲರ ಗಣೆಯನ್ನು ನುಡಿಸಿದಾಗ ದೇವರು ಮೈದುಂಬುತ್ತಾರೆ. ಕೆಲವು ವಾದ್ಯಗಳನ್ನು ನುಡಿಸಿದಾಗ ವಿಶಿಷ್ಟ ಪೀಠಗಳನ್ನೇರಿದಾಗ ದೇವಿ ಮೈ ಮೇಲೆ ಬರಬಹುದು. ಇಲ್ಲವೆ ಕ್ರಮವತ್ತಾದ ಪೂಜೆ ಮಾಡಿದ್ದರೆ ಬಲಗಡೆ ಹೂ ಕೊಡಬಹುದು.

ಮುಖವಾಡಗಳೂ ಈ ಸಂದರ್ಭದಲ್ಲಿ ಬಳಕೆಯಾಗುತ್ತವೆ"[೭] ಎಂದು ಆಚರಣೆಗಳ ಕುರಿತಾಗಿ ನೀಡಿರುವ ಇನ್ನಷ್ಟು ವಿವರಗಳು ಕುತೂಹಲಕರವಾಗಿವೆ. ಧಾರ್ಮಿಕ, ಮಾಂತ್ರಿಕ, ಮಾಟ–ಮೋಡಿ ಎಂಬುದಾಗಿ ಮೂರು ಮುಖ್ಯವಾಗಿ ನಡೆಯುವ ಆಚರಣೆಯಲ್ಲಿ ೧. ಪ್ರಾರ್ಥನೆ ೨. ಅರ್ಪಣ, ಬಲಿ ೩. ದೈಹಿಕ ಸಂಜ್ಞೆಗಳು ಮತ್ತು ಇತರ ಕ್ರಿಯೆಗಳು ಎಂಬ ಮೂರು ಮಜಲುಗಳನ್ನೂ ಕಾಣಬಹುದು ಎಂದು ವಿದ್ವಾಂಸರು ಪಡುವ ಅಭಿಪ್ರಾಯ ಅರ್ಥಪೂರ್ಣವಾಗಿದೆ"[೮] ಹಣ್ಣುಕಾಯಿ, ಬೇಟೆಯು ವಸ್ತು, ಕಳವಿನ ವಸ್ತು ಮುಂತಾದವು ದೈವಕ್ಕೆ ಅರ್ಪಿತವಾಗುವ ವಸ್ತುಗಳು. ನಾನಾ ರೀತಿಯ ನೃತ್ಯಗಳೂ ಆಚರಣೆಗೆ ಸಂಬಂಧಿಸಿದಂತೆ ನಡೆಯಬಹುದು. ಭೂತ ನೃತ್ಯ, ಸೋಮನ ಕುಣಿತ, ಪಕ್ಷಿ ಕುಣಿತ, ರಂಗದ ಕುಣಿತ, ವೀರಗಾಸೆ, ಲಿಂಗದ ವೀರರ ಕುಣಿತ, ಗಡ್ಡುಗ್ಗರ ಕುಣಿತ, ಗೊರವರ ಕುಣಿತ, ಪೂಜಾ ಕುಣಿತ, ಕರಗ ಕುಣಿತ–ಇವೆಲ್ಲವೂ ಈ ದೃಷ್ಟಿಯಿಂದ ಗಮನಾರ್ಹ ನೃತ್ಯಗಳು. ಮಾಟ ಮೋಡಿಗಳು ಸಾಮಾನ್ಯವಾಗಿ ವಿರೋಧಿಗಳನ್ನು ದೃಷ್ಟಿಯಲ್ಲಿಟ್ಟು ನಡೆಸುವ ಆಚರಣೆಗಳು. ಅನೇಕ ಸಂದರ್ಭಗಳಲ್ಲಿ ಮಾಟ ತಿರುಗಿ ಮನೆ ಹಾಳಾದ ಪ್ರಸಂಗಗಳೂ ಇವೆ. ಮಾಟವನ್ನು ಮುರಿಯುವ ಆಚರಣೆಗಳೂ ವಿಶೇಷವಾಗಿವೆ.

ಅನಾರೋಗ್ಯ ಆಕಸ್ಮಿಕ ಮರಣಗಳಿಗೂ ಸಂಬಂಧಿಸಿದಂತೆ ಆಚರಣೆಗಳಿವೆ. ಅನೇಕ ರೋಗಗಳ ರೂಪದಲ್ಲಿ ಕೆಲವು ದೇವತೆಗಳು ಕಾಣಿಸಿಕೊಳ್ಳಬಹುದು. ರೋಗಗಳನ್ನು ತರುವ ಬಗೆ ಮೂರು ತೆರವಾಗಿದೆ. ೧. ರೋಗಿಯಿಂದಲೋ, ಅವನ ಬಂಧುವಿನಿಂದಲೋ ಏನೋ ತಪ್ಪು ನಡಾವಳಿಯಾಗಿರಬೇಕು. ೨. ಎರಡನೆಯ ವ್ಯಕ್ತಿ ತಾನೇ ದುಷ್ಟ ಶಕ್ತಿಗಳನ್ನು ಹರಿಯಬಿಟ್ಟಿರಬಹುದು. ೩. ಇನ್ಯಾವುದೋ ಶಕ್ತಿಯ ಕೈವಾಡವಿರಬಹುದು. ಹರಕೆಯನ್ನೊ ಪೂಜೆಯನ್ನೊ ನಿಲ್ಲಿಸಿರಬಹುದು. ಸಂದರ್ಭಗಳಲ್ಲಿ ದೇವತೆಗಳನ್ನು ಬಿಡಿಸಿಕೊಳ್ಳಲು ಅವರನ್ನು ಸಂತೃಪ್ತಿಗೊಳಿಸಲು ಅನೇಕ ಆಚರಣೆಗಳಿವೆ. ಪ್ಲೇಗಿನ ಮಾರಿ, ಕಾಲರಾ ಮಾರಿ, ಸಿಡುಬಿನ ಮಾರಿಯರಿಗೂ ಆಚರಣೆಗಳು ಹುಟ್ಟಿಕೊಂಡಿವೆ. ಕ್ಷಾಮ ಡಾಮರಗಳನ್ನು ನಿವಾರಿಸಿಕೊಳ್ಳಲು ಗಡಿಯಿಂದ ಗಡಿಗೆ ಸಾಗಿರುವ ಬರಗಲ್ಲು, ಊರಿನ ಕೊಳೆ ಕಸವನ್ನೆಲ್ಲ ದೂರ ಸಾಗಿಸಲು ಉಡುಗೋಲಜ್ಜಿ – ಹೀಗೆ ಅನೇಕ ಬಗೆಯ ಆಚರಣೆಯನ್ನು ಗುರುತಿಸಬಹುದು.

ಮನೆಕಟ್ಟುವಿಕೆ, ವ್ಯಾಪಾರ, ವ್ಯವಸಾಯ ಮುಂತಾದವುಗಳಿಗೆ ಅಡಚಣೆಗಳು ಬರದಂತೆ ಅನೇಕ ಆಚರಣೆಗಳನ್ನು ನಡೆಸುತ್ತಾರೆ. ಆರ್ಥಿಕ ಹಿನ್ನೆಲೆಯ ಆಚರಣೆಗಳೆಂದು ಪರಿಗಣಿಸಲ್ಪಡುವ ಅಪಾರ ಸಂಖ್ಯೆಯ ಕ್ರಿಯೆಗಳು ಈಗಲೂ ಜೀವಂತವಾಗಿವೆ"[೯] ಎಂದು ಹೇಳಿರುವ ಈ ಮೇಲಿನ ವಿವರಗಳ ಮೂಲಕ ಆಚರಣೆಗಳ ಹುಟ್ಟು, ಬೆಳವಣಿಗೆ ಮತ್ತು ವ್ಯಾಪ್ತಿಯನ್ನು ಮನದಟ್ಟುಮಾಡಿಕೊಳ್ಳಬಹುದಾಗಿದೆ. ಆಚರಣೆಗಳು ಬೇರೆ ಬೇರೆ ನೆಲೆಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಮತ್ತು ಬೇರೆ ಬೇರೆ ಉದ್ದೇಶಗಳ ಈಡೇರಿಕೆಗಾಗಿ ಹುಟ್ಟಿಕೊಂಡಿವೆ ಮತ್ತು ಹುಟ್ಟಿಕೊಳ್ಳುತ್ತವೆ ಎಂಬುದು ಇದರಿಂದ ಬಹಳಷ್ಟು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಮನುಷ್ಯ ರೂಢಿಸಿಕೊಂಡು ಬಂದಿರುವ ಎಲ್ಲ ರೀತಿಯ ಆಚರಣೆಗಳ ಸ್ವರೂಪವನ್ನು ಕ್ರೋಢೀಕರಿಸಿ ಸ್ಥೂಲವಾಗಿ ಹೇಳುವುದಾದರೆ ಆಚರಣೆಗಳನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ. ಮೊದಲನೆಯದಾಗಿ ಜೀವನಾವರ್ತನ ಆಚರಣೆಗಳು, ಎರಡನೆಯದಾಗಿ ವಾರ್ಷಿಕಾವರ್ತನದ ಆಚರಣೆಗಳು, ಮೂರನೆಯದಾಗಿ ಸಾಂದರ್ಭಿಕ ಆಚರಣೆಗಳು, ಜೀವನಾವರ್ತನ ಆಚರಣೆಗಳೆಂದರೆ ಮುಖ್ಯವಾಗಿ ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗಿನ ಜೀವಮಾನದ ಉದ್ದಕ್ಕೂ ಆಚರಿಸುವ ಆಚರಣೆಗಳು, ಉದಾಹರಣೆಗೆ–ನಾಮಕರಣ, ಉಪನಯನ, ವಿವಾಹ, ಅಂತ್ಯಸಂಸ್ಕಾರ ಇತ್ಯಾದಿಗಳು. ವಾರ್ಷಿಕಾವರ್ತನದ ಆಚರಣೆಗಳೆಂದರೆ ಪ್ರತಿವರ್ಷ ಪುನರಾವರ್ತನೆಯ ನೆಲೆಯಲ್ಲಿ ಆಚರಿಸುವಂತವುಗಳು. ಉದಾಹರಣೆಗೆ–ನಾಗರಪಂಚಮಿ, ಮಕರ ಸಂಕ್ರಮಣ, ದೀಪಾವಳಿ, ಗಣೇಶ ಚತುರ್ಥಿ, ಶಿವರಾತ್ರಿ, ಕೃಷ್ಣಾಷ್ಟಮಿ ಹೀಗೆ ಬೇರೆ ಬೇರೆ ನೆಲೆಗಳಲ್ಲಿ ನೂರಾರು ಆಚರಣೆಗಳನ್ನು ಗುರುತಿಸಬಹುದಾಗಿದೆ.

ಸಾಂದರ್ಭಿಕ ಆಚರಣೆಗಳೆಂದರೆ ಈಗಾಗಲೇ ತಿಳಿಸಿದ ಹಾಗೆ ಮನೆ ಕಟ್ಟುವಾಗ, ವ್ಯಾಪಾರಕ್ಕೆ ಇಳಿಯುವಾಗ, ಕ್ಷಾಮ ಡಾಮರುಗಳು ಬಂದಾಗ, ರೋಗ ರುಜಿನಗಳು ಬಂದಾಗ, ಮಾಟ ಮೂಡಿ ಮಾಡಬೇಕೆಂದಾಗ–ಹೀಗೆ ಯಾವಾಗಲಾದರೂ ಸಂದರ್ಭ ಬಂದಾಗ ಮಾಡುವ ಆಚರಣೆಗಳು. ಈ ನೆಲೆಯ ಆಚರಣೆಗಳನ್ನು ಪರಂಪರೆಯ ನೆಲೆಯಿಂದ ಅನಿವಾರ್ಯವಾಗಿ ಆಚರಿಸಬೇಕಾದ ಅಗತ್ಯ ಇರುವುದು ಕಂಡು ಬರುವುದಿಲ್ಲ.

ಕನ್ನಡ ವಿಶ್ವಕೋಶದಲ್ಲಿ ಆಚರಣೆಗೆ ನೀಡಿರುವ ವಿಸ್ತೃತ ಅರ್ಥ ವಿವರಣೆಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ನಾವು ಬಳಸುವ ಸಾಕಷ್ಟು ವಸ್ತು ಪರಿಕರಗಳೂ ಸಾಧನ ಸಲಕರಣಗಳೂ 'ಪವಿತ್ರ ವಸ್ತು' ಎಂಬರ್ಥದಲ್ಲಿ ಆಚರಣೆಗಳಲ್ಲಿ ಒಳಗಾಗುವುದು ತಿಳಿಯುತ್ತದೆ. ಇದರರ್ಥ ಹೆಚ್ಚಿನ ಆಚರಣೆಗಳು ಧಾರ್ಮಿಕ ಉದ್ದೇಶದ ಸಾಧನೆಗಾಗಿಯಾದರೂ ಇದನ್ನು ಸಾಧಿಸಿಕೊಳ್ಳುವಲ್ಲಿ ಲೌಕಿಕ ಜಗತ್ತಿನ ವಸ್ತು ಪರಿಕರಗಳಲ್ಲಿ ಕಂಡು ಕೊಳ್ಳುವ ಒಂದು ಪ್ರಯತ್ನ ಗಮನಾರ್ಹವಾದುದು. ಅದು ಗಿಡ ಮರಗಳಿರಬಹುದು, ಪ್ರಾಣಿ ಪಕ್ಷಿಗಳಿರಬಹುದು, ನೆಲ, ನೀರು, ಗಾಳಿ, ಬೆಂಕಿಗಳಿರಬಹುದು, ಬೇಟೆಯ ವಸ್ತುಗಳು, ಉಳುಮೆಯ ಸಾಧನಗಳು, ತಿಂಡಿ ತಿನಿಸುಗಳು, ಅಡುಗೆ ಪದಾರ್ಥಗಳಿರಬಹುದು, ಇಲ್ಲವೆ ಪಾತ್ರೆ ಪಗಾರಗಳಿರಬಹುದು. ಹೀಗೆ ಆಚರಣೆಗಳಲ್ಲಿ ಪ್ರಕೃತಿ ಸಹಜವಾದವು ಮತ್ತು ಮನುಷ್ಯ ಸೃಜನವಾದವುಗಳು ಎಲ್ಲವೂ ಬಳಕೆಯಾಗುವುದು ಕಂಡುಬರುತ್ತದೆ.

ಆಚರಣೆಗಳು ಕೇವಲ ಆರಾಧನೆಯ ರೂಪದಲ್ಲಿ ಮಾತ್ರ ಇರುವುದಲ್ಲ. ಬದಲಾಗಿ ಆಚರಣೆಗಳನ್ನು ನೃತ್ಯ ಕುಣಿತ ರೂಪದಲ್ಲೂ ಅಭಿವ್ಯಕ್ತಪಡಿಸುವುದು ಸ್ಪಷ್ಟವಾಗುತ್ತದೆ. ಇದೇ ವೇಳೆ ಆಚರಣೆಗೆ ಸಂಬಂಧಿಸಿದಂತೆ ಹಾಡು, ಪ್ರಾರ್ಥನೆ, ಹರಕೆ, ನುಡಿಕಟ್ಟುಗಳನ್ನು ಹೇಳುವುದೂ ಆಚರಣೆಯ ಮತ್ತೊಂದು ರೂಪವಾಗಿ ಮಾನವ ಸಮಾಜದಲ್ಲಿ ಕಂಡುಬರುತ್ತದೆ.

೭.೨. ಕರಾವಳಿ ಭಾಗದಲ್ಲಿ ಕಂಡು ಬರುವ ವಿಶಿಷ್ಟ ಆಚರಣೆಗಳು

ದಕ್ಷಿಣ ಕನ್ನಡದ ಆಚರಣೆಗಳಲ್ಲಿ ಸಿರಿ, ಡಕ್ಕೆಬಲಿ, ನಾಗಮಂಡಲ ಮತ್ತು ಭೂತಾರಾಧನೆಗಳು ಜನಪ್ರಿಯವಾಗಿವೆ. ಇವುಗಳಲ್ಲಿ ಮೊದಲ ಮೂರೂ ಆಚರಣೆಗಳು 'ನಾಗಾರಾಧನೆಗೆ' ಸೇರಿವೆ. ಭೂತಾರಾಧನೆಯು ಫಲವಂತಿಕೆಯ, ಮಾಂತ್ರಿಕ ಪದ್ಧತಿ ಹಾಗೂ ಪಿತೃ ಸ್ಮರಣೆಗಳ ಆರಾಧನೆ ಎನ್ನಬಹುದಾಗಿದೆ. ಸ್ತ್ರೀಯರೇ ಪ್ರಮುಖವಾಗಿ ಪಾಲ್ಗೊಳ್ಳುವುದು ಸಿರಿ ಆಚರಣೆಯಾದರೆ, ಪುರುಷರು ಪ್ರಧಾನವಾಗಿ ಪಾಲ್ಗೊಳ್ಳುವುದು ಡಕ್ಕೆಬಲಿ ಮತ್ತು ನಾಗಮಂಡಲಗಳಾಗಿವೆ. ಭೂತಾರಾಧನೆ ಕೂಡ ಪುರುಷ ಪ್ರಧಾನವಾದುದಾಗಿದೆ. ಇಂತಹ ಆಚರಣೆಗಳಲ್ಲಿ ವಿದ್ಯಾವಂತಿಕೆಯು ಗೌಣವಾಗಿ ನಾಗರಿಕತೆಯ ಪ್ರಭಾವವಿಲ್ಲದೆ ಇರುವ ಸಾಮಾಜಿಕ ಮತ್ತು ಸಾಮೂಹಿಕ ಜೀವನದ ನಂಬಿಕೆಗಳಾಗಿ 'ತೋಂಡಿ' ಸಂಪ್ರದಾಯವನ್ನು ಆಧರಿಸಿಕೊಂಡಿರುವ ಆಚರಣೆಗಳೆಂದೂ ಇವುಗಳನ್ನು ಪರಿಗಣಿಸಬಹುದಾಗಿದೆ. ಆದುದರಿಂದ ಈ ಭಾಗದ ಹಿಂದುಳಿದ ಬುಡಕಟ್ಟು ಜನಾಂಗಗಳ ಸಾಮಾನ್ಯ ಬಳಕೆಯ ಭಾಷೆಯಾದ 'ತುಳು ಭಾಷೆ'ಯು ಇಲ್ಲೆಲ್ಲಾ ಪ್ರಯೋಜನಕಾರಿಯಾಗಿರುವಂತಿದೆ. ಈ ಆಚರಣೆಗಳಿಗೆಲ್ಲ ಬಂಟ-ಬಿಲ್ಲವ ಸಮಾಜದ ಆಧಾರವಿದೆ. ಆದುದರಿಂದ ಫಲವಂತಿಕೆಯ ನಂಬಿಕೆಗಳು ಚಲಾವಣೆಯಲ್ಲಿರುವಂತೆ ಈ ಆಚರಣೆಗಳಲ್ಲಿ 'ತುಳು' ಬಳಕೆಯಾಗುವುದಲ್ಲದೆ ಜೀವಿತವಾದವು ಆಧಾರವಾಗಿರುತ್ತವೆ. ಈ ಜನಗಳು ಬದುಕಿನ ಉಳಿದ ವಿಚಾರಗಳಲ್ಲಿ ಆಧುನಿಕತೆಗೆ ಹಾಗೂ ವಿಜ್ಞಾನದ ಪ್ರಭಾವಕ್ಕೆ ಒಳಗಾಗಿದ್ದರೂ ತಮ್ಮ 'ಆಧ್ಯಾತ್ಮಿಕ'ವೆನ್ನಬಹುದಾದ ನಂಬಿಕೆಗಳಲ್ಲಿ ಮಾತ್ರ ತುಂಬ ಹಳೆಯದಾದ 'ಒಂದು ಸಂಸ್ಕೃತಿ'ಯನ್ನು ರಕ್ಷಿಸಿಕೊಂಡು ಬಂದಾಂತಾಗಿದೆ.

ನಾಗಾರಾಧನೆ

ನಾಗರವೆಂಬ ಆದಿವಾಸಿಗಳು ವಾಸಿಸುತಿದ್ದ ಕರಾವಳಿ ಪ್ರದೇಶಕ್ಕೆ ಹಿಂದೆ ನಾಗರಖಂಡವೆಂಬ ಹೆಸರಿತ್ತು. ಸರ್ಪಕುಲ ಲಾಂಛನವಾಗಿದ್ದ ಈ ಜನರಲ್ಲಿ ಸರ್ಪಾರಾಧನೆ ಒಂದು ಸ್ಥಳಿಕ ಮತಾಚಾರವಾಗಿ ಬಳಕೆಯಲ್ಲಿದ್ದಿರಬೇಕು. ಹೀಗಾಗಿ ಇಂದಿಗೂ ಕರಾವಳಿಯ ನೆಲದಲ್ಲಿ ನಾಗಾರಾಧನೆ ಬದುಕಿನ ಎಲ್ಲ ಪದರಗಳಲ್ಲಿ ದಟ್ಟವಾಗಿ ವ್ಯಾಪಿಸಿರುವುದು ಗೋಚರಿಸುತ್ತದೆ. ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗಾರಾಧನೆಯ ಮೂರು ಪ್ರಭೇಧಗಳು ಕಂಡು ಬರುತ್ತವೆ. ನಾಗಮಂಡಲ, ಪಾಣಾರಾಟ, ಕಾಡ್ಯನಾಟ್ಯ ಈ ಆಚರಣೆಗಳು ಜಾತಿಶ್ರೇಣಿಯಲ್ಲಿ ಪ್ರದರ್ಶನಗೊಳ್ಳುತ್ತವೆ.

ನಾಗಮಂಡಲ

ನಾಗಮಂಡಲವನ್ನು ವೈದಿಕ ಮತಾಚಾರದ ರೂಪದಲ್ಲಿ ಹರಕೆ ಅಥವಾ ವಾರ್ಷಿಕ ಕಟ್ಟಳೆಯಂತೆ ಬ್ರಾಹ್ಮಣ ಪಾತ್ರಿ ಹಾಗೂ ಬ್ರಾಹ್ಮಣವೈದ್ಯರ ಕೂಡುಪಿಕೆಯಿಂದ ಬ್ರಾಹ್ಮಣ ಪುರೋಹಿತರ ಓರಿತನದಲ್ಲಿ ಒಂದು ದಿನಪಿಡಿ ಜರಗುವ ವೈಭವದ ಆಚರಣೆ. ಅಲ್ಲದೇ ಕುಣಿತವೇ ಪ್ರಧಾನವಾಗಿರುವ ಸರ್ಪ ಸಂಬಂಧಿ ಆಚರಣೆಯಾಗಿದೆ. ನಾಗಮಂಡಲದಲ್ಲಿ ಪೂರ್ಣಮಂಡಲ, ಅರ್ಧಮಂಡಲ, ಕಾಲುಮಂಡಲ

ಎಂಬ ಪ್ರಭೇದಗಳನ್ನು ಕಾಣಬಹುದು. ಪೂರ್ವಮಂಡಲದಲ್ಲಿ ಹದಿನಾರು 'ಪವಿತ್ರಗಳಿಂದ' ಕೂಡಿದ ಸರ್ಪಾಕೃತಿಯನ್ನು ಪಂಚವರ್ಣಗಳಿಂದ ಚಿತ್ರಿಸುತ್ತಾರೆ. ವಿವಿಧ ಹೂಗಳಿಂದ ಮತ್ತು ಹಿಂಗಾರದ ರಾಶಿಯಿಂದ ಮಂಡಲ ಅಲಂಕೃತಗೊಂಡರೆ, ಹೂ,ಹಣ್ಣು ಸೀಯಾಳ, ಹಣ್ಣಡಿಕೆ ಮತ್ತು ವೀಳ್ಯದೆಲೆಗಳಿಂದ ಇಡಿ ಚಪ್ಪರವನ್ನು ಶೃಂಗರಿಸುತ್ತಾರೆ. ಮಂಡಲದಲ್ಲಿನ ಚಿತ್ರಿತ ಹಾವುಗಳು ಒಂದಕ್ಕೊಂದು ಗಂಟು ಹಾಕಿಕೊಂಡಿದ್ದು ನೋಡಲು ಅತ್ಯಾಕರ್ಷಕವಾಗಿರುತ್ತದೆ.

ನಾಗಪಾತ್ರಿ ಮತ್ತು ಅರ್ಧನಾರೀಶ್ವರ ಪಾತ್ರಧಾರಿಗಳು ಪರಸ್ಪರ ಪ್ರಣಯವನ್ನು ವ್ಯಕ್ತಪಡಿಸುತ್ತಾ ನರ್ತಿಸುತ್ತಾರೆ. ಸಂದರ್ಭನುಸಾರ ಪ್ರಣಯ, ಕೋಪ ಇತ್ಯಾದಿ ಹಾವಭಾವಗಳು ಪ್ರದರ್ಶಿತವಾಗುತ್ತವೆ. ಮಂಡಲದ ಸುತ್ತ ರಾಶಿ ಹಾಕಿರುವ ಹಿಂಗಾರವನ್ನೆತ್ತಿಕೊಂಡು ನಾಗಪಾತ್ರಿ ತನ್ನ ಮುಖ-ಮೈಗೆ ಉಜ್ಜಿಕೊಂಡು, ಹಿಸುಕಿಕೊಂಡು ಶರೀರವನ್ನು ಹಾವಿನಂತೆ ಬಳುಕಿಸಿ ಕುಣಿಯುವ ದೃಶ್ಯವನ್ನು ನಾವು ಕಾಣಬಹುದು. ನಾಗನೃತ್ಯದ ನಂತರ ನಾಗಪಾತ್ರಿಯು ಅಭಯ ವಾಕ್ಯ, ಭಕ್ತರ ನಿವೇದನೆಗಳಿಗೆ ಸಮಾಧಾನ, ಪರಿಹಾರಗಳನ್ನು ನೀಡುತ್ತಾನೆ. ತುಳುನಾಡಿನ ಉತ್ತರಭಾಗದಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿದ್ದ ನಾಗಮಂಡಲ ಇತ್ತೀಚಿನ ದಿನಗಳಲ್ಲಿ ದಕ್ಷಿಣ ಭಾಗಕ್ಕೂ ವ್ಯಾಪಿಸಿದೆ. ಒಂದು ದಿನದ ನಾಗಮಂಡಲ ನಡೆಸಲು ಲಕ್ಷಾಂತರ ಹಣ ವೆಚ್ಚವಾಗುತ್ತದೆ. ನೂರಾರು-ಸಾವಿರಾರು ಅಡಿಕೆ ಹಂಗಾರದ ಗೊಂಚಲು ಬೇಕಾಗುತ್ತದೆ. ದಿನದಿಂದ ದಿನಕ್ಕೆ ವೈಭವೀಕರಣವನ್ನು ಹೆಚ್ಚಿಸುತ್ತಾ ಹೋಗುತ್ತಿದೆ ನಾಗಮಂಡಲ.

ಪಾಣಾರಾಟ

ಕುಂದಾಪುರದ ಕನ್ನಡ ಭಾಷಿಕ ಪ್ರದೇಶದಲ್ಲಿ ಪಾಣಾರ ಸಮುದಾಯದವರ ನಾಗರಾಧನೆಯನ್ನು ಪಾಣಾರಾಟ ಅಥವಾ ಸ್ವಾಮಿ ಆರಾಧನೆ ಎಂದು ಕರೆಯುತ್ತಾರೆ. ಬಂಟರು(ನಾಡವರು) ಕೂಡ ನಾಗರೂಪಿ ಸ್ವಾಮಿಯನ್ನು ತಮ್ಮ ಮನೆದೈವವೆಂದು ನಂಬುತ್ತಾಗೆ. ಪಾಣಾರಾಟ ಗ್ರಾಮದ ಗುಡಿಗಳಲ್ಲಿ ವಾರ್ಷಿಕ ಜಾತ್ರೆಯಾಗಿ ಮೂರರಿಂದ ಎಂಟು ದಿನಗಳವರೆಗೆ ನಡೆಯುತ್ತದೆ. ಮಂಡಲ ಚಿತ್ತಾರದ ಸುತ್ತ ನಾಗನನ್ನು ಕುರಿತು ಹೊಗಳಿಕೆಯನ್ನು ಕುಣಿತದೊಂದಿಗೆ ಹಾಡಲಾಗುತ್ತದೆ. ಆಚರಣೆಯಲ್ಲಿ ಪುರುಷರಲ್ಲದೇ ಪಾಣಾರ ಸಮುದಾಯದ ಮಹಿಳೆಯರೂ ಭಾಗವಹಿಸುತ್ತಾರೆ. ದೈವದ ಮನೆಗಳಲ್ಲಿರುವ 'ಊರು'ಗಳಿಗೆ ಪೂಜೆ ಸಲ್ಲಿಸುವ ಮೂಲಕ ಆರಾಧನಾ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ತೆಂಬರೆ ನುಡಿಸುತ್ತಾ ಪ್ರಾರ್ಥನೆ ಹಾಡುವ ಕಾರ್ಯ ಪಾಣಾರ ಮಹಿಳೆಯರದ್ದು. ಈ ಸಂದರ್ಭದಲ್ಲಿ ವಿಧಿಯಚರಣೆಯಂತೆ ಹಲವಾರು ದೈವಗಳಿಗೆ ಕೋಲ ಸಂಪ್ರದಾಯ ನಡೆಯುತ್ತದೆ. ದೈವಾವೇಶಗೊಂಡ ವ್ಯಕ್ತಿ ಕುಣಿಯುತ್ತ ತನ್ನ ಹುಟ್ಟು, ಸಾಧನೆ ಪಡೆದ ಉಪಚಾರಕ್ಕೆ ಸಂತೃಪ್ತಿಯನ್ನು ನುಡಿಗಟ್ಟುಗಳ ಮೂಲಕ ನೀಡುತ್ತಾನೆ. ಇನ್ನಿತರ ಸಾಂಪ್ರದಾಯಿಕ ವಿಧಿ ಆಚರಣೆಗಳೊಂದಿಗೆ ಎರಡು-ಮೂರು ಗಂಟೆಗಳ ಕಾಲಾವಧಿಯ ಸ್ವಾಮಿ ಆರಾಧನೆ ಕೊನೆಗೊಳ್ಳುತ್ತದೆ. ಬಂಟರು ಮನೆದೈವ ಸ್ವಾಮಿಗೆ

ಪ್ರತಿನಿತ್ಯ ದೀಪ ಹಚ್ಚಿ ನೀರಿಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಮನೆತನದ ಮಟ್ಟದಲ್ಲಿ ವಾರ್ಷಿಕವಾಗಿ ಪಾಣಾರರ ಮೂಲಕ ಆರಾಧನೆಯನ್ನು ನಡೆಸುತ್ತಾರೆ.

ಕಾಡ್ಯನಾಟ

ಕುಂದಾಪುರ ತಾಲೂಕಿನ ಪರಿಶಿಷ್ಟ ಪಂಗಡಕ್ಕೆ ಸೇರಿದ ಮೇರರು ಸಾಮಾನ್ಯವಾಗಿ ಪಗ್ಗುಬೇಸ (ಮಾರ್ಚ್-ಏಪ್ರಿಲ್) ತಿಂಗಳಲ್ಲಿ ನಡೆಸುವ ನಾಲ್ಕು ರಾತ್ರಿ ಮೂರು ಹಗಲುಗಳ ಸುದೀರ್ಘ ಸಮಯದ ಕಾಳಿಂಗನ ಆರಾಧನೆಯೆ ಕಾಡ್ಯನಾಟ. 'ಕಾಡ್ಯ'ನೆಂದರೆ ಕಾಳಿಂಗಸರ್ಪ. "ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಹರಿಜನ ವರ್ಗಕ್ಕೆ ಸೇರಿದ ಮೇರ ಜನಾಂಗದವರು ತಮ್ಮ ಕೂಡುಕಟ್ಟಿನೊಳಗಿನ ಕಾಡ್ಯನ ಮನೆಗಳಲ್ಲಿ ನಡೆಸುವ ಕಾಳಿಂಗ ಸರ್ಪನ ಆರಾಧನೆ-ಕಾಡ್ಯನಾಟ್ಯ"[೧೦] ಮೇರರು ವಾಸವಾಗಿರುವ ಪ್ರದೇಶಗಳ ಹತ್ತಿರದಲ್ಲಿಯೇ ಕಾಡ್ಯನ ಆರಾಧನಾ ಕೇಂದ್ರಗಳಾದ 'ಕಾಡ್ಯನ ಮನೆಗಳನ್ನು ಕಾಣಬಹುದು. ಪ್ರಕೃತಿಯ ಮಡಿಲಲ್ಲಿ ಹುತ್ತವನ್ನು ಸೇರಿಕೊಂಡಿರುವ ಕಾಡ್ಯನ ಮನೆ ಇತರೆ ಹಲವಾರು ದೈವಗಳಿಗೂ ಆವಾಸಸ್ಥಾನ. ಸ್ವಾಮಿ, ಬ್ರಹ್ಮ, ಉಮ್ಮಳ್ತಿ, ಬೊಬ್ಬರ್ಯ, ಜಟ್ಟಿಗ, ಗ್ರಾಮ,ಯಕ್ಷಿ, ಕಲ್ಕುಡ, ನೆತ್ತರ್, ಹಾಯ್ಗುಳಿ, ಮತ್ತು ಕಾನ್ ಪಂಜುರ್ಲಿ ಇತ್ಯಾದಿ ದೈವಗಳು ಇಲ್ಲಿವ. ಹಾಗಾಗಿ ಕಾಡ್ಯನ ಮನೆಯನ್ನು ಕಾಡ್ಯನೇ ಪ್ರಧಾನವಾಗಿರುವ ಇತರೆ ದೈವಗಳ ಸಂಕೀರ್ಣ ಆರಾಧನಾಲಯ ಎಂದು ಹೇಳಲಾಗಿದೆ. ನಾಲ್ಕು ಕಂಬಗಳ ಹುಲ್ಲಿನ ಛಾವಣಿಯನ್ನು ಹೊಂದಿರುವ ಸರಳ ಆವಾಸ. ಮಧ್ಯೆ ಬೃಹದಾಕಾರವಾಗಿ ಬೆಳೆದ ಹುತ್ತವಿದ್ದು, ಅದರ ಬುಡದಲ್ಲಿ ನಾಗನಕಲ್ಲು ಮತ್ತು ಸರ್ಪಗಳ ಉಬ್ಬು ಚಿತ್ರಗಳನ್ನು ಒಳಗೊಂಡ ವಿವಿಧಾಕೃತಿಯ ಮಣ್ಣಿನ ಕುಂಭಗಳಿರುತ್ತವೆ.

ಕಾಡ್ಯನಾಟ ಶನಿವಾರ ರಾತ್ರಿಯಿಂದ ಆರಂಭಗೊಂಡು ಮಂಗಳವಾರ ಮಧ್ಯರಾತ್ರಿಯ ತನಕ ನಿರಂತರವಾಗಿ ದೀರ್ಘಕಾಲ ನಡೆಯುವ ಆಚರಣೆ. ವಿವಿಧ ವಿಧಿಕ್ರಿಯಾ ಕಾರ್ಯಗಳಲ್ಲಿ ಇತರೆ ಜಾತಿಯವರನ್ನು ಸಾಂಕೇತಿಕವಾಗಿ ತಮ್ಮಲ್ಲೇ ಆಯ್ಕೆ ಮಾಡಿಕೊಳ್ಳುತ್ತಾರೆ. ಬೈದ್ಯ, ಪಾತ್ರಿ, ಯಜಮಾನರ ಯಜಮಾನಿಕೆಯಲ್ಲಿ ಎಲ್ಲಾ ವಿಧಿಯಾಚರಣೆಗಳು ನೆರವೇರುತ್ತವೆ. ಸೂರ್ಯ, ಚಂದ್ರ, ನಕ್ಷತ್ರ, ಕಮಲದ ಹೂ, ಹೊನ್ನರಳಿ, ಸರ್ಪ, ಚೆನ್ನೆಮಣೆ, ಗಣಪತಿ, ಡೋಲು, ದೋಣಿ, ಇತ್ಯಾದಿ ಪಂಚವರ್ಣದಲ್ಲಿ ಚಿತ್ರಗಳನ್ನು ಮಂಡಲದಲ್ಲಿ ರಚಿಸುತ್ತಾರೆ. ಮಂಡಲದ ಮಧ್ಯದಲ್ಲಿ ತಮ್ಮ ಸಮುದಾಯದ ಮೂಲಸ್ತ್ರೀ ಎಂದು ಹೇಳಲಾಗುವ 'ಹೊನ್ನಿಯ' ಸಂಕೇತವಾಗಿ ಓರ್ವ ಸ್ತ್ರೀಯನ್ನು ನಿಲ್ಲಿಸಿ ಬೈದ್ಯನು ಅಕ್ಕಿಕಾಳನ್ನು ಹಾಕುವ ಮೂಲಕ ಕಾಡ್ಯನಾಟ್ಯವನ್ನು ಯಾವುದೇ ತಾಪತ್ರಯಗಳಿಲ್ಲದಂತೆ ನಡೆಸಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತಾನೆ. ಮೊದಲ ದಿನ ಗುರುಶಾಸ್ತ್ರವಾದರೆ ಎರಡನೆ ದಿನ ಬ್ರಾಹ್ಮಣ ಕೋಲ, ಮಂಡಲ ರಚನೆ ಇತ್ಯಾದಿ ವಿಧಿವಿಧಾನಗಳು ನಡೆಯತ್ತವೆ. ಮೂರನೆ ದಿನ ಓಡ್ಗಾಯಿ ಹಾಕುವುದು, ಅಂಜೋಡಿ ಆಡುವುದು, ಕೊರಗ ಕೋಲ, ದಾಸರ ಕೋಲ, ಹುಲಿ-ಹಂದಿ ಕೋಲ, ಜ್ವರದ ಕೊಲ

ಮತ್ತು ಜಕ್ಕಿಣಿಯರ ಕುಣಿತ ಇತ್ಯಾದಿ ಆಚರಣೆಗಳು ನಡೆಯುತ್ತವೆ. ನಾಲ್ಕನೇ ದಿನಕುದುರೆ ಕೋಲ, ಪೊಟ್ಟ ಆಡುವುದು ಮತ್ತು ಭೂತ ಬಲಿ.

ಡಕ್ಕೆ ಬಲಿ

ಡಕ್ಕೆಬಲಿ ಬ್ರಹ್ಮಸ್ಥಾನಗಳಲ್ಲಿ ಅಥವಾ ಆಲಡೆಗಳಲ್ಲಿ ವಾರ್ಷಿಕ ಪೂಜೆಯಾಗಿ ಹಾಗೂ ಹರಕೆಯ ರೂಪದಲ್ಲಿ ಸುಮಾರು ಎರಡರಿಂದ ಮೂರು ಗಂಟೆಗಳ ಅವಧಿಯಲ್ಲಿ ನಡೆಯುವ ನಾಗಸಂಬಂಧಿ ಆಚರಣೆ. ಇದನ್ನು ಡಕ್ಕೆಬಲಿ, ಜಕ್ಕೆಬಲಿ ಎಂದು ಕರೆಯಲಾಗುತ್ತದೆ. ಡಕ್ಕೆಬಲಿ ಆಚರಣೆಯನ್ನು ಬ್ರಾಹ್ಮಣ- ವೈದ್ಯರು, ಪಾಣಾರರೂ ಆಯತಕಾರದ ಚಿಕ್ಕಗಾತ್ರದ ಮಂಡಲವನ್ನು ಬರೆಯುತ್ತಾರೆ. ಬಿಳಿ, ಕೆಂಪು, ಅರಿಶಿಣ ಮತ್ತು ಜಂಗಮ ಸೊಪಿನ ಹಸಿರು ಹುಡಿಗಳನ್ನು ಮಂಡಲದಲ್ಲಿ ಸ್ವಸ್ತಿಕ, ಅಕ್ಕಿ-ತೆಂಗಿನಕಾಯಿಯ ಸುತ್ತಿಗೆ ಇರಿಸಿ ಕಾಲದೀಪ ಬೆಳಗಿಸಲಾಗುತ್ತದೆ. ಅಡಿಕೆ ಹೂ(ಹಿಂಗಾರ) ಮತ್ತು ಇತರೆ ಹೂಗಳಿಂದ ಮಂಡಲವನ್ನು ಅಲಂಕರಿಸಲಾಗುತ್ತದೆ. ನಾಗಪಾತ್ರಿ, ಅರ್ಧನಾರೀಶ್ವರ ಮತ್ತು ತಾಳಧಾರಿ- ಹೀಗೆ ಪ್ರಮುಖ ಮೂವರು ಡಕ್ಕೆ ಬಲಿ ನರ್ತಕರಿರುತ್ತಾರೆ.

ಹಿಮ್ಮೇಳದವರ ತೆಂಬರೆ, ಜಾಗಟೆಯ ಬಾರಿಸುವಿಕೆಗೆ ಅರ್ಧನಾರೀಶ್ವರ ಮತ್ತು ಪಾತ್ರಿಗೆ ಆವೇಶವುಂಟಾಗುತ್ತದೆ. ಅರ್ಧನಾರೀಶ್ವರನ ನಾಗ, ಸ್ವಾಮಿ ಮತ್ತು ದೈವದ ಕೋಗಳಿಗೆಗಳನ್ನು ಇತರರು ಪುನರುಚ್ಚರಿಸುತ್ತಾರೆ. ಜೊತೆಗೆ ಆವೇಶಭರಿತ ಕುಣಿತವೂ ಮುಂದುವರಿಯುತ್ತದೆ. ತಮ್ಮ ಕೈಯಲ್ಲಿರುವ ಹಿಂಗಾರವನ್ನು ಮುಖ, ಮೈಗೆ ಸಿಕ್ಕಿಕೊಳ್ಳುತ್ತಾರೆ. ಈ ರೀತಿಯ ನರ್ತನ ಮಧ್ಯರಾತ್ರಿಯಿಂದ ಬೆಳಗಿನ ಸಮಯದವರೆಗೂ ಮುಂದುವರೆಯುತ್ತದೆ. ಬಳಿಕ ಮಂಗಳಾರತಿ ನಡೆದು ನರ್ತನಗಾರರು ಭಕ್ತರಿಗೆ ಅಭಯ ನೀಡಿ ಪ್ರಸಾದ ವಿತರಣೆ ಮಾಡುತ್ತಾರೆ ಬ್ರಾಹ್ಮಣ ವೈದ್ಯರ ಡಕ್ಕೆಬಲಿ ಪಾಣಾರರು ನಡೆಸುವ ಡಕ್ಕೆಬಲಿಗಿಂತ ಭಿನ್ನವಾಗಿದೆ.

ದೈವಾರಾಧನೆ (ಭೂತಾರಾಧನೆ)

ಕರಾವಳಿ ಪ್ರದೇಶದ ಶಕ್ತಿಯುತ ಹಾಗೂ ಜನಪ್ರಿಯ ಆರಾಧನೆಗಳಲ್ಲಿ ಭೂತಾರಾಧನೆ ಒಂದಾಗಿದೆ. ಭದ್ರವಾದ ನೆಲೆಗಟ್ಟನ್ನು ಪಡೆದಿರುವ ಈ ಆರಾಧನಾ ಪದ್ಧತಿಯಲ್ಲಿ ಕಲೆಯ ಅಂಶಗಳು ಸೇರಿಕೊಂಡಿರುವುದರಿಂದ ತಾಂತ್ರಿಕ ಸ್ವರೂಪದ ಭೂತಾರಾಧನೆಯು ಒಂದು ಕಲಾತ್ಮಕ ಅಭಿವ್ಯಕ್ತಿಯಾಗಿಯೂ ಕಂಡು ಬರುತ್ತದೆ. "ಭೂತಾರಾಧನೆಯಲ್ಲಿ ವೀರರ ಆರಾಧನೆಗೆ ಮಹತ್ವವಿದೆ. ಈ ನಾಡಿನಲ್ಲಿ ಆಗಿಹೋದ ಹಲವು ಜನಪದ ವೀರರು, ಆಯಾ ಸಾಂಸ್ಕೃತಿಕ ಸ್ತ್ರೀ ಪುರುಷರನ್ನು ಪೌರಾಣಿಕ ಶಕ್ತಿಗಳನ್ನಾಗಿ ಆರಾಧಿಸುತ್ತಿರುವುದು ತುಳು ಸಂಸ್ಕೃತಿಯ ವಿಶಿಷ್ಟತೆ. ಕೋಟಿ ಚೆನ್ನಯ, ಕಾಂತಾಬಾರೆ, ಭೂದಬಾರೆಯರು, ಕಾನದ ಕಾಟನ, ದೇವುಪೂಂಜ, ಕೊರಗ ತನಿಯ, ಮುಗೇರ್ಲು, ಕೋಡ್ದಬ್ಬು, ತನ್ನಿ ಮಾಣಿಗ, ಕಲ್ಕುಡ-ಕಲ್ಲುರ್ಟಿ, ಅಂಗೋಳಿ ಮಂಜಣ ಮುಂತಾದ ಐತಿಹಾಸಿಕ ವೀರರ ಸಾಂಸ್ಕೃತಿಕ ಪರಂಪರೆ ತುಳುವನ್ನು ಕ್ರಿಯಾತ್ಮಕಗೊಳಿಸುವುದು" ತುಳು ನಾಡಿನ ಸಾಂಸ್ಕೃತಿಕ

ವೀರರ ಪರಂಪರೆಗೆ ಸಾಮಾಜಿಕ, ರಾಜಕೀಯ, ವ್ಯವಸ್ಥೆಗಳ ಹಿನ್ನೆಲೆಯಿಂದ ಒಂದು ಮೌಲ್ಯದ ಉಳುವಿಗಾಗಿ ಸಮೂಹದ ಪ್ರತಿನಿಧಿಗಳಾಗಿ ಬೌದ್ಧಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು ಹೋರಾಡಿ ದುರಂತ ಕಂಡ ವೀರರು. ಅವರ ಕಾಲಾನಂತರ ಅಲೌಖಿಕ ವ್ಯಕ್ತಿಗಳಾಗಿ ಆರಾಧನೆ ಪಡೆಯುತ್ತಿದ್ದಾರೆ. ಕಾಲವಾದ ಈ ಸಾಂಸ್ಕೃತಿಕ ವೀರರನ್ನು ಮತ್ತೆ 'ಮಧ್ಯಂತರ ಜಗತ್ತಿಗೆ' ಬರಮಾಡಿಕೊಂಡು ಹಿರಿಯರ ಆರಾಧನೆಯಾಗಿ ನೋಡಲಾಗುತ್ತದೆ. ಆರಾಧನೆಯ ಸಂದರ್ಭದಲ್ಲಿ ಭೂತದ ವೇಷವನ್ನು ತಳವರ್ಗದ ಜನಾಂಗವೂ ಕಟ್ಟಿಕೊಂಡು ಭೂತವನ್ನು ಆವಾಹನೆಗೊಳಿಸಿಕೊಳ್ಳುವುದು ಸಾಂಸ್ಕೃತಿಕವಾಗಿ ಮುಖ್ಯವಾಗಿದೆ. ಭೂತಾರಾಧನೆಗೆ ಪ್ರೇರಕಶಕ್ತಿಯಾಗಿರುವ ಜನಪದ ಸಾಹಿತ್ಯದ ಪ್ರಕಾರವಾದ ಪಾಡ್ದನಗಳನ್ನು ಕೆಳವರ್ಗದವರು ತೆಂಬರೆ ಬಡಿಯುತ್ತಾ ಹಾಡಿ ಭೂತಾರಾಧನೆಯ ಕ್ರಿಯೆಗೆ ಪ್ರಮುಖ ಪಾತ್ರವಹಿಸುತ್ತಾರೆ. ಭೂತಗಳ ಹುಟ್ಟು, ಪ್ರಸರಣ, ಮತ್ತು ಕಾರಣಿಕಗಳನ್ನು ನಿರೂಪಿಸುವ ಪಾಡ್ದನಗಳು ಧಾರ್ಮಿಕ ರಂಗಭೂಮಿಯಾಗಿರುವ ಭೂತಾರಾಧನೆಯ ಸಾಹಿತ್ಯಿಕವಾದ ಭಾಗವಾಗಿದೆ.

ಭೂತಾರಾಧನೆ ಮತ್ತು ಪಾಡ್ದನಗಳ ಸಂಬಂಧದಲ್ಲಿ ಮೂರು ಹಂತಗಳಿವೆ. ೧. ಭೂತಾರಾಧನೆಯಲ್ಲಿ ಪಾಡ್ದನಗಳನ್ನು ಹಾಡುವ ಸಂದರ್ಭಗಳು ಮತ್ತು ಅದರಿಂದ ಭೂತಾರಾಧನೆಯ ರಂಗಕ್ರಿಯೆಗೆ ಒದಗುವ ಪ್ರಯೋಜನಗಳು ೨. ಪಾಡ್ದನಗಳು ಒಳಗೊಳ್ಳುವ ಕತೆಯ ವಿವರಗಳು ಆರಾಧನೆಯ ಸಂದರ್ಭದಲ್ಲಿ ಅಭಿವ್ಯಕ್ತಿಗೊಳ್ಳುವ ಬಗೆ ಮತ್ತು ಈ ಉದ್ದೇಶಕ್ಕೆ ಕಲೆಯ ಪರಿಕರಗಳು ಸಹಕರಿಸುವ ರೀತಿ ೩. ಪಾಡ್ದನ, ಪಾರಿ ಮತ್ತು ನುಡಿಕಟ್ಟುಗಳಲ್ಲಿ ಸಿಗುವ ಭೂತಾರಾಧನೆಯ ಚಿತ್ರಣ"[೨] ಭೂತಾರಾಧನೆಯು ಪ್ರಾರಂಭದಲ್ಲಿ ನಡೆಯುವ ಸಿದ್ಧತೆಯ ಭಾಗ ಮತ್ತು ಪಾಡ್ದನಗಳ ನಡುವೆ ನೇರವಾದ ಸಂಬಂಧವಿದೆ. ಪಾಡ್ದನಗಳನ್ನು ಹಾಡುವ ಕ್ರಿಯೆಯು ಕಲಾವಿದರಿಗೆ ಮಾನಸಿಕ ಮತ್ತು ದೈಹಿಕವಾದ ಸಿದ್ಧತೆಯನ್ನು ತಂದುಕೊಡುತ್ತದೆ. ಭೂತಗಳ ಪಾಡ್ದನ, ಭೂತಕ್ಕೆ ಹೇಳುವ ಪಾರಿ ಮತ್ತು ಭೂತವು ಹೇಳುವ ಅಭಯದ ಮಾತು ಇವುಗಳಲ್ಲಿ ಭೂತಾರಾಧನೆಯ ಸಾಂಸ್ಕೃತಿಕ ಇತಿಹಾಸವು ದೊರೆಯುತ್ತದೆ. ಪಾಡ್ದನಗಳ ಕುರಿತು ಸಮಗ್ರವಾಗಿ ಅದ್ಯಯನ ಮಾಡಿರುವ ಪ್ರೊ.ಬಿ.ಎ.ವಿವೇಕ ರೈ ಅವರು ಭೂತಗಳು ಒಳಗೊಳ್ಳುವ ಕಥಾವಸ್ತುವನ್ನು ಹಾಗೂ ಭೂತಗಳ ಪ್ರಸರಣವನ್ನು ಭೌಗೋಳಿಕ ಚಾರಿತ್ರಿಕ ನೆಲೆಯಲ್ಲಿ ಚರ್ಚಿಸುತ್ತಾರೆ. ಮುಖ್ಯವಾಗಿ ಭೂತಗಳ ಕುರಿತ ಪಾಡ್ದನಗಳನ್ನು ವಸ್ತುವಿನ ನೆಲೆಯಲ್ಲಿ ವರ್ಗೀಕರಿಸಿಕೊಳ್ಳುತ್ತಾರೆ. ಒಂದೆ ಬಗೆಯ ಭೂತಕ್ಕೆ ಸಂಬಂಧಿಸಿದ ಭಿನ್ನ ಭಿನ್ನ ಪಠ್ಯಗಳನ್ನು ತೌಲನಿಕವಾಗಿ ಚರ್ಚಿಸುತ್ತಾರೆ. ಒಟ್ಟಾರೆಯಾಗಿ ಪಾಡ್ದನಗಳ ವಸ್ತುವಿನ ದೃಷ್ಟಿಯಿಂದ ಮಹಾಕಾವ್ಯಗಳ ಸಾಲಿಗೆ ಹಲವು ಪಾಡ್ದನಗಳನ್ನು ಸೇರಿಸುತ್ತಾರೆ. ಪಂಜುರ್ಲಿ ಭೂತ, ಕಲ್ಕುಡ-ಕಲ್ಲುರ್ಟಿ, ಮೈಸಂದಾಯ, ಕೋಟಿ ಚೆನ್ನಯ, ಬೊಬ್ಬರ್ಯ, ಸಿರಿ ಮುಂತಾದ ವೀರರ ಬಗೆಗಿನ ಪಾಡ್ದನಗಳ ಕಥಾವಸುವನ್ನು ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ವಿಶ್ಲೇಷಣೆಗೊಳಪಡಿಸಿದ್ದಾರೆ. "ಪಾಡ್ದನಗಳು ಪ್ರಧಾನವಾಗಿ ಭೂತಾರಾಧನೆಗೆ ಸಂಬಂಧಿಸಿದ ಕತೆಗಳಾದ್ದರಿಂದ ಸಹಜವಾಗಿ ಆ ಸಂಸ್ಕೃತಿಗೆ ಸಂಬಂಧಿಸಿದ ನಂಬಿಕೆಗಳು, ಪದ್ಧತಿಗಳು, ಆಚರಣೆಗಳು ಇಂತಹ ಪಾಡ್ದನಗಳಲ್ಲಿ ಹೆಚ್ಚಾಗಿ ದೊರೆಯುತ್ತವೆ.

ಭೂತದ ಉಪದ್ರಕ್ಕಾಗಿ ಭೂತಗಳ ಬಗ್ಗೆ ನಿಮಿತ್ತ ಅಥವಾ ಬಲ್ಮೆ ಕೇಳುವುದು ತಮ್ಮ ಇಷ್ಟಾರ್ಥ ಕೈಗೂಡುವುದಕ್ಕಾಗಿ ಭೂತಕ್ಕೆ ಹರಕೆ ಹೇಳುವುದು, ಭೂತಕ್ಕೆ ಸ್ಥಾನ ಮತ್ತು ಆಭರಣ ಮಾಡುವ ವಿಧಾನ. ಭೂತದ ಆರಾಧನೆಯಲ್ಲಿ ಅರ್ಪಣೆಯ ವಿಧಾನ, ಭೂತ ಹಿಡಿದಿದ್ದನ್ನು ಬಿಡಿಸುವ ವಿಧಾನ. ಭೂತವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆಕೊಂಡು ಹೋಗುವ ವಿಧಾನ, ಭೂತದ ಮಾಡದಲ್ಲಿ ಒಕ್ಕಲಾಗುವ ವಿಧಾನ, ಭೂತದ ಹೆಸರಿನಲ್ಲಿ ಸಸ್ಯಗಳಿಗೆ ಕೊಡಿ ಕಟ್ಟುವ ವಿಧಾನ ಇಂತಹ ಹತ್ತು ಹಲವು ಸಂಗತಿಗಳು ಪಾಡ್ದನಗಳಲ್ಲಿ ವಿವರವಾಗಿ ಸಿಗುತ್ತವೆ”[೧೩] ಹೀಗೆ ಭೂತಾರಾಧನೆಯು ಸಾಹಿತ್ಯ, ಪ್ರದೇಶ, ಜನಾಂಗ, ಸಂಸ್ಕೃತಿ ಇತ್ಯಾದಿ ಅಂಶಗಳ ಮೂಲಕ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಮುಖ್ಯವಾಗಿ ತುಳುನಾಡಿನ ಸಾಮಾಜಿಕ ವ್ಯವಸ್ಥೆಯ ಒಂದು ಅಂಗವಾಗಿ ಭೂತಾರಾಧನೆಯು ಬೆಳೆದು ಬಂದಿದೆ. ಕ್ರಿಯಾತ್ಮಕವಾದ ಇಂತಹ ಆರಾಧನೆಯಲ್ಲಿ ಜನಪದರ ಮಾನಸಿಕ ಪರಿಕಲ್ಪನೆ ಮತ್ತು ನಂಬಿಕೆಗಳನ್ನು ಸಾಮಾಜಿಕ ವ್ಯವಸ್ಥೆಯ ಒಳಗಡೆ ತರುವ ಉದ್ದೇಶವಿದೆ. ಇದನ್ನು ಕೆ.ಚಿನ್ನಪ್ಪಗೌಡರು ಗುರುತಿಸುವಂತೆ,

೧. ಭೂತಾರಾಧನೆಯು ಒಂದು ಸಾಮಾಜಿಕ ವ್ಯವಸ್ಥೆಯಾಗಿ ವಿಕಾಸ ಹೊಂದಿದೆ.

೨. ತುಳುನಾಡಿನ ಆಡಳಿತ ವ್ಯವಸ್ಥೆಯ ಒಂದು ಅಂಗವಾಗಿರುವ ನ್ಯಾಯಂಗ ಪದ್ಧತಿಯಾಗಿ ಕಾರ್ಯನಿರ್ವಹಿಸಿದೆ.

೩. ತುಳುನಾಡಿನ ಆರ್ಥಿಕತೆ, ಜನಾಂಗ ಮತ್ತು ವಾಣಿಜ್ಯ ವ್ಯವಹಾರಗಳ ಜೊತೆಗೆ ನಿಕಟವಾದ ಸಂಬಂಧವನ್ನು ಪಡೆದುಕೊಂಡಿದೆ.

೪. ಮನೋರಂಜನಾತ್ಮಕ ಕ್ರೀಡೆಗಳ ಮೇಲೆ ಧಾರ್ಮಿಕ ಪ್ರಭಾವವನ್ನು ಬೀರಿದೆ.

೫. ಕಲೆಯ ಪರಿಕರಗಳನ್ನು ಬಳಸಿಕೊಂಡು ರಣಗಭೂಮಿಯಾಗಿ ಬೆಳವಣಿಗೆಯನ್ನು ಹೊಂದಿದೆ.

೬. ಭೂತಾರಾಧನೆಯು ವೈದ್ಯಕೀಯ ಪದ್ಧತಿಯಾಗಿ ಕೆಲಸ ಮಾಡುತ್ತಾ ಬಂದಿದೆ”[೧೪] ಹೀಗೆ ಭೂತಾರಾಧನೆಯಲ್ಲಿ ಹಲವು ಸಾಂಸ್ಕೃತಿಕ ಸಂಕೀರ್ಣತೆಯ ಅಂಶಗಳು ಇರುವುದನ್ನು ನೋಡಬಹುದು. ಅಲ್ಲದೇ, ೧.ಕೋಲ ೨. ನೇಮ ೩. ಬಂಡಿ-ಜಾತ್ರೆ ೪. ಮೈಮೆ ೫. ದೊಂಪದ ಬಲಿ ೬. ಕೆಂಡಸೇವೆ ೭. ಮೆಚ್ಚಿ ಮತ್ತು ೮. ಜಾಲಾಟ ಎಂಬ ಪ್ರಭೇದಗಳಿವೆ. ಆರಾಧನೆಯ ಸಾಂಸ್ಕೃತಿಕ ಸ್ವರೂಪದಲ್ಲಿರುವ ವ್ಯತ್ಯಾಸ, ಆರಾಧನೆಯು ನಡೆಯುವ ಪ್ರದೇಶ, ಭೂತಗಳ ಪೌರಾಣಿಕ ಪರಿಕಲ್ಪನೆ ಈ ಅಂಶಗಳು ಆರಾಧನೆಯ ಪ್ರಭೇದಗಳಿಗೆ ಕಾರಣಗಳಾಗಿವೆ.

ಹೀಗೆ ದಕ್ಷಿಣ ಕನ್ನಡದಲ್ಲಿ ಭೂತಾರಾಧನೆಯು ಜನತೆಯ 'ಕಲಾನುಭೂತಿ'ಯು ಒಂದು ಅಖಂಡ ರೀತಿಯೆನ್ನುವಂತೆ ತೊಡಗಿದೆ ಎನ್ನಬಹುದು. ನಾಗಮಂಡಲದ ರಚನೆಯಲ್ಲಿ ವೈದ್ಯರು ತೋರುವ ಕಲಾವಂತಿಕೆಯ ಅರಿವು ಮುಖ್ಯವಾಗಿರುವಂತೆಯೇ ಭೂತಾಲಂಕಾರದಲ್ಲಿಯೂ ಪರವ, ಪಂಬದ,

ನಲ್ಕೆಯವರ ಅರಿವೂ ಮುಖ್ಯವಾಗಿದೆ. ಈ ಎರಡು ಆಚರಣೆಗಳು ದಕ್ಷಿಣ ಕನ್ನಡದ 'ಸಮಾರಾಧನೆ'ಗಳು ಎನ್ನಬಹುದು. ಹಾಗೇ ಜರಗುತ್ತವೆ. ಇಲ್ಲಿ ಕಂಡು ಬರುವ ಶಿಲ್ಪ ವೈವಿಧ್ಯ ಪಂಚವರ್ಣಗಳ ಬಳಕೆ ನೃತ್ಯ ಗೀತೆಗಳ ಜಾನಪದ ಸ್ವರೂಪ ಮೊದಲಾದವು ತುಂಬಾ ಆಕರ್ಷಕವಾಗಿವೆ. ಈ ಆಚರಣೆಗಳ ಬಲದಿಂದ ಇಲ್ಲಿಯ ಜನತೆಯ 'ಕಲಾಭಿಜ್ಞತೆಯು' ರೂಪತಾಳದೆನಿಸುತ್ತದೆ. 'ಯಕ್ಷಗಾನ-ಬಯಲಾಟವು' ಸಾಹಿತ್ಯದ ವಸ್ತು ವೈವಿಧ್ಯವನ್ನು ಒಳಗೊಂಡು ಒಂದು ಕಲೆಯೆನ್ನುವಷ್ಟು ಸತ್ವಯುತವಾಗಿದೆ. ಅಲ್ಲದೇ ಅದು ಮತೀಯವೆನ್ನಬಹುದಾದ ಮಿತಿಗಳನ್ನೆಲ್ಲ ಮೀರಿ ಬೆಳೆದುದಾಗಿದೆ. ಆದರೆ ನಾಗಾರಾಧನೆ ಮತ್ತು ಭೂತಾರಾಧನೆಗಳು ಇಂದಿಗೂ ಶುದ್ಧ ಆಚರಣೆಗಳೆ ಆಗಿಉಳಿದಿವೆ. ಇವುಗಳಲ್ಲಿ ಎಲ್ಲ ಬಗೆಯ ಕಲಾವಂತಿಕೆಯೂ ಆಚರಣೆಯೂ ಕ್ರಿಯೆಗೆ ಸೇವಕನಂತೆ ದುಡಿಯುತ್ತದೆ.

ಸಿರಿ ಆಚರಣೆ

ಸಿರಿ ಆಚರಣೆಯು ತುಳುನಾಡಿನ ಇತರ ಆರಾಧನಾ ಸಂಪ್ರದಾಯಗಳಾದ ನಾಗರಾಧನೆ, ಕಾಡ್ಯನಾಟ, ಪಾಣಾರಾಟ, ದೈವಾರಾಧನೆ (ಭೂತಾರಾಧನೆ) ಹಾಗೂ ವೈದಿಕ ದೇವಾಲಯಗಳ ಉತ್ಸಹ ಆಚರಣೆಗಿಂತ ಅನೇಕ ನೆಲೆಗಳಿಂದ ವೈಶಿಷ್ಟ್ಯ ಹಾಗೂ ಭಿನ್ನತೆಯಿಂದ ಕೂಡಿದೆ. ಇದರಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಸಾಮೂಹಿಕವಾಗಿ ಒಂದು ನಿರ್ದಿಷ್ಟ ಆವೇಶ ಕ್ರಿಯೆಯಲ್ಲಿ ಭಾಗಿಗಳಾಗುತ್ತಾರೆ. ತೀರಾ ಅಪರಿಚಿತರಾಗಿರುವ ಸ್ತ್ರೀಯರು ಆರಾಧನೆಯ ಈ ಸಂದರ್ಭದಲ್ಲಿ ಅಲೌಖಿಕ ಜಗತ್ತಿನ ಸಿರಿ, ಸೊನ್ನೆ, ಗಿಂಡೆ, ಅಬ್ಬಗ-ದಾರಗ, ಮುಂತಾದ ಪಾತ್ರಗಳ ಮೂಲಕವಾಗಿ ಒಂದು ಬಳಗದ (ಸಿರಿಕುಟುಂಬ) ಸದಸ್ಯೆಯರಾಗಿ ಆತ್ಮೀಯತೆಯಿಂದ ವರ್ತಿಸುವುದು. ಲೌಖಿಕ ಬದುಕಿನ ನೇಮ, ಅನ್ಯಾಯ, ಅವಮಾನಗಳನ್ನು ಆರಾಧನೆಯಲ್ಲಿ ಆವೇಶ, ಅಭಿನಯ ಮತ್ತು ಸಂಭಾಷಣೆಗಳ ಮೂಲಕ ಹಂಚಿಕೊಳ್ಳುವುದು 'ಸಿರಿ'ಯು ಮೈಮೇಲೆ ಬಂದು ಆವೇಶ ಹೊಂದುವ ಸ್ತ್ರೀಯಾಗಿ ಕುಟುಂಬದ ಇತರ ಸದಸ್ಯರ ಮನ್ನಣೆಗೆ ಗೌರವಕ್ಕೆ ಪಾತ್ರರಾಗುವುದು. ಇಂತಹ ಹಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಈ ಆರಾಧನಾ ಪದ್ಧತಿಯು ಒಂದು ಸಂಕೀರ್ಣ ವ್ಯವಸ್ಥೆಯಾಗಿದೆ. "ಸಿರಿ ಆರಾಧನೆ ಒಂದು ವಾರ್ಷಿಕ ಪ್ರಾದೇಶಿಕ ಸಾಮೂಹಿಕ ಮತಾವೇಶದ ಆಚರಣೆಯಾಗಿದೆ. ಜಿಲ್ಲೆಯ ಸುಮಾರು ಹದಿನಾರು ದೇವಾಲಯ (ಆಲಡೆ?) ಗಳಲ್ಲಿ ಮಾರ್ಚ್-ಎಪ್ರೀಲ್ ಮೇ ತಿಂಗಳ ಹುಣ್ಣಿಮೆಯ ರಾತ್ರಿ ಈ ವಿಧಿ ಆಚರಣೆಯು ಜರಗುತ್ತದೆ. ದೇವಾಲಯದ ಪರಿಸರದಲ್ಲಿ ಸಾವಿರಾರು ಮಂದಿ ಸ್ತ್ರೀಪುರುಷರು ಮುಸ್ಸಂಜೆಯ ಹೊತ್ತಿಗೆ ನೆರೆದು ಸಿರಿ ಐತಿಹ್ಯವನ್ನೊಳಗೊಂಡ ಪಾಡ್ದನವನ್ನು ಹಾಡುತ್ತಾ ತಾವು ದೈವಾವೇಷಕ್ಕೆ ಒಳಗಾಗುತ್ತಾರೆ. ಸಿರಿದೈವಬಳಗವು ಮಾತೃವಂಶಿಯ ಕುಟುಂಬವೊಂದರ ಮೂರು ತಲೆಮಾರಿನ, ದೈವತ್ವೀಕರಣಗೊಂಡ ನಾಲ್ವರು ಮಹಿಳೆಯರು ಹಾಗೂ ಒಬ್ಬ ಪುರುಷನನ್ನು ಒಳಗೊಂಡಿರುತ್ತದೆ. ಆರಾಧನಾ ಬಳಗದ ಸ್ತ್ರೀಪುರುಷರ ಅನುಪಾತವು ಸಾಮಾನ್ಯವಾಗಿ (ನಾಲ್ಕಕ್ಕೆ ಒಂದು) ಐತಿಹ್ಯದ ಸ್ತ್ರೀಪುರುಷರ ಸಂಖ್ಯೆಗೆ ಅನುಗುಣವಾಗಿರುತ್ತದೆ. ಈ ಮತಾಚಾರಣೆಯಲ್ಲಿ ಪಾಲ್ಗೊಳ್ಳುವ ಆರಂಭಿಗರು ಹಾಗೂ ಹಲವಾರು ವರ್ಷಗಳಿಂದ ಪಾಲ್ಗೊಳ್ಳುತ್ತಿರುವ ಅನುಭವಿ ಎನ್ನುವ ಪ್ರಮುಖ

ವ್ಯತ್ಯಾಸವು ಸಿರಿ ಭಕ್ತ ಸಮುದಾಯದಲ್ಲಿ ಕಾಣಿಸುತ್ತದೆ. ಹಿಂದೆ ನೀಡಿದ ವಿವರಣೆಯಂತೆ ಈ 'ಅನುಭವಿ'ಗಳನ್ನು ಪಾತ್ರಿಗಳು ಎನ್ನಬಹುದು. 'ಆರಂಭಿಗ'ರಲ್ಲಿ ಹೆಚ್ಚಿನವರು ಹಿಂದಿನ ವರ್ಷಗಳಲ್ಲಿ ಹಲವಾರು ಬಾರಿ ದೈವಾವೇಷಕ್ಕೆ ಒಳಗಾದ ತರುಣ ವಯಸ್ಸಿನ ಸ್ತ್ರೀಪುರುಷರಾಗಿರುತ್ತಾರೆ. ಸಿರಿಜಾತ್ರೆಯ ಸಂದರ್ಭದಲ್ಲಿ ನಡೆಯುವ ವಿಧ್ಯುಕ್ತ ಆಚರಣೆಗಳು ಅವರಿಗೆ 'ಪರಿಹಾರ' ಒದಗಿಸಿದರೂ ಮಂದೆ ಅವರು ಪ್ರತಿವರ್ಷವೂ ಅನುಭವಿಗಳಾಗಿ ಜಾತ್ರೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ ಎಂದು ಸಿರಿ ಆಚರಣೆ ಬಗ್ಗೆ ಕ್ಷೇತ್ರಕಾರ್ಯದ ಮೂಲಕ ವಿಶೇಷವಾಗಿ ಅಧ್ಯಯನ ಮಾಡಿದ ಪ್ರೊ. ಪೀಟರ್ ಜೆ.ಕ್ಲಾಸ್ ಅವರು ದಾಖಲಿಸುತ್ತಾರೆ"[೧೫]

ಸಿರಿ ಆಚರಣೆಯಲ್ಲಿ 'ಬಂಟ' ಜನಾಂಗದವರು ಸಾಮಾಜಿಕವಾಗಿ ಮೊದಲು ಕಾಣಿಸಿಕೊಳ್ಳುತ್ತಾರೆ. ಸಿರಿ ಪಾಡ್ದನವನ್ನು ಹಾಡುತ್ತಾ ಸಿರಿಯನ್ನು ಆವಾಹನೆಗೊಳಿಸಿಕೊಳ್ಳಲಾಗುತ್ತದೆ. "ಸಾಂಸ್ಕೃತಿಕವಾಗಿ ಸಿರಿಯ ಪಾಡ್ದನವೂ ತುಳುನಾಡಿನ ಬಂಟ ಸಮಾಜದ ಮಾತೃಮೂಲೀಯ ಪದ್ಧತಿ ಅಥವಾ ಅಳಿಯ ಸಂತಾನ ಕಟ್ಟು, ಬಯಕೆ ಪದ್ಧತಿಯ ಸ್ವರೂಪ, ವಿವಾಹ ವಿಚ್ಛೇದನ, ವರದಕ್ಷಿಣೆಯ ಕ್ರಮ ಮುಂತಾದ ಅನೇಕ ಅಂಶಗಳನ್ನು ತಿಳಿಸುತ್ತದೆ"[೧೬] ಜನಪದ ಸಾಹಿತ್ಯದ ಭಾಗಗಳಾದ ಪಾಡ್ದನಗಳು ನಾಲ್ಕು ತಲೆಮಾರಿನ ಸಿರಿ ಕಾವ್ಯವನ್ನು ಒಳಗೊಂಡಿದೆ. ಆಚರಣೆಯ ಸಂದರ್ಭವೂ ಅಕ್ಕೆಸಿರಿ, ಸೊನ್ನೆ, ಅಬ್ಬಗೆ-ದಾರಗೆ, ಅವರ ಕಷ್ಟ-ಸಂಕಷ್ಟಗಳ ಸಮಸ್ಯೆಗಳ ವಿವರಣೆಯನ್ನು ಕಾಣಬಹುದು. ಸಿರಿಯ ಆಚರಣೆಯಲ್ಲಿಯೂ ಹೆಂಗಸರು ಮೈಮೇಲೆ ಆವಾಹನೆಯನ್ನು ತಂದು ಆವೇಶದಿಂದ ದೇಹಕ್ಕೆ ಮತ್ತು ಮನಸ್ಸಿಗೆ ಕಷ್ಟವನ್ನು ತಂದುಕೊಳ್ಳುತ್ತಾರೆ. ಈ ದೃಷ್ಟಯಿಂದ ಸಿರಿಯ ಪಾಡ್ದನ ಮತ್ತು ಆಚರಣೆಗಳಿಗೆ ಸಂಬಂಧ ಕಾಣಿಸುತ್ತದೆ"[೧೭] ಬಿ.ಎ.ವಿವೇಕ ರೈ ಅವರು 'ತುಳು ಜನಪದ ಸಾಹಿತ್ಯ' ಕೃತಿಯಲ್ಲಿ ಸಿರಿಯ ಪಾಡ್ದನ, ವಸ್ತು, ಆಚರಿಸುವ ಬಗೆಯನ್ನು ಸಾಂಸ್ಕೃತಿವಾಗಿ ನೋಡಿದ್ದಾರೆ. ಮುಖ್ಯವಾಗಿ ಭೂತಾರಾಧನೆಯಲ್ಲಿ ಕಾಣಿಸುವ ಭಯ ಸಿರಿಯ ಆಚರಣೆಯಲ್ಲಿ ಕಾಣಿಸುವುದಿಲ್ಲ. "ಈ ಆಚರಣೆಯಲ್ಲಿ ಯಾವುದೇ ಒಂದು ವ್ಯಕ್ತಿ ಸಿರಿಯನ್ನು ಆವಾಹನೆ ಮಾಡಿಕೊಳ್ಳುವುದು ಪ್ರಯೋಜನಕಾರಿಯಾದುದು ಎಂಬ ದೃಷ್ಟಿಯಿಂದಲೇ ಹೊರತು ಭಯದ ಕಾರಣಕ್ಕಾಗಿ ಅಲ್ಲ. ಸಿರಿಯ ಆಚರಣೆಯು ಮಾತೃ ಪ್ರಧಾನ ಕುಟುಂಬಗಳಲ್ಲಿ ಹೆಚ್ಚು ಪ್ರತಿಷ್ಠಿತವಾಗಿರುವ ಬಂಟ ಸಮಾಜಕ್ಕೆ ಸಂಬಂಧಿಸಿರುವುದರಿಂದ ಸಿರಿಯನ್ನು ಆವಾಹನೆ ಮಾಡುವುದು ಉಳಿದ ಯಾವುದೇ ಮಾತೃ ಪ್ರಧಾನ ಕುಟುಂಬದ ಜಾತಿಗಳಿಗೆ ಅಪವಿತ್ರ ಎನ್ನಿಸುವುದಿಲ್ಲ. ಆದ್ದರಿಂದ ಅವರಲ್ಲಿಯೂ ಈ ನಂಬಿಕೆ ಮತ್ತು ಆಚರಣೆ ಪ್ರಭಾವಶಾಲಿಯಾಗಿದೆ"[೧೮] ಹೀಗೆ ಸಿರಿ ಆಚರಣೆಯೂ ಉಳಿದ ಆಚರಣೆಗಳಿಗಿಂತ ವಿಶಿಷ್ಟವಾಗಿ ಕಂಡಿದ್ದರಿಂದ ಪಾಶ್ಚಾತ್ಯರಿಂದ ಹಿಡಿದು ದೇಶಿಯ ವಿದ್ವಾಂಸರವರೆಗೂ ಅತಿಹೆಚ್ಚು ಅಧ್ಯಯನಕ್ಕೊಳಪಟ್ಟಿದೆ. ಮುಖ್ಯವಾಗಿ ಸಿರಿ ಆಚರಣೆಯನ್ನು ಸ್ತ್ರೀವಾದಿ ನೆಲೆಯಲ್ಲಿ ಗಾಯತ್ರಿ ನಾವಡ ಅಧ್ಯಯನ ಮಾಡಿದ್ದಾರೆ. ಕರಾವಳಿ ಭಾಗದ ಇಂತಹ ವಿಶಿಷ್ಟ ಆಚರಣೆಗಳು ಹಾಗೂ ಪಾಡ್ದನಗಳ ಕುರಿತು ಅನೇಕ ವಿದ್ವಾಂಸರು ಸಮೀಕ್ಷಿಸಿದ್ದಾರೆ. ಎ.ಮ್ಯಾನರ್, ಪ್ರೊ.ಪೀಟರ್ ಜೆ.ಕ್ಲಾಸ್, ಲೌರಿ ಹಾಂಕೋ, ಪ್ರೊ.ಬಿ.ಎ.ವಿವೇಕ ರೈ,

ಕೆ.ಚಿನ್ನಪ್ಪ ಗೌಡ, ಗಾಯತ್ರಿ ನಾವಡ, ಮುಂತಾದವರು ಇವುಗಳ ಕುರಿತು ಸಂಶೋಧನಾತ್ಮಕ ಬರಹಗಳನ್ನು ಬರೆದಿದ್ದಾರೆ. ಇವರಷ್ಟೆ ಅಲ್ಲದೇ ತುಳುನಾಡಿನ ಸಂಸ್ಕೃತಿಯನ್ನು ಕಟ್ಟುವಿಕೆಯಲ್ಲಿ ಅಮೃತ ಸೋಮೇಶ್ವರ, ಎ.ವಿ.ನಾವಡ, ವಾಮನ ನಂದಾವರ, ಗಣಪತಿ ರಾವ್ ಐಗಳ್, ದಾಮೋದರ ಕಲ್ಮಾಡಿ, ಶ್ರೀಪಾದಭಟ್ ಮುಂತಾದವರು. ಬೇರೆ-ಬೇರೆ ನೆಲೆಯಲ್ಲಿ ಆಚರಣೆ ಸಂಪ್ರದಾಯಗಳನ್ನು ಅಧ್ಯಯನ ಮಾಡಿದ್ದಾರೆ.

೭.೩. ಆಚರಣೆಗಳ ಕುರಿತ ಅಧ್ಯಯನಗಳ ವಿಶ್ಲೇಷಣೆ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಾಂಪ್ರದಾಯಿಕವಾಗಿ ತುಳುನಾಡೆಂದು ಗುರುತಿಸುತ್ತಾ ಬರಲಾಗಿದೆ. ಇಂದಿನ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡು ಜಿಲ್ಲೆ ತುಳುನಾಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು. "ಟಿಪ್ಪೂವಿನ ಮರಣಾನಂತರ(೧೭೯೯) ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ತುಳುನಾಡು ಆಧುನಿಕತೆಗೆ ವೇಗವಾಗಿ ಒಳಗಾದ ಪ್ರದೇಶಗಳಲ್ಲೊಂದು. ಕಾರಣ ತುಳು ಜನರು ಉದ್ಯಮಶೀಲತೆ ಮತ್ತು ವ್ಯವಹಾರ ನೈಪುಣ್ಯತೆಗೆ ಹೆಸರಾದರು ಇಂಥ ವಿಶಿಷ್ಟವಾದ ತುಳು ಪ್ರದೇಶದಲ್ಲಿ ಇವತ್ತು ಕ್ರಿಯಾಶೀಲವಾಗಿರುವ ತಳಸ್ತರದ ಜನರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳು ವಿಶಿಷ್ಟವಾಗಿರುವುದನ್ನು ಪುರುಷೋತ್ತಮ ಬಿಳಿಮಲೆ ಅವರು ಗುರುತಿಸುತ್ತಾರೆ"[೧೯] ವಸಾಹತುಶಾಹಿ ಸಂದರ್ಭದಲ್ಲಿ ಬ್ರಿಟಿಷರಿಗೆ ತುಳುನಾಡಿನ ಪ್ರಾಕೃತಿಕ, ಭೌಗೋಳಿಕ, ಭಾಷೆ, ಸಂಸ್ಕೃತಿ, ಸಂಪ್ರದಾಯ, ಆಚರಣೆಗಳು ಮುಂತಾದವು. ಅಂಶಗಳು ವಿಶಿಷ್ಟವಾಗಿ ಕಂಡವು. ಪ್ರಾರಂಭದಲ್ಲಿ ತುಳುನಾಡಿನ ಜಾನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಪಾಶ್ಚಾತ್ಯ ವಿದ್ವಾಂಸರಿಂದ ಪ್ರಾರಂಭವಾದವು. ಮುಖ್ಯವಾಗಿ ತುಳುನಾಡಿನ ಆಚರಣೆಗಳು, ತುಳುನಾಡಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಇತರ ಸಾಂಸ್ಕೃತಿಕ ಕಲಾ ಪ್ರಕಾರಗಳ ಅಧ್ಯಯನಗಳು ಪಾಶ್ಚಾತ್ಯ ವಿದ್ವಾಂಸರಿಂದಲೆ ನಡೆದವು.

ಬಾಷೆಲ್ ಮಿಷನ್ ಸಂಸ್ಥೆಯವರಿಂದ ೧೮೩೪ರಿಂದಲೇ ತುಳುನಾಡಿನಲ್ಲಿ ಜಾನಪದ ಅಧ್ಯಯನ ಮತ್ತು ಸಂಗ್ರಹಕಾರ್ಯಗಳು ಆರಂಭವಾದವು. ೧೮೭೨ರಲ್ಲಿ ರೆ.ಜೆ.ಬ್ರಿಗೆಲ್ 'ಎ ಗ್ರಾಮರ್ ಆಫ್ ದ ತುಳು ಲಾಂಗ್ವೇಜ್' ಎಂಬ ಮೊಟ್ಟ ಮೊದಲ ತುಳು ವ್ಯಾಕರಣ ಗ್ರಂಥವನ್ನು ಬರೆದರು. ೧೮೮೬ರಲ್ಲಿ ಬಾಸೆಲ್ ಮಿಷನ್ ಪ್ರೆಸ್‌ನವರು ರೆ.ಎ.ಮ್ಯಾನರ್ ಸಿದ್ಧಪಡಿಸಿದ 'ತುಳು-ಇಂಗ್ಲಿಷ್ ಡಿಕ್ಷನರಿ'ಯನ್ನು ಪ್ರಕಟಿಸಿದರು. ಇದು ತುಳು ಭಾಷೆಗೆ ಸಂಬಂಧಿಸಿದ ಮೊದಲ ಅರ್ಥಕೋಶವಾಗಿದೆ. ಇದರಲ್ಲಿ ತುಳುಜಾನಪದ ಶಬ್ದಗಳೂ, ತುಳುಗಾದೆಗಳೂ ಸೇರಿದ್ದು, ತುಳುಜಾನಪದ ಕಡೆಗೆ ಗಮನಹರಿಸಿರುವುದನ್ನು ವಿಶೇಷವಾಗಿ ಗಮನಿಸಬಹುದು. ೧೮೭೭ರಲ್ಲಿ ವಾಲ್‌ಹೌಸ್ ಅವರು 'ತುಳುಗಾದೆಗಳು' ಎಂಬ ಗ್ರಂಥವನ್ನು ಪ್ರಕಟಿಸುವುದರ ಮೂಲಕ ತುಳುವಿನಲ್ಲಿ ವ್ಯವಸ್ಥಿತವಾದ ಜಾನಪದ ಸಂಗ್ರಹಕಾರ್ಯ ಪ್ರತ್ಯೇಕವಾಗಿ ಆರಂಭವಾಯಿತ್ತೆನ್ನಬಹುದು. ೧೮೮೬ರಲ್ಲಿ ರೆ.ಎ.ಮ್ಯಾನರ್ 'ಪಾಡ್ದನೊಳು' ಎಂಬ ೨೧ ಪಾಡ್ದನಗಳ ಸಂಗ್ರಹವನ್ನೂ ೧೮೯೪ರಲ್ಲಿ ಡಾ.ಎ.ಸಿ.ಬರ್ನೆಲ್ 'ಡೆವಿಲ್ ವರ್ಷಿಪ್ ಆಫ್ ದ

ತುಳುವಾಸ್' ಎಂಬ ೨೬ ಭೂತಪಾಡ್ದನಗಳ ಸಂಕಲನವನ್ನು ಪ್ರಕಟಿಸಿದ್ದಾರೆ. ತುಳುಜಾನಪದ ಹಾಗೂ ತುಳುವ ಸಂಸ್ಕೃತಿಯನ್ನು ಪಾಶ್ಚಾತ್ಯ ವಿದ್ವಾಂಸರಾದ ಮಾರ್ತಾಆಷ್ಟಾನ್ ಮತ್ತು ಪೀಟರ್ ಜೆ.ಕ್ಲಾಸ್ ಅವರು ಪ್ರಧಾನವಾಗಿ ಅಧ್ಯಯನ ಮಾಡಿದ್ದಾರೆ. ಮಾರ್ತಾ ಅವರು ಯಕ್ಷಗಾನ ಕ್ಷೇತ್ರದ ಕುರಿತು ವಿಶೇಷ ಗಮನ ಹರಿಸಿದರೆ, ಪೀಟರ್ ಜೆ.ಕ್ಲಾಸ್ ಅವರು ತುಳು ಸಂಸ್ಕೃತಿಯ ಅಧ್ಯಯನ ಮತ್ತು ವಿಶ್ಲೇಷಣೆಗಳಿಗೆ ತಮ್ಮನ್ನು ವಿಶೇಷವಾಗಿ ಸಮರ್ಪಿಸಿಕೊಂಡು ಕೆಲಸ ಮಾಡಿದ್ದಾರೆ. ಕರಾವಳಿ ಭಾಗದ ಆಚರಣೆಗಳ ಕುರಿತು ಆಳವಾದ ಅಧ್ಯಯನ ಮಾಡಿರುವುದನ್ನು ಪೀಟರ್ ಜೆ.ಕ್ಲಾಸ್ ಅವರು ತಮ್ಮ 'ತುಳುವ ದರ್ಶನ'(೧೯೮೮) ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಇದರಲ್ಲಿ ಎಂಟು ಪ್ರಬಂಧಗಳಿದ್ದು, ಇದು ತುಳುಸಂಸ್ಕೃತಿಯ ಅಧ್ಯಯನಕ್ಕೆ ಆಕರವನ್ನೊದಗಿಸುತ್ತದೆ. ಮುಖ್ಯವಾಗಿ ಕ್ಲಾಸ್ ಅವರು ಸಿರಿ ಆಚರಣೆಯನ್ನು ಕುರಿತು ಮಾನವಶಾಸ್ತ್ರೀಯ ನೆಲೆಯಲ್ಲಿ ಸುದೀರ್ಘವಾದ ಲೇಖನ ಬರೆದು ಅದರ ತಾತ್ವಿಕತೆಯನ್ನು ಗುರುತಿಸುತ್ತಾರೆ. ಸಿರಿ ಆಚರಣೆಯ ದೈವಾವೇಶವೂ ಆವಾಹನೆಗೊಳ್ಳುವ ಬಗೆಯನ್ನು ವಿವರಿಸುತ್ತಾರೆ. "ಅನಪೇಕ್ಷಿತ ದೈವಾವೇಶವೂ ಅದು ನಿರೀಕ್ಷಿಸಲಾರ ಸಂದರ್ಭಗಳೆಲ್ಲ ಏರ್ಪಡುತ್ತದೆ ಎಂಬುದು ನನ್ನ ಅಭಿಪ್ರಾಯ. ದೈವಾವೇಶ ಮತ್ತು ದೈವಪಾತ್ರಿತ್ವಗಳ ನಡುವೆ ಕರಾರುವಕ್ಕಾದ ವ್ಯತ್ಯಾಸವನ್ನು ಮಾನವಶಾಸ್ತ್ರದ ಸಾಹಿತ್ಯವು ಗುರುತಿಸಿದಂತೆ ದ್ರಾವಿಡ ಭಾಷೆಗಳು ಗುರುತಿಸಿಲ್ಲ. ದೈವಮಾಧ್ಯಮ ಪರಿಣಿತರ ಜಾತಿ ಹಾಗೂ ಅಲೌಖಿಕದ ಸಂಯೋಗ ಅಪರಿಣಿತ ವ್ಯಕ್ತಿಯೊಬ್ಬನ ಮೈಮೇಲೆ ಬರುವ ದೈವಾವೇಶ ಹಾಗೂ ಅದಕ್ಕೆ ಕಾರಣೀಭೂತವಾದ ಯಾವುದೋ ಒಂದು ನಿರ್ದಿಷ್ಟ ದೈವಕ್ಕೆ ಸಂಬಂಧಿಸಿದ ವ್ಯತ್ಯಾಸವು ಈ ಭಾಷೆಗಳಲ್ಲಿ ಕಂಡುಬರುತ್ತದೆ. ಸ್ತ್ರೀಯೊಬ್ಬಳು ದೈವಾವೇಶಕ್ಕೊಳಗಾದ ಸಂದರ್ಭದಲ್ಲಿ ತನ್ನ ಬಳಗದ ಸಮೃದ್ಧಿ ಮತ್ತು ಯಶಸ್ಸಿಗೆ ಕಾರಣವಾದ ಹಾಗೂ ತನ್ನ ಸಚ್ಚಾರಿತ್ರ್ಯಕ್ಕೆ ಭೀತಿಯನ್ನುಂಟು ಮಾಡುವ ಪರಿಸ್ಥಿತಿಯೊಡನೆ ಹೋರಾಡಬೇಕಾಗುತ್ತದೆ. ಇಲ್ಲಿನ ಸಾಂಸ್ಕೃತಿಕ ಸಿದ್ಧಾಂತದ ಪ್ರಕಾರ ಹೆಣ್ಣಿಗೆ ಅಲೌಖಿಕ ಶಕ್ತಿ ಹಾಗೂ ಮಾನವ ವೈರಿಗಳ ವಿರುದ್ಧ ಇರಬೇಕಾದ ಪುರುಷ ಸಂರಕ್ಷಣೆಯ ಕೊರತೆ ಏರ್ಪಟ್ಟಾಗ ಈ ಭೀತಿಯು ತಪ್ಪದೇ ಕಾಣಿಸಿಕೊಳ್ಳುತ್ತದೆ. ಪುರುಷ ಸಂರಕ್ಷಣೆಯ ಕೊರತೆ ಏರ್ಪಟ್ಟಾಗ ಹೆಣ್ಣು ತಾನು ಕೇಡಿಗೆ ಗುರಿಯಾಗಲಿದ್ದೇನೆ ಎಂದು ಭಾವಿಸಲು ತೊಡಗುತ್ತಾಳೆ. ಈ ಬಗೆಯ ಆತಂಕಕಾರಿ ಸ್ಥಿತಿಯಲ್ಲಿ ಸ್ತ್ರೀಯು ತಾನು ಬದುಕುತ್ತಿರುವ ಲೌಖಿಕ ಜಗತ್ತಿನಲ್ಲಿ ಮಾತ್ರವಲ್ಲದೇ ಪಾರಲೌಖಿಕದಲ್ಲೂ ಅರಕ್ಷಿತಳು ಹಾಗೂ ಕೇಡಿಗೆ ಪಕ್ಕಾಗತಕ್ಕವಳೆಂದು ಭಾವಿಸುತ್ತಾಳೆ. ತನ್ನ ಲೌಖಿಕ ಜೀವಿತಾವಧಿಯಲ್ಲಿ ಸಾಧ್ವಿತ್ವದ ಪರಿಕಲ್ಪನೆಯನ್ನು ಕಾಯ್ದುಕೊಂಡು ಬಂದ ಹೆಣ್ಣೊಬ್ಬಳಿಗೆ ರಕ್ಷಣೆಯನ್ನು ಕೊಡಬಹುದಾದ ದೈವವೊಂದಕ್ಕೆ ತನ್ನನ್ನು ತಾನು ಮಾಧ್ಯಮಳಾಗಿ ಸಮರ್ಪಿಸಿಕೊಳ್ಳುವುದರ ಮೂಲಕ ಅರಕ್ಷಿತ ಸ್ತ್ರೀಯು ಲೌಖಿಕ ಕೇಡಿನಿಂದ ಪಾರಾಗಲೂ ಪ್ರಯತ್ನಿಸುತ್ತಾಳೆ. ಹೀಗೆ ಮಾಡದಿದ್ದಲ್ಲಿ ಆಕೆಯು ಅನಿರ್ದಿಷ್ಟ ಕೇಡಿಗ ದೈವಗಳ ಆಕ್ರಮಣಕ್ಕೆ ಒಳಗಾಗುವ ಸಾಧ್ಯತೆಯಿದೆ. ತನ್ನ ಅಲೌಖಿಕ ಸಂರಕ್ಷಕ ದೈವಕ್ಕೆ ಮಾಧ್ಯಮಳಾದ ಸ್ತ್ರೀಯು ತನ್ನ ಅಸ್ಪಷ್ಟ ಭೀತಿಗಳಿಗೆ ಹಾಗೂ ಪಾಪಪ್ರಜ್ಞೆಗಳಿಗೆ ನಿರ್ದಿಷ್ಟ

ರೂಪವನ್ನು ನೀಡಲು ಶಕ್ತಳಾಗುತ್ತಾಳೆ. ತನ್ನ ಪಾಲಕ ದೈವವೊಂದರ ಸುಶೀಲತ್ವವನ್ನು ಎಷ್ಟು ಸಶಕ್ತವಾಗಿ ನಿರೂಪಿಸಲು ಸಾಧ್ಯವಾಗುತ್ತದೋ ಅಷ್ಟರಮಟ್ಟಿಗೆ ಸ್ತ್ರೀಯು ತನ್ನನ್ನು ಬಗ್ಗುಬಡಿಯಲು ಪ್ರಯತ್ನಿಸುವವರ ವಿರುದ್ಧ ರಕ್ಷಣೆಯನ್ನು ಬಲಪಡಿಸುತ್ತಾಳೆ"[೨೦]

ಹೀಗೆ ತುಳು ಜಾನಪದ ಜಗತ್ತಿನ ಅನ್ವೇಷಣೆಗೆ ಮೊದಲು ಚಾಲನೆ ದೊರೆತಿರುವುದು ವಿದೇಶಿ ವಿದ್ವಾಂಸರಿಂದ ಎಂಬುದು ಗಮನಾರ್ಹ ಸಂಗತಿಯಾಗಿದೆ. ಇವರ ಸಮಕಾಲೀನ ಸಂದರ್ಭದಲ್ಲಿ ತುಳುನಾಡಿನ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಿದ ದೇಶಿಯ ವಿದ್ವಾಂಸರ ಕಾರ್ಯವನ್ನು ಮರೆಯುವಂತಿಲ್ಲ. ಎಂ.ಗೋವಿಂದ ಪೈ, ಗಣಪತಿರಾವ್ ಐಗಳ್, ಡಾ.ಕೆ.ವಿರಮೇಶ್, ಡಾ.ಪಿ.ಗುರುರಾಜ್ ಭಟ್, ಡಾ.ಸೂರ್ಯನಾಥ್ ಕಾಮತ್, ಮುಂತಾದವರನ್ನು ಹೆಸರಿಸಬಹುದು. ತುಳುನಾಡಿನ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಇವರುಗಳು ಶಿಷ್ಟಸಂಸ್ಕೃತಿಯ ಜೊತೆಗೆ ಜಾನಪದ ಸಂಸ್ಕೃತಿಯ ಕಡೆಗೂ ವಿಶೇಷ ಒಲವನ್ನು ತೋರಿಸಿರುವುದು ಮಹತ್ವದ ವಿಚಾರವಾಗಿದೆ.

ತುಳುನಾಡಿನಲ್ಲಿ ಕಂಡುಬರುವ ಜನಪದ ಸಾಹಿತ್ಯ ಪ್ರಕಾರಗಳೆಂದರೆ ಪಾಡ್ದನಗಳು, ಗಾದೆ, ಒಗಟು, ಕಥೆ, ಕಬಿತಗಳು, ಕುಣಿತಗಳು, ಇತ್ಯಾದಿ. ಇವುಗಳ ಕುರಿತು ಪಾಶ್ಚಾತ್ಯ ವಿದ್ವಾಸರು ಹಾಗೂ ದೇಶಿಯ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. "ತುಳುನಾಡಿನ ಜನಪದ ಧರ್ಮದ ಹಾಗೂ ಜೀವನ ಮೌಲ್ಯಗಳ ವಿಚಾರಗಳನ್ನು ತುಳು ಜನಪದ ದೈವಗಳ ಕಥಾನಕಗಳಾದ ಅನೇಕ ಪಾಡ್ದನಗಳು ಹಾಗೂ ಕಬಿತ, ಕತೆ, ಗಾದೆ, ಮುಂತಾದವು ಸಾಕಷ್ಟು ಬಿ–ಂಬಿಸುತ್ತವೆ. ಸತ್ಯದ ಪರಿಕಲ್ಪನೆ, ಕರ್ತವ್ಯ ದೃಷ್ಟಿ, ವಚನಪಾಲನೆ, ನ್ಯಾಯಶೀಲತೆ, ತ್ಯಾಗ, ಪರೋಪಕಾರ, ಸ್ವಾಮಿಭಕ್ತಿ, ಹಿರಿಯರ ಮೇಲಿನಗೌರವ, ದೈವಭಕ್ತಿ, ನಿರ್ಮಲ ನಡತೆ, ನಂಬಿಕೆಯ ನೆಲೆ ಇತ್ಯಾದಿಗಳನ್ನು ಈ ಜನಪದ ಸಾಹಿತ್ಯ ಪ್ರಕಾರಗಳು ಗರ್ಭೀಕರಿಸಿಕೊಂಡಿವೆ"[೨೧] ಅಷ್ಟೇ ಅಲ್ಲದೇ ಈ ಭಾಗದಲ್ಲಿ ಕಂಡುಬರುವ ಜನಪದ ಆಚರಣೆಗಳು ಪಾಶ್ಚಾತ್ಯ ಹಾಗೂ ದೇಶಿಯ ವಿದ್ವಾಂಸರಾದಿಯಾಗಿ ಕಂಗೆಡಿಸಿದ್ದು ಅವುಗಳ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ಇಲ್ಲಿನ ಸಿರಿ, ಡಕ್ಕೆಬಲಿ, ನಾಗಮಂಡಲ ಮತ್ತು ಭೂತಾರಾಧನೆಯಂತಹ ಆಚರಣೆಗಳನ್ನು ರಾಚನಿಕ ಸಿದ್ಧಾಂತ, ಮಾನವಶಾಸ್ತ್ರ, ಮನೋವೈಜ್ಞಾನಿಕ, ಹಾಗೂ ಪ್ರದರ್ಶನ ಸಿದ್ಧಾಂತಗಳ ಮೂಲಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಲಾರಿ ಹಾಂಕೋ, ಬಿ.ಎ.ವಿವೇಕ ರೈ, ಕೆ.ಚಿನ್ನಪ್ಪ ಗೌಡ ಹೊಸ ಬಗೆಯ ಅಧ್ಯಯನಕಾರರಾಗಿ ಕಾಣಿಸಿಕೊಳ್ಳುತ್ತಾರೆ. ಗಾಯತ್ರಿ ನಾವಡ, ಎ.ವಿ.ನಾವಡ ಅವರು ನಾಗಾರಾಧನೆಗೆ ಸಂಬಂಧಿಸಿದ ಆಚರಣೆಯಾದ 'ಕಾಡ್ಯನಾಟ್ಯ ಪಠ್ಯ ಮತ್ತು ಪ್ರದರ್ಶನ'(೧೯೯೨) ಎಂಬ ಕೃತಿಯಲ್ಲಿ ದಾಖಲಿಸುತ್ತಾರೆ. ಗಾಯತ್ರಿ ನಾವಡ ಅವರು 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಸಂಶೋಧನಾ ಕೃತಿಯಲ್ಲಿ ತುಳುನಾಡಿನ ಮಾತೃಪ್ರಧಾನ ಕಲ್ಪನೆಯನ್ನು ಚರ್ಚಿಸುತ್ತಾರೆ. ಮುಖ್ಯವಾಗಿ 'ಸಿರಿ ಆಚರಣೆಯನ್ನು' ವಿವರಿಸುತ್ತಾರೆ. ಅಮೃತ ಸೋಮೇಶ್ವರ, ಪುರುಷೋತ್ತಮ ಬಿಳಿಮಲೆ, ಬಿ.ಎ.ವಿವೇಕ ರೈ ಮುಂತಾದ ವಿದ್ವಾಂಸರು ತುಳುನಾಡಿನ ಆಚರಣೆಗಳನ್ನು ಸಾಮಾಜಿಕವಾಗಿ, ಸಾಹಿತ್ಯಿಕವಾಗಿ,

ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಹೀಗೆ ಕರಾವಳಿ ಭಾಗದ ಜನಪದ ಆಚರಣೆಗಳ ಸಂಸ್ಕೃತಿ, ಜನಾಂಗಿಯ ಅಂಶಗಳು, ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಸಂಶೋಧನಾ ವಸ್ತು ವಿಷಯವಾಗಿ ಅಕಾಡೆಮಿಕ್ ನೆಲೆಯ ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಧ್ಯಯನ ಮಾಡಿದ್ದಾರೆ.

ತುಳುವ ಸಂಸ್ಕೃತಿಯಲ್ಲಿ ಮುಖ್ಯವಾಗಿ ಪಾಡ್ದನಗಳನ್ನು ಹಾಡುವ ಮತ್ತು ಆಚರಣೆ ಮಾಡುವ ಎರಡು ವರ್ಗ ಇದೆ. ಪರವ, ಪಂಬದ, ನಲ್ಕೆಯವ, ಮತ್ತು ಪಾಣಾರ ಜನಾಂಗಗಳಿವೆ. ಭೂತಾರಾಧನೆಯನ್ನು ಈ ಕೆಳವರ್ಗದ ಜನಾಂಗಗಳು ನಡೆಸಿಕೊಡುತ್ತವೆ. ಭೂತಾರಾಧನೆಯಲ್ಲಿ ವೇಷವನ್ನು ಕಟ್ಟಿಕೊಂಡು ಕುಣಿಯಬೇಕಾದವರು ದಲಿತರೇ ಎನ್ನುವುದು ಗಮನಾರ್ಹ. ಮೇಲು ಜಾತಿಯವರೆಲ್ಲ ಸೇರಿ ಈ ಭೂತದ ವೇಷವನ್ನು ಕಟ್ಟಿಸಿ ಕುಣಿಸುತ್ತಾರೆ. ಕೆಳಜಾತಿಗೆ ಸಂಬಂಧಿಸಿದವರನ್ನು ಹೊರತುಪಡಿಸಿ ಬೇರೆಯವರು ಈ ವೇಷ ಕಟ್ಟಬಾರದೆಂದು ಹೇಳುತ್ತಾರೆ. ಈ ವೇಷವನ್ನು ಕಟ್ಟುವ ಕೆಳಜಾತಿಯವರೆಂದರೆ ನಲಿಕೆ, ಪಾಣಾರ, ಪರವ, ಪಂಬದ ಮುಂತಾದವರು. ಆಚರಣೆಯ ಸಂದರ್ಭದಲ್ಲಿ ಮಾತ್ರ ಮೇಲ್ವರ್ಗದವರು ಕೆಳವರ್ಗದವರಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಆಚರಣೆ ಮುಗಿದ ನಂತರ ತಕ್ಷಣ ಅವರು ಮತ್ತೆ ಪುನಃ ಅಂತರವನ್ನು ಕಾಯ್ದುಕೊಳ್ಳುತ್ತಾರೆ. ಅಸ್ಪೃಶ್ಯರಾಗಿಯೇ ಉಳಿದುಕೊಳ್ಳುತ್ತಾರೆ. ಕರ್ನಾಟಕದ ಮೇಲ್ವರ್ಗ ನಡೆಸಿಕೊಡುವ ಎಲ್ಲಾ ಆಚರಣೆಗಳಲ್ಲಿ ಈ ಪದ್ಧತಿ ಕಂಡುಬರುತ್ತದೆ.

ಹಿ.ಚಿ.ಬೋರಲಿಂಗಯ್ಯ ಅವರು ಸಂಗ್ರಹಿಸಿದ 'ಉಜ್ಜನಿ ಚೌಡಮ್ಮ ಗ್ರಾಮ ದೇವತೆ ಅಧ್ಯಯನ'(೨೦೦೧) ಕೃತಿಯಲ್ಲಿನ ಹಬ್ಬವನ್ನು ಡಿ.ಆರ್.ನಾಗರಾಜ ಅವರು ತಾತ್ವಿಕವಾಗಿ ವಿಶ್ಲೇಷಣೆ ಮಾಡಿದ್ದಾರೆ. "ಇದೊಂದು ಬಂಡುಕೋರ ವಿಧಿಯನ್ನು ಒಳಗೊಂಡ ಆಚರಣೆಯಾಗಿದೆ. ಇಲ್ಲಿನ ಮುಖ್ಯ ಸಂಗತಿಯೆಂದರೆ ಹರಿಜನರು ಜನಿವಾರ ಹಾಕಿ ನಿರ್ದಿಷ್ಟ ಅವಧಿಗೆ ಬ್ರಾಹ್ಮಣರಾಗುವುದು, ಮತ್ತೆ ಇನ್ನೊಂದು ಕಡೆ ಹರಿಜನರು ಆವೇಶದಿಂದ ಗುಡಿಗೆ ನುಗ್ಗಲು ಪ್ರಯತ್ನಿಸುವುದು. ಅವರನ್ನು ಸವರ್ಣೀಯರು ತಡೆದು ನಿಲ್ಲಿಸುತ್ತಾರೆ. ಹರಿಜನರಿಗೆ ಕೊಟ್ಟ ಬ್ರಾಹ್ಮಣ್ಯದ ಮಿತಿ ಇದು. ಜನಿವಾರ ಕಳಚುವವರೆಗೆ ಅವರು ತಮ್ಮ ಜಾತಿಯೊಂದಿಗೆ ಯಾವುದೆ ರೀತಿಯ ಸಂಬಂಧಗಳನ್ನು ಇಟ್ಟುಕೊಳ್ಳಬಾರದು"[೨೨] ಈ ನೆಲೆಯ ಜನಾಂಗಿಯ ಹಲವು ಆಚರಣೆಗಳು ಕರಾವಳಿ ಭಾಗದಲ್ಲಿ ಕಾಣಬಹುದು. ಇಂತಹ ತಾರತಮ್ಯದ ಆಚರಣೆಗಳು 'ಭೂತಾರಾಧನೆ' ಸಂದರ್ಭದಲ್ಲಿ ಗೋಚರಿಸುತ್ತವೆ. ಸಾಮಾಜಿಕ ಕಟ್ಟುಪಾಡಿನ ಮೂಲಕ ಬಹುಶಿಸ್ತಿನಿಂದ ಆಚರಿಸುವುದನ್ನು ಕಲೆಯ ರಂಗರೂಪಕವಾಗಿ ಕೆ.ಚಿನ್ನಪ್ಪಗೌಡರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ನೋಡಿದ್ದಾರೆ. "ಐತಿಹಾಸಿಕವಾಗಿ ತುಳುನಾಡಿನ ಸಮಾಜವು ಜಾತಿಬದ್ಧವಾಗಿದೆ. ಮಧ್ಯಯುಗೀನ ಕಾಲದ ಜಾತ್ಯಾಧಾರಿತ ಸಮಜವೊಂದರ ಪ್ರೇರಣೆಯಿಂದ ಭೂತಾರಾಧನೆಯು ಒಂದು ವ್ಯವಸ್ಥೆಯಾಗಿ ರೂಪುಗೊಂಡಿದೆ ಎಂದು ಕೆ.ಚಿನ್ನಪ್ಪಗೌಡರು ಕೊನೆಯಲ್ಲಿ ಅಂತಿಮ ನಿಲುವನ್ನು ತಾಳುತ್ತಾರೆ"[೨೩] ಬಿ.ಎ.ವೇಕ ರೈ 'ತುಳು ಜನಪದ ಸಾಹಿತ್ಯ' ಸಂಶೋಧನಾ ಕೃತಿಯಲ್ಲಿ ಈ ತರದ ಚರ್ಚೆಯನ್ನು ಹುಟ್ಟುಹಾಕುವುದಿಲ್ಲ. ಪಾಡ್ದನಗಳು ಭೂತಾರಾಧನೆಯ ಸಾಹಿತ್ಯಿಕ

ಭಾಗವಾಗಿ ಬರುತ್ತವೆ. ಅದರಲ್ಲಿನ ಆಚರಣೆಯ ವಿಧಾನ, ನಂಬಿಕೆಗಳು, ಸಂಪ್ರದಾಯಗಳನ್ನು ತಟಸ್ಥವಾಗಿ ನಿಲ್ಲುವ ರೂಪಕಗಳಾಗಿ ನೋಡುತ್ತಾರೆ. ಒಂದೊಂದು ಭೂತಕ್ಕೆ ಸಂಬಂಧಿಸಿದ ಅಚರಣಾ ವಿಧಾನಗಳನ್ನು ವಿವರಿಸುತ್ತಾರೆ. ಪೊಸಭೂತ ಪಾಡ್ದನದಲ್ಲಿ ಭೂತದ ಮಾಡದಲ್ಲಿ ಭೂತ ಒಕ್ಕಲಾಗುವ ರೀತಿಯನ್ನು ಈ ರೀತಿ ಹೇಳಿದ್ದಾರೆ. "ಮಾಡದಲ್ಲಿ ಭೂತವು ಒಕ್ಕಲಾಗುವುದಕ್ಕೆ ಮಡಿವಾಳಗಿತ್ತಿ ಅಬ್ಬಗ, ಮಡಿ ತೆಗೆದುಕೊಂಡು ಬರಬೇಕು. ಕುಂಬಾರಗಿತ್ತಿ ಬಬ್ಬು ಕಳಸ ತೆಗೆದುಕೊಂಡು ಕಳಸ ಕಟ್ಟಲು ಬರಬೇಕು. ಶುದ್ಧ ಮಾಡಲು ಬ್ರಾಹ್ಮಣರ ಚಿಕ್ಕವಟು ಬರಬೇಕು"[೨೪] ಹೀಗೆ ಪಾಡ್ದನಗಳಲ್ಲಿ ವ್ಯಕ್ತವಾಗುವ ಭೂತಗಳ ಆಚರಣೆಯ ವಿಧಾನವನ್ನು ವಿವರಿಸುತ್ತಾರೆ. ಪಾಶ್ಚಾತ್ಯ ಸಿದ್ಧಾಂತಗಳ ಸ್ವರೂಪದಲ್ಲಿ ಭೂತಾರಾಧನೆಯನ್ನು ಚಾರಿತ್ರಿಕ-ಭೌಗೋಳಿಕ ನೆಲೆಯಲ್ಲಿ ನೋಡಿದ್ದಾರೆ.

ಭೂತಾರಾಧನೆಯನ್ನು ವಿವರಣಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ, ಚಾರಿತ್ರಿಕ ದೃಷ್ಟಿಕೋನದ ಮೂಲಕ ಕೆ.ಚಿನ್ನಪ್ಪಗೌಡರು 'ಭೂತಾರಾಧನೆ-ಒಂದು ಜಾನಪದೀಯ ಅಧ್ಯಯನ' ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಈ ಮಹಾಪ್ರಬಂಧವನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಭೂತಾರಾಧನೆ ಮೂಲತಃ ಸಾಮಾಜಿಕ ಆರಾಧನೆಯಾಗಿದೆ. ಆದರೆ ಚಿನ್ನಪ್ಪಗೌಡರು ಭೂತಾರಾಧನೆ ಮತ್ತು ಜಾತಿವ್ಯವಸ್ಥೆಯ ಅಂತರ್‌ಸಂಬಂಧವನ್ನು ಚರ್ಚಿಸಲು ಹೋಗುವುದಿಲ್ಲ. ಬದಲಾಗಿ ಭೂತಗಳ ಪರಿಕಲ್ಪನೆಯನ್ನು ಕುರಿತು ಕಾವ್ಯ, ಶಾಸನ, ಪ್ರಾದೇಶಿಕ ಇತಿಹಾಸ ಇವುಗಳ ಮೂಲಕ ಕಟ್ಟಿಕೊಡುತ್ತಾರೆ. ಸಾಹಿತ್ಯಿಕವಾಗಿ ಬಳಕೆಗೊಂಡಿರುವ ಭೂತಾರಾಧನೆಯನ್ನು ಪ್ರಸ್ತಾಪ ಮಾಡುತ್ತಾರೆ. ಹಾಗಾಗಿ ಭೂತಾರಾಧನೆಯನ್ನು ಸಾಹಿತ್ಯಿಕ, ಚಾರಿತ್ರಿಕ, ಪೌರಾಣಿಕವಾಗಿ ಅದರ ಪ್ರಾಚೀನತೆಯನ್ನು ವಿವರಿಸುತ್ತಾರೆ. ಭೂತಾರಾಧನೆ ಮಧ್ಯಂತರ ಜಗತ್ತಿನ ಕ್ರಿಯೆಯಾಗಿ ತಮ್ಮ ಅನನ್ಯತೆಯನ್ನು ಪ್ರಕಟಿಸುವ ಭೂತಗಳನ್ನು ವಿವರಿಸುತ್ತಾರೆ. "ಕೋಟಿ ಚೆನ್ನಯ್ಯ, ಕಲ್ಕುಡ ಕಲ್ಲುರ್ಟಿ, ಆಲಿಭೂತ, ಕೊರಗ ತನಿಯ, ಕೋಡ್ದಬ್ಬು, ತನ್ನಿಮಾನಿಗ, ಗಿಳಿರಾಮ, ಕಾರಿ, ಕಬಿಲ, ಬಿಲ್ಲರಾಯ ಬಿಲ್ಲಾರ್ತಿ, ಬಚ್ಚನಾಯಕ, ಕುಜುಂಬಕಾಂಜ, ಕರಿಯ ಮಲ್ಲ ಮೊದಲಾದ ಭೂತಗಳ ಪಾಡ್ದನ ಮತ್ತು ನುಡಿ ಕಟ್ಟನ್ನು ಪರಿಶೀಲಿಸಿದರೆ ಈ ಐತಿಹಾಸಿಕ ವ್ಯಕ್ತಿಗಳ ಅಸಾಮಾನ್ಯ ಬದುಕಿನ ವಿವರಗಳು ಸಿಗುತ್ತವೆ"[೨೫] ಸಾಮಾನ್ಯ ಮನುಷ್ಯರು ಸತ್ತು ದೈವಕ್ಕೆರುವುದು, ಪ್ರಾಣಿಗಳು ಸತ್ತು ದೈವಕ್ಕೆರಿ ಭೂತಗಳ ರೂಪದಲ್ಲಿ ಆರಾಧನೆಗೊಳ್ಳುವುದು ಸಾಂಸ್ಕೃತಿಕ ಪ್ರಕ್ರಿಯೆಯಾಗಿದೆ. ಹೀಗೆ ಚಿನ್ನಪ್ಪಗೌಡರು ಕರಾವಳಿ ಭಾಗದಲ್ಲಿ ಕ್ಷೇತ್ರಕಾರ್ಯ ಮಾಡಿ ವಿವಿಧ ಭೂತಗಳನ್ನು ಬೇರೆ ಬೇರೆ ನೆಲೆಯಲ್ಲಿ ವರ್ಗೀಕರಣ ಮಾಡುತ್ತಾರೆ. ಭೂತಾರಾಧನೆಯನ್ನು ಧಾರ್ಮಿಕ ರಂಗಭೂಮಿಯ ನೆಲೆಯಲ್ಲಿ ಅರ್ಥೈಸುವ ಚಿನ್ನಪ್ಪ ಗೌಡರು ಕಲೆಯ ಆರಾಧನಾ ಲೋಕದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಭೂತಾರಾಧನೆಯು ಸಾಂಸ್ಕೃತಿಕ ಸಂದರ್ಭದಲ್ಲಿ ಕೆಳವರ್ಗದ ಜನಾಂಗ ನಲ್ಕೆ, ಪಾಣಾರವ ಬಣ್ಣಗಾರಿಕೆ, ಮುಖವರ್ಣಿಕೆಯನ್ನು ಹಾಕಿಕೊಂಡು ರಾತ್ರಿಯಿಂದ ಮುಂಜಾನೆಯ ತನಕ ದೈಹಿಕಶ್ರಮ ಪಡುತ್ತಾರೆ.

ಆ ಕ್ಷಣದಲ್ಲಿ ಮಾತ್ರ ಮೇಲ್ವರ್ಗದವರಿಗೆ ಸ್ಪರ್ಶರಾಗಿ ಕಾಣಿಸಿಕೊಳ್ಳುತ್ತಾರೆ. ನಂತರ ತಳವರ್ಗವನ್ನು ಅಸ್ಪೃಶ್ಯರಾಗಿ ನೋಡಲಾಗುತ್ತದೆ. ಇದು ಭೂತಾರಾಧನೆಯ ಸಂದರ್ಭದಲ್ಲಿ ನಡೆಯುವ ಜಾತಿ ಅಸಮಾನತೆ, ಶೋಷಣೆಯ ದ್ಯೋತಕವಾದ ಪ್ರಕ್ರಿಯೆಯಾಗಿದೆ.

ಕೆಳಜಾತಿಯ ದಲಿತ ಸಮುದಾಯ ಅಧ್ಯಯನಕಾರರು ಜಾನಪದವನ್ನು ಕುರಿತು ಅಧ್ಯಯನ ಮಾಡತೊಡಗಿದಾಗ, ಜನಪದದಲ್ಲಿರುವ ಪ್ರತಿರೋಧಕ ಅಂಶಗಳ ಕಡೆಗೆ ಗಮನ ಸೆಳೆಯಲಾರಂಭಿಸಿದರು. ಮೇಲ್ವರ್ಗದ ಜನಪದ ಅಧ್ಯಯನಕಾರರು ಜನಪದ ನಶಿಸಬಾರದು ಉಳಿಯಬೇಕು ಅಂದರೆ, ದಲಿತ ವಿದ್ವಾಂಸರು ಇಂತಹ ಶೋಷಕ ಆಶಯವಿರುವ ಜನಪದ ನಶೀಸುವುದೇ ಒಳ್ಳೆಯದು ಎನ್ನುವ ವಿರುದ್ಧದ ಚಿಂತನೆ ಮಾಡಿದರು. ಜನಪದ ವಿದ್ವಾಂಸರಾದ ಅರವಿಂದ ಮಾಲಗತ್ತಿ ಅವರು ದಕ್ಷಿಣ ಕನ್ನಡದ ಭೂತಾರಾಧನೆ ಕುರಿತು ಇದೊಂದು ಹೇಯ ಸಂಸ್ಕೃತಿ ಇದನ್ನು ನಿಲ್ಲಿಸಬೇಕೆಂದು ಲೇಖನ ಬರೆದರು. “ಭೂತಾರಾಧನೆಯ ಕೆಲಸ ಕಾರ್ಯಗಳು ನಡೆಯಲು ಜನತೆಯನ್ನು ಜಾತಿ ಆದಾರದ ಮೇಲಿಂದ ಒಡೆದು ದುಡಿಸಿಕೊಂಡಂತೆ ಜನಗಳ ಜಾತಿಗೆ ಅನುಗುಣವಾಗಿ ಭೂತಗಳಿವೆ, ಎಂದರೆ; ಭೂತಗಳಲ್ಲಿಯೇ ಜಾತಿಗಳಿವೆ ಎನ್ನುವುದು ಸೋಜಿಗದ ವಿಷಯ! ಅಂದರೆ ಭೂತಾರಾಧನೆಯಲ್ಲಿ ಬರುವ ಭೂತಗಳೆಲ್ಲ ಸಾರ್ವತ್ರಿಕವಾದವುಗಳಲ್ಲ. ಒಂದೊಂದು ಜಾತಿಗೆ ಒಂದೊಂದು ಬಗೆಯ ಭೂತಗಳಿವೆ. ಕೊರಗರದು ‘ಕೊರಗ ತನಿಯನಾದರೆ’ ಮುಗೇರರದು ’ಮುಗೇರ ಕೋಲ’, ಅದೇ ರೀತಿ ಬಿಲ್ಲವರದು ‘ಬೈದರು’, ಹಾಗೆಯೇ ರಾಜನ್‌ದೈವಗಳು ಬಂಟರಿಗೆ ಸೇರಿದವು. ಹೀಗೆ ಬಾಲ; ಬೆಳೆಯುತ್ತಾ ಹೋಗುತ್ತದೆ. ಜಾತಿಗಳಲ್ಲಿ ಹೇಗೆ ಮೇಲು-ಕೀಳು ಎಂದು ಹಾಯಗಾರಿಕೆ ಇವೆಯೋ ಅದೇ ರೀತಿ ಭೂತಗಳಲ್ಲಿಯೂ ಇದೆ. ಮನುಷ್ಯ ಮನುಷ್ಯರಲ್ಲಿ ಹೇಗೆ ಅಸ್ಪೃಶ್ಯತೆಯ ಆಚರಣೆ ನಡೆಯುತ್ತದೆಯೋ ಅದೇ ರೀತಿ ಭೂತ-ಭೂತಗಳಲ್ಲಿಯೂ ನಡೆಯುವುದು ಆಶ್ಚರ್ಯಕರ ಸಂಗತಿ. ಭೂತ ಒಂದು ‘ದೈವಶಕ್ತಿ’ ಎಂದು ಹೇಳಿದರೂ ಕೂಡ ಅದಕ್ಕೆ ದೈವಸ್ಥಾನದ ಒಳಗಡೆ ಹಾಗೂ ದೇವಸ್ಥಾನದ ಒಳಗಡೆ ಪ್ರವೇಶವಿಲ್ಲ! ಏಕೆಂದರೆ ಈ ಭೂತಗಳನ್ನು ಕಟ್ಟುವವರು ಅಸ್ಪೃಶ್ಯರು ಎನ್ನುವುದೇ ಇದಕ್ಕೆ ಕಾರಣ”[೨೬] ಭೂತಾರಾಧನೆಯಲ್ಲಿ ಕೆಳವರ್ಗದವರನ್ನು ಭೂತಕಟ್ಟುವ ಕ್ರಿಯೆಯಲ್ಲಿ ಬಳಸಿಕೊಳ್ಳುವುದನ್ನು ಕೈ ಬಿಡಬೇಕು ಎಂದು ಒಂದು ಕಡೆ ಮಾಲಗತ್ತಿಯವರು ಪ್ರತಿಪಾದಿಸುತ್ತಾರೆ. ಹೀಗೆ ಆಚರಣೆಯ ಸಂದರ್ಭವೂ ದೈವಿಕ ಉಪಾಸನೆಯಾಗಿದ್ದರೂ ಅದು ಜಾತಿ ತಾರತಮ್ಯವನ್ನು ಬಲಪಡಿಸುವುದು ಎಂದು ತಿಳಿಯಬಹುದು.

ಭೂತಾರಾಧನೆ ಜಾತಿಯಾಧರಿತವಾಗಿದ್ದು ಭೂತಕಟ್ಟುವ ಕೆಳವರ್ಗದ ಜನಾಂಗವನ್ನು ಶೋಷಣೆಯಿಂದ ನೋಡಲಾಗುತ್ತಿದೆ. “ತಳಸಮುದಾಯದ ಸಾಂಸ್ಕೃತಿಕ ಆಚರಣೆಗಳು ಮೂಲತಃ ಹಿರಿಯರ ಆರಾಧನೆಯಿಂದಲೇ ಪ್ರತೀತಗೊಂಡಿದೆ ಈ ಹಿರಿಯರ ಪರಿಕಲ್ಪನೆಯೇ ಭೂತಾರಾಧನೆಯಾಗಿ ಮುಂದುವರೆದಿದೆ ಎಂದು ಬಿಳಿಮಲೆ ಅವರು ಹೇಳುತ್ತಾರೆ”[೨೭] ದಲಿತ ನಾಯಕರ ಸುತ್ತ ಬೆಳೆದ

ಸಾಂಸ್ಕೃತಿಕ ಲೋಕ ಅನನ್ಯವೂ ವಿಶಿಷ್ಟವೂ ಆಗಿದೆ. ತಳಸ್ತರದ ಪ್ರಮುಖ ಧಾರ್ಮಿಕ ಮತಾಚರಣೆಗಳು ಮಧ್ಯಂತರ ಜಗತ್ತೊಂದನ್ನು ಪ್ರತಿನಿಧಿಸುತ್ತವೆ ಎಂದು ಈ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿದ ಡಾ.ಕೆ.ಚಿನ್ನಪ್ಪ ಗೌಡ(೧೯೦೦) ಪ್ರೊ.ಪೀಟರ್ ಜೆ.ಕ್ಲಾಸ್(೧೮೮೬) ಅವರು ಅಭಿಪ್ರಾಯ ಪಟ್ಟಿದ್ದಾರೆ. ಈ ಮಧ್ಯಂತರ ಜಗತ್ತು ತಾತ್ಕಾಲಿಕವಾದುದ್ದು, ಅದರ ಒಂದೆಡೆಯಲ್ಲಿ ಅಲೌಖಿಕ ಜಗತ್ತಿದ್ದರೆ, ಇನ್ನೊಂದೆಡೆ ಹಿಂದುಗಡೆ ಲೌಖಿಕ ಜಗತ್ತಿರುತ್ತದೆ. ಲೌಖಿಕ ಜಗತ್ತಿಗೆ ಸೇರಿದ ದಲಿತ ವೀರರು ಅಥವಾ ಪುರಾಣ ವೀರರು ಮತಾಚರಣೆಯ ಸಂದರ್ಭದಲ್ಲಿ ಈ ಮಧ್ಯಂತರ ಜಗತ್ತಿಗೆ ಇಳಿದು ಬರುತ್ತಾರೆ. ಹಾಗೆ ಇಳಿದು ಬಂದವರನ್ನು ಆವಾಹಿಸಿಕೊಳ್ಳಲು ಲೌಖಿಕ ಜಗತ್ತಿನಿಂದ ವ್ಯಕ್ತಿಯೊಬ್ಬ ಮಧ್ಯಂತರ ಜಗತ್ತಿಗೆ ಏರಿ ಹೋಗುತ್ತಾನೆ. ಇವನೆ ದೈವದ ಪೂಜಾರಿ ಅಥವಾ ಪಾತ್ರಿ. ಹೀಗೆ ಮಧ್ಯಂತರ ಜಗತ್ತಿಗೆ ಏರ ಬಲ್ಲವರಿಗೂ ಕೆಲವು ಗುಣಗಳಿರುತ್ತವೆ. ಸಾಮಾನ್ಯವಾಗಿ ಗ್ರಾಮ ಸಮಾಜದ ಗಡಿಯಂಚಿನಲ್ಲಿರುವ ಕೆಳಸ್ತರದ ಜನರೇ ದೈವ ಮಾಧ್ಯಮಕ್ಕೆ ಅರ್ಹವಾಗುವ ವ್ಯಕ್ತಿಗಳು ಸಮಾಜದ ಹೊರವಲಯದಲ್ಲಿ ತಮ್ಮ ವಸತಿಗಳನ್ನು ಕಟ್ಟಿಕೊಂಡಿರುತ್ತಾರೆ. ಆ 'ಹೊರವಲಯ' ಎಂಬ ಮಾತು ಕಾಡಿಗೂ ಅನ್ವಯಿಸಿರುತ್ತದೆ. ಅಂದರೆ ಕಾಡು ಮತ್ತು ನಾಡಿನ ಮಧ್ಯೆ ಅವರು ಬದುಕುತ್ತಾರೆ"[೨೮] ಮಧ್ಯಂತರ ಜಗತ್ತಿನಲ್ಲಿ ತಮ್ಮ ಅನನ್ಯತೆಯನ್ನು ಪ್ರಕಟಿಸುವ ಭೂತಗಳು ಮನುಷ್ಯರ ಮನಸ್ಸಿನಲ್ಲಿ ಹುಟ್ಟಿದ ಬಗೆಯನ್ನು ವಿವರಿಸಿದ ಕ್ರಮವು ಮನೋವಿಜ್ಞಾನದ ಸಮರ್ಥನೆಯನ್ನು ಪಡೆಯುತ್ತದೆ. ತಳಸ್ತರದ ಜನರು ಹೇಳುವ ಪಾಡ್ದನಗಳೆ ಮೊದಲಾದ ನಿರೂಪಣೆಗಳ ಶೈಲಿ ಈ ಮಧ್ಯಂತರ ಜಗತ್ತಿಗೆ ಒಂದು ಆವರಣವನ್ನು ಕಲ್ಪಿಸಿಕೊಡುತ್ತದೆ. ಇಡೀ ಮತಾಚರಣೆಯ ಪ್ರಕ್ರಿಯೆಯು ದಲಿತ ನಾಯಕರ ಕಲ್ಪನೆ ಸ್ಫುಟಗೊಳ್ಳುವಂತೆ ಮಾಡುತ್ತದೆ. ಮಾತ್ರವಲ್ಲ ಆ ನಾಯಕರು ಮತಾಚರಣೆಯಲ್ಲಿ ಮರು ಹುಟ್ಟುಪಡೆದುಕೊಳ್ಳುತ್ತಾರೆ. ಅವರ ಕರ್ತವ್ಯ ಧರ್ಮ, ಸ್ವಭಾವ, ಸ್ವರೂಪಗಳು ಬೆಳೆಯುವುದು ಪುರಾಣಗಳಲ್ಲಿ ಎಂಬುದನ್ನು ತಿಳಿಯಬಹುದು.

ಗಾಯತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಇಡೀ ಕರಾವಳಿ ಭಾಗದ ಜನಪದ ಸಾಹಿತ್ಯದಲ್ಲಿ ಸ್ತ್ರೀಪ್ರತಿನಿಧಿಕರಣ ಕುರಿತು ಚರ್ಚಿಸಿದ್ದಾರೆ. ಕಥೆಯೊಂದು ಬಂಧುತ್ವ ಸಮಾಜದೊಳಗೆ ಹೆಣ್ಣು ಪಡೆದುಕೊಳ್ಳುವ ಪ್ರೀತಿ ಮತ್ತು ಗೌರವಕ್ಕೆ ಕಾರಣಗಳನ್ನು ತಮ್ಮ ಪ್ರಬಂಧದಲ್ಲಿ ತಿಳಿಸಿದ್ದಾರೆ. ಕಥೆಗಾರ ಹಾಗೂ ಪ್ರೇಕ್ಷಕ ವರ್ಗ ಇವರ ಮೇಲೆ ಕಥೆ ಉಂಟುಮಾಡುವ ಪರಿಣಾಮ ಹಾಗೂ ಕಾರ್ಯ, ಶೀಲ ಮತ್ತು ಪಾತಿವ್ರತ್ಯವನ್ನು ಕುರಿತಂತೆ ಜನಪದ ಕಥೆಗಾರರ ದೃಷ್ಟಿಧೋರಣೆ, ಮಾನವೀಯತೆಯನ್ನು ಕಡೆಗಣಿಸುವ ಸ್ಥಾಪಿತ ಹಿತಾಸಕ್ತಿಗಳು, ಗಂಡಿನ ಸಾಹಸದ ಕ್ರಿಯಾಚಾಲಕ ಶಕ್ತಿಯಾಗಿ ಕಾಣಿಸಿಕೊಳ್ಳುವ ಹೆಣ್ಣು ಪ್ರಜನನ ಶಕ್ತಿಯನ್ನು ಸಾಂಸ್ಕೃತಿಕಗೊಳಿಸುವ ಬಗೆ, ಒಟ್ಟಿನಲ್ಲಿ ಸ್ಥಾಪಿತ ಹೆಣ್ಣಿನ ಮಾದರಿಯನ್ನು ಮೀರಿದ ಹೆಣ್ಣುತನದ ಚಿತ್ರಣಕ್ಕೆ ಜನಪದ ಕಥೆಗಳಲ್ಲಿ ದೊರೆಯುವ ಆಧಾರ ಸಾಮಗ್ರಿಗಳನ್ನು ಚೆನ್ನಾಗಿಯೆ ಗಾಯತ್ರಿ ನಾವಡ ಅವರು ವಿಶ್ಲೇಷಿಸಿದ್ದಾರೆ. ಜೊತೆಗೆ ಹೆಣ್ಣಿನ ಬಿಡುಗಡೆಗೆ ನಾವು ಪಶ್ಚಿಮದ ಕಡೆಗೆ

ದೃಷ್ಟಿಹರಿಸುವುದಕ್ಕಿಂತ ನಮ್ಮದೇ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಣ್ಣೊಬ್ಬಳು ತನ್ನ ಸುತ್ತಿನ ಲೋಕವನ್ನು ಗ್ರಹಿಸಿದ ಮತ್ತು ಅನನ್ಯತೆಯನ್ನು ಸ್ಥಾಪಿಸಿದ ಬಗೆಯನ್ನು ಜನಪದ ಕತೆಗಳಿಂದ ರೂಪಿಸಿಕೊಳ್ಳುವ ಸಾಧ್ಯತೆಯನ್ನು ಚರ್ಚಿಸಿದ್ದಾರೆ.

ಸಿರಿ ಕಾವ್ಯವನ್ನು ಸ್ತ್ರೀವಾದಿ ನೆಲೆಗೆ ಅಚ್ಚುಕಟ್ಟಾಗಿ ಬಳಸಿಕೊಂಡಿರುವ ಗಾಯತ್ರಿ ನಾವಡರು ಶೋಷಣೆಯ ಪ್ರತಿರೋಧಗಳ ನೆಲೆಯನ್ನು ಸಿರಿ ಕಾವ್ಯದ ಮೂಲಕನೇ ಕಟ್ಟಿಕೊಡುತ್ತಾರೆ. ಸಿರಿ ಕಾವ್ಯದಲ್ಲಿ ಬರುವ ಹೆಣ್ಣಿನ ಹೋರಾಟವನ್ನು ಸ್ತ್ರೀವಾದಿ ನೆಲೆಯಲ್ಲಿ ವಿವರಿಸಿದ್ದಾರೆ. ಮುಖ್ಯವಾಗಿ 'ಲಿಂಗ, ಲಿಂಗ ಪ್ರಬೇಧ ಮತ್ತು ಪಠ್ಯ ಸ್ವರೂಪ, ಪಾಡ್ದನಗಳು ಪ್ರಕಟಿಸುವ ಸ್ತ್ರೀತ್ವದ ಪ್ರತಿನಿಧಿಕರಣ, ಸಿರಿ ಹೆಣ್ಣಿನ ಅನನ್ಯತೆಯ ಹುಡುಕಾಟ, ಪಾತಿವ್ರತ್ಯದ ನಿರ್ವಚನ ಆಚರಣೆಯ ಮೂಲಕ ತಾತ್ವಿಕರಿಸಿದ್ದಾರೆ. ಸ್ತ್ರೀಪರಚಿಂತನೆ, ಸ್ತ್ರೀ ವಿಮೋಚನೆಯ ಹಾದಿಗಳು ತೆರೆದುಕೊಳ್ಳಬೇಕಾದ ಅಗತ್ಯ ಮತ್ತು ಸಾಧ್ಯತೆಗಳನ್ನು ಚರ್ಚಿಸಿದ್ದಾರೆ. ಪಿತೃಪ್ರಧಾನ ಸಂಸ್ಕೃತಿಯ ಚಿಂತನೆಗಳನ್ನು ಒಡೆಯುತ್ತಲೇ, ತಿರಸ್ಕರಿಸುತ್ತಲೆ ಮಾತೃ ವಂಶೀಯತೆಯ ಪ್ರವರ್ತಗಳಾಗಿ ಪೂರ್ಣ ಬದುಕಿನ ಹುಡುಕಾಟದಲ್ಲಿ ಹೆಣ್ಣಿನ ಅಂತಸ್ಸತ್ವದ ಶೋಧದಲ್ಲಿ ಸಿರಿ ಎತ್ತುವ ಪ್ರಶ್ನೆಗಳು, ಸ್ಥಾಪಿಸುವ ಧೋರಣೆಗಳು ಹೆಚ್ಚು ಮಾನವೀಯವಾಗಿದೆ"[೨೯] ಎನ್ನುವುದನ್ನು ಗುರುತಿಸುವ ಮೂಲಕ ಮತ್ತೆ ಹೆಣ್ಣಿನ ಅಂತಸ್ಸತ್ವದ ಸೈದ್ಧಾಂತಿಕ ಚರ್ಚೆಗೆ ಎಳೆಯುತ್ತಾರೆ.

ಸಿರಿಪಾಡ್ದನದಲ್ಲಿ ಸಿರಿದೈವದ ಆವಾಹನೆ ಆಚರಣೆ ಇದೆ. ಇಲ್ಲಿ ಹೆಂಗಸರು ದೈವದ ಪರಿಕಲ್ಪನೆಯೊಂದಿಗೆ ಆವಾಹನೆಯಾಗುತ್ತಾರೆ. ಹೆಂಗಸರಿಗೆ ಮಾತ್ರ ಯಾಕೆ? ದೈವದ ಆವಾಹನೆಯಾಗುತ್ತದೆ ಎಂಬುದು ವಿಶ್ಲೇಷಣೆಯಾಗಬೇಕಿದೆ. ಹೆಣ್ಣನ್ನು ಶೋಷಣೆ ಮಾಡುವ ವರ್ಗವೊಂದಿದೆ. ಈ ವರ್ಗವನ್ನು ನೇರವಾಗಿ ಎದುರಿಸದೆ ದೈವದ ಆವಾಹನೆಯ ಕಲ್ಪನೆಯೊಂದಿಗೆ ತಮ್ಮ ನೋವು, ಅಸಹನೆಯನ್ನು ಆವಾಹನೆ ಮೂಲಕ ಹೊರ ಹಾಕುವ ಮಾರ್ಗವಾಗಿದೆ. ಇದನ್ನು ನಾವು ಮನೋವಿಶ್ಲೇಷಣಾತ್ಮಕವಾಗಿ ಚರ್ಚೆ ಮಾಡಬೇಕಿದೆ. ಈ ಆಚರಣೆ ಕುರಿತಂತೆ ಪಾಶ್ಚಾತ್ಯ ವಿದ್ವಾಂಸರಾದ "ಫ್ರೀಡರ್ ಹಾಗೂ ಹಾರ್ಪರ್ ಅವರು ಮೈದುಂಬುವಿಕೆಯ ಪರಿಕಲ್ಪನೆ ಕುರಿತು ವ್ಯಕ್ತಿಯ ತೀವ್ರ ಮಾನಸಿಕ ತುಮುಲ ಹಾಗೂ ಒತ್ತಡದ ಸಂದರ್ಭ ಮತ್ತು ಬದುಕಿನ ಸಂಕ್ರಮಣ ಘಟ್ಟದಂತಹ ಸನ್ನೀವೇಷಗಳು ಈ ಪ್ರಕ್ರಿಯೆಗೆ ಕಾರಣ ಎಂದು ಗುರುತಿಸುತ್ತಾರೆ"[೩೦] ಮೈದುಂಬುವಿಕೆಯು ಒಂದು ವಿಸ್ತೃತ ಸಾಂಸ್ಕೃತಿಕ ವೈಚಾರಿಕ ಚೌಕಟ್ಟಿನ ಮೇಲೆ ನಿಂತ ಒಂದು ಸಾಂಸ್ಕೃತಿಕ ನಿರೀಕ್ಷೆಯು ಬದುಕಿನ ಕೆಲವೊಂದು ಸಂಕ್ರಮಣ ಕಾಲಗಳೊಂದಿಗೆ ಹಾಗೂ ಘಟನೆಗಳೊಂದಿಗೆ ಸಹಯೋಗವನ್ನು ಹೊಂದಿದ್ದು ಮೈದುಂಬುವಿಕೆಯಂತಹ ವರ್ತನೆ ತೋರುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ. "ಮಹಿಳೆಯರು ವಿಶೇಷವಾಗಿ ಫಲವಂತಿಕೆಯ ವರ್ಷಗಳಲ್ಲಿ ಅದರಲ್ಲೂ ಮೊದಲಬಾರಿ ರಜಸ್ವಲೆಯಾದ ಹಿಂಚು ಮುಂಚಿನ ಕಾಲಾವಧಿಯಲ್ಲಿ ಹಾಗೂ ಬಸುರಿ ಬಣಂತಿಯಾಗಿರುವ ಸಮಯದಲ್ಲಿ ಅಲೌಕಿಕ ಶಕ್ತಿಗಳ ಪ್ರಭಾವಕ್ಕೆ ಒಳಗಾಗುವ ಅಪಾಯ ಅಧಿಕ ಎಂದು ನಂಬಲಾಗಿದೆ. ಆ ಮಹಿಳೆಯ ತಂದೆ,

ಸಹೋದರರು ಹಾಗೂ ಗಂಡ ಇವರುಗಳು ಆಕೆಯ ಶುಭಾಶುಭಗಳಿಗೆ ಭಾಧ್ಯರು ಎನ್ನಲಾಗಿದೆ. ಅಷ್ಟೇ ಅಲ್ಲದೇ ಬಾಹ್ಯಕ್ಲೇಶಗಳಿಂದ ಆಕೆಯ ಸಂತಾನ ಶಕ್ತಿಯ, ಸಾಮರ್ಥ್ಯದ ರಕ್ಷಣೆಗೆ ಅವರು ಹೊಣೆಗಾರರೆಂದು ತಿಳಿಯಲಾಗಿದೆ. ಈ ಬಗೆಯ ಪುರುಷ ಸಂರಕ್ಷಣೆ, ನಿಯಂತ್ರಣ ಹಾಗೂ ಬೆಂಬಲದ ಕೊರತೆ ಏರ್ಪಟ್ಟಾಗ ಹೆಣ್ಣು ಅಲೌಖಿಕ ಆಕ್ರಮಣದ ಎದುರು ತಾನು ಅರಕ್ಷಿತಳೆಂದು ತಿಳಿದುಕೊಳ್ಳುತ್ತಾಳೆ"[೩೦] ಹೆಣ್ಣೊಬ್ಬಳಿಗೆ ಪುರುಷರ ಸಂರಕ್ಷಣಾತ್ಮಕ ಬೆಂಬಲದ ಕೊರತೆಯು ದೈವ ಮೈದುಂಬುವಿಕೆಗೆ ಕಾರಣ ಎಂಬುದಾಗಿ ಫ್ರೀಡರ್ ಹಾಗೂ ಹಾರ್ಪರ್ ಗುರುತಿಸುತ್ತಾರಾದರೂ ಅದನ್ನೊಂದು ಅಲೌಖಿಕ ಆಕ್ರಮಣ ಎಂಬ ನಿಲುವಿನಲ್ಲಿ ಆ ಹೆಣ್ಣು ಇಂತಹ ಅಲೌಖಿಕ ಆಕ್ರಮಣದ ಎದುರು ತಾನು ಅರಕ್ಷಿತಳೆಂದು ಭಯ ಅಥವಾ ಭೀತಿಗೆ ಒಳಗಾಗುತ್ತಾಳೆಂದು ಭಾವಿಸುತ್ತಾರೆ.

ಸಿರಿಕಾವ್ಯದಲ್ಲಿ ಅಂತರ್ಗತವಾಗಿರುವ ಅಂಶವೆಂದರೆ ಸ್ತ್ರೀ ಶೋಷಣೆಯನ್ನು ಪ್ರತಿಭಟಿಸುವುದು. ಇದು ಅದುವರೆಗಿನ ವ್ಯವಸ್ಥೆಯನ್ನು ಧಿಕ್ಕರಿಸುವುದನ್ನು ನೋಡಿದರೆ, ಆ ಪ್ರದೇಶದಲ್ಲಿ ಅದುವರೆಗೂ ಪಿತೃಪ್ರಧಾನ ವ್ಯವಸ್ಥೆ ಇದ್ದು, ಅತೀ ಶೋಷಣೆಗೆ ಒಳಗಾದ ಸ್ತ್ರೀ ಸಿಡಿದೆದ್ದು, ಆ ವ್ಯವಸ್ಥೆಯನ್ನು ಪ್ರತಿಭಟಿಸಿ ಹೊಸ ವ್ಯವಸ್ಥೆಯ ನಿರ್ಮಾಣಕ್ಕೆ ಅಣಿಯಾದ ಕಾಲಘಟ್ಟವನ್ನಿದು ಸೂಚಿಸುತ್ತದೆ. ಆ ಸ್ತ್ರೀಶಕ್ತಿಯೇ 'ಸಿರಿ' ಅಂತೆಯೇ ಅವಳನ್ನು ದೈವಾಂಶ ಸಂಭೂತೆ, ಅಲೌಕಿಕ ಶಕ್ತಿ ಸಂಪನ್ನೆಯನ್ನಾಗಿ ಚಿತ್ರಿಸಿರುವುದು ಕಂಡು ಬರುತ್ತದೆ. ಒಲ್ಲದ ಗಂಡನಿಗೆ ವಿಚ್ಛೇದನ ನೀಡುವ ಪದ್ಧತಿಯು ಬರಲಿ ಎಂದು ಸಿರಿಯೇ ಶಾಸನ ಮಾಡಿದಳೆಂಬಲ್ಲಿ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ದಿಟ್ಟತನವನ್ನು ಆಕೆ ತೋರಿದಳು ಎಂಬುದು ಸತ್ಯ. ಅಂದರೆ ಒಂದುಕಾಲಕ್ಕೆ ಪುರುಷ ಪ್ರಧಾನ ಕೌಟುಂಬಿಕ ವ್ಯವಸ್ಥೆಯಿರುವ ತುಳುನಾಡಿನಲ್ಲಿ ಗಂಡಿನ ದೌರ್ಜನ್ಯ ಅತಿಯಾದಾಗ ಅದನ್ನು ಖಂಡಿಸಿ, ಸ್ತ್ರೀ ಪ್ರಾಧಾನ್ಯತೆಯನ್ನು ಪಡೆಯುವ ಮಾತೃ ಮೂಲೀಯ ಕೌಟುಂಬಿಕ ಪದ್ಧತಿ ಬೆಳೆದು ಬಂದಿರಬೇಕು. ಆದರೆ ದುಷ್ಟಗಂಡನಿಂದ ವಿಚ್ಛೇದನ ಪಡೆದು ಹೊರಬಂದ ಸಿರಿಯು, ಕೊಡ್ಸೀರಾಳನು ತನ್ನ ಮೊದಲ ಹೆಂಡತಿಗೆ ಹಿಂಸೆ ನೀಡಿ, ಅವಳು ಆ ಹಿಂಸೆಯನ್ನು ತಾಳಲಾರದೇ ಮನೆ ಬಿಟ್ಟು ಹೋದಮೇಲೆ ತಾನು ಅವನಿಗೆ ಮದುವೆ ಆಗುವುದು ವಿಪರ್ಯಾಸವಾಗಿದೆ. ಪತಿಯಿಂದ ತೊಂದರೆಯನ್ನು ಅಭವಿಸಿದ ತಾನು ಇನ್ನೊಂದು ಹೆಣ್ಣಿನ ಸಂಕಟವನ್ನು ಅರಿಯಬೇಕಾಗಿತ್ತು. ಹಾಗಾಗದೇ ಅಂತವನಿಗೆ ತಾನು ಮದುವೆಯಾಗಲು ಒಪ್ಪಿದುದು ಆಶ್ಚರ್ಯವಾಗುತ್ತದೆ. ಇನ್ನೊಂದು ಬಗೆಯಲ್ಲಿ ಸಿರಿ ಕಾವ್ಯವು ಸಾಂಸ್ಕೃತಿಕ ಕೈಪಿಡಿಯಾಗಿ ಒಂದು ಕುಟುಂಬದ ಸುತ್ತ ಸುತ್ತುತ್ತಿದ್ದರೂ, ಸ್ತ್ರೀ ಶೋಷಣೆಯನ್ನು ಪ್ರತಿಭಟಿಸುವ ಕಾವ್ಯವಾಗಿರುವುದರ ಜೊತೆಗೆ, ಇದರಲ್ಲಿ ಸಿರಿಯ ಕೌಟುಂಬಿಕ, ಸಾಮಾಜಿಕ ಸಂದರ್ಭ, ವಿಚ್ಛೇದನ, ಮರುಮದುವೆ, ಉತ್ತರಾಧಿಕಾರತ್ವ, ಸ್ತ್ರೀಯತ್ವ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳು, ಗಂಡಿನ ಮೋಸ, ಅನ್ಯಾಯ, ಪುರುಷ ಪ್ರಭುತ್ವದ ಹೇರಿಕೆಯ ಪ್ರಯತ್ನಗಳು, ಅದರ ವಿರುದ್ಧ ಹೆಣ್ಣಿನ ಹೋರಾಟ ಮತ್ತು ವಿಜಯಗಳು ದಾಖಲಾಗಿವೆ. ಆದುದರಿಂದ ಇದು ತುಳು ಭಾಷೆಯನ್ನಾಡುವ ಪ್ರದೇಶದ ಸಾಂಸ್ಕೃತಿಕ ಕೈಪಿಡಿಯೆಂದರೆ ತಪ್ಪಲ್ಲ. ಇದು "ಇತಿಹಾಸದ ಒಂದು ಕಾಲಘಟ್ಟದಲ್ಲಿ

ವಾಸ್ತವಿಕವಾಗಿ ನಡೆದುಹೋದ ಕಥಯೆಂಬುದರಲ್ಲಿ ಯಾವುದೇ ಸಂಶಯ ತೋರುವುದಿಲ್ಲ. ಭಿನ್ನ ಭಿನ್ನ ವ್ಯಕ್ತಿತ್ವವುಳ್ಳ ಅನೇಕ ಮಂದಿ ತಮ್ಮ ತಮ್ಮ ನಂಬಿಕೆ, ಸಾಹಸ ಸಿಟ್ಟು, ಸೆಡವು, ಸೊಕ್ಕು, ಪಂಥ ಪೌರುಷ, ಕುಹಕ, ಕರುಣೆ–ಇತ್ಯಾದಿ ಶಕ್ತಿ ದೌರ್ಬಲ್ಯಗಳಿಂದ ಜೀವಂತವೆನಿಸಿ ಈ ಹಾಡಿನುದ್ದಕ್ಕೂ ಹಾದುಹೋಗುತ್ತಾರೆ. ಅವರ ಬಾಳ್ವೆಯ ಉತ್ಕಟತೆ. ಅವರಲ್ಲಿ ಕೆಲವರು ನೆಚ್ಚಿದ ಜೀವನ ಮೌಲ್ಯಗಳು ನಮ್ಮಲ್ಲಿ ಬೆರಗನ್ನು ಬಿತ್ತದೇ ಇರಲಾರವು. ಸಿರಿ ಪಾಡ್ದನವೆಂದು ಸಂಗ್ರಹಿತವಾದ ಈ ಮಹಾಕಾವ್ಯವು ಪೂರ್ಣವಾಗಿ ಸಿರಿಯ ಚರಿತ್ರೆಯೇ ಆಗಿರದೇ, ಅದು ಎರಡು ಭಾಗಗಳನ್ನು ಒಳಗೊಂಡಿದೆ. ಸತ್ಯನಾರಪುರದಿಂದ ಬಂದ ಸಿರಿಯು ಕೊಡ್ಸ್ತಿರಾಳನಿಗೆ ಕಿರಿಯ ಹೆಂಡತಿಯಾದರೂ, ಅವನ ಹಿರಿಯ ಹೆಂಡತಿ 'ಸಾಮು'ವೊಂದಿಗೆ ಅನ್ಯೋನ್ಯವಾಗಿದ್ದು ಒಂದು ಮಗುವಿಗೆ ತಾಯಿಯಾಗಿ, ಆ ಮಗುವನ್ನು ಸಾಮುವಿನ ಕೈಗೆ ನೀಡಿ ತನ್ನ ಬದುಕಿಗೆ ಮಂಗಳ ಹಾಡುವಲ್ಲಿಗೆ 'ಸಿರಿ' ಕಥೆಯು ಮುಗಿದಂತೇ ಆಗುತ್ತದೆ. ಇದರ ಮುಂದಿನ ಭಾಗ ಪ್ರತ್ಯೇಕವಾದಂತಿದೆ. ಅಲ್ಲಿಂದ ಮುಂದೆ ಅವಳ ಮಗಳು 'ಸೊನ್ನೆ'ಯ ಕಥೆ ಮುಂದುವರೆಯುತ್ತದೆ. ಕಥಾಹಂದರದ ದೃಷ್ಟಿಯಿಂದ, ಲಕ್ಷಣಗಳಿಂದ ಜನಪದ ಮಹಾಕಾವ್ಯದ ವ್ಯಾಪ್ತಿಗೆ ಏರುತ್ತದ ಎನ್ನುವದಕ್ಕಿಂತ ಕಾವ್ಯದಲ್ಲಿ ಚಿತ್ರಿತವಾದ ಒಂದು ಪ್ರದೇಶದ ಜೀವನ ವಿಧಾನ, ಬದುಕಿನ ಮಹಾನ್ ಮೌಲ್ಯಗಳ ದೃಷ್ಟಿಯಿಂದ ಅದು ಜನಪದ ಮಹಾಕಾವ್ಯವೇ ಆಗಿದೆ. ಇದು ಸ್ಥಾಪಿತ ಸಮಾಜದಲ್ಲಿಯ ಪುರುಷ ಪ್ರಾಧಾನ್ಯವನ್ನು, ಸಮಾಜವನ್ನು ನಿಯಂತ್ರಿಸಲು ಹೆಣೆದ ಕಾವ್ಯವಾಗಿದೆ. ಸತ್ಯನಾರಪುರದ ನೆಲ ಬಂಜರು ಬೀಳಲಿ, ಅರಮನೆ ಸುಟ್ಟುರಿದು ಬೂದಿಯಾಗಲಿ ಎಂದು ಶಾಪ ನೀಡುವಲ್ಲಿರುವ ಮುಖ್ಯ ಆಶಯವೆಂದರೆ, ಅರಮನೆ ಎಂಬುದು ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸುವ ಕೇಂದ್ರ. ಅದರ ನಾಶವೆಂದರೆ ಪುರುಷ ಪ್ರಭುತ್ವದ ನಾಶ ಎಂಬ ಅಂಶವೇ ಅಡಕವಾಗಿದೆ ಎಂಬಲ್ಲಿ ಅರ್ಥವಿದೆ. ಮನುಷ್ಯನಲ್ಲಿ ವಾಸ್ತವವಾದ ಮತ್ತು ಕಲ್ಪನವಾದ ಎಂಬ ಎರಡು ವರ್ಗಗಳಿರುತ್ತವೆ. ಆದರೆ ಇವೆರಡನ್ನು ಬಿಟ್ಟು ಶೂನ್ಯವರ್ಗವೊಂದಿದೆ. ಈ ಮೂರನೆ ವರ್ಗದ ನೆಲೆಯಲ್ಲಿ ಸಿರಿ ಪಾಡ್ದನವನ್ನು ವಿಶ್ಲೇಷಣೆಗೆ ಒಳಪಡಿಸಬೇಕಿದೆ. ಸಂಶೋಧಕರು ಸಿರಿಯನ್ನು ಮೂರನೇ ಶೂನ್ಯ ಲೋಕದಲ್ಲಿ ಪರಿಗಣಿಸಿಲ್ಲ. ಈ ಅಧ್ಯಯನಗಳು ಪಾಶ್ಚಿಮಾತ್ಯ ಸಿದ್ಧಾಂತಗಳ ಮೂಲಕವೆ ಇವುಗಳ ವಿಶ್ಲೇಷಣೆಗೆ ಒಳಪಡಿಸುವ ಸಾಧ್ಯತೆಗಳಿರುವುದರಿಂದ ಅಧ್ಯಯನಕ್ಕೆ ತೊಡಕಾಗುತ್ತವೆ.

ಮಾತೃ ದೇವಾತಾರಾಧನೆಯ ಹಿನ್ನೆಲೆಯಿಂದ ಹುಟ್ಟಿ ಬಂದ ಅನೇಕ ಗ್ರಾಮದೇವತೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಸಿರಿ ಆಚರಣೆ ಹಾಗೂ ಅವುಗಳನ್ನು ಕುರಿತು ಇರುವ ಐತಿಹ್ಯಗಳು ಆಯಾ ಆಚರಣೆಗಳಿಗಿರುವ ಪರಸ್ಪರ ಸಂಬಂಧ ಮತ್ತು ವೈರುಧ್ಯಗಳು ಇವೆಲ್ಲವುಗಳ ಕುರಿತು ಸ್ತ್ರೀವಾದಿ ನೆಲೆಗಳಲ್ಲಿ ಆಗಿರುವ ಅಧ್ಯಯನಗಳನ್ನು ಪರಿಶೀಲಿಸಬೇಕಾಗಿದೆ. ಇದರ ಜೊತೆಗೆ ಜನಪದ ಜೀವನದ ಯಾವ ಯಾವ ಕ್ಷೇತ್ರಗಳಲ್ಲಿ ಯಾವ ಹಂತದಲ್ಲಿ ಹೆಣ್ಣು ಶಕ್ತಿಯುತವಾಗಿ ಕಂಡು ಬರುತ್ತಿದ್ದಾಳೆ ಎಂಬುದನ್ನು ಕೂಲಂಕಷವಾಗಿ ಗುರುತಿಸುವ ಕೆಲಸವಾಗಬೇಕಾಗಿದೆ. ಇಲ್ಲಿ ಎಲ್ಲ ಸ್ವರೂಪಗಳಲ್ಲಿ

ಜನಪದ ಪರಂಪರೆಯಲ್ಲಿ ಸ್ತ್ರೀ ಹೊಳಗೊಳ್ಳುವ ಭಾಗವಹಿಸುವ ಅಸ್ತಿತ್ವದ ನೆಲೆಯನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನಪದ ಅಧ್ಯಯನಗಳು ಗುರಯತಿಸಿವೆ ಎಂಬುದನ್ನು ನೋಡಬೇಕಾಗಿದೆ.

ಉಪಸಂಹಾರ

ಜನಪದ ಆಚರಣಾ ಲೋಕದಲ್ಲಿ ಜಾತಿಶ್ರೇಣಿಕರಣದ ಕಟ್ಟುಕಟ್ಟಳೆಗಳ ಬಿಗಿಯಾಗಿವೆ. ಅಂತೆಯೇ ಕೆಳಜಾತಿಗಳ ಜನಪದ ಲೋಕ ತಿಳುವಳಿಕೆಯ ಗಣಿಗಳಂತೆ ಗೋಚರಿಸುತ್ತವೆ. ಇದು ಜಾನಪದ ಕುರಿತು ಚಿಂತಿಸುವಾಗ ನೆನಪಿಡಬೇಕಾದ ವೈರುಧ್ಯ. ಯಾವ ಜಾನಪದ ಸಾಹಿತ್ಯ ಆಚರಣಾ ಲೋಕಗಳಲ್ಲಿ ಕೆಳಜಾತಿಗಳ ಶೋಷಿತ ನೆಲೆಗಳಿವೆಯೋ, ಅಂತಹ ಸಾಹಿತ್ಯವನ್ನೇ ಕೆಳಜಾತಿಗಳು, ಪರಂಪರೆಯ ಜ್ಞಾನ ಬಂಡಾರವೆಂಬಂತೆ ಪೋಷಿಸುತ್ತಾ ಬಂದಿದ್ದಾರೆ. ಜನಪದ ಆಚರಣೆ ಪರಂಪರೆ ಹಾಗೆ ಉಳಿಯಲಿ ಎಂದರೆ, ಶೋಷಿತ ವ್ಯವಸ್ಥೆಯೂ ಹಾಗೆ ಉಳಿಯಲಿ ಎಂದಂತೆ. ಹಾಗಾಗಿ ಜನಪದವನ್ನು ಉಳಿಸೋಣ ನಶಿಸುತ್ತಿದೆ ಎನ್ನುವ ಯೋಚನೆಯಲ್ಲಿಯೇ ಇಂತಹ ಮೂಲಭೂತ ತೊಡಕಿರುವುದನ್ನು ಬಹುಪಾಲು ಜಾನಪದ ವಿದ್ವಾಂಸರು ಗುರುತಿಸಿಲ್ಲ. ಪಾಶ್ಚಾತ್ಯ ಸಿದ್ಧಾಂತಗಳ ಅಧ್ಯಯನ ಮಾದರಿಯಲ್ಲಿಯೇ ನಡೆದಿರುವ ಜನಪದ ಸಾಹಿತ್ಯವು ದೇಶಿ ಮಾದರಿಯನ್ನು ಕಟ್ಟಿಕೊಳ್ಳಬೇಕಿದೆ. ಅಧುನಿಕತೆಯ ಹೊಸ ಆಲೋಚನಾ ಕ್ರಮದಲ್ಲಿ ಜನಪದ ಆಚರಣೆಗಳು, ಸಂಪ್ರದಾಯಗಳನ್ನು ಅಧ್ಯಯನ ಮಾಡುವುದರ ಮೂಲಕ ಹೊಸ ಬಗೆಯ ಚಿಂತನೆಯನ್ನು ಕಟ್ಟಬೇಕಿದೆ. ನಮ್ಮಲ್ಲಿ ನೆಲೆಗೊಂಡಿರುವ ಆಚರಣೆ, ಕುಣಿತ, ಸಂಪ್ರದಾಯ, ಕಲೆ, ಸಾಹಿತ್ಯ, ಸಂಸ್ಕೃತಿ, ಕಾವ್ಯ, ಹಾಡು, ಪಠ್ಯ, ಭಾಷೆ, ಇತ್ಯಾದಿಯಾಗಿ ಅವುಗಳನ್ನು ಆಯಾ ಕಾಲಕ್ಕೆ ಒಳಗೊಂಡಂತೆ ಅನುಸಂಧಾನ ಮಾಡಿದರು. ಒಂದು ಪಠ್ಯ ಹಲವು ಪಠ್ಯಗಳಾಗುವ, ಒಂದು ದೈವ ಹಲವು ದೈವಗಳಾದ ಬಗೆ ಹೇಗೆ ಎಂಬ ತಿಳುವಳಿಕೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಕಾರರು ಈ ಕಾಲದ ಸಂಕರ ಸಂಸ್ಕೃತಿ ನಡುವೆ ಹೊಸ ತಿಳುವಳಿಕೆಯನ್ನು ಮೈಗೂಡಿಸಿಕೊಂಡರು.

ಕೊನೆ ಟಿಪ್ಪಣಿಗಳು

೧. ಪುರುಷೋತ್ತಮ ಬಿಳಿಮಲೆ, ಕನ್ನಡ ಕಥನಗಳು, ಪು, ೧೬೪

೨. ವೀರಣ್ಣ ದಂಡೆ, ಜಾನಪದ ೧೯೯೨, ಪು, ೨೦೦

೩. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಪು, ೧೧೪

೪. ಅದೇ, ಪು, ೧೧೪

೫. ಅದೇ, ಪು. ೭೦೪.

೬. ಅದೇ, ಪು. ೭೦೪

೭. ಅದೇ, ಪು. ೭೦೪

೮. ಅದೇ, ಪು, ೭೦೪

೯. ಅದೇ, ಪು, ೭೦೪

೧೦. ವೀರಣ್ಣ ದಂಡೆ, ಪೂರ್ವೋಕ್ತ, ಪು, ೧೯೩

೧೧. ಮುದ್ದುಮೂಡು ಬೆಳ್ಳಿ, ತುಳು ಜಾನಪದ, ಪು, ೪೯

೧೨. ಚಿನ್ನಪ್ಪಗೌಡ.ಕೆ, ಭೂತಾರಾಧನೆ ಒಂದು ಜಾನಪದೀಯ ಅಧ್ಯಯನ, ಪು, ೨೫೫

೧೩. ವಿವೇಕ ರೈ.ಬಿ.ಎ, ತುಳು ಜನಪದ ಸಾಹಿತ್ಯ, ಪು, ೨೧೩

೧೪. ಅದೇ, ಪು, ೨೫೩

೧೫. ೧೯೮೭, ಪು, ೧೩

೧೬. ವಿವೇಕ ರೈ.ಬಿ.ಎ, ಪೂರ್ವೋಕ್ತ, ಪು, ೭೦

೧೭. ಅದೇ, ಪು, ೭೧

೧೮. ಅದೇ, ಪು, ೭೩

೧೯. ಪುರುಷೋತ್ತಮ ಬಿಳಿಮಲೆ, ಪೂರ್ವೋಕ್ತ, ಪು, ೧೬೫

೨೦. ನಾವಡ.ಎ.ವಿ, ಶುಬಾಶ್ಚಂದ್ರ(ಅನು), ಪೀಟರ್ ಜೆ.ಕ್ಲಾಸ್(ಮೂಲ), ತುಳುವ ದರ್ಶನ, ಪು, ೩೬

೨೧. ಅಮೃತ ಸೋಮೇಶ್ವರ, ತುಳುವ ಜಾನಪದ: ಕೆಲವು ನೋಟಗಳು, ಪು, ೪೦

೨೨. ನಾಗರಾಜ.ಡಿ.ಆರ್, ಅಮೃತ ಮತ್ತು ಗರುಡ, ಪು, ೬೯

೨೩. ಚಿನ್ನಪ್ಪಗೌಡ.ಕೆ, ಪೂರ್ವೋಕ್ತ, ಪು, ೨೪೬

೨೪. ವಿವೇಕ ರೈ.ಬಿ.ಎ, ಪೂರ್ವೋಕ್ತ, ಪು, ೨೧೫

೨೫. ಚಿನ್ನಪ್ಪಗೌಡ.ಕೆ, ಪೂರ್ವೋಕ್ತ, ಪು, ೨೫

೨೬. ವೀರಣ್ಣ ದಂಡೆ, ಪೂರ್ವೋಕ್ತ, ಪು, ೧೮೨

೨೭. ಪುರುಷೋತ್ತಮ ಬಿಳಿಮಲೆ, ಪೂರ್ವೋಕ್ತ, ಪು, ೧೭೩

೨೮. ಅದೇ, ಪು, ೧೭೫

೨೯. ಗಾಯತ್ರಿ ನಾವಡ, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಪು, ೧೪೪

೩೦. ನಾವಡ ಎ.ವಿ(ಅನು) ಪೀಟರ್ ಜೆ.ಕ್ಲಾಸ್(ಮೂಲ) ತುಳುವ ದರ್ಶನ, ಪು, ೧೬

೩೧. ಅದೇ, ಪು, ೧೫

ಅಧ್ಯಾಯ : ಎಂಟು
ಕನ್ನಡ ಜನಪದ ರಂಗಭೂಮಿ ಅಧ್ಯಯನಗಳು

ಅಧ್ಯಾಯ : ಎಂಟು

ಕನ್ನಡ ಜನಪದ ರಂಗಭೂಮಿ ಅಧ್ಯಯನಗಳು

ಪ್ರಸ್ತಾವನೆ

ವಸಾಹತೋತ್ತರ ಕಾಲದಲ್ಲಿ ದೇಶಿಯ ವಿದ್ವಾಂಸರು ಜಾನಪದವನ್ನು ಶಾಸ್ತ್ರೀಯವಾಗಿ ವರ್ಗೀಕರಿಸಿಕೊಂಡು ಅನ್ಯಜ್ಞಾನ ಶಿಸ್ತಿನಲ್ಲಿ ಸಂಶೋಧನೆ ಮಾಡಿದರು. ಪಾಶ್ಚಾತ್ಯ ಜಾನಪದ ವಿದ್ವಾಂಸನಾದ ಬಾಗ್ಸ್ ಜಾನಪದವನ್ನು ಸಾಹಿತ್ಯಿಕ ಬಗೆ, ಭಾಷಿಕ ಬಗೆ, ಕ್ರಿಯಾತ್ಮಕ ಬಗೆ, ವೈಜ್ಞಾನಿಕ ಬಗೆ ಎಂದು ವರ್ಗೀಕರಣ ಮಾಡಿದನು. ಈ ವರ್ಗೀಕರಣವನ್ನು ಜಗತ್ತಿನ ಜಾನಪದ ವಿದ್ವಾಂಸರು ಆದಷ್ಟು ಮಟ್ಟಿಗೆ ಒಪ್ಪಿಕೊಂಡು ತಮ್ಮ ಅಧ್ಯಯನದಲ್ಲಿ ಈ ಕ್ರಮವನ್ನು ಅಳವಡಿಸಿಕೊಂಡರು. ಕತೆ, ಗೀತೆ, ಲಾವಣಿ, ಒಗಟು, ಗಾದೆ, ನಂಬಿಕೆ, ಸಂಪ್ರದಾಯ, ವೈದ್ಯ, ಅಡುಗೆ, ಉಡುಗೆ, ತೊಡುಗೆ, ವೃತ್ತಿ ಮಾಟ, ಮಂತ್ರ ನೃತ್ಯ, ನಾಟಕ, ಚಿತ್ರ, ಶಿಲ್ಪ, ಆಟ, ಕೂಟ, ನಡೆ–ನಡಿ ಇತ್ಯಾದಿ. ಜನಪದ ಜೀವನದ ಎಲ್ಲ ಸ್ತರಗಳನ್ನೂ ಒಳಗೊಳ್ಳುವ ವಿಸ್ತಾರ ವೈವಿಧ್ಯದ ಹಿನ್ನೆಲೆಯಲ್ಲಿ ಪರಿಶೋಧನೆ, ಸಂರಕ್ಷಣೆಗಳು ನಡೆದವು. ವಿಶ್ವವಿದ್ಯಾಲಯಗಳಲ್ಲಿ ಜಾನಪದವನ್ನು ಶೈಕ್ಷಣಿಕ ಪಠ್ಯವಿಷಯವಾಗಿ ರೂಪಿಸಿದ ಮೇಲೆ ಜಾನಪದಕ್ಕೆ ಮಾನ್ಯತೆ ದೊರಕಿತು. ಹಾ.ಮಾ.ನಾ ಅವರು 'ಜಾನಪದ ಸ್ವರೂಪ' ಕೃತಿಯಲ್ಲಿ 'ಜಾನಪದ ವೈಜ್ಞಾನಿಕತೆ' ಕುರಿತು ಆಳವಾದ ತಿಳವಳಿಕೆಯನ್ನು ನೀಡಿದರು. ನಂತರ ವಿದ್ವಾಂಸರು ಜಾನಪದದ ಒಂದೊಂದು ಪ್ರಕಾರಗಳನ್ನು ಎತ್ತಿಕೊಂಡು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಂಶೋಧನೆ ಪ್ರಾರಂಭಿಸಿದರು. ಇದಕ್ಕೂ ಮೊದಲು ಸಾಹಿತ್ಯ ಭಾಗವಾಗಿ ಇದ್ದಂತಹ ಗೀತೆ, ಗಾದೆ, ಕಥೆ–ಅಷ್ಟನ್ನೇ ಪರಿಗಣಿಸಿ ಸಂಪಾದನೆ, ಸಂಗ್ರಹ ಮಾಡಿದ್ದ ಅಧ್ಯಯನಕಾರರಿಗೆ ವಿಶ್ವವಿದ್ಯಾಲಯವು ಸಾಹಿತ್ಯೇತರ ಪ್ರಕಾರಗಳನ್ನು ಅಧ್ಯಯನ ಮಾಡಲು ಹೊಸ ಉತ್ಸಾಹವನ್ನು ನೀಡಿತು. ಇದರಲ್ಲಿ ಸಮುದಾಯ ಸಂಪ್ರದಾಯ, ಆಚರಣೆ, ಕಲೆ, ಜನಪದ ರಂಗಭೂಮಿಯಂತಹ ಹೊಸ ವಿಷಯಗಳು ಸಂಶೋಧನೆಯ ವಸ್ತುಗಳಾದವು. ವಿಶ್ವವಿದ್ಯಾಲಯ ಮಟ್ಟದಲ್ಲಿ ಜನಪದ ರಂಗಭೂಮಿಯನ್ನು ಸಂಶೋಧನೆಯ ವಿಷಯವನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಿರುವ ಕೃತಿಗಳನ್ನು ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗುವುದು. ಜನಪದ ರಂಗಭೂಮಿ ಹುಟ್ಟು ಬೆಳವಣಿಗೆ, ಸ್ವರೂಪ ಕುರಿತು

ತಾತ್ವಿಕವಾಗಿ ಚರ್ಚಿಸಲಾಗುವುದು. "ಸಂಕೀರ್ಣ"ಗಳ ಗುಂಪಿನಲ್ಲಿ ಪ್ರದರ್ಶಕ ರಂಗ ಕಲೆಗಳು, ಯಕ್ಷಗಾನ ಮುಂತಾದವುಗಳು ಸೇರಿಕೊಳ್ಳುತ್ತವೆ. ಈ ಸಂಕೀರ್ಣ ಕಲೆಗಳಿಗೆ ಸಂಬಂದಿಸಿದ ಹಲವು ಸಂಗ್ರಹ ಸಂಪಾದನೆಗಳು ಅಕಾಡೆಮಿಕೇತರವಾಗಿ ನಡೆದಿವೆ. ಅವುಗಳನ್ನು ಮುಂದೆ ಪರಿಶೀಲಿಸಲಾಗಿದೆ.

೮.೧. ಜನಪದ ರಂಗಭೂಮಿಯ ಹುಟ್ಟು-ಬೆಳವಣಿಗೆ, ಪ್ರಕಾರಗಳು

ಕನ್ನಡ ಜನಪದ ಸಾಹಿತ್ಯದಲ್ಲಿ ಕನ್ನಡ ಜನಪದ ರಂಗಭೂಮಿಗೂ ಒಂದು ಪ್ರಮುಖ ಸ್ಥಾನವಿದೆ. ಕನ್ನಡ ಜನಪದ ರಂಗಭೂಮಿಯೇ ಕನ್ನಡ ಬಯಲಾಟವಾಗಿದ್ದು, ಪ್ರಾಚೀನ ಕಾಲದಿಂದಲೂ ಇದರ ಪರಂಪರೆ ಇರುವುದನ್ನು ಕಾಣಬಹುದು. "ಮೊಟ್ಟಮೊದಲು ಬಯಲಾಟವು ಜನತೆಯ ಭಾಜನೆಗಬ್ಬವಾಗಿದ್ದು, ಇದರಲ್ಲಿ ಸಂಗೀತವೇ ಪ್ರಧಾನ ಪಾತ್ರ ವಹಿಸುತಿತ್ತು. ಲೋಹವಾದ್ಯ-ಜಾಂಗುಟ, ತಾಳ, ಚೆಳ್ಳಂಕಗಲಿಂದಾಗಲಿ, ತಂತಿಯ ವಾದ್ಯ-ವೀಣೆ, ತಂಬೂರಿ, ತುಣಿ ತುಣಿಗಳಿಂದಾಗಲಿ, ಧರ್ಮವಾದ್ಯ-ದಿಮ್ಮ, ಮದ್ದಲಿ, ದಪ್ಪುಗಳಿಂದಾಗಲಿ ಇವೆಲ್ಲವುಗಳ ಸಂಗಮದಿಂದ ಬಯಲಾಟವು ನಡೆಯುತಿತ್ತು. ಈ ಭಾಜನೆಗಬ್ಬವು ಬರುಬರುತ್ತ ರೂಪಾಂತರಿಸಿ ಬಯಲಾಟವಾಗಿ ಉಳಿದು ಬಂದಿದೆ"[೧] ಈ ಬಯಲಾಟವು ಜನಪದರ ಮನರಂಜನೆಯ ದ್ಯೋತಕವಾಗಿ ಆರಾಧನಾ ಮತ್ತು ಕುಣಿತಗಳ ಕಲೆಯಲ್ಲಿ ಜನಿಸಿರುವುದನ್ನು ಕಾಣಬಹುದು. "ಪಂಡಿತರ ಹಾಗೂ ಶ್ರೀಮಂತರ ಮನೋರಂಜನೆಯ ಸಲುವಾಗಿ ಹುಟ್ಟಿಕೊಂಡ ರಾಜರ ಆಸ್ಥಾನಗಳಲ್ಲಿನ ರಂಗಭೂಮಿಗಿಂತ ಜನಪದ ರಂಗಭೂಮಿ ಬೇರೆಯಾದದ್ದು, ಯಾವುದೇ ದೇಶದ ರಂಗಭೂಮಿಯ ಪ್ರಕಾರಗಳಲ್ಲಿ ಜನತಾ ರಂಗಭೂಮಿಯೇ ಅತ್ಯಂತ ಪ್ರಾಚೀನವಾದುದೆಂದು ನಾಟಕ ಪಂಡಿತರ ನಿಶ್ಚಿತ ಅಭಿಪ್ರಾಯವಾಗಿತ್ತು. ಒಂದು ಜನತೆಯ ಮೂಲಭೂತ ಸಂಸ್ಕೃತಿಯ ಮೇಲೆ ಬೆಳಕನ್ನು ಚೆಲ್ಲುವ ಇದು ಮುಂದಿನ ಪ್ರಕಾರಗಳಾದ ವೃತ್ತಿರಂಗಭೂಮಿ ಹಾಗೂ ವಿಲಾಸಿ ರಂಗಭೂಮಿಗಳ ರೂಪ ರೇಖೆಗಳನ್ನು ರೂಪಿಸುವ ಪ್ರೇರಕಶಕ್ತಿಯಾಗಿದೆ"[೨] ಯಾವುದನ್ನು ಪಂಡಿತರು-ರಾಜರು ನಿರ್ಲಕ್ಷಿಸಿದ್ದರೂ ಆ ರಂಗಭೂಮಿಯು ಆಧುನಿಕ ಸಂದರ್ಭದಲ್ಲಿ ಬೇರೆಲ್ಲ ಸಾಹಿತ್ಯ ಪ್ರಕಾರಗಳಿಗೆ ಪ್ರಭಾವ ಬೀರಿದೆ. ಅಲ್ಲದೇ, ಸಂಸ್ಕೃತ ನಾಟಕಗಳಿಗಿಂತ ಅತಿ ಪ್ರಾಚೀನತೆಯನ್ನು ಜನಪದ ರಂಗಭೂಮಿಯು ಹೊಂದಿದೆ. ಕರ್ನಾಟಕದಲ್ಲಿ ಜನರು ಮಧ್ಯಯುಗದಲ್ಲಿ ಹಲವು ಬಗೆಯ ನೃತ್ಯನಾಟಕಗಳನ್ನು ಬೆಳೆಸಿದ್ದರು. ಭಾರತದ ಬೇರೆ ಯಾವುದೇ ಪ್ರಾದೇಶಿಕ ರಂಗಭೂಮಿಗಿಂತಲೂ ಕರ್ನಾಟಕ ರಂಗಭೂಮಿಯು ಪ್ರಾಚೀನವಾದುದು ಎಂದು ಡಾ.ಎಚ್.ಕೆ.ರಂಗನಾಥರವರು ಅಭಿಪ್ರಾಯ ಪಡುತ್ತಾರೆ"[೩] ವರ್ಣರಂಜಿತವಾದ ಯಕ್ಷಗಾನ ಭಾಗವತರಾಟ, ದೊಡ್ಡಾಟ ಮತ್ತು ಸಣ್ಣಾಟಗಳಿಂದ ಬೆಳೆದುಬಂದ ಕರ್ನಾಟಕದ ರಂಗಭೂಮಿಯು ತುಂಬ ವೈವಿಧ್ಯಮಯವಾಗಿದೆ.

ಕನ್ನಡ ಜನಪದ ರಂಗಭೂಮಿಯ ಬಯಲಾಟದ ವಿವಿಧ ಪ್ರಕಾರಗಳನ್ನು ಪ್ರದೇಶಕ್ಕನುಗುಣವಾಗಿ ಗುರುತಿಸಬಹುದು. "ಮೂಡಲಪಾಯ, ಯಕ್ಷಗಾನ, ತೆಂಕುತಿಟ್ಟು-ಬಡಗುತಿಟ್ಟು, ತಾಳಮದ್ದಲೆ, ಸಣ್ಣಾಟ,

ದಾಸರಾಟ, ಗೊಂಬೆಯಾಟ, ತೊಗಲು ಗೊಂಬೆಯಾಟ, ಇತ್ಯಾದಿ. ಇವುಗಳು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಸಾಂಸ್ಕೃತಿಕವಾಗಿ ವೈಶಿಷ್ಟ್ಯತೆಗಳಿಂದ ಕೂಡಿವೆ. ಇವುಗಳನ್ನು ಜನಪದ ವಿದ್ವಾಂಸರು ಸಂಶೋಧನ ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡು ಜನಪದ ರಂಗಭೂಮಿಯ ಅನನ್ಯತೆಯನ್ನು ಗುರುತಿಸಿದ್ದಾರೆ.

ಕರ್ನಾಟಕದ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಆಚರಣೆಗೊಳ್ಳುವ ಕಲಾತ್ಮಕವಾದವುಗಳು ಜನಪದ ರಂಗಭೂಮಿ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತವೆ. "ಕರಾವಳಿ ಭಾಗದಲ್ಲಿ ಭೂತಾರಾಧನೆ, ಜಾಲಾಟ, ಕಾಡ್ಯನಾಟ್ಯ, ನಾಗಮಂಡಲ ಆರಾಧನಾ ಕಲೆಗಳಾಗಿ ಅದರಲ್ಲೂ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ವಿಶಿಷ್ಟ ಬಗೆಯ ಕಲಾಸೃಷ್ಟಿಗೊಳ್ಳುತ್ತವೆ. ದಕ್ಷಿಣ ಕರ್ನಾಟಕದ ಮೈಸೂರು ಭಾಗದಲ್ಲಿ ಮಂಟೇಸ್ವಾಮಿ ಕಾವ್ಯವನ್ನು ಹಾಡುವ ನೀಲಗಾರರು, ಮಾದಪ್ಪನ ಕತೆಯನ್ನು, ಹಾಡುವ ದೇವರಗುಡ್ಡರು, ಜುಂಜಪ್ಪನ ಕಾವ್ಯವನ್ನು ಹಾಡುವ ಕಾಡುಗೊಲ್ಲರು, ಮೈಲಾರ ಕಾವ್ಯವನ್ನು ಹಾಡುವ ಗೊರವ ಜನಾಂಗದವರನ್ನು ಕಾಣಬಹುದು. ಇವೆಲ್ಲ ಇಂದಿಗೂ ಅರೆ ರಂಗಭೂಮಿಯ ಪ್ರಕಾರಗಳಾಗಿವೆ. ಪ್ರಾದೇಶಿಕವಾಗಿ ಅಧ್ಯಯನ ಕೈಗೊಂಡಾಗ ಅಲ್ಲಿನ ವಿಶಿಷ್ಟ ಸಾಂಸ್ಕೃತಿಕ ಸಂದರ್ಭ, ಪ್ರದರ್ಶನ, ಜೀವನ ಶೈಲಿ, ಪ್ರಾದೇಶಿಕ ಭಿನ್ನತೆ ಇವೆಲ್ಲಾ ಅಂಶಗಳನ್ನು ಕಟ್ಟಿಕೊಡಬಹುದು. ಉತ್ತರ ಕರ್ನಾಟಕ ಭಾಗದಲ್ಲಿ ಜನಪದ ರಂಗಭೂಮಿ ಒಂದು ಕಥಾನಕವನ್ನು ಆಧರಿಸಿ ಪ್ರದರ್ಶನದ ನಿರ್ದಿಷ್ಟ ಸ್ವರೂಪವನ್ನು ಹೊಂದಿದೆ. ಅವುಗಳು ದಾಸರಾಟ, ಶರಣರಾಟ, ಸಣ್ಣಾಟ, ದೊಡ್ಡಾಟ, ಬಯಲಾಟ ಮುಂತಾದ ಹೆಸರುಗಳಿಂದ ಅಲಕೃತಗೊಂಡಿವೆ. ಚೌಡಿಕೆ ಮೇಳವು ಸಹ ಅರೆರಂಗಭೂಮಿಯ ಸ್ವರೂಪದಲ್ಲಿ ವ್ಯಕ್ತಗೊಳ್ಳುತ್ತದೆ. "ಇವುಗಳು ರೂಪುಗೊಳ್ಳಲು ಪ್ರೇರಕವಾದ ಜನಪದ ರಂಗಭೂಮಿಯಲ್ಲಿ ಪರಿಚಲನೆಗೊಳ್ಳುತ್ತಿದ್ದ ಅನೇಕ ತೇಲು ರೂಪುಗಳು ಅಧ್ಯಯನದ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಏಕೆಂದರೆ ಈ ತೇಲು ರೂಪುಗಳು ಕೇವಲ ಮನರಂಜನೆಗಾಗಿ ಹುಟ್ಟಿಕೊಂಡವುಗಳಲ್ಲ. ವಿವಿಧ ಜನಪದ ವೃಂದಗಳು, ತಮ್ಮ ತಮ್ಮ ಕುಲ, ಪಂಥಗಳ ಕುಲ ದೇವಗಳಾದ ವೀರಭದ್ರ, ಭೈರವ, ಬೀರದೇವರು, ಮೈಲಾರಿ, ಅಂಭಭವಾನಿ, ಎಲ್ಲಮ್ಮ ಮುಂತಾದವುಗಳ ಆರಾಧನೆಗಾಗಿ ಹುಟ್ಟುಕೊಳ್ಳುತ್ತಿದ್ದ ಹರಕೆ, ಸೇವೆ ಆಚರಣೆಗಳಾಗಿದ್ದವು"[1] ಜನಪದ ರಂಗಭೂಮಿ ಈ ಬಗೆಯ ವಿವಿಧ ಪ್ರಕಾರಗಳ ಹುಟ್ಟಿಗೆ, ದೈವತಾರಾಧನೆಯೇ ಮೂಲ ಪ್ರೇರಣೆ ಎಂಬುದು ಹಲವು ನೆಲೆಯಲ್ಲಿ ಚರ್ಚಿತಗೊಂಡಿದೆ. ಇಂತಹ ಪ್ರಾದೇಶಿಕ ಭಿನ್ನತೆಯ ಆರಾಧನಾ ಕಲೆಗಳನ್ನು ಸಂಶೋಧಕರು ಗುರುತಿಸುವ ಕೆಲಸ ಮಾಡಬೇಕು. ಆದರೆ ಇದು ಸಮಗ್ರವಾಗಿ ನಡೆಯುವ ಅಧ್ಯಯನವಾಗಿದೆ. ಮೂಲತಃ ಜನಪದರು ದೈವ ನಂಬಿಕೆಯುಳ್ಳವರು. ದೈವರನ್ನು ಒಲಿಸಿಕೊಳ್ಳುವುದಕ್ಕೂ, ಇಲ್ಲವೇ ತನ್ನ ಭಕ್ತಿಯನ್ನು ತೋರಿಸುವುದಕ್ಕೂ, ಆರಾಧನೆ ಮಾಡಲು ಆ ಸಂದರ್ಭದಲ್ಲಿ 'ಕುಣಿತ'ವನ್ನು ನೆರವೇರಿಸುವುದು, ಹಾಡನ್ನು ಹೇಳುವುದು, ಇವೆಲ್ಲ ಒಂದು ಬಗೆಯ ಜನಪದ ರಂಗಭೂಮಿಯ ಉಗಮಕ್ಕೆ ಕಾರಣವಾಗಿವೆ.

"ಜನಪದ ಆಚರಣೆಗಳು ದಿನಗಟ್ಟಲೇ ನಡೆಯುವಂತೆ, ಅದರಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಅದನ್ನು ಮನರಂಜನೆಯನ್ನಾಗಿಯೂ ಹಾಗೂ ಆರಾಧನೆಯನ್ನಾಗಿಯೂ ಪರಿಗಣಿಸಿದ ಮಹತ್ವದ ಘಟ್ಟವೇ, ಇಂದಿನ ನಮ್ಮ ಯಕ್ಷರಂಗ ಅಥವಾ ಬಯಲಾಟದ ರಂಗಕ್ಕೆ, ಪೂರಕವಾಗಿದೆ. ಇಡೀ ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಗ್ರಾಮದೇವತೆಗಳ 'ಹಚ್ಚಾರಾಧನೆ' ಈ ರಂಗದ ಬೆಳವಣಿಗೆಯ ಹಿಂದೆ ಕೆಲಸ ಮಾಡಿರುವ ಕಾರಣ ಒಂದೇ ರೂಪದ ರಂಗ ಸಂಪ್ರದಾಯ ಹುಟ್ಟಿಕೊಂಡಂತೆ ಕಾಣುತ್ತದೆ"[೫] ಕರ್ನಾಟಕದ ಪ್ರಸಿದ್ಧ ಜನಪದ ದೈವ ಸಂಪ್ರದಾಯಗಳೆನಿಸಿದ ಮಾರಿ ಆರಾಧನೆ, ಭೂತಾರಾಧನೆ, ನಾಗಾರಾಧನೆ, ವೀರಭದ್ರಾರಾಧನೆ, ಯಲ್ಲಮ್ಮನ ಆರಾಧನೆ, ಮೈಲಾರಲಿಂಗ ಮತ್ತು ಮಂಟೇಸ್ವಾಮಿ ಆರಾಧನೆ ಪ್ರಧಾನವಾಗಿ ಕಲೆಗಳ ರೂಪದಲ್ಲಿ ಒಳಗೊಳ್ಳುತ್ತವೆ. "ಇಂತಹ ನೆಲಮೂಲ ಸಂಸ್ಕೃತಿಯ ಆರಾಧನೆ ಕಲೆಗಳನ್ನು 'ಜನಪದ ರಂಗಭೂಮಿ'ಯಾಗಿ ಸ್ಥಿತ್ಯಂತರಗೊಂಡು ಇದನ್ನೆ ನಾಡಿನ, ಜ್ಞಾನ ಪರಂಪರೆಗಳನ್ನು ಶತಶತಮಾನಗಳಿಂದ ಕಾಯ್ದುಕೊಂಡು ಬಂದು, ಕೃಷಿಕರು, ಬುಡಕಟ್ಟುಗಳು ಅಲೆಮಾರಿಗಳು, ಕುಶಲ ಕರ್ಮಿಗಳು ಮುಂತಾಗಿ ಎಲ್ಲರು ನಮ್ಮ ಪರಂಪರೆಯನ್ನು ಕಾಪಾಡಿಕೊಂಡು ಬಂದಿದ್ದಾರೆ"[೬] ಈ ಸಂಸ್ಕೃತಿಯನ್ನು ಪ್ರಧಾನವಾಗಿ ಅಧ್ಯಯನ ಮಾಡಿದಾಗ 'ಜನಪದ ರಂಗಭೂಮಿ' ಅಸ್ತಿತ್ವವನ್ನು ಗುರುತಿಸಬಹುದು.

ಕರ್ನಾಟಕದ 'ಸಾಂಪ್ರದಾಯಿಕ ರಂಗಭೂಮಿ'ಯ ಪ್ರಕಾರಗಳಾದ 'ಯಕ್ಷಗಾನ ಮತ್ತು ಬಯಲಾಟ' ಈ ಎರಡು ಪ್ರಕಾರಗಳು ಆಧುನಿಕ ಪ್ರಭಾವಗಳಿಂದ ವಿಕಾಸಗೊಂಡಿರುವುದು ಕಂಡು ಬರುತ್ತದೆ. ಈ ಪ್ರಕಾರಗಳು ಜನಪದ ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿರುವ ಈ ಕಲಾಪ್ರಕಾರಗಳು ಮೂಲತಃ ಮನುಷ್ಯ ಕುಣಿತದ ಮೂಲಕ, ದೈವಾರಾಧನೆಗಳ ಮೂಲಕ, ಹುಟ್ಟಿಕೊಂಡಿರುವುದನ್ನು ನೋಡಬಹುದು. ಬಿ. ಎಸ್. ಗದ್ದಗೀಮಠರು ಉತ್ತರ ಕರ್ನಾಟಕದ ಭಾಗದಲ್ಲಿನ ರಂಗಪರಂಪರೆಯನ್ನು ಗುರುತಿಸುವಂತೆ "ಉತ್ತರ ಕನ್ನಡ ನಾಡಿನ ದತ್ತಿ, ಆಟ, ವೀರಮುಖ, ಎಲ್ಲಮುಖ, ಎಲ್ಲಮ್ಮನ ಕುಣಿತ, ಜಗ್ಗರ, ಕುಣಿತ, ಮೊದಲಾದ, ನೃತ್ಯ ಪ್ರಕಾರಗಳಲ್ಲಿ ಅಡಗಿರುವ ನಾಟಕೀಯತೆಯ ಬಗೆಗೆ ಹೊಸ ಬೆಳಕು ಚೆಲ್ಲಿದ್ದಾರೆ"[೭] ಹೀಗೆ ಜನಪದ ರಂಗಭೂಮಿಯು ಆಯಾ ಪ್ರಾದೇಶಿಕ ನೆಲೆಯ ದೈವ ಆರಾಧನೆಯ ಮೂಲಕ ರೂಪುಗೊಳ್ಳುವುದನ್ನು ಪ್ರಾಚೀನ ಕಾಲದಿಂದಲೂ ಗುರುತಿಸಲಾಗಿದೆ. ಗ್ರೀಕ್ ರಂಗಭೂಮಿಯೂ 'ಡಯೋನಿಸಿಯಸ್' ಎಂಬ ಫಲಕೊಡುವ ದೇವರ ಪ್ರಿತ್ಯರ್ಥವಾಗಿ ನಡೆಯುತ್ತಿದ್ದ ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಹುಟ್ಟಿದೆ"[೮] ಹಾಗಾಗಿ ಜಗತ್ತಿನ ಯಾವುದೇ ಜನಪದ ರಂಗಭೂಮಿ ಮೂಲತಃ ಅನುಕರಣೆ, ಕಥನಕಲೆ, ಸಿದ್ಧಾಂತಗಳ ಮೂಲಕ ಸೃಷ್ಟಿಗೊಂಡಿರುವುದನ್ನು ಗುರುತಿಸಲಾಗುತ್ತದೆ. "ನಾಟಕವು ಧರ್ಮಕ್ಕಿಂತಲೂ ಪ್ರಾಚೀನವಾದದ್ದು. ಮನುಷ್ಯನಿಗೆ ಧರ್ಮಾಚರಣೆಗಳ ವಿಚಾರ ಹೊಳೆಯುವುದಕ್ಕೆ ಪೂರ್ವದಲ್ಲಿಯೆ ನಾಟಕ ಉದಯವಾಗಿರಲು ಸಾಧ್ಯವೆಂಬುದು ಒಂದು ಅಭಿಪ್ರಾಯ ಈ ಅಭಿಪ್ರಾಯವನ್ನು ನಾಟಕದ ಮೂಲ ಸಿದ್ಧಾಂತವೆಂದು ಕರೆಯಬಹುದು"[೯] ಅನುಕರಣೆ ಮಾನವನ ಉಗಮದಿಂದಲೂ ಇದೆ. ಆದಿಮಾನವನು

ಪ್ರಥಮತಃ ಏನನ್ನೂ ಅನುಕರಿಸಲು ಪ್ರಯತ್ನಿಸಿರಬೇಕು. ಅಂದು ಅವನ ಜೀವನ ಹೋರಾಟವೆಲ್ಲ ಪ್ರಾಣಿಗಳನ್ನು ಬೇಟೆಯಾಡುವುದಕ್ಕೆ ಮಾತ್ರ ಸೀಮಿತವಾಗಿತ್ತು. ಅದೇ ಅವನ ಸರ್ವಸ್ವ ಆಗಿದ್ದರಿಂದ ಇವುಗಳ ನಡಿಗೆ, ಚೇಷ್ಟೆ, ದನಿ, ಕೂಗು ಕೇಕೆಗಳನ್ನು ಅನುಕರಿಸುವುದರಲ್ಲಿ ಮಾನವ ಏನೋ ಒಂದು ವಿಧದ ಸಂತೋಷ ಕಂಡುಕೊಂಡ. ಈ ಅನುಕರಣೆ ಅವನಿಗೆ ಸಂತೋಷದ ಜೊತೆಗೆ ಬೇಟೆಯ ತಂತ್ರವನ್ನು ಪರಿಚಯ ಮಾಡಿಕೊಟ್ಟಿತು. ಕಾಡು ಪ್ರಾಣಿಗಳಂತೆ ಕೂಗಿ ಕೇಕೆ ಹಾಕಿ ಮೋಸಗೊಳಿಸಿ ತನ್ನ ಬೇಟೆಯನ್ನು ಬಲೆಗೆ ಹಾಕಿಕೊಳ್ಳತೊಡಗಿದ. ಹೀಗಾಗಿ "ಮಾನವನಿಗೆ ಅನುಕರಣೆ ತುಂಬಾ ಇಷ್ಟವಾಯಿತು. ಪ್ರಾಣಿಗಳ ನಡಿಗೆ, ವಿಲಾಸಗಳನ್ನೆ ಅನುಸರಿಸುವ ಚಟ ಬೆಳೆದು ಅದೇ ಕುಣಿತಕ್ಕೆ ದಾರಿ ಮಾಡಿಕೊಟಿತು. ಈ ದೃಷ್ಟಿಯಿಂದ ನೋಡಿದಾಗ ಕುಣಿತವೇ ಮೊದಲ ಕಲೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ"[೧೦] ಕನ್ನಡದ ಸಂದರ್ಭದಲ್ಲಿ ಯಕ್ಷಗಾನ ಮತ್ತು ಬಯಲಾಟಗಳು ಈ ಸ್ವರೂಪದಲ್ಲಿ ಸೇರಿಕೊಳ್ಳುವ ಕಲೆಗಳಾಗಿವೆ. ಈ ಎರಡು ರಂಗ ಪ್ರಕಾರಗಳಲ್ಲಿ 'ಕುಣಿತವೇ' ಮುಖ್ಯವಾಗಿರುತ್ತದೆ. ಭರತನು ತನ್ನ ನಾಟ್ಯಶಾಸ್ತ್ರ ಗ್ರಂಥದಲ್ಲಿ ೩೬ ಅಧ್ಯಾಯಗಳಲ್ಲಿ ನಾಲ್ಕು ಅಭಿನಯ ಪ್ರಕಾರಗಳನ್ನು ಹೇಳಿದ್ದಾನೆ. ಆಂಗಿಕ, ವಾಚಿಕ, ಆಹಾರ್ಯ, ಸ್ವಾತ್ವಿಕ, ಇವು ಸಾಂಪ್ರದಾಯಿಕ ಜನಪದ ರಂಗಭೂಮಿಯಲ್ಲಿಯೂ ಸೇರ್ಪಡೆಗೊಳ್ಳುತ್ತವೆ ಎಂದು ಹೇಳಿದ್ದಾನೆ. ಹಾಗಾಗಿ ಜನಪದ ರಂಗಭೂಮಿಯು 'ಅಭಿಜಾತ' ರಂಗಭೂಮಿಯಂತೆ ಮಾರ್ಪಾಡು ಹೊಂದಿದ್ದರೂ, ಪ್ರೇಕ್ಷಕರು 'ಜನಪದ ರಂಗಭೂಮಿ'ಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಕ್ರಿಯೆ ನಡೆಯುತ್ತದೆ. "ಪ್ರೇಕ್ಷಕರು ಸಕ್ರಿಯ ಸಹಭಾಗಿಗಳಾಗುವುದು ಆದರೆ ಸಹಭಾಗಿತ್ವ ಸಾಮಾಜಿಕ ಮತ್ತು ಕಲಾತ್ಮಕ ಎರಡು ಸ್ತರಗಳಲ್ಲಿರುತ್ತದೆ. ಜಾನಪದ ರಂಗಭೂಮಿಯಲ್ಲಿ ಇಡೀ ಪರಿಸರವನ್ನು ಸಮುದಾಯ ವಾತಾವರಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗುತ್ತದೆ. ಇಲ್ಲಿ ರಂಗಾಲಂಕಾರ ಇಲ್ಲವೇ ಇಲ್ಲ. ವೇಷಭೂಷಣ ಪ್ರಸಾದಗಳು ತೀರ ಸರಳ ಸಾಮಾನ್ಯವಾಗಿ ಉಳಿದ ರಂಗಭೂಮಿಗಳಲ್ಲಿ ಕಾಣಸಿಗುವ ಆಭರಣ ವೈಭವಗಳಿಂದ ಮುಕ್ತವಾದವು. ಈ ಪ್ರದರ್ಶನಗಳು ಜಾನಪದ ರಂಗಭೂಮಿಯಲ್ಲಿ ಪ್ರದರ್ಶಕ ಮತ್ತು ಪ್ರೇಕ್ಷಕರನ್ನು ಸ್ಪಷ್ಟವಾಗಿ ಬೇರ್ಪಡಿಸಿ ಕಂಡುಹಿಡಿಯುವುದು ಕಷ್ಟ. ಪ್ರೇಕ್ಷಕರ ಗರಿಷ್ಠ ಮಟ್ಟದ ಭೌತಿಕ ಮಾನಸಿಕ ಸಹಭಾಗಿತ್ವ ಸಾಧ್ಯವಾಗುವುದು ಜಾನಪದ ಆದಿವಾಸಿ ರಂಗಭೂಮಿಯಲ್ಲಿ ಮಾತ್ರ. ಇಲ್ಲಿ ನಟ ಪ್ರೇಕ್ಷಕರ ಮಧ್ಯೆ ಯಾವುದೇ ದಿಕ್ಕಿನಿಂದಲೂ ಪ್ರವೇಶಿಸಬಹುದು. ಅಲ್ಲದೆ, ಆತ ಪ್ರೇಕ್ಷಕರೊಂದಿಗೆ ಬೆರೆತುಕೊಳ್ಳುವುದನ್ನು ಕೂಡ ಎಷ್ಟೋ ಸಲ ಉತ್ತೇಜಿಸಲಾಗುತ್ತದೆ. ಜನಪದ ರಂಗಭೂಮಿ ನಿಜವಾದ ಅರ್ಥದಲ್ಲಿ ಸಮಗ್ರ ರಂಗಭೂಮಿ ಎಂದು ಗುರುತಿಸುತ್ತಾರೆ"[೧೧] ಯಕ್ಷಗಾನ-ಬಯಲಾಟದಂತಹ ರಂಗಭೂಮಿಯಲ್ಲಿ ಪ್ರೇಕ್ಷಕರ ಸನ್ನಿವೇಶವನ್ನು ಗುರುತಿಸಬಹುದು. ಎಪ್ಪತ್ತರ ಕಾಲಘಟ್ಟದಲ್ಲಿ ವಿಶ್ವವಿದ್ಯಾಲಯಗಳು ಜನಪದ ರಂಗಭೂಮಿಯನ್ನು ಕುರಿತು ಸಂಶೋಧನೆಯನ್ನು ಮಾಡಲು ಪ್ರಾರಂಭಿಸಿದವು. ಅಲ್ಲದೇ ಯಕ್ಷಗಾನ-ಬಯಲಾಟಗಳಂತಹ ಪ್ರಕಾರಗಳಿಗೆ ಒತ್ತು ನೀಡಿದವು.

೮.೨. ಜನಪದ ರಂಗಭೂಮಿ: ಅಧ್ಯಯನಗಳ ಸ್ವರೂಪ

ವಸಾಹತು ಕಾಲಘಟ್ಟದಲ್ಲಿ ಕನ್ನಡ ಜನಪದ ರಂಗಭೂಮಿಗೆ ಸಂಬಂಧಿಸಿದ ಯಾವುದೇ ಅಧ್ಯಯನಗಳು ಗಂಭಿರವಾಗಿ ನಡೆಯಲಿಲ್ಲ. ಅಭಿಜಾತ ನಾಟಕ ಪರಂಪರೆಗೆ ಇದ್ದ ಮನ್ನಣೆ ಜಾನಪದ ರಂಗಭೂಮಿ ಪರಂಪರೆಗೆ ದೊರೆಯಲಿಲ್ಲ. ಇತಿಹಾಸಕಾರರು ಸಹ ಜನಪದ ರಂಗಭೂಮಿಯನ್ನು ಗುರುತಿಸದೇ ಹೋದರು. ಆದರೆ ಪಾಶ್ಚಾತ್ಯ ಪ್ರಭಾವದಿಂದ ಉಂಟಾದ ಜಾನಪದ ಅಧ್ಯಯನಗಳು ಈ ಕೊರತೆಯನ್ನು ನೀಗಿಸಿದವು. ಜನಪದ ರಂಗಭೂಮಿಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡದಿದ್ದರೂ, ಜನಪದಗೀತೆ ಸಂಗ್ರಹ ಜೊತೆಗೆ ಬಿಡಿ-ಬಿಡಿ ಅಧ್ಯಯನಗಳು ನಡೆದವು. ೧೯೩೩ರಲ್ಲಿ ಅರ್ಚಕ ಬಿ.ರಂಗಸ್ವಾಮಿ ಅವರು ಜನಪದ ಸಂಸ್ಕೃತಿ ಬಗ್ಗೆ ಆಸಕ್ತಿ ತೋರಿ ತಮ್ಮ ಹುಟ್ಟೂರಿನ 'ಆಚಾರ-ವಿಚಾರ'ಗಳನ್ನು 'ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು' ಕೃತಿಯಲ್ಲಿ ದಾಖಲಿಸಿದ್ದಾರೆ. ಇದರಲ್ಲಿ ತಮ್ಮ ಊರಿನ ಜನಪದ ಸಂಪ್ರದಾಯ, ಕತೆಗಳು, ಗೀತೆಗಳು, ಲಾವಣಿಗಳು, ಗಾದೆಗಳು, ಹಬ್ಬ-ಹರಿದಿನಗಳು, ಜನರ ನಡೆನುಡಿಗಳು, ಯಕ್ಷಗಾನ-ಬಯಲಾಟ, ಜನಪದ ಕಲೆಗಳು, ಕುಣಿತಗಳು ಮುಂತಾದವುಗನ್ನು ವಿವರವಾಗಿ ಸಂಗ್ರಹಿಸಿಕೊಟ್ಟಿದ್ದಾರೆ"[೧೨] ತಮ್ಮ ಊರಿನ ಸಾಹಿತ್ಯಗೀತೆಗಳನ್ನು ಪ್ರಧಾನವಾಗಿ ಸಂಗ್ರಹಿಸಿದ್ದಾರೆ. ಗ್ರಾಮೀಣ ಮಟ್ಟದಲ್ಲಿ ಮನರಂಜನೆಯ ದ್ಯೋತಕವಾಗಿರುವ 'ಯಕ್ಷಗಾನ ಬಯಲಾಟ' ಜನಪದ ರಂಗಭೂಮಿಯನ್ನು ದಾಖಲಿಸಿದ್ದಾರೆ. ಆದರೆ ಪ್ರತ್ಯೇಕವಾಗಿ ಜನಪದ ರಂಗಭೂಮಿ ಕುರಿತು ಅಧ್ಯಯನ ಮಾಡಿಲ್ಲ. ನಂತರ ೧೯೫೭ರಲ್ಲಿ ಸಿಂಪಿ ಲಿಂಗಣ್ಣ ಅವರು 'ಜನಾಂಗದ ಜೀವಾಳ' ಕೃತಿಯಲ್ಲಿ 'ಬಯಲಾಟದ ಪದಗಳು' ಕುರಿತು ದಾಖಲಿಸುತ್ತಾರೆ. ಇದರಲ್ಲಿ ಯಾವುದೇ ವೈಜ್ಞಾನಿಕ ನೆಲೆಯನ್ನು ಕಾಣದಿದ್ದರೂ, ಜನಪದ ರಂಗಭೂಮಿಯ ಪ್ರಕಾರವಾದ ಬಯಲಾಟಗಳನ್ನು ವಿವರಿಸುತ್ತಾರೆ.

ಹೆಡಿಗೆ ಜಾತ್ರೆ(೧೯೮೧) ಕೃತಿಯಲ್ಲಿ ಸಿಂಪಿಲಿಂಗಣ್ಣನವರು ಜನಪದ ರಂಗಭೂಮಿಗೆ ಸಂಬಂಧಿಸಿದ ಮಾಹಿತಿಯನ್ನು ದಾಖಲಿಸುತ್ತಾರೆ. 'ಶ್ರೀಕೃಷ್ಣ ಪಾರಿಜಾತ', ನಾಟಕದ ಕುರಿತು ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. ವಸಾಹತು ಕಾಲದಲ್ಲಿ ಸಾಹಿತ್ಯ ಸಂಗ್ರಹ, ಸಂಪಾದನೆ, ಜೊತೆಗೆ ಜನಪದ ರಂಗಭೂಮಿ ಕುರಿತು ಬಿಡಿ ಬಿಡಿಯಾದ ಅಧ್ಯಯನಗಳು ನಡೆದವು. ಆದರೆ ವಸಾಹತೋತ್ತರ ಕಾಲದಲ್ಲಿ ಸಮಗ್ರವಾಗಿ ಜನಪದ ರಂಗಭೂಮಿ ಅಧ್ಯಯನವನ್ನು ಶೈಕ್ಷಣಿಕ ಮಟ್ಟದಲ್ಲಿ ಸಂಶೋಧನೆ ಮಾಡಲು ಸಾಧ್ಯವಾಯಿತು. "ನಾಟಕ ಹಾಗೂ ರಂಗಭೂಮಿಯ ವಿಷಯದಲ್ಲಿ, ಇತ್ತೀಚಿನವರೆಗೆ ಪ್ರೌಢವೆನಿಸುವ ಯಾವ ಸಂಶೋಧನೆಯೂ ನಡೆದಿರಲಿಲ್ಲ, ಅಥವಾ ನಡೆದಿದ್ದರೆ, ಅಂತಹ ಸಾಹಿತ್ಯ ಸಾಮಾಗ್ರಿಯ ಉಪಲಬ್ಧವಾಗಿರಲಿಲ್ಲ"[೧೩] ಎಂಬ ಮಾತನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

ಕನ್ನಡದ ಸಂದರ್ಭದಲ್ಲಿ ಜನಪದ ರಂಗಭೂಮಿ ಕುರಿತು ಪ್ರತ್ಯೇಕ ಅಧ್ಯಯನಗಳು ನಡೆಯಲಿಲ್ಲ. ಅದರಲ್ಲೂ ಜಾನಪದ ರಂಗಭೂಮಿಯು ಅಭಿಜಾತ ನಾಟಕ ಪರಂಪರೆಯ ನಡುವೆ ತನ್ನ ಅಸ್ತಿತ್ವವನ್ನು

ಕಳೆದುಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಕೆಲವು ವಿದ್ವಾಂಸರು ಜಾನಪದ ರಂಗಭೂಮಿ ಕುರಿತು ಸಂಶೋಧನೆ ಕೈಗೊಂಡರು. ಡಾ.ಚಂದ್ರಶೇಖರ ಕಂಬಾರ, ಡಿ.ಕೆ.ರಾಜೇಂದ್ರ, ಬಸವರಾಜ ಮಲಶೆಟ್ಟಿ, ಎಚ್.ಕೆ.ರಂಗನಾಥ್, ಕೆ.ದುರ್ಗಾದಾಸ್, ಶ್ರೀರಾಮ ಇಟ್ಟಣ್ಣನವರು, ಇತ್ಯಾದಿ. ವಿದ್ವಾಂಸರು ಪ್ರಾದೇಶಿಕವಾಗಿ ಜಾನಪದ ರಂಗಭೂಮಿಯನ್ನು ಕೇಂದ್ರಿಕರಿಸಿಕೊಂಡು ಅಧ್ಯಯನ ಮಾಡಿದರು. ಕನಾಟಕದ ಪ್ರಾದೇಶಿಕ ಭೌಗೋಳಿಕ ವೈವಿಧ್ಯ ಮತ್ತು ವ್ಯಾಪ್ತಿಗೆ ಅನುಗುಣವಾಗಿ ಕರ್ನಾಟಕದ ಜನಪದ ವೃಂದಗಳು ಅಗುಣಿತ, ಅಲೆಮಾರಿ, ಅರೆಅಲೆಮಾರಿ, ಬುಡಕಟ್ಟು, ಕುಲಗುಂಪು, ಕೃಷಿ ಸಮುದಾಯ, ಮುಂತಾದವು. ಆಯಾವೃಂದ, ಹೊಂದಿರುವ ವೃತ್ತಿ, ವೇಷಭೂಷಣ, ಆಹಾರ, ನಂಬಿಕೆ, ಆರಾಧನೆ, ಆಚರಣೆ, ಕುಣಿತಗಳಿಗೆ ಅನುಗುಣವಾಗಿ ಈ ಪ್ರತಿಯೊಂದನ್ನು, ಒಂದೊಂದು ಸಾಂಸ್ಕೃತಿಕ ಗುಂಪು ಅಥವಾ ಸಾಂಸ್ಕೃತಿಕ ಘಟಕ ಎಂದು ಗುರುಸಲಾಗಿದೆ. ಇದು ಜನಪದ ಕಲೆ ಮತ್ತು ಜನಪದ ರಂಗಭೂಮಿಯ ಅಧ್ಯಯನಗಳ ದೃಷ್ಟಿಯಿಂದ ಮಹತ್ವದ ಕ್ರಮ ಉತ್ತರ–ದಕ್ಷಿಣ ಕರಾವಳಿ, ಮಲೆನಾಡು, ಗುಡ್ಡಗಾಡು, ಬಯಲುಸೀಮೆ, ಮೊದಲಾದ ಜನಪದ ಕಲೆ, ಮತ್ತು ರಂಗ ರೂಪುಗಳು ಕೆಲವೊಂದು ಸಂಗತಿಗಳಲ್ಲಿ ಸಾಮ್ಯತೆಯ ಗುಣಲಕ್ಷಣಗಳನ್ನು ಹೊಂದಿರಬಹುದಾದರೂ ಉತ್ತರ ಕರ್ನಾಟಕವೆಂದೂ ಕರೆಯಿಸಿಕೊಳ್ಳುವ ಬಳ್ಳಾರಿ, ಧಾರವಾಡ, ಬೆಳಗಾವಿ, ಬಿಜಾಪುರ, ಕಲಬುರ್ಗಿ ಬೀದರ ಮತ್ತು ರಾಯಚೂರು ಪ್ರದೇಶಗಳ ಜನಪದ ರಂಗಭೂಮಿ ತನ್ನದೇ ಆದ ವಿಶಿಷ್ಟ ರಂಗ ಪ್ರಕಾರ, ರೂಪಕಗಳನ್ನು ಉಳಿಸಿಬೆಳೆಸಿಕೊಂಡು ಬಂದಿರುವುದು ಕುತೂಹಲಕಾರಿಯಾಗಿದೆ.

ಶಿವರಾಮ ಕಾರಂತರು 'ಯಕ್ಷಗಾನ–ಬಯಲಾಟ' ಗ್ರಂಥದಲ್ಲಿ ಪ್ರಾದೇಶಿಕ ಕಲೆಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಯಕ್ಷಗಾನದ ತೆಂಕುತಿಟ್ಟು, ಬಡಗುತಿಟ್ಟು ಇವುಗಳ ವೈಶಿಷ್ಟ್ಯವನ್ನು ಚರ್ಚಿಸಿದ್ದಾರೆ. ಅಕಾಡೆಮಿಕ್ ನೆಲೆಯಲ್ಲಿ ಕಂಬಾರರು ಜನಪದ ರಂಗಭೂಮಿಯ ಬಗ್ಗೆ ಪ್ರಜ್ಞಾಪೂರ್ವಕವಾಗಿ ತಾತ್ವಿಕತೆಯನ್ನು ಆಳವಾಗಿ ಕಟ್ಟಿಕೊಡುತ್ತಾರೆ. ಕಂಬಾರರ ಚಿಂತನೆಗಳನ್ನು ಡಿ.ಆರ್.ನಾಗರಾಜ ಅವರು ಗುರುತಿಸುವಂತೆ "ಕಂಬಾರರ ಪ್ರಕಾರ ಯಾವುದೇ ಬಯಲಾಟಕ್ಕೆ ಎರಡನೆ ಪ್ರಯೋಗ ಸಾಧ್ಯವಾಗುವುದಿಲ್ಲ ಆಗ ಅದು ಬೇರೆಯೇ ಆಗಿರುತ್ತದೆ. ಏಕೆಂದರೆ ಇದು ಲಿಖಿತ ಪ್ರಮಾಣಗಳಿಲ್ಲದ ತೋಂಡಿ ಸಂಪ್ರದಾಯದಿಂದ ಬಂದದ್ದು. ಪುನರಾವೃತ್ತಿಯೇ ಮುಖ್ಯ ಸತ್ವವಾಗಿರುವ, ಮುಂದುವರಿಯುವ ಖಚಿತ ರಚನೆಗಳೇ ಪರಂಪರೆಯಾದ್ದರಿಂದ, ಈ ವಾದ ಬಯಲಾಟಗಳಿಗೆ ಖಚಿತ ಪ್ರಮಾಣಗಳಿರುವ ಪರಂಪರೆಯ ಅಸ್ತಿತ್ವವನ್ನೇ ಸೂಕ್ಷ್ಮವಾಗಿ ಅಲ್ಲಗಳೆಯುತ್ತದೆ. ಬಯಲಾಟಕ್ಕೆ ಲಿಖಿತ ಪಠ್ಯವೊಂದು ಇರುವುದಿಲ್ಲ ಎನ್ನುವುದು ಸತ್ಯವಾದರೂ. ಇಲ್ಲಿರುವ ಪಠ್ಯಗಳು ಅಲಿಖಿತ ತೋಂಡಿ ಸಂಪ್ರದಾಯದ ವೈಶಿಷ್ಟ್ಯ ಇರುವುದು ಇಲ್ಲಿಯೆ"[೧೨] ಸಾಂಪ್ರದಾಯಿಕ ರಂಗಭೂಮಿಯ ಈ ವೈಶಿಷ್ಟ್ಯವನ್ನು ಕಂಬಾರರ ಚಿಂತನೆಗಳಲ್ಲಿ ಡಿ.ಆರ್.ನಾಗರಾಜ ಗುರುತಿಸುತ್ತಾರೆ. ಕನ್ನಡ ಜನಪದ ರಂಗಭೂಮಿ ಬಿಡಿ–ಬಿಡಿ ಪ್ರಯೋಗಗಳಲ್ಲಿ ಬಳಸಿಕೊಳ್ಳುವ ಪಠ್ಯದ ಬಂಧವನ್ನು ಕುರಿತು ವಿವರಿಸುತ್ತಾರೆ.

ಎಚ್.ಕೆ.ರಾಮನಾಥ್‌ರವರ 'ಕನ್ನಡ ರಂಗಭೂಮಿ ವಿಕಾಸ'(೧೯೯೦) ಸಮಗ್ರ ಕರ್ನಾಟಕ ವಿಕಾಸವನ್ನು ರೂಪಿಸುವ ಗ್ರಂಥ. ಈ ಗ್ರಂಥದ ಎರಡನೆಯ ಭಾಗ ಕರ್ನಾಟಕ ಜನಪದ ರಂಗಭೂಮಿಗೆ ಮೀಸಲಾಗಿದ್ದು ಜನಪದ ರಂಗ ಕಲೆಗಳು ವಿಕಾಸ ಹೊಂದಿದ ಬಗೆಯನ್ನು ಸಾಧಾರವಾಗಿ ರೂಪಿಸಲಾಗಿದೆ. ೧೯೮೩ರಲ್ಲಿ ಹೊರಬಂದ ಬಸವರಾಜ ಮಲಶೆಟ್ಟಿ ಅವರ 'ಉತ್ತರ ಕರ್ನಾಟಕದ ಬಯಲಾಟಗಳು' ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಆ ಭಾಗದ ಬಯಲಾಟಗಳನ್ನು ಕುರಿತ ಸಂಶೋಧನಾ ಪ್ರಬಂಧ. ಉತ್ತರ ಕರ್ನಾಟಕದ ಬಯಲಾಟದ ವಿವಿಧ ಪ್ರಕಾರಗಳ ಒಂದು ಸ್ಪಷ್ಟ ನೋಟವನ್ನು ಮಲಶೆಟ್ಟಿ ಒದಗಿಸಿದ್ದಾರೆ. "ಶ್ರೀಕೃಷ್ಣ ಪಾರಿಜಾತ" ಶ್ರೀರಾಮ ಇಟ್ಟಣ್ಣನವರ ಅವರ ಪಿಎಚ್.ಡಿ ಪ್ರಬಂಧವಾಗಿದೆ. ಉತ್ತರ ಕರ್ನಾಟಕದ ಜನಪ್ರಿಯ ಬಯಲಾಟ ಪ್ರಕಾರಗಳಲ್ಲಿ ಮಹತ್ವದ್ದಾದ ಪಾರಿಜಾತ ಕುರಿತ ಈ ಅಧ್ಯಯನ ಈವರೆಗೆ ಬಂದಿರುವ ಅಧ್ಯಯನಗಳಿಗಿಂತ ಬೇರೆಯಾದುದು. ಹೀಗೆ ಜನಪದ ರಂಗಭೂಮಿಗೆ ಸಂಬಂಧಿಸಿದ ಅನೇಕ ಅಧ್ಯಯನಗಳು ವಸಾಹತೋತ್ತರ ಕಾಲದಲ್ಲಿ ನಡೆದಿರುವುದನ್ನು ಗುರುತಿಸಬಹುದು.

ವಸಾಹತುಶಾಹಿ ಸಂದರ್ಭದಲ್ಲಿ ಜಾನಪದ ಸಾಹಿತ್ಯವು ಪ್ರತಿಕ್ರಿಯೆ ನೀಡಿದ್ದಷ್ಟು 'ಜನಪದ ರಂಗಭೂಮಿ' ಪ್ರತಿಕ್ರಿಯೆ ನೀಡುವಂತಹ ಅಧ್ಯಯನಗಳು ಕನ್ನಡದಲ್ಲಿ ಗುರುತಿಸಲು ಸಾಧ್ಯವಾಗುವುದಿಲ್ಲ. "೧೪ನೇ ಶತಮಾನದ ಮಧ್ಯಭಾಗದಲ್ಲಿ ವಸಾಹತುಶಾಹಿ ಅನುಭವಕ್ಕೆ ನಮ್ಮ ಈ ಜಾನಪದ ಸಾಂಪ್ರದಾಯಿಕ ರಂಗಭೂಮಿ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿತು ಎಂಬುದನ್ನು ನಾವೀಗ ಗಮನಿಸಬೇಕು. ಈ ಪ್ರಶ್ನೆ ಜಟಿಲವಾದದ್ದು, ಆವತ್ತಿನಿಂದ ಇವತ್ತಿನವರೆಗೂ ನಡೆದಿರುವ ನಮ್ಮ ಜಾನಪದ ಸಂಶೋಧನೆಗಳು ಬಹಳ ವಿಪುಲವಾಗಿ ವಿಸ್ತಾರವಾಗಿ ಹರಡಿದ್ದರೂ ಜಾನಪದ ಸಾಂಪ್ರದಾಯಿಕ ರಂಗಭೂಮಿಯು ಆಧುನಿಕತೆಗೆ ಹೇಗೆ ಪ್ರತಿಕ್ರಿಯಿಸಿದೆ ಎಂಬ ಪ್ರಶ್ನೆಯನ್ನು ಗಮನಿಸಿಯೇ ಇಲ್ಲ ಇದಕ್ಕೆ ಈ ಸಂಶೋಧನೆಗಳು ಜಾನಪದ ರಂಗಭೂಮಿಯನ್ನು ಆಧುನಿಕ ಕಾಲದಲ್ಲೂ ಬದಲಾಗದೇ ಉಳಿದಿರುವ ಪರಂಪರೆಯ ಪಳಿಯುಳಿಕೆ ಎಂಬಂತೆಯೇ ನೋಡಿವೆ"[೧೫] ಈ ಕಾರಣಕ್ಕಾಗಿಯೇ ಹಲವು ಜಾನಪದ ವಿದ್ವಾಂಸರು ವಸಾಹತು ಕಾಲದಲ್ಲಿ ಜನಪದ ಗೀತ ಪ್ರಕಾರಗಳನ್ನಷ್ಟೇ ಪರಿಗಣಿಸಿದ್ದರು. ಜನಪದ ರಂಗಭೂಮಿಯು ಪ್ರತ್ಯೇಕವಾಗಿ ವಸಾಹತುಶಾಹಿಗೆ ನೇರವಾಗಿ ಪ್ರತಿಕ್ರಿಯೆ ನೀಡಲಿಲ್ಲ ಎಂಬುದು ತಿಳಿಯುತ್ತದೆ.

೮.೩. ಜನಪದ ರಂಗಭೂಮಿ ಕುರಿತ ಅಧ್ಯಯನಗಳ ವಿಶ್ಲೇಷಣೆಗಳು

ಜನಪದ ರಂಗಭೂಮಿ ಕುರಿತಂತೆ ಹಲವು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಡಾ.ಶಿವರಾಮ ಕಾರಂತ, ಡಾ.ಚಂದ್ರಶೇಖರ ಕಂಬಾರ, ಡಾ.ಜೀ.ಶಂ.ಪರಮಶಿವಯ್ಯ, ಡಾ.ಡಿ.ಕೆ. ರಾಜೇಂದ್ರ, ಡಾ.ಬಸವರಾಜ ಮಲಶೆಟ್ಟಿ, ಡಾ.ಎಂ.ಓ.ಧೂಪದ್, ಎಂ.ಪ್ರಭಾಕರ ಜೋಶಿ, ಡಾ.ಓ.ಶಿ.ರಾಮಚಂದ್ರೇಗೌಡ, ಡಾ. ಕೆ.ಚಿನ್ನಪ್ಪಗೌಡ, ರಾಘವ ನಂಬಿಯಾರ್, ಡಾ.ಕೆ.ದುರ್ಗಾದಾಸ್,

ಮುಂತಾದವರು. ಇವರು ಸಮಗ್ರ ಜನಪದ ರಂಗಭೂಮಿ ಕುರಿತು ಅಧ್ಯಯನ ನಡೆಸದೆ, ಪ್ರಾದೇಶಿಕವಾಗಿ ಬಿಡಿ ಬಿಡಿಯಾಗಿ ಅಧ್ಯಯನ ಮಾಡಿದ್ದಾರೆ. ಕೆಲವೆಡೆ ಪ್ರಾದೇಶಿಕವಾಗಿ ಕಲೆಯೇ ಇಲವೆಂಬ ಸಂಗತಿಯನ್ನು ಇವರ ಅಧ್ಯಯನಗಳಲ್ಲಿ ತಿಳಿಸುತ್ತಾರೆ.

ಜನಪದ ರಂಗಭೂಮಿ ಪ್ರಾದೇಶಿಕವಾಗಿ ಸಂಸ್ಕೃತೀಕರಣಗೊಂಡು ಭೂಗೋಳ, ಇತಿಹಾಸ ಹಾಗೂ ಜನಾಂಗದ ಅಭಿವ್ಯಕ್ತಿಯಾಗಿರುತ್ತದೆ. "ಒಂದು ಸಂಸ್ಕೃತಿಯ ಕಲೆ ಮತ್ತೊಂದು ಸಂಸ್ಕೃತಿಗೆ ಗುಣಾತ್ಮಕವಾಗಿ ಬೇರೆಯಾಗುವುದು ಇದೆ. ಈ ಹಿನ್ನೆಲೆಯಿಂದ ಒಂದೇ ಸಂಸ್ಕೃತಿಯುಳ್ಳ ಪರಿಣಾಮದಿಂದ ಯಕ್ಷಗಾನದಂತಹ ಬಯಲಾಟವು ಕರ್ನಾಟಕದ ಇನ್ನಿತರ ಪ್ರಕಾರಗಳಿಗೆ ಸರಿಸಮಾನಾಗಿ ನಿಲ್ಲುತ್ತದೆ"[೧೬] "ಭಾರತದಾದ್ಯಂತ ಯಕ್ಷಗಾನವನ್ನು ಹೋಲುವ ವಿವಿಧ ಸಂಪ್ರದಾಯಗಳು ಇವೆ. ಕೇರಳದ ರಾಮನಾಟ್ಯ, ಮೋಹಿನಿಯಾಟ್ಟಂ, ಕಥಕ್ಕಳಿ ತಮಿಳುನಾಡಿನ ತೆರಕೂತ್ತು, ಭಾಗವತ ಮೇಳ, ಆಂಧ್ರದ ವೀಧಿನಾಟಕ, ಕೂಚಿಪುಡಿ, ಮಹಾರಾಷ್ಟ್ರದ ತಮಾಷಾ, ಬಂಗಾಲದ ಜಾತ್ರೆ, ಉತ್ತರ ಪ್ರದೇಶದ ರಾಮಲೀಲಾ, ಒರಿಸ್ಸಾದ ಚಾರಂಗ ಭೂಮಿ ಅಸ್ಸಾಮಿನ ಅಂತಿಯಾಟ ಮುಂತಾದ ನೃತ್ಯ ನಾಟಕ ಸಂಪ್ರದಾಯಗಳೊಂದಿಗೆ ಯಕ್ಷಗಾನ ಬಯಲಾಟವನ್ನು ಹೋಲಿಸಿ ನೋಡಬಹುದು ಎಂದು ವಿದ್ವಾಂಸರು ಹೇಳುತ್ತಾರೆ"[೧೭] ಆದರೆ ಕನ್ನಡದಲ್ಲಿ ವಿಶಿಷ್ಟ ಪ್ರಕಾರವಾಗಿ ಸಿಗುವ ಪಗರಣ, ನಾಳ್ಪಗರಣ, ಆಳು ಮಕ್ಕಳ, ದಟ್ಟಿಯ ಕುಣಿತ, ಹಗರಣಗಳು, ಹಾಸ್ಯಗಾರರು, ಭಾಗವತರು, ಬಹುರೂಪಿಗಳು, ದಾಸರು, ಗೊಂದಲಿಗರು, ಜೋಗಿಗಳು ಕಥೆಗಾರರು ಮುಂತಾದವರಿಂದ ಪರಿಷ್ಕಾರಗೊಳ್ಳುತ್ತಾ ನಡೆದು ಮುಂದೆ ದ್ರಾವಿಡರಿಗೆ ಆರ್ಯರ ಸಂಪರ್ಕ ಬಂದ ಮೇಲೆ ಸಂಸ್ಕೃತಿ ಮಹಾಕಾವ್ಯ ನಾಟಕಾದಿಗಳ ಶೃಂಗಾರ ವೀರಾದಿ ನವರಸಯುಕ್ತ ಕಥಾನಕಗಳನ್ನು ರಂಗುರಂಗಿನ ವೇಷಭೂಷಣಗಳೊಂದಿಗೆ ದೇವರ ಹೆಸರಿನಲ್ಲಿ ಅಭಿನಯಿಸುವ, ಅಭಿನಯಿಸಿ ಹರಕೆಯೊಪ್ಪಿಸುವ ಪರಂಪರೆ ಬೆಳೆದು ಇಂದಿನ ನಮ್ಮ ಬಯಲಾಟಗಳು ರೂಪುಗೊಂಡಿರಬೇಕೆಂದು ಎನ್. ಆರ್. ನಾಯಕ ಅಭಿಪ್ರಾಯ ಪಡುತ್ತಾರೆ. "ವಾಸ್ತವವಾಗಿ ಯಕ್ಷಗಾನ ಎಂಬ ಪದವು ಬಯಲು ಸೀಮೆಯಲ್ಲಿ ಕೇಳಿಬರುವುದಿಲ್ಲ. ಇಲ್ಲಿರುವುದೇನಿದ್ದರೂ, ಅಟ್ಟದಾಟ, ಬಯಲಾಟ, ಬಯಲು ನಾಟಕ, ಬಯಲುಕಥೆ ಎಂಬ ಪದಗಳಷ್ಟೇ ರೂಢಿಯಲ್ಲಿರುವುದು ಮೂಡಲಪಾಯ-ಪಡುವಲಪಾಯ, ದೊಡ್ಡಾಟ, ಇವೆಲ್ಲವೂ ವಿದ್ವಾಂಸರು ಬಯಲಾಟದ ವಿಂಗಡಣೆಯ ಸೌಲಭ್ಯಕ್ಕಾಗಿ, ರೂಢಿಸಿಕೊಂಡ ಪದಗಳಾಗಿವೆ. ಮೊದಲಿಗೆ ಕಥೆಯಾಗಿ, ಅನಂತರ ಆಟವಾಗಿ ಕ್ರಮೇಣ, ನಾಟಕವಾಗಿ, ರೂಪುಗೊಂಡಿರುವ ರಂಗಭೂಮಿಯ ಇತಿಹಾಸದ ಕಥನವನ್ನು ನಮ್ಮ ಹಳ್ಳಿಗಾಡಿನ ಜನರು ನಿರ್ದೇಶಿಸುವ ಪದಗಳು ಸಂಕೇತಿಸುತ್ತವೆ"[೧೮] ಜನಪದ ಅಧ್ಯಯನಕಾರರು ರೂಪಿಸಿಕೊಂಡ ಜನಪದ ವರ್ಗೀಕರಣವನ್ನು ಪ್ರಾದೇಶಿಕವಾಗಿ ಭಿನ್ನ ರೂಪ ತಳೆಯುವುದನ್ನು ಗುರುತಿಸುತ್ತಾರೆ. "ಉತ್ತರ ಕರ್ನಾಟಕದಲ್ಲಿ ದೊಡ್ಡಾಟ, ದಕ್ಷಿಣ ಕರ್ನಾಟಕದಲ್ಲಿ ಮೂಡಲಪಾಯ, ಕರಾವಳಿಯಲ್ಲಿ ಯಕ್ಷಗಾನ ಎಂಬ ಹೆಸರುಗಳಲ್ಲಿ ಪ್ರಚಲಿತವಿರುವ ಈ ಬಯಲಾಟ ಸಂಪ್ರದಾಯ

ಮೂಲದಲ್ಲಿ ಒಂದೇ ಆಗ್ಗಿದಂತೆ ತೋರುತ್ತದೆ. ಅಷ್ಟೇ ಅಲ್ಲ ದಕ್ಷಿಣ ಭಾರತದ ಪ್ರಸಿದ್ಧ, ನಾಟ್ಯ ಕಲೆಗಳಾದ ಕಥಕ್ಕಳ್ಳಿ, ಕೂಚಿಪುಡಿ, ತೆರಕ್ಕೂತ್ತು. ಬಯಲಾಟಗಳಲ್ಲೆ ಒಂದೇ ಮೂಲದಿಂದ ಕಾಲಾನುಕ್ರಮದಲ್ಲಿ ಪ್ರಾದೇಶಿಕ ಭಿನ್ನತೆಯೊಂದಿಗೆ ಭಿನ್ನ ಕಲೆಗಳಾಗಿ ಬೆಳವಣಿಗೆ ಹೊಂದಿವೆ ಎಂದು ಊಹಿಸಲು ಸಾಕಷ್ಟು ಆಧಾರಗಳಿವೆ"[೧೯]

ಕನ್ನಡ ಜನಪದ ರಂಗಭೂಮಿಯಲ್ಲಿ ಬಯಲಾಟಕ್ಕೆ ಪ್ರಮುಖ ಸ್ಥಾನವಿದೆ. ನಾಡಿನಾದ್ಯಂತ ವಿವಿಧ ಸ್ವರೂಪಗಳಲ್ಲಿ ಪ್ರಚಲಿತದಲ್ಲಿರುವ ಬಯಲಾಟ ಕೂಡ ದೇವಸ್ಥಾನಗಳಲ್ಲಿನ ಆರಾಧನೆಯ ಅಂಗವಾಗಿ ಬೆಳೆದುಬಂದಿತೆಂಬುದೇ ನಂಬಿಕೆ. "ಡಾ.ಶಿವರಾಮ ಕಾರಂತರೂ ಯಕ್ಷಗಾನಕ್ಕೆ ನಾಗಾರಾಧನೆ ಮತ್ತು ಭೂತಾರಾಧಾನೆಯಂತಹ ಧಾರ್ಮಿಕ ಆಚರಣೆಗಳೇ ಕಾರಣ ಎಂದು ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಕನ್ನಡದ ಯಕ್ಷಗಾನದ ವಿಚಾರದಲ್ಲಿ ಇದು ಸರಿ ಇರಬಹುದು. ಆದರೆ ಬಯಲುಸೀಮೆಯಲ್ಲಿರುವ ದೊಡ್ಡಾಟ ಬಯಲಾಟಗಳನ್ನು ಕುರಿತು ಹೇಳುವುದಾದರೆ, ಅವು ಗ್ರಾಮದೇವತೆಗಳ ಅಂಗಳದಲ್ಲಿ ನಡೆಯುತ್ತಿದ್ದ ಆಚರಣೆಗಳ ನಡುವಿನ ಸೋಗುಗಳ ಮುಂದುವರಿಕೆಗೆ ಎಂದು ಹೇಳಬಹುದು. ಇಂತಹ ಆರಾಧನೆಯ ಹಲವು ಕ್ರಿಯೆಗಳು ನಾಟ್ಯಾಂಶ ಪಡೆದು ಜನಪದ ಕಲೆಗಳಾದವು. ಆ ಕಲೆಗಳೇ ಮುಂದೇ ಪರಿವರ್ತನೆಗೊಳ್ಳುತ್ತ ರಂಗಭೂಮಿಯನ್ನು ಸೃಷ್ಟಿಸಿದವು"[೨೦] ನಾಟಕಾಂಶ ಬೆರೆತ ಆಚರಣ ವಿಧಿಗಳು ದಿನಗಟ್ಟಲೆ ನಡೆಯುವಂತೆ ಅದರಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಮನರಂಜನೆಯಾಗಿಯೂ ಪರಿಗಣಿಸಿದ ಮಹತ್ವದ ಘಟ್ಟವೇ ಯಕ್ಷಗಾನವೂ ಸೇರಿದಂತೆ ಇವತ್ತಿನ ಬಯಲಾಟದ ರಂಗಕ್ಕೆ ಪೂರಕವಾಗಿದೆ.

ಯಕ್ಷಗಾನ ಎಂಬ ಪದ ಬಯಲು ಸೀಮೆಯಲ್ಲಿ ರೂಢಿಗೆ ಬಂದದ್ದಲ್ಲ. ಬಹುಶಃ ಕರಾವಳಿಯಲ್ಲಿಯೂ ಮೊದಲಿಗೆ ಬಯಲಾಟ ಎಂದೇ ಇದನ್ನು ಕರೆಯಲಾಗುತ್ತಿತ್ತು. ತದನಂತರದಲ್ಲಿ ಯಕ್ಷಗಾನ ಎಂಬ ಹೆಸರು ಯಾವಾಗ ಅಂಟಿಕೊಂಡಿತೆಂಬುದು ಗೊತ್ತಿಲ್ಲ. ಬಯಲು ಸೀಮೆಯ ಬಯಲಾಟದಲ್ಲಿ ಎರಡು ವಿಧಗಳಿವೆ. ಉತ್ತರ ಕರ್ನಾಟಕದ ದೊಡ್ಡಾಟ. ದಕ್ಷಿಣ ಕರ್ನಾಟಕದ ಬಯಲಾಟ. ಆದರೆ ಇಡೀ ಕನ್ನಡ ನಾಡಿನ ಈ ಬಯಲಾಟಗಳನ್ನು ಹಾಗೂ ಅವುಗಳ ಪ್ರಾದೇಶಿಕ ವ್ಯತ್ಯಾಸಗಳನ್ನು ತಿಳಿಯುವ ಉದ್ದೇಶದಿಂದ ಬಯಲು ಸೀಮೆಯ ಪ್ರಕಾರವನ್ನು 'ಮೂಡಲಪಾಯ' ಯಕ್ಷಗಾನವೆಂದೂ ಕರೆಯಲಾಯಿತು ಮತ್ತು ಕರಾವಳಿಯ ಉತ್ತರಭಾಗದ (ಉಡುಪಿಯಿಂದ ಕಾರವಾರದವರೆಗೆ) ಪ್ರಕಾರವನ್ನು 'ಬಡಗುತಿಟ್ಟು' ಎಂದು ದಕ್ಷಿಣದ (ಉಡುಪಿಯಿಂದ ಕಾಸರಗೋಡಿನವರೆಗೆ) ಪ್ರಕಾರವನ್ನು 'ತೆಂಕುತಿಟ್ಟು' ಎಂದೂ ಹೆಸರಿಸಲಾಯಿತು. ಈ ನೆಲೆಯಲ್ಲಿ ಸುಶಿಕ್ಷಿತರು ವರ್ಗೀಕರಣ ಮಾಡಿಕೊಂಡು ಪ್ರಾದೇಶಿಕವಾಗಿ ಒಂದೊಂದು ಜನಪದ ರಂಗಭೂಮಿಯನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆ ಮಾಡಿದರು. ಅದರಲ್ಲಿ ಮುಖ್ಯವಾಗಿ ಡಾ.ಚಂದ್ರಶೇಖರ ಕಂಬಾರರು 'ಉತ್ತರ ಕರ್ನಾಟಕದ ಜನಪದ ರಂಗಭೂಮಿ'(೧೯೬೫) ಡಾ.ಬಸವರಾಜ ಮಲಶೆಟ್ಟ 'ಉತ್ತರ ಕರ್ನಾಟಕದ ಬಯಲಾಟಗಳು(೧೯೮೩)

ಡಾ.ಡಿ.ಕೆ.ರಾಜೇಂದ್ರ "ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ"(೧೯೮೦) ಡಾ. ಕೆ.ದುರ್ಗಾದಾಸ್, 'ಬಳ್ಳಾರಿ ಜಿಲ್ಲೆಯ ಬಯಲಾಟಗಳು"(೧೯೯೪)' ಶ್ರೀ ರಾಮ ಇಟ್ಟಣವರ 'ಶ್ರೀಕೃಷ್ಣ ಪಾರಿಜಾತ'(೧೯೯೧) ಇತ್ಯಾದಿ. ಇವರ ಜನಪದ ರಂಗಭೂಮಿಯ ಅಧ್ಯಯನಗಳು ಪ್ರಾದೇಶಿಕ ನೆಲೆಯನ್ನು ಕಟ್ಟಿಕೊಡುತ್ತವೆ. ಡಾ.ಶಿವರಾಮ ಕಾರಂತರು ಆಸಕ್ತಿದಾಯಕ ನೆಲೆಯಲ್ಲಿ ಸ್ವತಃ ತಾವೇ ಯಕ್ಷಗಾನದಲ್ಲಿ ಭಾಗವಹಿಸುವುದರೊಂದಿಗೆ ಕ್ಷೇತ್ರಕಾರ್ಯಮಾಡಿ 'ಯಕ್ಷಗಾನ ಬಯಲಾಟ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಶಿವರಾಮ ಕಾರಂತರು ಗುರುತಿಸುವಂತೆ ಪಡುವಲಪಾಯ ಯಕ್ಷಗಾನಕ್ಕೆ ಸೇರಿದ್ದಾದರೂ ಅದರಲ್ಲಿಯೂ ಬಡಗತಿಟ್ಟನ್ನು ಮಾತ್ರ ಒಳಗೊಂಡದ್ದು, ಎಂಬುದು ಗಮನಾರ್ಹ. ತೆಂಕುತಿಟ್ಟು ಹೆಸರಿಗಷ್ಟೇ ಇರುವಂತಹದು ಎಂದು ಹೇಳುವ ಅವರು, ಮೂಡಲಪಾಯ ಯಕ್ಷಗಾನದ ಪ್ರಸ್ತಾಪವನ್ನೇ ಎತ್ತದಿರುವುದು ಆಶ್ಚರ್ಯ. ಡಾ.ಎಚ್.ಕೆ. ರಂಗನಾಥ ಅವರು 'ಇಂಗ್ಲಿಷ್'ನಲ್ಲಿ ಬರೆದಿರುವ 'The Karnataka Theatar' ಎಂಬ ಕೃತಿ ಸ್ವಲ್ಪಮಟ್ಟಿಗೆ ಸಮಗ್ರ ಕರ್ನಾಟಕದ ರಂಗಭೂಮಿಯನ್ನು ಒಳಗೊಂಡಿದ್ದಾದರೂ, ಅದರಲ್ಲಿ ಜನಪದ ರಂಗಭೂಮಿಗೆ ನೀಡಿರುವ ಪ್ರಾಶಸ್ತ್ಯ ಅಷ್ಟಕಷ್ಟೆ ವಿವರಣೆ ನೀಡಿದ್ದಾರೆ.

ಜಾನಪದ ರಂಗಭೂಮಿಯ ಪ್ರಕಾರಗಳಾದ, ಯಕ್ಷಗಾನ ಬಯಲಾಟ, ದೊಡ್ಡಾಟ, ಬಯಲಾಟ, ಸಣ್ಣಾಟ, ದಾಸರಾಟ, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ, ಶ್ರೀಕೃಷ್ಣಪಾರಿಜಾತ, ಸಂಗ್ಯಾಬಾಳ್ಯ, ಮುಂತಾದ ಪ್ರಕಾರಗಳು ಪ್ರಾದೇಶಿಕ ವೈಶಿಷ್ಟ್ಯತೆಯಿಂದ ಕೂಡಿದ್ದಾಗಿವೆ. ಹಾಗಾಗಿ ಈ ಪ್ರಕಾರಗಳನ್ನು ಒಬ್ಬೊಬ್ಬ ವಿದ್ವಾಂಸರು ಪ್ರಾದೇಶಿಕವಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸಿದ್ದಾರೆ. ಉತ್ತರ ಕರ್ನಾಟಕದ ಭಾಗದ ಜನಪದ ರಂಗಭೂಮಿಯನ್ನು ಸಂಶೋಧನೆ ನಡೆಸಿರುವ ಚಂದ್ರಶೇಖರ ಕಂಬಾರ, ಬಸವರಾಜ ಮಲಶೆಟ್ಟಿ. ದಕ್ಷಿಣ ಭಾಗದಲ್ಲಿ ಡಿ.ಕೆ.ರಾಜೇಂದ್ರ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆ.ದುರ್ಗಾದಾಸ್ ಮುಂತಾದ ಪ್ರಮುಖ ವಿದ್ವಾಂಸರನ್ನು ಗುರುತಿಸಬಹುದು. ದಕ್ಷಿಣ ಕರ್ನಾಟಕ ಭಾಗದಲ್ಲಿ ಅಧ್ಯಯನ ಮಾಡಿರುವ ಡಿ.ಕೆ.ರಾಜೇಂದ್ರರ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ' ಸಂಶೋಧನಾ ಪ್ರಬಂಧದಲ್ಲಿ ಅವರು ಅನುಸರಿಸಿದ ಅಧ್ಯಯನ ಕ್ರಮ, ಮಾದರಿ, ಸೈದ್ಧಾಂತಿಕತೆಯು ಒಂದು ಪ್ರದೇಶದ ಸಾಂಸ್ಕೃತಿಕ ವಲಯವನ್ನು ನಿರ್ಮಿಸುತ್ತದೆ. ಮೂಡಲಪಾಯದಲ್ಲಿ ಉತ್ತರ ಸಂಪ್ರದಾಯ, ದಕ್ಷಿಣ ಸಂಪ್ರದಾಯ ಎರಡು ಪ್ರಾಂತ ಭೇದಗಳು ಒಳಗೊಂಡಿದ್ದು, 'ಬಳ್ಳಾರಿ, ಧಾರವಾಡ, ಬಿಜಾಪುರ, ಗುಲ್ಬರ್ಗಾ, ರಾಯಚೂರು, ಬೀದರ್, ಬೆಳಗಾವಿ, ಈ ಪ್ರದೇಶಗಳು ಒಳಗೊಂಡಂತೆ, ತುಮಕೂರು, ಬೆಂಗಳೂರು, ಮಂಡ್ಯ, ಮೈಸೂರು, ಕೋಲಾರ, ಚಿತ್ರದುರ್ಗ ಹಾಸನ ಈ ಪ್ರದೇಶಗಳನ್ನು ಗುರುತಿಸಬಹುದು. ಉತ್ತರ ಕರ್ನಾಟಕ ಭಾಗದಲ್ಲಿ 'ದೊಡ್ಡಾಟ' ಎಂಬ ಹೆಸರಿಡುವಂತಹ 'ಮೂಡಲಪಾಯ' ಹೆಸರು ರೂಢಿಯಲ್ಲಿದೆ. ವಾಸ್ತವಾಗಿ ಈ ಎರಡು ಪ್ರದೇಶಗಳಲ್ಲಿಯ ಬಯಲಾಟದಲ್ಲಿ ಗಣನೀಯವಾದ ವ್ಯತ್ಯಾಸಗಳೇನು ಇಲ್ಲ. ಆದರೆ 'ದೊಡ್ಡಾಟ' ಎನ್ನುವ ಹೆಸರಿಗೆ ಅಲ್ಲಿಯ ವೇಷಭೂಷಣಗಳು ದಕ್ಷಿಣಪಾಯದ ಬಯಲಾಟಕ್ಕಿಂತ ದೊಡ್ಡದಾಗಿರುತ್ತದೆ. ಅಷ್ಟೇ ಉಳಿದ ವ್ಯತ್ಯಾಸಗಳು

ಗೌಣವಾಗಿರುತ್ತದೆ. ಗಣನೀಯವಾಗಿ ವ್ಯತ್ಯಾಸ ಕಂಡುಬರುವುದು 'ಮೂಡಲಪಾಯ' ಮತ್ತು 'ಪಡುವಲಪಾಯ' ಯಕ್ಷಗಾನದಲ್ಲಿ ಮಾತ್ರವಾಗಿದೆ.

"ವಾಸ್ತವವಾಗಿ ಯಾವ ವ್ಯಾತ್ಯಾಸವೂ ಇಲ್ಲ ಎಂಬ ಅಭಿಪ್ರಾಯವಿದ್ದರೂ ಕೂಡ ಅದನ್ನು ಒಪ್ಪಲಾಗದು. ಮೂಲಭೂತವಾದ ಪ್ರಸಂಗ ಸಾಹಿತ್ಯ, ವೇಷಭೂಷಣ, ವಾದ್ಯ ವಿಶೇಷಗಳು, ಹಾಗೂ ರಂಗ ಸಜ್ಜಿಕೆ, ಮತ್ತು ಭಾಗವತಿಕೆ ಸಂಪ್ರದಾಯ, ಇವುಗಳಲ್ಲಿ ಪ್ರಮುಖ ವ್ಯತ್ಯಾಸಗಳು ಸ್ಪಷ್ಟವಾಗಿ ವ್ಯತ್ಯಾಸವಾಗುತ್ತವೆ"[೨೧] ಆದರೆ ಪಡುವಲಪಾಯದಲ್ಲಿ 'ತೆಂಕುತಿಟ್ಟು' ಮತ್ತು 'ಬಡಗುತಿಟ್ಟು' ಎರಡು ಪ್ರಕಾರಗಳನ್ನು ಗುರುತಿಸಲಾಗುತ್ತದೆ. "ಯಕ್ಷಗಾನವು ನೃತ್ಯ, ಸಾಹಿತ್ಯ ಪ್ರಧಾನವಾದ ಕಲೆ, ಆದರೆ ತೆಂಕುತಿಟ್ಟಿನ ಸಂದರ್ಭದಲ್ಲಿ ನೃತ್ಯ ಸಂಗೀತಗಳನ್ನು ಹಿಂದಕ್ಕೆ ತಳ್ಳಿ ಸಾಹಿತ್ಯವೇ ಪ್ರಧಾನವಾಗಿ ಸಾಗಿ ಬಂದಿರುವುದನ್ನು ಕಾಣಬಹುದು"[೨೨] ಹೀಗೆ ಪ್ರಾದೇಶಿಕವಾಗಿ ಕೆಲವೊಂದು ವ್ಯತ್ಯಾಸಗಳು ಕಂಡುಬಂದರೂ ಮೂಲಭೂತವಾಗಿ ಎಲ್ಲಾ ಪ್ರಕಾರಗಳು 'ಬಯಲಾಟ'ದ ವ್ಯಾಪ್ತಿಯಲ್ಲಿ ಸೇರಿಕೊಳ್ಳುತ್ತವೆ. "ಬಯಲಾಟದ ಸಣ್ಣ ಪುಟ್ಟ, ಭೇದಗಳನ್ನು ಮೂಡಲಪಾಯ, ಪಡುವಲಪಾಯ, ತೆಂಕುತಿಟ್ಟು, ಬಡಗುತಿಟ್ಟು ಈ ಭಾಗಗಳ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಸೂಚಿಸಿ ಮೂಲಭೂತವಾಗಿ ಇವೆಲ್ಲವೂ ಒಂದೇ ಮೂಲದ ಕಲೆಗಳು ಎಂದು ವಿದ್ವಾಂಸರು ಗುರುತಿಸಿದ್ದಾರೆ"[೨೩] ಸಣ್ಣಾಟ, ದೊಡ್ಡಾಟ, ಪಾರಿಜಾತ, ಯಕ್ಷಗಾನ ಯಾವುದೇ ಪ್ರಕಾರವಿರಲಿ ತಂಡದ ಗುಣಮಟ್ಟ, ಆಟದ ಕಥೆ, ತಂತ್ರ, ಅಭಿನಯ ಈ ಎಲ್ಲ ಅಂಶಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ ಅವರಣದ ಬದುಕು ಇಡಿಯಾಗಿಯೇ ಅಂಶಿಕವಾಗಿಯೆ ಆಟದಲ್ಲಿ ಪ್ರತಿಫಲಗೊಳ್ಳುವುದು ಮುಖ್ಯ. ಇಲ್ಲಿ ಭಾಷೆಯು ಪ್ರಮುಖ ಪಾತ್ರವಾಗುತ್ತದೆ. ಆಟದ ಆಶಯಗಳನ್ನು ಜನರಿಗೆ ಮುಟ್ಟಿಸಬೇಕೆಂದರೆ ಭಾಷೆ ಅವರಿಗೆ ಸುಲಭ ಗ್ರಾಹ್ಯವಾಗಿರಬೇಕು. ನಮ್ಮ ಎಲ್ಲಾ ಪ್ರಕಾರದ ಬಯಲಾಟಗಳನ್ನು ಕರ್ನಾಟಕದ ಅಷ್ಟು ಪ್ರದೇಶದವರನ್ನು ಮುಟ್ಟಬೇಕೆಂದರೆ ಭಾಷೆ ಗ್ರಾಂಥಿಕವಾಗಿರಬೇಕು. "ಆದರೆ ಕೆಲವು ಬಯಲಾಟ ಪ್ರಕಾರಗಳ ಸತ್ವವೇ ಪ್ರಾದೇಶಿಕ ಭಾಷೆಯಲ್ಲಿರುತ್ತವೆ. ಈ ಕಾರಣಕ್ಕಾಗಿಯೇ ಇಂಥ ಬಯಲಾಟಗಳ ಮಿತಿ ತಾನು ಹುಟ್ಟಿಕೊಂಡ ಪ್ರದೇಶಗಳಿಗೆ ಮಾತ್ರ ಸೀಮಿತವಾಗುತ್ತದೆ"[೨೪] ಈ ಕೊರತೆಯು ಜನಪದ ರಂಗಭೂಮಿ ಅಭಿಜಾತ ರಂಗಭೂಮಿಗಿಂತ ಅಲಕ್ಷ್ಯಕೊಳ್ಳಪಟ್ಟಿರುವಂತದ್ದು, ಮತ್ತು ಹಳೆಯ ಸಾಂಪ್ರದಾಯಿಕ ವಿಧಾನಗಳನ್ನೆ ಅನುಸರಿಸಿದ್ದು, ಜನರಿಗೆ ಹೊಸ ಪ್ರಯೋಗಗಳನ್ನು ಪೂರೈಸದೆ ಇದ್ದದ್ದರಿಂದ, ಹವ್ಯಾಸಿ ರಂಗಭೂಮಿ, ವೃತ್ತಿ ರಂಗಭೂಮಿ ಹುಟ್ಟುವುದಕ್ಕೆ ಕಾರಣವಾಗಿರುವುದನ್ನು ವಿದ್ವಾಂಸರು ಗುರುತಿಸುತ್ತಾರೆ.

ಡಾ.ಚಂದ್ರಶೇಖರ ಕಂಬಾರರು ತಮ್ಮ ಪಿಎಚ್.ಡಿ ಅಧ್ಯಯನ ಫಲಿತಾಂಶವನ್ನು ಮನ್ವಂತರ(೪) ಪತ್ರಿಕೆಯಲ್ಲಿ 'ಉತ್ತರ ಕರ್ನಾಟಕ ಜನಪದ ರಂಗಭೂಮಿ'(೧೯೬೫) ಎಂಬ ಶೀರ್ಷಿಕೆಯಲ್ಲಿ ಆರು ಲೇಖನಗಳಾಗಿ ಪ್ರಕಟಿಸಿದ್ದಾರೆ. ಪ್ರಸ್ತುತ ಪ್ರಬಂಧವನ್ನು ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ 'Oriyin and Development of Kannada Folk Theatre of Nouthern Karnats' ಎಂಬ

ಶೀರ್ಷಿಕೆಯಲ್ಲಿ ಸಲ್ಲಿಸಿ ಪದವಿ ಪಡೆದಿದ್ದಾರೆ. ಈ ಸಂಶೋಧನಾ ಮಹಾಪ್ರಬಂಧದಲ್ಲಿ ಉತ್ತರ ಕರ್ನಾಟಕದ ಜನಪದ ರಂಗ ಪ್ರಕಾರಗಳ ವಿಭಿನ್ನ ನೆಲೆಗಳನ್ನು ಗುರುತಿಸುವಲ್ಲಿ ಯಶಸ್ವಿಯಾಗಿದೆ. ಕನ್ನಡದ ಜನಪದ ರಂಗಭೂಮಿಯು ಅವಸಾನದ ಅಂಚಿನಲ್ಲಿದ್ದು ಕವಿ, ಕಲಾವಿದ, ಸಹೃದಯರ, ಸಮ್ಮುಖದಲ್ಲಿ ಅರಳಬೇಕಿದ್ದ ಇದು, ಇಂದು ತನ್ನ ಅಸ್ತಿತ್ವವನ್ನು ಇಲ್ಲವಾಗಿಸಿಕೊಳ್ಳುತ್ತಿದೆ. ನಮ್ಮ ನಾಟಕಕ್ಕಿಲ್ಲದ ಒಂದು ಸಂಪ್ರದಾಯ ಜನಪದ ರಂಗಭೂಮಿಗಿದೆ. ಹೀಗಾಗಿ ಚಂದ್ರಶೇಖರ ಕಂಬಾರರು ರಂಗಭೂಮಿಯ ಉಗಮ, ವಿಕಾಸಗಳೊಂದಿಗೆ ಅದರ ಅಭಿವ್ಯಕ್ತಿಯ ಹಲವು ಪ್ರಕಾರಗಳ ಕುರಿತು ತಮ್ಮ ಸಂಶೋಧನೆಯಲ್ಲಿ ವಿವೇಚಿಸಿದ್ದಾರೆ. ಉತ್ತರ ಕರ್ನಾಟದಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಬಯಲಾಟಗಳಾದ ದಾಸರಾಟ, ಸಣ್ಣಾಟ ಪಾರಿಜಾತ, ದೊಡ್ಡಾಟ, ಗೊಂಬೆಯಾಟಗಳ ವಿಶಿಷ್ಟತೆಗಳ ಬಗ್ಗೆ ಇಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಇಂತಹ ರಂಗ ಪ್ರಕಾರವನ್ನು ಅಭ್ಯಾಸಿಸುವರಿಗೆ ಈ ಕೃತಿ ಅತ್ಯುತ್ತಮವಾದ ಆಕರವಾಗಿದೆ. ಕಂಬಾರರು ಉತ್ತರ ಕರ್ನಾಟಕದ ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಮಹತ್ವಪೂರ್ಣ ಆಲೋಚನೆ, ಅಭಿಪ್ರಾಯಗಳನ್ನು ಈ ಸಂಶೋಧನಾ ಕೃತಿಯಲ್ಲಿ ಎಣೆದಿರುವುದು ಅರ್ಥಪೂರ್ಣವಾಗಿದೆ.

ಕರ್ನಾಟಕದ ಅಭಿಜಾತ ನಾಟಕಗಳ ಪರಂಪರೆಯನ್ನು ಮೊದಲ ಅಧ್ಯಾಯ 'ನಾಟಕ'ದಲ್ಲಿ ಕಂಬಾರರು ಗುರುತಿಸಿದ್ದಾರೆ. "ಅಭಿಜಾತವು ಮೂಲ ಜಾನಪದದಿಂದಲೇ ಹುಟ್ಟಿಕೊಂಡರೂ ಬೆಳೆಯಿಸಿಕೊಂಡ ಬೌದ್ಧಿಕತೆಯಿಂದಾಗಿ ಅಭಿರುಚಿಗೆ ಮಡಿವಂತಿಕೆಯ ಮೇರೆಗಳನ್ನು ಸೃಷ್ಟಿಸಿಕೊಂಡು ಮುಂದುವರೆಯಿತು. ಭೌತಿಕತೆ ಒಂದು ಮೌಲ್ಯವಾದ ನಂತರ ಈ ಮೇರಗಳ ಕಟ್ಟು ಇನ್ನು ಜಟಿಲಗೊಂಡಿರಬೇಕು. ಹೀಗೆ ಕಲೆಯಲ್ಲಿ ನಿಯಮಗಳಿಗೆ ನಿಯಂತ್ರಿತವಾದ, ಗುಣಿಸಿಟ್ಟ ಒಪ್ಪಿಕೊಂಡು ಕಲೆ ಮೌಲ್ಯಗಳ ಪರಿಘದಲ್ಲಿಯೇ ಓಡಾಡುವ ವ್ಯವಸ್ಥೆಯನ್ನು ಅಭಿಜಾತ ಕಲೆ ನಿರ್ಮಿಸಿಕೊಂಡು ಅಭಿಜಾತವಾದರೂ ಇದಾವುದು ಇಲ್ಲದೆ ಅಂಗಾಲಿನಿಂದ ನೆತ್ತಿಯ ತನಕ ಬದುಕಿದ್ದನ್ನು ಅಭಿವ್ಯಕ್ತಿಸುವ, ನಿಯಮ ನಿಯಂತ್ರಣಗಳಿಗೆ ಅಳವಡಲೊಲ್ಲದ ಸ್ವಚ್ಛಂದ ಹಾಡಾಗಿ ಬೆಳೆದು ಬಂತು. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಧರ್ಮ ಮತ್ತು ನಿಸರ್ಗಗಳನ್ನು ಇವೆರಡೂ ಅರ್ಥೈಸಿಕೊಂಡ ವಿಭಿನ್ನ ರೀತಿ, ಜೀವನಕ್ಕೆ ಅನಿವಾರ್ಯವಾದ ಇವೆರಡರಲ್ಲಿ ಅಭಿಜಾತವು ವಿರೋಧವನ್ನು ಕಂಡು ಸಂಕೀರ್ಣತೆಯತ್ತ ಧಾವಿಸಿತು. ಜಾನಪದವಾದರೋ ಧರ್ಮ ಮತ್ತು ನಿಸರ್ಗಗಳಲ್ಲಿ ವಿರೋಧವನೆಂದೂ ಕಾಣಲಿಲ್ಲ. ಧರ್ಮ ಅಮೂರ್ತ ಶಕ್ತಿ ಅದನ್ನು ಬದುಕಿನ ಸಾಮಗ್ರಿಯಲ್ಲಿ ಬಳಸಿಕೊಂಡು ಆರಾದಿಸುವ ಒಂದು ವಿಶೇಷತೆ ಜನಪದ ಕಲೆಗಿದೆ. ಇದು ನಿಸರ್ಗದ ನೈಜ ಅಭಿವ್ಯಕ್ತಿಯಾಗಿ ಅದರ ಸೇಂದ್ರಿಯ ಪ್ರೇರಣೆಗಳನ್ನೆಲ್ಲಾ ಒಪ್ಪಿ ಜೀವಂತ ತನವನ್ನು ಅಧಿಕವಾಗಿಸುವಂತದ್ದು. ಅದರ ಪ್ರತಿಯೊಂದು ವಿವರವನ್ನು ಆಸಕ್ತಿಯಿಂದ ಚಿತ್ರಿಸುವಂತದ್ದು, ನಿಸರ್ಗದ ಅನುಕರಣಕ್ಕಿಂತ ಅದರ ಪ್ರವೃತ್ತಿಯನ್ನು ವೈಭವಿಸುವಂತದ್ದು. ಅದರ ಜೊತೆಗೆ ನೇರ ಸಂಪರ್ಕವನ್ನು ಪಡೆಯುವುದರಿಂದ ಸಹ ಸಂಗತಿ ಸಂಕೀರ್ಣತೆಗಳ ಸಹಾಯ

ಪಡೆಯದೆ ಸರಳವಾಗಿರುವಂತದ್ದು. ಜಾನಪದವು ಏನನ್ನಾದರೂ ಅಭಿವ್ಯಕ್ತಿಸಿದ್ದರೆ ತಾನು ನಂಬಿರುವ ಪೂರ್ಣತ್ವವನ್ನು ಸಮಗ್ರವನ್ನು ಅಭಿವ್ಯಕ್ತಿಸುತ್ತದೆ. ಉತ್ತರ ಕರ್ನಾಟಕದ ಜಾನಪದ ಬಯಲಾಟಗಳು ಅಭಿವ್ಯಕ್ತಿಸಿದ್ದು ಇದನ್ನು ಸಂಶೋಧಕರು ಸಮರ್ಥವಾಗಿ ಗುರುತಿಸುತ್ತಾರೆ”[೨೫] ಇನ್ನು ಮುಂದುವರೆದು ಸಂಸ್ಕೃತದಲ್ಲಿರುವಂಥ ನಾಟಕ ಪರಂಪರೆ ಕನ್ನಡದಲ್ಲಿ ಇಲ್ಲವೆಂಬ ಮಾತು ಹಾಗೂ ನಾಟಕ ಸ್ವರೂಪದ ಮಹಾಕಾವ್ಯಗಳ ಕುರಿತು ಚರ್ಚಿಸಿದ್ದಾರೆ.

ಪಂಪ, ಪೊನ್ನ, ರನ್ನ, ನಾಗವರ್ಮರಾದಿಯಾಗಿ ಪ್ರಸಿದ್ಧ ಸಂಸ್ಕೃತ ನಾಟಕಗಳ ಪಠ್ಯಾನುವಾದಗಳನ್ನು ಬಳಸಿರುವ ಉದಾಹರಣೆಗಳನ್ನು ಇಲ್ಲಿ ವಿವೇಚಿಸಿದ್ದಾರೆ. ನಾಟಕ ಶಾಲೆಗಳು ಇದ್ದವೆಂಬುದಕ್ಕೆ ಶಾಸನ ಕಾವ್ಯಾಧಾರಗಳನ್ನು ನೀಡಿ ಸ್ಪಷ್ಟಪಡಿಸಿದ್ದಾರೆ. ಉಪಲಬ್ಧವಿಲ್ಲದ ಕೆಲವು ಕವಿ ಕೃತಿಗಳೂ ನಾಟಕಗಳಾಗಿರುವ ಸಂಭವವಿದೆಯೆಂಬ ಗೋವಿಂದ ಪೈ ಅವರ ಹೇಳಿಕೆಗಳನ್ನು ಸ್ಪಷ್ಟಪಡಿಸಲಾಗಿದೆ. ಅಲ್ಲಿಯ ವಿವರಗಳನ್ನು ಸವಿವರವಾಗಿ ಗಮನಿಸಿದ ಕಂಬಾರರರು “ಕನ್ನಡಿಗರ ನಾಟಕದ ಕಲ್ಪನೆಯ ಸಂಸ್ಕೃತದವರಿಗಿಂತ ಭಿನ್ನವಾದದ್ದು, ಅದೊಂದು ಬಗೆಯ ಸಂಗೀತದಿಂದ ಕೂಡಿದ ಭಾವನೃತ್ಯವಾಗಿರಬೇಕು ಬಹುಶಃ ಇಂದಿನ ಕಥಕ್ಕಳಿಯ ಹಾಗೆ ಎಂದು ತೀರ್ಮಾನಿಸಿದ್ದಾರೆ”[೨೬] ಅಲ್ಲದೇ ‘ಧರ್ಮ ಮತ್ತು ಬಯಲಾಟಗಳ’ ಅನ್ಯೋನ್ಯ ಸಂಬಂಧ ಕುರಿತು ಉತ್ತರ ಕರ್ನಾಟಕದ ಬಯಲಾಟಗಳು ಧಾರ್ಮಿಕ ಚಳವಳಿಯನ್ನಾಧರಿಸಿ ಹುಟ್ಟಿವೆ. ಹಾಗೂ ಸಾಮಾನ್ಯನಿಗೆ ಪ್ರವೇಶಿಸುವಾಗ ಕತೆಯ ವೈತೊಟ್ಟು ಬಯಲಾಟವಾಗಿದೆ. ಹೀಗಾಗಿ ಬಯಲಾಟಗಳನ್ನು ಇಂತಹ ಇತಿಹಾಸದ ಬೆಳಕಿನಲ್ಲಿ ನೋಡಬಹುದಾಗಿದೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಭಕ್ತಿಪಂಥ, ಇಡೀ ದೇಶದ ಶಿವ ಮತ್ತು ಕೃಷ್ಣರ ಭಕ್ತಿ ಸಂಪ್ರದಾಯದಂತೆ ಕನ್ನಡ ನಾಡಿನಲ್ಲೂ ಹರಡಿರುವುದನ್ನು ವಿವರಿಸಿದ್ದಾರೆ. ಶೈವಪಂಥದ ಪ್ರಭಾವದಿಂದ ತ್ರಿಪುರದಹನ, ಕಾಮದಹನ, ನಿಜಗುಣಶಿವಯೋಗಿ, ತಿರುನೀಲಕಂಠ, ಅಲ್ಲಮಪ್ರಭು ಮೊದಲಾದ ಬಯಲಾಟಗಳು ರಾಧಕೃಷ್ಣರ ಭಕ್ತಿಪಂಥದಿಂದ ರಾಧಾನನಾಟ, ಶ್ರೀಕೃಷ್ಣಪಾರಿಜಾತದಂತಹ ರಂಗಪ್ರಕಾರ ಹುಟ್ಟಿಕೊಂಡಿರುವುದನ್ನು ಈ ಸಂಶೋಧನಾ ಮಹಾಪ್ರಬಂಧದಲ್ಲಿ ಸೂಕ್ಷ್ಮವಾಗಿ ಗುರುತಿಸಿದ್ದಾರೆ.

ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಯಲಾಟದಲ್ಲಿ ದಾಸರಾಟ, ಸಣ್ಣಾಟ, ಪಾರಿಜಾತ, ಗೊಂಬೆಯಾಟಗಳೆಂಬ ಪ್ರಕಾರಗಳನ್ನು ಗುರುತಿಸಿದ್ದಾರೆ. ದಾಸರಾಟವನ್ನು ಜಾತ್ರೆ ಉತ್ಸವಗಳಲ್ಲಿ ಆಡುವುದು ಹಾಗೂ ದಾಸರು ಆಟದಲ್ಲಿ ಭಾಗವಹಿಸುವಿಕೆ ಇಲ್ಲಿನ ವೈಶಿಷ್ಟ್ಯವಾಗಿದೆ. ಚಿಮಣಾ ಆ ಆಟದ ಕೇಂದ್ರ ವ್ಯಕ್ತಿ ಅಂದರೆ ನಾಯಕಿ, ಗೊಡ್ಡಿಭಿಮ್ಮಣ್ಣ ನಾಯಕ, ಮುಂದೆ ಇದೇ ಮಹಾರಾಷ್ಟ್ರಕ್ಕೆ ಹೋದಾಗ ಅಲ್ಲಿನವರು ಇದನ್ನು ‘ತಮಾಶ’ ಎಂದು ಒಪ್ಪಿಕೊಳ್ಳುತ್ತಾರೆ. ಈ ತಮಾಶಾ ಮಹಾರಾಷ್ಟ್ರದ ತುಂಬ ಜನಪ್ರಿಯ ರಾಜಕೀಯ ಸಾಂಸ್ಕೃತಿಕ ತತ್ವಗಳ ಪ್ರಯೋಗಕ್ಕೆ ಮಾಧ್ಯಮವೂ ಆಗಿ ಮತ್ತೆ ಉತ್ತರ ಕರ್ನಾಟಕಕ್ಕೆ ‘ರಾಧನಾಟ’ ಎಂಬ ಹೆಸರಿನೊಂದಿಗೆ ಪ್ರವೇಶಿಸುತ್ತದೆ ಎಂಬ ವಿವರಗಳನ್ನು ಕಂಬಾರರು ಈ ಸಂಶೋಧನಾ ಗ್ರಂಥದಲ್ಲಿ ದಾಖಲಿಸುತ್ತಾರೆ. “ರಾಧನ ಆಟಕ್ಕೂ ದಾಸರಾಟಕ್ಕೂ ಸಾಕಷ್ಟು ವ್ಯತ್ಯಾಸವಿದೆಯೆಂಬುದನ್ನು ಮರೆಯಬಾರದು. ಆ ಮೇಲೆ ಬಂದ ಪ್ರಭಾವಗಳು ಇದನ್ನು

ಹೇಗೆ ರೂಪಿಸಿರಲಿ ದಾಸರಾಟ ದ್ರಾವಿಡ ಬಯಲಾಟದ ಮುಂದುವರಿದ ರೂಪವಾಗಿರಬಹುದೇನೋ ಎಂದು ಅನಿಸುತ್ತಿದೆ. ದಾಸರಾಟದಂತೆಯೇ ಮುಖ್ಯ ನಟಿಯೊಬ್ಬಳನ್ನು ಮುಂದೆ ಮಾಡಿಕೊಂಡು ಅಡ್ಡಾಡುವ ಕೂಟಗಳು ಪ್ರಾಚೀನ ಕಾಲದಿಂದಲೇ ದ್ರಾವಿಡದಲ್ಲಿದ್ದವೆಂಬ ಮಾತು ಈ ಊಹೆಗೆ ಅವಕಾಶ ಮಾಡಿಕೊಡುತ್ತದೆ ಎಂದು ಹೇಳುತ್ತಾರೆ”[೨೭]

ಹೀಗೆ ಉತ್ತರ ಕರ್ನಾಟಕ ಜನಪದ ಪ್ರಕಾರಗಳನ್ನು ಅವುಗಳ ಹುಟ್ಟಿನ ಹಿನ್ನೆಲೆಯೊಂದಿಗೆ ಸಾಹಿತ್ಯಿಕವಾಗಿ ವಿಶ್ಲೇಷಿಸುತ್ತಾರೆ. ಅದರಂತೆ ವಾದ್ಯಗಳ ದೃಷ್ಟಿಗಳಲ್ಲಿಯೂ ವ್ಯತ್ಯಾಸವನ್ನು ಗುರುತಿಸುತ್ತಾರೆ. “ಉತ್ತರ ಕರ್ನಾಟಕದ ಬಯಲಾಟಗಳನ್ನು ವಾದ್ಯಗಳ ದೃಷ್ಟಿಯಿಂದ ಜಾಗಟೆ ಆಟ, ತಾಳದ ಆಟ, ದಪ್ಪಿನ ಆಟ, ದಿಮ್ಮದಾಟ, ಎಂದು ವಿಭಾಗಿಸಲಿಕ್ಕಂತೂ ಬರುವುದಿಲ್ಲ. ಹಿಂದಿನ ಕಾಲಕ್ಕೆ ಈ ಭೇದ ಸ್ಪಷ್ಟವಾಗಿದ್ದೀತ್ತೆನೋ, ಈಗ ಮಾತ್ರ ಆಯಾ ವಾದ್ಯಗಳ ಸರಿಬೆರಕೆ ಸಾಕಷ್ಟಾಗಿದೆ. ಹಿಂದಿನ ಎಷ್ಟೋ ವಾದ್ಯಗಳಿಗೆ ಕಳಚಿಕೊಂಡಿದೆ. ಜಾಗಟೆ ಈಗ ಬಳಕೆಯಲ್ಲಿಲ್ಲ. ದಪ್ಪು ಕೇವಲ ಸಣ್ಣಾಟಗಳಲ್ಲಿ ಮಾತ್ರ ಉಪಯೋಗಿಸಲ್ಪಡುತ್ತದೆ. ತಾಳ ಎಲ್ಲ ಆಟಗಳಲ್ಲಿ ಸಾಮಾನ್ಯವಾಗಿದೆ. ಆದ್ದರಿಂದ ದಾಸರಾಟ, ಸಣ್ಣಾಟ, ಪಾರಿಜಾತ, ದೊಡ್ಡಾಟ, ಗೊಂಬೆಯಾಟ ಎಂದೇ ಪ್ರಕಾರಗಳನ್ನು ಕಲ್ಪಿಸಬಹುದಾಗಿದೆ. ರಂಗಭೂಮಿ ರಂಗಪದ್ಧತಿ, ಇವುಗಳನ್ನು ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡು ಇಂಥ ಭೇದಗಳನ್ನು ಮಾಡಿದೆ”[೨೮]

ಸಣ್ಣಾಟ, ದೊಡ್ಡಾಟದಿಂದ ಬೇರ್ಪಡಿಸಿ ಹೇಳುವ ಸಂದರ್ಭದಲ್ಲಿ ಈ ಹೆಸರು ಬಂದಿತು. ದೊಡ್ಡಾಟದ ವಿಸ್ತಾರ, ರಂಗಭೂಮಿ, ಪಾತ್ರವರ್ಗ, ವೇಷಭೂಷಣಗಳಿಗೆ ಹೋಲಿಸಿದರೆ ಸಣ್ಣಾಟ ಕಡಿಮೆ ಎಂದು ಹೇಳಬಹುದು. ಸಣ್ಣಾಟದಲ್ಲಿ ಶೈವ, ವೈಷ್ಣವ ಎಂಬ ಒಳಭೇದವಿದೆ. ವೈಷ್ಣವ ಸಣ್ಣಾಟದಲ್ಲಿ ಗೋಪಾಲ, ಗೊಲ್ಲತಿಯರ ನರ್ತನ, ವಾಗ್ವಾದ, ಒಪ್ಪಂದಗಳಿರುತ್ತವೆ. ಶೈವ ಸಣ್ಣಾಟದಲ್ಲಿ ನಿಜಗುಣ ಶಿವಯೋಗಿ, ಅಲ್ಲಮ ಪ್ರಭು, ತಿರುನೀಲಕಂಠಗಳೆಂಬ ಶೈವಧರ್ಮದ ಪ್ರಕಾರಗಳಿರುತ್ತವೆ. ಅಲ್ಲಿರುವುದು ಸಾಮಾನ್ಯ ವೇದಾಂತ ಮತ್ತು ಕಲ್ಲಿ-ತುರಾದ ಛಾಯೆ ಎಂದು ಕಂಬಾರರು ಇಲ್ಲಿ ಸಾಂದರ್ಭಿಕವಾಗಿ ವಿವೇಚಿಸಿದ್ದಾರೆ.

ಪಾರಿಜಾತದ ಮೇಲೆ ಆಂಧ್ರದ ಕೂಚಿಪುಡಿ ನೃತ್ಯವಾದ ಭಾಮಾ ಕಲಾಪ ಮತ್ತು ಕನ್ನಡ ಯಕ್ಷಗಾನದ ಪ್ರಭಾವ ಅತ್ಯಂತ ಸ್ಪಷ್ಟವಾಗಿದೆ. ಕೌಜಲಗಿ ನಿಂಗಮ್ಮನೊಡನೆ ಮೇಳಕಟ್ಟಿ ಆಡತೊಡಗುತ್ತಾರೆ. ಭಾಗವತನ ನಾಂದಿ ಹಾಡಿನೊಂದಿಗೆ ಈ ಆಟ ಪ್ರಾರಂಭವಾಗುತ್ತದೆ. ಗೋಕಾಕ ತಾಲೂಕಿನ ಕುಲಗೋಡ ತಮ್ಮಣ್ಣನು ಇದನ್ನು ರಂಗಭೂಮಿಗೆ ಅಳವಡಿಸಿದ ಶ್ರೇಯಸ್ಸನ್ನು ಕಂಬಾರರು ನೆನೆಯುತ್ತಾರೆ. ಇದು ಸಣ್ಣಾಟದಂತೆ ಗೀತನಾಟಕವಾಗಿದ್ದು, ಮರಾಠಿ ಹಾಡುಗಳ ಪ್ರಭಾವ, ಹಾರ್ಮೋನಿಯಂ ತಬಲಾದಂಥ ಹೊಸ ವಾದ್ಯಗಳ ಬಳಕೆ, ಪಾತ್ರಧಾರಿಗಳು ತಮ್ಮ ಹಾಡನ್ನು ತಾವೇ ಹಾಡುವುದು, ಆಶು ಸಂಭಾಷಣೆಗಳು-ಇವೆಲ್ಲವನ್ನು ಸೇರಿ ರೂಪಪಡೆದ ಪಾರಿಜಾತ ರಂಗಪ್ರಕಾರವನ್ನು ಕಂಬಾರರು ತಿಳಿಸಿದ್ದಾರೆ.

ದೊಡ್ಡಾಟ-ಮೂಡಲಪಾಯ ಎಂಬ ಮತ್ತೊಂದು ಹೆಸರಿನಲ್ಲಿ ಪ್ರಚುರದಲ್ಲಿದ್ದು, ಯಕ್ಷಗಾನವನ್ನು ಅನೇಕ ಸಂದರ್ಭದಲ್ಲಿ ಇದು ಅನುಸರಿಸಿದೆ. ಇದರ ಹೆಸರೇ ಸೂಚಿಸುವಂತೆ ಅಟ್ಟ, ಪಾತ್ರಗಳ

ಸಂಖ್ಯೆ ವೇಷಭೂಷಣಗಳು ಎಲ್ಲವೂ ದೊಡ್ಡದು, ಗಣೇಶ, ಸರಸ್ವತಿ, ಈಶ್ವರ, ಇವರಲ್ಲಿ ಯಾರೊಬ್ಬರ ಅಥವಾ ಎಲ್ಲರ ಸ್ತುತಿಯೊಂದಿಗೆ ಆಟ ಆರಂಭವಾಗುತ್ತದೆ. ಮುಮ್ಮೇಳದಲ್ಲಿ ಭಾಗವತನಿರುತ್ತಾನೆ. ಹೀಗೆ ದೊಡ್ಡಾಟದ ದೃಶ್ಯಾವಳಿ, ಹಿಮ್ಮೇಳ-ಮುಮ್ಮೇಳದ ಕಾರ್ಯೋದ್ದೇಶ, ವೀರರಸ ಪ್ರಧಾನ ಕತೆ – ಇವುಗಳ ವಿಶಿಷ್ಟತೆಯನ್ನು ಸಾರುತ್ತದೆ. ದೊಡ್ಡಾಟ ಮತ್ತು ಗ್ರೀಕ್ ನಾಟಕಗಳಲ್ಲಿ ಸಮಾನತೆ ಕಂಡುಬರುತ್ತದೆ. ಪ್ರಯೋಗ ವೈಶಿಷ್ಟ್ಯಗಳನ್ನು ಕಂಬಾರರು ಸವಿವರವಾಗಿ ಕೃತಿಯಲ್ಲಿ ದಾಖಲಿಸಿದ್ದಾರೆ.

ಗೊಂಬೆಯಾಟ ಕಟ್ಟಿಗೆಯ ಗೊಂಬೆಗಳಿಗೆ ವಿಶಿಷ್ಟ ರೀತಿಯಲ್ಲಿ ಬಣ್ಣ ಬಳಿದು, ವೇಷಭೂಷಣ ತೊಡಿಸುವರು. ಕೈ, ಕಾಲು, ತಲೆ, ಬೆರಳು ತುಟಿಗಳು ಚಲನಶೀಲವಾಗಿದ್ದು, ಅವುಗಳಿಗೆ ದಾರಕಟ್ಟಿ ಗೊಂಬೆಯ ಚಲನೆಯನ್ನು ಸೂತ್ರಧಾರ ನಿಯಂತ್ರಿಸುತ್ತಾನೆ. ಸೂತ್ರಧಾರ ಆಯಾ ಗೊಂಬೆಯ ಪಾತ್ರಗಳಿಗನುಗುಣವಾಗಿ ಅನೇಕ ಧ್ವನಿಯಿಂದ ಮಾತನಾಡುತ್ತಾನೆ. ಸರ್ವವ್ಯಾಪಿಯಾಗಿರುವ ಗೊಂಬೆಯಾಟವು ಕರ್ನಾಟಕದಲ್ಲಿ ಹೇಗೆ ತನ್ನ ಅಕ್ಷರಸ್ಥರಾದ ಮೇಲುಜಾತಿಯವರಿಗೆ ಸಿಕ್ಕ ಮಾರ್ಗಕಲೆಯಾಗಿದ್ದು; ತೊಗಲು ಗೊಂಬೆಯಾಟ ಕೆಳಜಾತಿಯವರಿಗೆ ಸಿಕ್ಕ ಉಪಜೀವನದ ವೃತ್ತಿ ಕಲೆಯಾಗಿ ಹೇಗೆ ಬೆಳೆದುಬಂದಿತು ಎಂಬುದನ್ನು ಕಂಬಾರರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಬಯಲಾಟಗಳನ್ನು ಪ್ರಯೋಗಿಸುವ ರಂಗಮಂಟಪ, ಪರದೆ, ಪ್ರವೇಶ, ಪ್ರೇಕ್ಷಕವೃಂದ, ಬಣ್ಣಬಳಿಯುವ ಮನೆ, ವೇಷ-ಭೂಷಣ, ಪೂರ್ವರಂಗ, ನಿರೂಪಣೆ, ಸಂಗೀತ ಮತ್ತು ನರ್ತನ, ಅಸಲು ಪಾತ್ರಗಳು ಮತ್ತು ನಟ-ನಟಿಯರು, ಸೂತ್ರದಾರ ಮತ್ತು ವಿದೂಷಕ, ಬಯಲಾಟದ ವಿಧಿ ವಿಧಾನಗಳು, ಬಯಲಾಟದ ಸಿದ್ಧತೆ, ಗ್ರಹಣಶಕ್ತಿ ಹೀಗೆ ಹತ್ತು ಹಲವು ಅಂಶಗಳ ವಿವರಣಾತ್ಮಕ ಚಿಂತನೆ ಇನ್ನುಳಿದ ಅಧ್ಯಾಯಗಳಲ್ಲಿ ಮೂಡಿಬಂದಿದೆ.

ಉತ್ತರಕರ್ನಾಟಕದ ಬಯಲಾಟಗಳಾದ ದಾಸರಾಟ, ಸಣ್ಣಾಟ, ದೊಡ್ಡಾಟ, ಪಾರಿಜಾತ, ಗೊಂಬೆಯಾಟ ಕುರಿತ ಸುದೀರ್ಘ ಚರ್ಚೆ ಇಲ್ಲಿ ಕಂಡುಬಂದರೂ ಕೆಲವು ವಿವರಣೆಗಳಲ್ಲಿನ ಕೊರತೆ ಎದ್ದು ಕಾಣುವ ಅಂಶವಾಗಿದೆ. ಅದೇನೇ ಇದ್ದರೂ ಬಯಲಾಟಗಳು ಗ್ರಾಮ್ಯ ಬದುಕಿನಿಂದ ಕಣ್ಮರೆಯಾಗುತ್ತಿದ್ದು ಸಮಕಾಲೀನ ಸಂದರ್ಭದಲ್ಲಿ ಉತ್ತರಕರ್ನಾಟಕದ ಜನಪದ ರಂಗಭೂಮಿ ಎಂಬ ಸಂಶೋಧನಾತ್ಮಕ ಕೃತಿ ತನ್ನದೇ ಆದ ವಿಶೇಷತೆಯನ್ನು ಕಾಯ್ದುಕೊಂಡಿದೆ. ಉತ್ತರ ಕರ್ನಾಟಕದ ಬಯಲಾಟ ಕುರಿತ ವಿಭಿನ್ನ ಮಾಹಿತಿಯನ್ನು ಒದಗಿಸುವಲ್ಲಿ ಇದು ಯೋಗ್ಯ ಅಧ್ಯಯನ ಸಾಮಗ್ರಿ ಎಂಬುದರಲ್ಲಿ ಅನುಮಾನವಿಲ್ಲ. ಕಂಬಾರರ ಕ್ಷೇತ್ರಕಾರ್ಯಾಧಾರಿತವಾದ ಉತ್ತರ ಕರ್ನಾಟಕ ಜನಪದ ರಂಗಭೂಮಿ ಕುರಿತ ಅಧ್ಯಯನ ಕರ್ನಾಟಕ ಜಾನಪದ ರಂಗಭೂಮಿಯ ಹೊಸ ಸಾಧ್ಯತೆಗಳನ್ನು ಕೊಡುವಲ್ಲಿ ಯಶಸ್ವಿಯಾಗಿದೆ. ಕರ್ನಾಟಕ ಜಾನಪದದ ಕಿರೀಟಪ್ರಾಯ ಅಧ್ಯಯನಗಳಲ್ಲಿ ಇದೂ ಕೂಡ ಒಂದಾಗಿದೆ. ಡಿ.ಆರ್.ನಾಗರಾಜ ಗುರುತಿಸುವಂತೆ "ಕನ್ನಡದಲ್ಲಿ ಚಂದ್ರಶೇಖರ ಕಂಬಾರ ಮತ್ತು ಶಿವರಾಮ ಕಾರಂತರ ಗ್ರಂಥಗಳು ಬಿಟ್ಟರೆ ಜಾನಪದ ಪರಂಪರೆ ಒಳಗೊಂಡು ಯಾವೊಂದು

ಆಳವಾದ ಅಧ್ಯಯನಗಳು ನಡೆದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ ಕನ್ನಡದಲ್ಲಿ ಲಭ್ಯವಿರುವ ಸಾಮಗ್ರಿಯನ್ನು ಆಧರಿಸಿ ಜಾನಪದ ರಂಗಪರಂಪರೆಯನ್ನು ವಿವೇಚಿಸುವುದು ಅತ್ಯಂತ ಕಷ್ಟದ ಕೆಲಸ. ಈ ವಿಷಯದ ಬಗ್ಗೆ ಕನ್ನಡ ಜಾನಪದದಲ್ಲಿ ಆಗಿರುವ ಕೆಲಸವೇ ಅತ್ಯಲ್ಪ ಎಂಬುದು ಇದಕ್ಕೆ ಒಂದು ಕಾರಣವಾದರೆ, ಆಗಿರುವುಷ್ಟು ಕೆಲಸದಲ್ಲಿ ಬಿಡಿ ಪ್ರಯೋಗ ಹಾಗೂ ಬಿಡಿ ಪ್ರಕಾರಗಳ ಕಡೆಗೆಯೇ ಹೆಚ್ಚು ಒತ್ತು ಬಿದ್ದರೆ ಎಂಬುದು ಇನ್ನೊಂದು ಕಾರಣ ಎಂದು ಹೇಳುತ್ತಾರೆ"[೨೯] ಇದು ವಾಸ್ತವವಾಗಿ ಆ ಬಗೆಯಲ್ಲಿಯೇ ಕನ್ನಡದ ಮಟ್ಟಿಗೆ ರಂಗಭೂಮಿಯ ಅಧ್ಯಯನಗಳು ನಡೆದಿವೆ.

ಮೂಡಲಪಾಯ ದಕ್ಷಿಣ ಸಂಪ್ರದಾಯ ಕುರಿತು ಅಧ್ಯಯನ ಮಾಡಿರುವ ಡಿ.ಕೆ.ರಾಜೇಂದ್ರ ಅವರು ತಮ್ಮ ಸಂಶೋಧನಾ ಕೃತಿಯಲ್ಲಿ ಸಮಗ್ರ 'ಜನಪದ ರಂಗಭೂಮಿ' ಕುರಿತು ವಿವರಿಸಿದ್ದಾರೆ. ೧೯೮೦ರಲ್ಲಿ 'ದಕ್ಷಿಣ ಕರ್ನಾಟಕದ ಜನಪದ ಪ್ರಕಾರಗಳು' ಎಂಬ ವಿಷಯ ಕುರಿತು ಮೈಸೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ್ದಾರೆ. ಪ್ರಾರಂಭದಲ್ಲಿ ಇವರೇ ಹೇಳಿರುವಂತೆ ಕರ್ನಾಟಕದ ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಬಿಡಿ-ಬಿಡಿ ಅಧ್ಯಯನಗಳು ನಡೆದಿವೆ. ಸಮಗ್ರವಾಗಿ ಯಾವ ಅಧ್ಯಯನಗಳು ಕೃತಿಗಳು ಹೊರಬಂದಿಲ್ಲ. ಡಾ.ಚಂದ್ರಶೇಖರ ಕಂಬಾರರ "ಉತ್ತರ ಕರ್ನಾಟಕದ ಜನಪದ ರಂಗಭೂಮಿ" ಹೆಸರೇ ಸೂಚಿಸುವಂತೆ ಉತ್ತರ ಕರ್ನಾಟಕದ ಕಲೆಯನ್ನು ಮಾತ್ರ ದೃಷ್ಟಿಯುಳ್ಳದ್ದು, ಆ ಮಟ್ಟಿಗೆ ಅದು ಸಮಗ್ರವಾಗಿದೆ ಎನ್ನಬಹುದು. ಹೀಗಾಗಿ ಯಾರು ದೃಷ್ಟಿ ಹರಿಸದೆ, ಮೂಲೆಗುಂಪಾಗಿದ್ದ ದಕ್ಷಿಣ ಕರ್ನಾಟಕದ ಮೂಡಲಪಾಯ ಯಕ್ಷಗಾನ ಬಯಲಾಟ ನನ್ನ ಸಂಶೋಧನೆಯ ವಸ್ತುವಾಯಿತು ಎಂದು ತಮ್ಮ ಅಧ್ಯಯನದ ವಸ್ತುವನ್ನು ಖಚಿತಪಡಿಸಿಕೊಂಡಿದ್ದಾರೆ"[೩೦] ಜೀ.ಶಂ.ಪರಮಶಿವಯ್ಯ ಅವರು ಕ್ಷೇತ್ರಕಾರ್ಯದ ಮೂಲಕ 'ದಕ್ಷಿಣ ಕರ್ನಾಟಕದ ಮೂಡಲಪಾಯದ ಯಕ್ಷಗಾನ ಬಯಲಾಟ' ಕುರಿತು ಅನೇಕ ಬಿಡಿ-ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. 'ಮೂಡಲಪಾಯ-ಕೆಲವು ವಿಚಾರಗಳು' ಲೇಖನದಲ್ಲಿ ಪ್ರಾದೇಶಿಕವಾಗಿ ಚರ್ಚೆಗೊಳಪಡಿಸಿದ್ದಾರೆ. "ಮೂಡಲಪಾಯ ಯಕ್ಷಗಾನ ಬಯಲಾಟಗಳು, ಪಡುವಲಪಾಯ ಯಕ್ಷಗಾನ ಬಯಲಾಟಗಳು' ಎಂದು ಎರಡು ಪ್ರಕಾರಗಳನ್ನು ಗುರುತಿಸುತ್ತಾರೆ"[೩೧] ಮೂಡಲಪಾಯ ಬಯಲು ಸೀಮೆಯ ಕಲೆ, ಮೈಸೂರು ಜಿಲ್ಲೆಯ ದಕ್ಷಿಣದ ತುದಿಯವರೆಗೆ ಹದಿನೈದು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಇದು ಹಬ್ಬಿದೆ. ಪಡುವಲಪಾಯ ಕರಾವಳಿಯ ಭಾಗದಲ್ಲಿ ದಟ್ಟವಾಗಿಯೂ, ಶಿವಮೊಗ್ಗ, ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ವಿರಳವಾಗಿಯೂ ಉಳಿದಿರುವ ಕಲೆಯಾಗಿದೆ. ಈ ಪಾಯ 'ಸಂಗೀತ' ಸಂಪ್ರದಾಯದ ಮೇಲಿನ ವೈವಿಧ್ಯವನ್ನು ಗುರುತಿಸಿಕೊಳ್ಳುವ ಒಂದು ಶಬ್ದ ಮಾತ್ರ ಆಗಿದೆ. ಅಂತರಂಗದಲ್ಲಿ ಎರಡು ಸಂಪ್ರದಾಯಗಳು ಒಂದೇ ಆಗಿವೆ ಎಂದು ಡಿ.ಕೆ.ರಾಜೇಂದ್ರ ಹೇಳುತ್ತಾರೆ"[೩೨] ಹೀಗೆ ಪ್ರಾದೇಶಿಕವಾಗಿ ಈ ಜನಪದ ಪ್ರಕಾರಗಳು ಬೇರೆ ಬೇರೆ ಆದರೂ ಒಳಗಿನ ಸತ್ವ ಒಂದೇ ಆಗಿರುವುದು ತಿಳಿಯುತ್ತದೆ. "ಘಟ್ಟದ ಕೋರೆ ಒಂದು ವಿಶಿಷ್ಟ ಯಕ್ಷಗಾನ ಕಲೆ" ಲೇಖನದಲ್ಲಿ ಜನಪದ ರಂಗಭೂಮಿಯಲ್ಲಿ ಈ

ಪ್ರಕಾರದ ಸ್ಥಾನವನ್ನು ಪ್ರಾದೇಶಿಕವಾಗಿ ಹಾಗೂ ಮೂಡಲಪಾಯ ಪಡುವಲಪಾಯ ಯಕ್ಷಗಾನಕ್ಕಿಂತ ಹೀಗೆ ವಿಶಿಷ್ಟತೆಯಿದೆ ಎಂದು ಗುರುತಿಸುತ್ತಾರೆ.

ಕರ್ನಾಟಕದಲ್ಲಿ ಈಗಾಗಲೇ ಗುರುತಿಸಲ್ಪಟ್ಟಿರುವ ಯಕ್ಷಗಾನ ಪ್ರಭೇದಗಳಲ್ಲಿ 'ಘಟ್ಟದ ಕೋರೆ' ವಿಶಿಷ್ಟವಾದದು. ಮಲೆನಾಡು ಮತ್ತು ಬಯಲು ನಾಡಿನಲ್ಲಿ ಮೂಡಲಪಾಯ ಮತ್ತು ಪಡುವಲಪಾಯಗಳೆರಡರ ಸಾರವನ್ನು ಗರ್ಭೀಕರಿಸಿಕೊಂಡು ಒಂದು ಹೊಸ ಯಕ್ಷಗಾನ ಸಂಪ್ರದಾಯವಾಗಿ ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ರೂಪುಗೊಂಡಂತೆ ತೋರುತ್ತದೆ. "ಮೈಸೂರು ಜಿಲ್ಲೆಯ ಕೊಳ್ಳೆಗಾಲ ಮತ್ತು ಮಂಡ್ಯಜಿಲ್ಲೆಯ, ಹೊಸ ಹೊಳಲು ಈ ಸಂಪ್ರದಾಯದ ಎರಡು ಕೇಂದ್ರಗಳಾಗಿ ಬೆಳೆದು ಇಂದಿಗೂ ಈ ಕಲೆ ಇಲ್ಲಿ ಜೀವಂತವಾಗಿ ಉಳಿದಿದೆ. ಮಲೆನಾಡಿನ ಸೆರಗಿನಲ್ಲಿ ಹುಟ್ಟಿಕೊಂಡ ಈ ಕಲೆ ಮೈಸೂರು ಜಿಲ್ಲೆಯ ಬಹುಭಾಗವನ್ನು ಆವರಿಸಿಕೊಂಡಿದ್ದು. ಮಂಡ್ಯ ಜಿಲ್ಲೆಯ, ಕಿಕ್ಕೇರಿ, ಮೇಲು ಕೋಟೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಮೇಲುಕೋಟೆಯ ಗಿರಿಶ್ರೇಣಿಯನ್ನು ದಾಟಿ ಆಚೆಗೆ ಹೋದರೆ ನಾಗಮಂಗಲದ ಉತ್ತರಕ್ಕೆ ಮೂಡಲಪಾಯದ ದಕ್ಷಿಣಾದಿ ಸಮೃದ್ಧವಾಗಿ ಕಂಡುಬರುತ್ತದೆ"[೩೩] 'ಘಟ್ಟದಕೋರೆ' ಹೇಗೆ ಪ್ರಾದೇಶಿಕವಾಗಿ ಹಬ್ಬಿಕೊಂಡಿದೆ ಎಂದು ಜೀ.ಶಂ.ಪ ಅವರು ತಿಳಿಸುತ್ತಾರೆ. ಅಷ್ಟೇ ಅಲ್ಲದೆ 'ಘಟ್ಟದಕೊರೆ' ಪ್ರಾಚೀನತೆ, ವಾದ್ಯವಿಶೇಷಗಳು, ವೇಷಭೂಷಣಗಳು, ರಂಗಮಂಟಪ ಸಂಗೀತಾದಿಗಳನ್ನು ಕುರಿತು ವಿವೇಚಿಸುತ್ತಾರೆ. 'ಕರ್ನಾಟಕದ ತೊಗಲು ಗೊಂಬೆಯಾಟ'. 'ಕಾರಂತರು' ಯಕ್ಷಗಾನ ಬಯಲಾಟ, 'ಕಣ್ಮರೆಯಾದ ಕೀಲು ಗೊಂಬೆಯಾಟ', ಇತ್ಯಾದಿ ಲೇಖನಗಳಲ್ಲಿ ದಕ್ಷಿಣ ಭಾಗದ ಜನಪದ ರಂಗಭೂಮಿ ಕುರಿತು ಪರಿಚಯಾತ್ಮಕವಾಗಿ ಪ್ರತಿಪಾದಿಸುತ್ತಾರೆ. ಒಂದೊಂದು ಜನಪದ ಪ್ರಕಾರಗಳನ್ನು ಕ್ಷೇತ್ರಕಾರ್ಯ ಮಾಡಿ ಬೆಳಕಿಗೆ ತರುವುದರ ಮೂಲಕ ಜನಪದ ರಂಗಭೂಮಿಗೆ ಒಂದು ಸಂಶೋಧನಾತ್ಮಕವಾಗಿ ಬುನಾದಿಯನ್ನು ಹಾಕಿಕೊಟ್ಟಿದ್ದಾರೆ. ಈ ಮಾದರಿಯಲ್ಲಿ ಡಿ.ಕೆ.ರಾಜೇಂದ್ರ ಅವರು 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ"(೧೯೮೦) ಸಂಶೋಧನಾ ಕೃತಿಯಲ್ಲಿ 'ಮೂಡಲಪಾಯ ಯಕ್ಷಗಾನ ಬಯಲಾಟ' 'ತೊಗಲುಗೊಂಬೆಯಾಟ' 'ಸೂತ್ರದಗೊಂಬೆಯಾಟ'ಗಳ ಪ್ರಕಾರಗಳನ್ನು ಪ್ರಧಾನವಾಗಿ ಇಟ್ಟುಕೊಂಡು ಇಡೀ ಕರ್ನಾಟಕದ ಜನಪದ ರಂಗಭೂಮಿ ಕುರಿತು ತೌಲನಿಕವಾಗಿ ವಿಶ್ಲೇಷಿಸಿದ್ದಾರೆ.

ಡಿ.ಕೆ.ರಾಜೇಂದ್ರ ಅವರು ಒಂದು ಕಡೇ ಜೀ.ಶಂ.ಪರಮಶಿವಯ್ಯ ಅವರ ಕುರಿತು ಹೇಳಿರುವುದನ್ನು ನೋಡಬಹುದು. "ಡಾ. ಜೀ. ಶಂ. ಪರಮಶಿವಯ್ಯನವರು, ಮೂಲೆಗುಂಪಾಗಿದ್ದ ಮೂಡಲಪಾಯ ಯಕ್ಷಗಾನವನ್ನು ಆಗತಾನೆ ಅವರು ಬೆಳಕಿಗೆ ತರಲು ಹೋರಾಟ ನಡೆಸುತ್ತಿದ್ದರು. ಅಲ್ಲಲ್ಲಿ ಕುಟುಕ ಜೀವ ಹಿಡಿಸು ಉಳಿದಿದ್ದ ಕಲಾತಂಡಗಳನ್ನು ಹುಡುಕಿ, ಹುರಿದುಂಬಿಸಿ ಉಸಿರಾಡಲು ನೆರವೀಯುತ್ತಿದ್ದರು. ಅದೇ ವೇಳೆಯಲ್ಲಿ ಉಡುಪಿಯಲ್ಲಿ ನಡೆದ ಯಕ್ಷಗಾನ ಮೇಳಗಳ ಗೋಷ್ಠಿ ಹಾಗೂ ಪ್ರದರ್ಶನದಲ್ಲಿ ಮೊಟ್ಟ ಮೊದಲಬಾರಿಗೆ ದಕ್ಷಿಣ ಕರ್ನಾಟಕ ಭಾಗದ ಮೂಡಲಪಾಯ ಯಕ್ಷಗಾನ ತಂಡವೊಂದನ್ನು

ತಮ್ಮ ನೇತೃತ್ವದಲ್ಲಿ ಕರೆದುಕೊಂಡುಹೋಗಿ ಪ್ರದರ್ಶಿಸಿದ ಕೀರ್ತಿ ಅವರದ್ದು ಆ ಸಂದರ್ಭದಲ್ಲಿಯೇ ತಿಪಟೂರು ತಾಲ್ಲೂಕು ಕೋನೆಹಳ್ಳಿಯಲ್ಲಿ ಅವರು ಸ್ಥಾಪಿಸಿದ "ಶ್ರೀ ಬಿದರೆಯಮ್ಮ ಯಕ್ಷಗಾನ ಮಂಡಳಿ" ಈಗ ದಶಮಾನೋತ್ಸವವನ್ನು ಆಚರಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ"೩೪ ಹೀಗೆ ಮೂಡಲಪಾಯ ಯಕ್ಷಗಾನ ಬಯಲಾಟವನ್ನು ಜೀ.ಶಂ.ಪ ಅವರ ನೆರವಿನಿಂದ ಬೆಳಕು ಕಂಡಿದ್ದರ ಫಲವಾಗಿ ಡಿ.ಕೆ ರಾಜೇಂದ್ರ ಅವರಿಗೆ ಇನ್ನಷ್ಟೇ ಸಂಶೋಧನೆ ಮಾಡಲು ಪ್ರಾರಂಭಿಸಿದರು. ಆದರೆ ಇವರು ತಮ್ಮ ಅಧ್ಯಯನದಲ್ಲಿ 'ಮೂಡಲಪಾಯದ ಯಕ್ಷಗಾನ ಬಯಲಾಟವನ್ನು ಇನ್ನುಳಿದ ಪಡುವಲಪಾಯ, ದೊಡ್ಡಾಟ ಇವುಗಳೊಂದಿಗೆ ತೌಲನಿಕವಾಗಿ ವಿವೇಚಿಸಿದ್ದಾರೆ. ಆದರೆ ಪ್ರಾದೇಶಿಕವಾಗಿ ಯಾಕೆ? ಮೂಡಲಪಾಯ ಸಂಪ್ರದಾಯಗಳು ನಿರ್ಲಕ್ಷ್ಯೆಗೊಳಪಟ್ಟಿದ್ದವು ಎಂಬುದನ್ನು ಚರ್ಚಿಸಲು ಹೋಗುವುದಿಲ್ಲ. "ದಕ್ಷಿಣ ಕರ್ನಾಟಕದಲ್ಲಿ ಜೀ.ಶಂ.ಪರಮಶಿವಯ್ಯ ಅವರಿಂದ ಕೇವಲ ಒಂದು ದಶಕದ ಹಿಂದೆ ಆರಂಭಗೊಂಡ ಮೂಡಲಪಾಯ ಯಕ್ಷಗಾನ ಪುನರುಜ್ಜೀವನ ಕಾರ್ಯ ಆ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಉಂಟುಮಾಡಿತು. ಅದರ ಫಲವಾಗಿ ಇಂದು ಎಲ್ಲೆಂದರಲ್ಲಿ ಈ ಕಲೆಯ ಪ್ರದರ್ಶನವನ್ನು ಕಾಣಬಹುದಾಗಿದೆ. 'ಮೂಡಲಪಾಯ ಯಕ್ಷಗಾನ'ದ ಹೆಸರು ಅಲ್ಲಲ್ಲಿ ಕೇಳಿಬರುವಂತಾಗಿದೆ ಎಂದು ಸ್ಪಷ್ಟಿಕರಿಸಿಕೊಳ್ಳುತ್ತಾರೆ. ಡಿ.ಕೆ. ರಾಜೇಂದ್ರ ಅವರು ಮಹಾಪ್ರಬಂಧಕ್ಕೆ ಆರು ಪ್ರಮುಖ ಉದ್ದೇಶಗಳಿವೆ.

೧. ಜನಪದ ರಂಗಭೂಮಿಗೆ ಜನಪದ ನೃತ್ಯಗಳೇ ಪ್ರೇರಣೆ ಎಂಬುದನ್ನು ಚರ್ಚಿಸಲಾಗಿದೆ.

೨. ಮೂಡಲಪಾಯ ಯಕ್ಷಗಾನ ದ್ರಾವಿಡ ಮೂಲವಾದ ಒಂದು ಕಲೆ ಎಂಬುದನ್ನು ಸ್ಥಾಪಿಸಲು ತಮಿಳುನಾಡಿನ 'ತೆರಕೊತ್ತು' ಆಂಧ್ರದ 'ವೀಧಿನಾಟಕ, ಕೇರಳದ 'ಕಥಕ್ಕಳಿ' ಇವುಗಳೊಂದಿಗೆ ಹೋಲಿಸಿ ನೋಡಲಾಗಿದೆ.

೩. ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಮೂಡಲಪಾಯದ ಸ್ಥಾನ, ಅದರ ಪ್ರಾಚೀನತೆ, ಅದು ತನ್ನ ಮೂಲಸ್ವರೂಪವನ್ನು ಉಳಿಸಿಕೊಂಡು ಬರಲು ಇರುವ ಕಾರಣ ಇವುಗಳನ್ನು ಗುರುತಿಸಲಾಗಿದೆ.

೪. ಪ್ರಸಂಗ ಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ವ್ಯತ್ಯಾಸ, ಅದಕ್ಕಿರುವ ಕಾರಣಗಳು ಹಾಗೂ ಅದರ ಕುಂದುಕೊರತೆಗಳು, ಪ್ರಾರಂಭದಲ್ಲಿ ಜನಪದ ಕಥೆಗಳೇ ಬಯಲಾಟದ ವಸ್ತುವಾಗಿದ್ದವು ಎಂಬುದರ ಬಗೆಗೆ ವಿಚಾರ ಮಾಡಲಾಗಿದೆ.

೫. ಸೂತ್ರದಗೊಂಬೆ, ತೊಗಲುಗೊಂಬೆಗಳ ಪ್ರಾಚೀನತೆ, ಸೂತ್ರದ ಗೊಂಬೆಯಾಟ ಪ್ರಪಂಚದಾದ್ಯಂತವೂ ಕಂಡುಬರುವ ಒಂದು ಕಲೆ ಹಾಗೂ ದಕ್ಷಿಣ ಭಾರತದಲ್ಲಿ ಮಾನವ ರಂಗಭೂಮಿಗೆ ಸೂತ್ರದ ಗೊಂಬೆಯಾಟವೇ ಪ್ರೇರಕ ಈ ವಿಷಯಗಳ ಬಗೆಗೆ ವ್ಯಾಪಕವಾಗಿ ಚರ್ಚಿಸಲಾಗಿದೆ.

೬. ಗೊಂಬೆಯಾಟ ವೈಶಿಷ್ಟ್ಯ, ಅವುಗಳ ತಾಂತ್ರಿಕ ವಿಧಾನ, ವೇಷಭೂಷಣ ಹಾಗೂ ವಾದ್ಯ ವಿಶೇಷ ಇವುಗಳ ಬಗೆಗೆ ವಿವೇಚಿಸಲಾಗಿದೆ"[೩೫]

ಒಟ್ಟಿನಲ್ಲಿ ಕರ್ನಾಟಕದ ಜನಪದ ರಂಗಭೂಮಿಯ ಹಿನ್ನೆಲೆ, ಅದು ವಿಕಾಸಗೊಂಡು ಬಗೆ ಹಾಗೂ ಅದರಲ್ಲಿ ಕಾಣಬರುವ ವೈವಿಧ್ಯವನ್ನು 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ'ಯಲ್ಲಿ ಡಿ.ಕೆ.ರಾಜೇಂದ್ರ ಅವರು ಅಧ್ಯಯನಗಳನ್ನು ಮಾಡಿದ್ದಾರೆ. ಯಕ್ಷಗಾನ ಬಯಲಾಟದಂತಹ ವಿವಿಧ ಪ್ರಕಾರಗಳಾದ ಪಡುವಲಯಪಾಯ, ತೆಂಕುತಿಟ್ಟು, ಬಡಗುತಿಟ್ಟು ಉತ್ತರ ಕರ್ನಾಟಕದ ಭಾಗದಲ್ಲಿ ಕಂಡುಬರುವ, ದೊಡ್ಡಾಟ, ಸಣ್ಣಾಟ, ರಾಧಾನಾಟ, ಧಾಸರಾಟ, ಶ್ರೀಕೃಷ್ಣ ಪಾರಿಜಾತ, ಸಂಗ್ಯಬಾಳ್ಯಾ ಪ್ರಕಾರಗಳನ್ನು ತೌಲನಿಕವಾಗಿ ದಕ್ಷಿಣ ಸಂಪ್ರದಾಯದ ಮೂಡಲಪಾಯದೊಂದಿಗೆ ತೌಲನಿಕವಾಗಿ ವಿವೇಚಿಸಿದ್ದಾರೆ. ಪ್ರತಿಯೊಂದು ಜನಪದ ರಂಗಭೂಮಿಯ ಪ್ರಕಾರಗಳ ಪ್ರಾಚೀನತೆಯನ್ನು ಹೇಳುವುದರೊಂದಿಗೆ ಅವುಗಳ ಪ್ರಾದೇಶಿಕ ಭಿನ್ನತೆ, ಪ್ರದರ್ಶನ, ಸಾಹಿತ್ಯ, ಸಂಗೀತ, ನೃತ್ಯ, ವಾದ್ಯಗಳು, ಕುರಿತು ಪರಿಚಯಾತ್ಮಕವಾಗಿ ಹೇಳಿದ್ದಾರೆ. ವಿನಃ ಅವುಗಳ ಹಿಂದಿರುವ ಸಾಂಸ್ಕೃತಿಕ ಸ್ವರೂಪವನ್ನು ಹೇಳುವುದಿಲ್ಲ, ಹೀಗೆ, ಇವರ ಉದ್ದೇಶ ಮೂಲೆಗುಂಪಾಗಿದ್ದ ಪ್ರಕಾರಗಳನ್ನು ಗುರುತಿಸಿ ಮುಂಚೂಣಿಗೆ ತರುವುದಾಗಿತ್ತು. ಆ ಕಾರಣಕ್ಕಾಗಿಯೇ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿಯ' ಪ್ರಬಂಧದಲ್ಲಿ ರಂಗಭೂಮಿಯನ್ನು ಪರಿಚಯಾತ್ಮಕವಾಗಿ, ಮಾಹಿತಿಯಾಧರಿತ ನೆಲೆಗಳಿಂದ ಕಟ್ಟಿಕೊಟ್ಟಿದ್ದಾರೆ. ಡಿ.ಕೆ. ರಾಜೇಂದ್ರ ಅವರು ತಮ್ಮ ಕೃತಿಯಲ್ಲಿ ಪ್ರಾರಂಭದಲ್ಲಿ ಜನಪದ ನಾಟಕಗಳ ಮೂಲ, ಹಾಗೂ 'ಕರ್ನಾಟಕ ಜನಪದ ರಂಗಭೂಮಿ' ಎಂದು ಎರಡು ಅಧ್ಯಯನಗಳಲ್ಲಿ ಜಾಗತಿಕವಾಗಿ ಜನಪದ ರಂಗಭೂಮಿಯ ಮೂಲದ ಹಿನ್ನೆಲೆಯನ್ನು ಚರ್ಚಿಸಿದ್ದಾರೆ. ಆದಿಮಾನವನಾದಿಯಾಗಿ ಕಲೆಗಳು ಹುಟ್ಟಿಕೊಂಡಿಲ್ಲ. ಇವು ನೃತ್ಯಗಳ ರೂಪದಲ್ಲಿ ಅನುಕರಣೆಯ ನೆಲೆಯಲ್ಲಿ ಹುಟ್ಟಿಕೊಂಡವು ಎಂದು ಹೇಳುತ್ತಾರೆ. "ಜನಸಾಮಾನ್ಯರಿಂದ ಸಾಮಾನ್ಯರಲ್ಲಿ ಜ್ಞಾನವನ್ನು ತುಂಬುವ ವಾಹಿನಿಯಾಗಿಯೂ ಬೆಳೆದುಬಂದಿತ್ತು. ಕುಣಿತ ಬಹುಶಃ ಮಾನವನು ಮೊದಲು ಕಂಡುಕೊಂಡ ವಿಶಿಷ್ಟ ರೂಪವನ್ನು ತಾಳುತ್ತಿವೆ. ತಮ್ಮ ಅನಿಸಿಕೆಗಳನ್ನು ಹಾವಭಾವಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಅವರ ಜೀವನ, ವ್ಯವಸ್ಥೆಗೆ ಒಳಗಾದ ಮೇಲೆ, ಕುಣಿತ ಒಂದು ಕಲೆ ಎಂಬ ಹೆಸರಿನಲ್ಲಿ ಆಚರಣೆಯಲ್ಲಿ ಉಳಿದುಕೊಂಡಿತು. ಹೀಗೆ ಸಂಭಾಷಣೆ ಸೇರಿ ನಾಟಕ ರೂಪವನ್ನು ತಾಳಿತು. ನಮ್ಮವರು 'ಬಯಲಾಟ' ಎಂಬ ಹೆಸರಿನಿಂದ ಕರೆಯುತ್ತಿದ್ದರು ಇದನ್ನೇ ಎನ್ನಬಹುದು. ಈ ಜನಪದ ನಾಟಕವೇ ಮುಂದೇ 'ಯಕ್ಷಗಾನ' ಎಂಬ ಗಾನಪ್ರಕಾರವನ್ನು ಬಳಸಿಕೊಂಡ ಯಕ್ಷಗಾನ ಬಯಲಾಟವಾಗಿದೆ ಎನ್ನುತ್ತಾರೆ. ಇದು ಪ್ರಾರಂಭ ದೆಸೆಯಲ್ಲಿ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದರೂ ಕಾಲಕಳೆದಂತೆ ಪರಿಷ್ಕಾರಗೊಂಡು ಉತ್ತಮ ಮಟ್ಟಕ್ಕೇರಿತು. ಅನಂತರ ಭರತನಿಂದ ಸೃಷ್ಟಿಕೊಂಡ ನಾಟಕದ ನಿಯಮಗಳೂ ಇದರ ಮೇಲೆ ಪ್ರಭಾವ ಬೀರಿರಲು ಸಾಧ್ಯ ಎಂದು ಗುರುತಿಸುತ್ತಾರೆ"[೩೬] ಮೂಡಲಪಾಯ ಯಕ್ಷಗಾನ ಬಯಲಾಟ ಅಧ್ಯಾಯದಲ್ಲಿ ಸವಿಸ್ತಾರವಾಗಿ ದಕ್ಷಿಣ ಸಂಪ್ರದಾಯದ ಕುರಿತು ಡಿ.ಕೆ.ರಾಜೇಂದ್ರ ಅವರು ವಿವೇಚಿಸಿದ್ದಾರೆ. ಇದರ

ಜೊತೆಗೆ ಜನಪದ ರಂಗಭೂಮಿಯ ಇನ್ನೆರಡು ಪ್ರಮುಖ ಪ್ರಕಾರಗಳಾದ ಸೂತ್ರದ ಗೊಂಬೆಯಾಟ ಹಾಗೂ ತೊಗಲುಗೊಂಬೆಯಾಟಗಳ ಬಗೆಗಿನ ಕೆಲವು ಸಂಗತಿಗಳನ್ನು ತಿಳಿಸಿದ್ದಾರೆ. ಅವುಗಳ ತಂತ್ರ ಸ್ವರೂಪ, ಹಿನ್ನೆಲೆ, ಪ್ರಾದೇಶಿಕ ಭಿನ್ನತೆ ಮುಂತಾದವುಗಳನ್ನು ಕುರಿತು ಪರಿಶೀಲಿಸಿದ್ದಾರೆ.

ಮೂಡಲಪಾಯ ಯಕ್ಷಗಾನ ಬಯಲಾಟ ಪ್ರಾಚೀನತೆ, ವಸ್ತು, ಅದರ ಅಂಗಗಳು, ಬಯಲು ರಂಗಸ್ಥಳ, ಪ್ರಸಂಗ ಸಾಹಿತ್ಯ ವಾದ್ಯ ವಿಶೇಷಗಳು, ವೇಷಭೂಷಣಗಳು, ಆಟದ ವಿಧಾನ, ಮುಂತಾದ ಅಂಶಗಳನ್ನು ತೌಲನಿಕವಾಗಿ, ಸಾಹಿತ್ಯವಾಗಿ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ಸೂತ್ರದಗೊಂಬೆಯಾಟ ಅದರ ಪ್ರಾಚೀನತೆ ಪ್ರಾಂತಿಯ ಭೇದಗಳು, ಗೊಂಬೆಯಾಟದ ವೈಶಿಷ್ಟ್ಯ, ತಾಂತ್ರಿಕ ವಿಧಾನ, ಗೊಂಬೆಗಳ ರಚನೆ, ವೇಷಭೂಷಣಗಳು, ರಂಗಸಿದ್ಧತೆ, ಸಾಹಿತ್ಯ ವಾದ್ಯ-ವಿಶೇಷಗಳು, ತೊಗಲು ಗೊಂಬೆಯಾಟ- ಅದರ ಜನಾಂಗಿಕ ನೆಲೆ, ತೊಗಲು ಗೊಂಬೆಯಾಟದ ವೈಶಿಷ್ಟ್ಯ ಆಟವನ್ನು ಏರ್ಪಡಿಸುವ ಪರಿ ತಾಂತ್ರಿಕ ವಿಧಾನ, ರಚನೆ ವೇಷಭೂಷಣಗಳು, ರಂಗ ಸಜ್ಜಿಕೆ ಪ್ರಾಂತಿಯ ಭೇದಗಳು, ಸಾಹಿತ್ಯ ಮತ್ತು ವಾದ್ಯ ವಿಶೇಷಗಳು ಇಷ್ಟನ್ನು ತಮ್ಮ ಅಧ್ಯಯನದಲ್ಲಿ ಪರಿಚಯಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಬೇರೆ-ಬೇರೆ ಪ್ರಾದೇಶಿಕ ಪ್ರಕಾರಗಳೊಂದಿಗೆ ತೌಲನಿಕವಾಗಿ ನೋಡುವುದು ಇವರ ಉದ್ದೇಶವಾಗಿದೆ.

ಡಿ.ಕೆ.ರಾಜೇಂದ್ರ ಅವರು ಕರ್ನಾಟಕದ ಜನಪದ ರಂಗಭೂಮಿಯನ್ನು ಸಮಗ್ರವಾಗಿ ರೂಪಿಸಿಕೊಂಡು ಮೂಡಲಪಾಯ ಯಕ್ಷಗಾನವನ್ನು ಪರಿಚಯದ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನವನ್ನು ಮೂರು ನೆಲೆಯಲ್ಲಿ ಗುರುತಿಸಬಹುದು. ೧. ಕ್ಷೇತ್ರಕಾರ್ಯ ೨. ವರ್ಗೀಕರಣ ೩. ವಿಶ್ಲೇಷಣೆ, ವಿಮರ್ಶೆ, ೧೯೬೯ ರಿಂದಲೇ ಕ್ಷೇತ್ರಕಾರ್ಯ ಮಾಡಿಕೊಂಡು ಬಂದ ಡಿ.ಕೆ.ರಾಜೇಂದ್ರ ಅವರು, ತಮ್ಮ ಕ್ಷೇತ್ರಕಾರ್ಯದ ಅನುಭವದ ಬಗ್ಗೆ ಹೀಗೆ ಹೇಳಿಕೊಂಡಿದ್ದಾರೆ. "ಜಾನಪದದಂತಹ ವಿಷಯದಲ್ಲಿ ಕ್ಷೇತ್ರಕಾರ್ಯವೇ ಜೀವಾಳ ಎಂಬುದನ್ನು ಮರೆಯುವಂತಿಲ್ಲ. ಬಹುಮಟ್ಟಿಗೆ ಅಜ್ಞಾತವಾಗಿಯೇ ಉಳಿದಿದ್ದ ಈ ಕಲೆಗಳ ಬಗೆಗೆ ವಿಷಯವನ್ನು ಸಂಗ್ರಹಿಸುವುದು. ಮೊದಮೊದಲಿಗೆ ಕಷ್ಟವೇ ಆಯಿತು. ಈ ನಿಟ್ಟಿನಲ್ಲಿ ನಾನು ಸಂದರ್ಶಿಸಿದ ಎಲ್ಲ ಕಲಾವಿದರೂ, ಭಾಗವತರೂ ನನಗೆ ಪೂರ್ಣ ಸಹಕಾರ ನೀಡಿದ್ದಾರೆ. ಕೇಳಿದ ಪ್ರಶ್ನೆಗಳಿಗೆ ಬೇಸರವಿಲ್ಲದೆ ಉತ್ತರ ನೀಡುವುದರ ಮೂಲಕ ಮಾಹಿತಿ ಸಂಗಹಣೆಗೆ ಸಹಾಯಕರಾಗಿದ್ದಾರೆ ಎಂದು ಹೇಳಿಕೊಳ್ಳುತ್ತಾರೆ"[೩] ಈ ಮಾತುಗಳಿಗೆ ಅವರು ತಾವು ತೋರಿದ ಅಧ್ಯಯನ ಶಿಸ್ತು ಬದ್ಧತೆಯನ್ನು ತಿಳಿಸುತ್ತದೆ. ಇವರ ಜೊತೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಮಗೆ ಸಹಕಾರ ನೀಡಿದ ವಿದ್ವಾಂಸರ ನೆನಪಿಸಿಕೊಂಡಿದ್ದಾರೆ. ಪ್ರತಿಯೊಂದು ಪ್ರಾಂತ್ಯಕ್ಕೆ ಹೋಗಿ ರಂಗಭೂಮಿಯ ಪ್ರದರ್ಶನದ ಪಿಪಿಧ ಹಂತಗಳನ್ನು ಕಣ್ಣಾರೆ ವೀಕ್ಷಿಸಿ ದಾಖಲಿಕರಣ ಮಾಡಿರುವುದು ಒಂದು ಕಡೆ ಇವರ ಅಧ್ಯಯನ ಶಿಸ್ತಿಗೆ ಸಾಕ್ಷಿಯಾಗಿದೆ. ಇದರಿಂದ 'ದಕ್ಷಿಣ ಭಾಗದ' ಮೂಡಲಪಾಯದ ಯಕ್ಷಗಾನ ಬಯಲಾಟದ ಸಂಪ್ರದಾಯಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿದ್ದಾರೆ.

ಹೀಗೆ ವ್ಯಾಪಕವಾದ ಕ್ಷೇತ್ರವಾಡಿದ ಡಿ.ಕೆ.ರಾಜೇಂದ್ರ ಅವರು ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡಿದ್ದಾರೆ. ಮುಖ್ಯವಾಗಿ ಮೂಡಲಪಾಯದ ದಕ್ಷಿಣ ಸಂಪ್ರದಾಯದ ಯಕ್ಷಗಾನ ಬಯಲಾಟಗಳನ್ನು ವ್ಯವಸ್ಥಿತವಾಗಿ ಗುರುತಿಸಿದ್ದಾರೆ. ಈ ಕಲೆಗೆ ಬಳಸಿಕೊಳ್ಳುವ ವಸ್ತುಗಳು ರಾಮಾಯಣ, ಮಹಾಭಾರತ, ಭಾಗವತ, ಹಾಗೂ ಪುರಾಣಗಳು, ಇವುಗಳನ್ನು ಈ ಭಾಗದಲ್ಲಿ ಬಳಸಿಕೊಳ್ಳುವ ಸ್ವರೂಪವನ್ನು ವರ್ಗೀಕರಿಸಿದ್ದಾರೆ. ತ್ರಿಪುರಸಂಹಾರ, ಸುಧರ್ವನ ವಧೆ, ಜರಾಸಂದವಧೆ, ದುಶ್ಯಾಸನ ಕಾಳಗ, ವಿರಾಟಪರ್ವ, ಬಾಣಸುರದ ಕಥೆ ಮುಂತಾದ 'ವೀರರಸ' ಪ್ರಧಾನ ಪ್ರಸಂಗಳನ್ನು ತಿಳಿಸಿದ್ದಾರೆ. ಗೊಂಬೆಯಾಟ ಸೂತ್ರದ–ಗೊಂಬೆಯಾಟದ ಸಾಹಿತ್ಯಿಕ ಹಾಗೂ ಪ್ರದರ್ಶನಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ.

'ಮೂಡಲಪಾಯ ಯಕ್ಷಗಾನ ಬಯಲಾಟ' ಪಡುವಲಪಾಯದ ತೆಂಕುತಿಟ್ಟು–ಬಡಗುತಿಟ್ಟು ಇವುಗಳ ನಡುವಿನ ವ್ಯತ್ಯಾಸ. ದೊಡ್ಡಾಟ–ಸಣ್ಣಾಟ ಇವುಗಳ ನಡುವಿನ ವಸ್ತು ಬಗೆಗಿನ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಇವರು ಕ್ಷೇತ್ರಕಾರ್ಯವನ್ನು ಹೆಚ್ಚು ಬಳಸಿಕೊಂಡಿದ್ದರಿಂದ ವೈಜ್ಞಾನಿಕ ವರ್ಗೀಕರಣವನ್ನು ವಸ್ತುವಿನ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಯಕ್ಷಗಾನ– ಬಯಲಾಟದ ಮೂಡಲಪಾಯದ ಸಂಪ್ರದಾಯಕ್ಕೆ 'ಅಟ್ಟದಾಟ' ಎಂಬ ಹೆಸರು 'ಅಟ್ಟ'ವನ್ನು ಹಾರುವ ಒಂದು ಸಂಪ್ರದಾಯದಿಂದಲೇ ಬಂದಿರಬಹುದಾದರೂ, ಈ ಒಂದು ರೂಢಿ ಎಂದಿನಿಂದ ಆರಂಭವಾಯಿತು ಎಂಬುದನ್ನು ನಿರ್ಧರಿಸಲು ಯುವ ಆಧಾರವೂ ಇಲ್ಲವಾಗಿದೆ. ಬಯಲಿನಲ್ಲಿ ಆಡುವ ಒಂದು ಸಂಪ್ರದಾಯವನ್ನು ಹೊಂದಿದ ಯಕ್ಷಗಾನಕ್ಕೆ ಅಟ್ಟನ್ನು ಹಾಕಿ ಆಡುವ ಒಂದು ರೂಢಿ. ಮಧ್ಯದಲ್ಲಿನ ಮಾರ್ಪಾಟಿನಿಂದ ಉಂಟಾಗಿರಬಹುದು. ಇದು ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದಲ್ಲಿ ಮಾತ್ರ ಕಂಡುಬರುವ ಒಂದು ಅಂಶವಾಗಿದೆ. ಪಶ್ಚಿಮ ಕರ್ನಾಟಕದ ಯಕ್ಷಗಾನ ಬಯಲಾಟದಲ್ಲಿ ಇದು ರೂಢಿಯಲ್ಲಿಲ್ಲ. ಈ ಎರಡು ಪ್ರಾಂತ್ಯಗಳ ಕುಣಿತದ ರೀತಿಯಲ್ಲಿ ಕಂಡುಬರುವ ಅಂತರದಿಂದಾಗಿ ಈ ರೀತಿಯ ವ್ಯತ್ಯಾಸಕ್ಕೆ ಕಾರಣವಾಗಿರಬಹುದು. ಮೂಡಲಪಾಯ ಸಂಪ್ರದಾಯ ಹಾಗೂ ಪಡುವಲಪಾಯ ಸಂಪ್ರದಾಯ ಇವುಗಳಲ್ಲಿ ಕಂಡುಬರುವ ಕೆಲವು ಪ್ರಮುಖ ವ್ಯತ್ಯಾಸಗಳಲ್ಲಿ ಇದೂ ಒಂದಾಗಿದೆ. ಆದರೆ ಹೀಗೆ ಅಟ್ಟನ್ನು ಹಾಕಿ ರಂಗವನ್ನು ನಿರ್ಮಿಸುವ ವಾಡಿಕೆ ಮಧ್ಯೆದಲ್ಲಿ ಬಂದಂತದ್ದು. ಆದರೂ ತೀರ ಇತ್ತೀಚಿನದೇನೂ ಅಲ್ಲ 'ಅಟ್ಟದಾಟ' ಎಂಬ ಹೆಸರು ಬಹಳ ಹಿಂದಿನಿಂದಲೂ ಉಳಿದು ಬಂದಂತಹುದಾಗಿದೆ"[೩೮] ರಂಗಸ್ಥಳದ ರಚನೆಯನ್ನು ದಕ್ಷಿಣ ಸಂಪ್ರದಾಯ ಮತ್ತು ಉತ್ತರ ಸಂಪ್ರದಾಯದಲ್ಲಿ ಬಳಸುವ ವಸ್ತುಗಳು, ಹಾಡುವ ರೀತಿ ಅವುಗಳ ಬಳಕೆಯ ಹಿಂದಿನ ಉದ್ದೇಶಗಳನ್ನು ಕುರಿತ ತೌಲನಿಕವಾಗಿ ಡಿ.ಕೆ.ರಾಜೇಂದ್ರ ಅವರು ವಿವೇಚಿಸಿದ್ದಾರೆ. ಅಟ್ಟನ್ನು ಹಾಕುವ ರೀತಿಯಲ್ಲಿ ಮುಡಲಪಾಯದಲ್ಲಿನ ಉತ್ತರಭಾಗಕ್ಕೂ ದಕ್ಷಿಣಭಾಗಕ್ಕೂ ಅಂತಹ ವ್ಯತ್ಯಾಸವೇನೂ ಇಲ್ಲ. ದೊಡ್ಡಾಟಗಳಿಗೆ ಗಟ್ಟಿಮುಟ್ಟಾದ ಅಟ್ಟಗಳಿರಬೇಕು. ಅಟ್ಟ ಹಾಕುವ ಹಳೆಯ

ಪದ್ಧತಿ ಎತ್ತಿನ ಬಂಡಿಯ ನಾಲ್ಕು ಗಾಲಿಗಳನ್ನು ನಾಲ್ಕು ಮೂಲೆಗಳಿಗೆ ಚೌಕಾಕಾರವಾಗುವಂತೆ ಹೂಳುತ್ತಿದ್ದರು. ಗಾಲಿಗಳ ನಡುವೆ ಮರದಗಟ್ಟಿಮುಟ್ಟಾದ ಮಂಡಿಕೆಗಳನ್ನು ಬಿಗಿಯುತ್ತಿದ್ದರೂ ಅವುಗಳ ಮೇಲೆ ದಪ್ಪನೆಯ ಮರದ ಹಲಗೆಗಳನ್ನು ಜೋಡಿಸುತ್ತಿದ್ದರು. ಇತ್ತೀಚೆಗೆ ನಾಲ್ಕು ಪೀಪಾಯಿಗಳ ಮೇಲೆ ಮರದ ಹಲಗೆಗಳನ್ನು ಇಟ್ಟು ಅಟ್ಟ ಕಟ್ಟುತ್ತಾರೆ. ಆದರೆ ಮೂಡಲಪಾಯದ ದಕ್ಷಿಣ ಭಾಗದಲ್ಲಿ ದಪ್ಪನೆಯ ಕಲ್ಲಿನ ಮೇಲೆ ಹಲಗೆಗಳನ್ನು ಹಾಸುತ್ತಾರೆ. ಹೀಗೆ ಉತ್ತರ ಸಂಪ್ರದಾಯದ ದೊಡ್ಡಾಟ, ಸಣ್ಣಾಟದಂತಹ ಕಲೆಗಳಿಗೆ ಬಳಸುವ 'ರಂಗ ಸಜ್ಜಿಕೆ'ಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ದಕ್ಷಿಣ ಸಂಪ್ರದಾಯದಲ್ಲಿ ಕಂಡುಬರುವ ಜನಪದ ರಂಗಭೂಮಿಯನ್ನು ಪರಿಚಯ ಮಾಡುವ ಉದ್ದೇಶವಾಗಿದೆ.

ಡಿ.ಕೆ.ರಾಜೇಂದ್ರ ಅವರ ಒಟ್ಟಾರೆ ಜನಪದ ರಂಗಭೂಮಿ ಅಧ್ಯಯನದ ತಾತ್ವಿಕತೆಯನ್ನು ಈ ರೀತಿ ಗ್ರಹಿಸಬಹುದಾಗಿದೆ; ಸಂಶೋಧನಾ ಕೃತಿಯ ಮೊದಲಭಾಗದಲ್ಲಿ 'ಜನಪದ ನಾಟಕ ಮೂಲ'ವನ್ನು ವಿವರಿಸುತ್ತಾರೆ. "ಹಾಡುವುದರ ಮೂಲಕ ಅವುಗಳನ್ನು ಹೊತ್ತು ಕುಣಿಯುವವರು ಒಂದು ವರ್ಗವಾಗಿ, ಅವುಗಳಿಗೆ ಸಂಬಂಧಿಸಿದ ನಾಮಪಟ್ಟಿಯನ್ನು ಹಾಡಿಕುಣಿಯುವವರು ಮತ್ತೊಂದು ವರ್ಗವಾಗಿ ತಮ್ಮ ಕಷ್ಟ ಸುಖಗಳನ್ನು ಆ ದೇವತೆಗಳ ಅಥವಾ ಪ್ರಬಲ ಶಕ್ತಿಗಳ ಮುಂದೆ ಹೇಳಿಕೊಳ್ಳುವಲ್ಲಿ ಒಂದು ಬಗೆಯ ಸಂಭಾಷಣೆಯು ಅಲ್ಲಿ ನಡೆಯುತ್ತದೆ. ಇವೆಲ್ಲವೂ ಸೇರಿ ನಾಟಕದಂತಹ ಒಂದು ಕಲೆಯ ಕಲ್ಪನೆ ಮೂಡಿ ಬಂದಿರಬಹುದು"[೩೯] ಎಂದು ತರ್ಕಿಸಿ ಗೊಂಬೆಯಾಟದ ಮೂಲಕ ಜನಪದ ರಂಗಭೂಮಿಯ ಉಗಮವನ್ನು ಗುರುತಿಸುತ್ತಾರೆ. ಇದಕ್ಕೆ ಮಹಾಭಾರತ, ರಾಮಾಯಣಗಳಲ್ಲಿ ಬರುವ ಗೊಂಬೆಯಾಟದ ಉಲ್ಲೇಖಗಳನ್ನು ಉದಾಹರಿಸುತ್ತಾರೆ. ಆದಿಮ ಕಾಲದ ಮಾನವನ ಕ್ರಿಯಾಚರಣೆಗಳೆಲ್ಲ ಕಲೆಯ ಛಾಯೆಯನ್ನು ಕಾಣಬಹುದು. ನಂತರದಲ್ಲಿ ಗೊಂಬೆಯಾಟವು ಕಲೆಯ ಒಂದು ಭಾಗವಾಗಿ ಕಾಣಿಸಿಕೊಂಡಿರುವುದು ಡಿ.ಕೆ.ರಾಜೇಂದ್ರ ಅವರು ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ರಂಗಭೂಮಿ ಉಗಮದ ಚರ್ಚೆಯನ್ನು ಬಳಸದಿದ್ದರೂ ಉತ್ತಮ ಮಾಹಿತಿಗಳ ಹಿನ್ನಲೆಯಲ್ಲಿ ಚರ್ಚೆಮಾಡಿದ್ದಾರೆ.

ಎರಡನೇ ಭಾಗದಲ್ಲಿ ಮೂಡಲಪಾಯ, ಪಡುವಲಪಾಯ, ಬಯಲಾಟ ಕುರಿತು ಸುಧೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ. 'ಬಯಲಾಟ'ದಂತಹ ಪದವು 'ಯಕ್ಷಗಾನ'ಕ್ಕಿಂತ ಹೇಗೆ ಭಿನ್ನ ಎಂಬುದನ್ನು ತಿಳಿಸಿದ್ದಾರೆ. 'ಯಕ್ಷಗಾನ' ಎಂಬ ಪದವನ್ನು ವಿಶೇಷವಾಗಿ ಗಮನಿಸಿ 'ಯಕ್ಷಗಾನ ಬಯಲಾಟ' ಎಂದು ಕರೆದಿರುವುದರಿಂದ, ಇಲ್ಲಿ ಗೀತೆಗೆ ಹೆಚ್ಚು ಪ್ರಾಧಾನ್ಯತೆ, ಇದ್ದರೂ, ವಸ್ತುವಾಗಿರುವುದಿಲ್ಲ, ಬಯಲಿನಲ್ಲಿ ಆಡುವ ಒಂದು ರೂಢಿಯಲ್ಲಿ ಬೆಳೆದು ಬಂದ ಜನಪದ ನಾಟಕಗಳು, 'ಬಯಲಾಟ' ಎಂದೇ ಪ್ರಮುಖವಾಗಿ ಕರೆಸಿಕೊಳ್ಳಲು ಕಾರಣವಾದವು"[೪೦] ಬಯಲಾಟ ಎಂಬುದು ಬಯಲಿನಲ್ಲಿ ಆಡುವ ಒಂದು ಆಟವಾಗಿದ್ದು, ಜನಪದರ ಅತ್ಯುನ್ನತ ಮೌಲ್ಯದ ಪ್ರದರ್ಶನವಾಗಿದೆ. ಪ್ರತಿಪ್ರದರ್ಶನದಲ್ಲೂ ಇಂತಹ ಉನ್ನತ ಮೌಲ್ಯದ ಕಲಾ ಮಾಧ್ಯಮವಿದ್ದೆ ಇರುತ್ತದೆ. ಇದು ಆಯಾ ಜನಪದದ ಸಮರ್ಥನೆಯೂ ಹೌದು. ಬೆಳವಣಿಗೆಯನ್ನು ಪರಿಕ್ಷಿಸುವ ಮಾನದಂಡವೂ ಹೌದು. ಬಯಲಾಟವು ಭಾರತೀಯ ಮನಸ್ಸನ್ನು ಒಂದು ಯೋಜಿತ ಬದ್ಧತೆಗೆ ತರುವ ರಕ್ಷಣಾ ತಂತ್ರವಾಗಿದೆ.

ತನ್ಮೂಲಕವೇ ಭಾರತೀಯ ಸಮಗ್ರತೆ ಮತ್ತು ಪ್ರಗತಿಯನ್ನು ವೀಕ್ಷಿಸುವುದಾಗಿದೆ. ಇವತ್ತಿನ ಭಾರತದ ಕೇಂದ್ರಿಕೃತ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಮತ್ತು ಅದರ ಪ್ರತಿಪಾದನೆಗೂ, ಬಯಲಾಟದ ವಸ್ತುವಿನ ಮೂಲಕ ಪ್ರಚೋದಿತವಾಗುವ ಸಾಮಾಜಿಕ ಆರ್ಥಿಕ ಪ್ರತಿಪಾದನೆಗೂ ರಚನಾತ್ಮಕ ಸಂಬಂಧವಿದೆ. ಬಯಲಾಟವು ಎಲ್ಲವನ್ನು ತನ್ನ ಸಂಸ್ಕೃತಿಯ ಒಳಗೆ ಸೆಳೆದು ಇರಿಸಿಕೊಳ್ಳುವ ಶಕ್ತಿ ಮತ್ತು ಉದ್ದೇಶವನ್ನು ಹೊಂದಿದೆ. “ಬಯಲಾಟವನ್ನು ಆಟ, ಅಟ್ಟದಾಟ, ಬೈಲುಕಥೆ, ಬಯಲು ನಾಟಕ ಯಕ್ಷಗಾನ, ಬಯಲಾಟ, ಮೇಳ ಎಂದೆಲ್ಲಾ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ”[೪೧] ಬಯಲಾಟವು ‘ಯಕ್ಷಗಾನ ಬಯಲಾಟವಾಗಿ’ ‘ಮೂಡಲಪಾಯ’ ಮತ್ತು ‘ಪಡುವಲಪಾಯ’ ಒಂದು ಸಮಿಶ್ರ ಕಲೆಯನಿಸಿಕೊಂಡು ರಾಮಾಯಣ, ಮಹಾಭಾರತ, ಭಾಗವತ, ಮೊದಲಾದವುಗಳ ಪರಿಚಯವನ್ನು ಸಮರ್ಥ ರೀತಿಯಲ್ಲಿ ನಮ್ಮ ಜನಪದರಿಗೆ ಮಾಡಿಕೊಡುವಲ್ಲಿ ಅತ್ಯಂತ ಯಶಸ್ವಿಯಾದ ಒಂದು ಸಾಧನವಾಗಿ ಉಳಿದುಬಂದಿದೆ. ಅವರಲ್ಲಿ ಕಲಾಭಿರುಚಿಯನ್ನು ಹೆಚ್ಚಿಸುವುದರ ಜೊತೆಗೆ ಸಾಹಿತ್ಯ ಪರಿಚಯವನ್ನು ಮಾಡಿಕೊಟ್ಟಿದೆ.

ಡಿ.ಕೆ.ರಾಜೇಂದ್ರ ಅವರು ಭಾಗ ಮೂರರಲ್ಲಿ ‘ಗೊಂಬೆಯಾಟಗಳು’ ಕುರಿತು ವಿಸ್ತೃತವಾಗಿ ಚರ್ಚಿಸಿದ್ದಾರೆ. ಇದರಲ್ಲಿ ‘ಸೂತ್ರದ ಗೊಂಬೆಯಾಟ’ದ ಪ್ರಾಚೀನತೆಯನ್ನು ಆದಿಮಾನವ ನೆಲೆಯಿಂದಲೂ ಹುಟ್ಟಿಕೊಂಡಿರುವುದನ್ನು ಗುರುತಿಸುತ್ತಾರೆ. “ಆದಿಮಾನವ ತನ್ನ ಬದುಕನ್ನು ಒಂದು ಚೌಕಟ್ಟಿಗೆ ಒಳಪಡಿಸಿಕೊಳ್ಳುವ ಪ್ರಾರಂಭದ ದಿನಗಳಲ್ಲಿ ಇದೂ ತನ್ನ ಹುಟ್ಟನ್ನು ಪಡೆದಂತೆ ತೋರುತ್ತದೆ. ಅವನು ತನ್ನ ಮೂಲಭೂತ ಅಂಶಗಳತ್ತ ವ್ಯವಹರಿಸುವಾಗ ಹುಟ್ಟು ಪಡೆದ ಈ ಒಂದು ಪ್ರಕಾರ ಕ್ರಮೇಣ ತನ್ನ ಪೂರ್ಣ ಅಸ್ತಿತ್ವವನ್ನು ಪ್ರತ್ಯೇಕವಾಗಿ ಕಂಡುಗೊಂಡಿತು”[೪೨] ಒಟ್ಟಾರೆ ಸೂತ್ರದ ಗೊಂಬೆಯ ಪ್ರಾಚೀನತೆಯು ಜಾಗತೀಕವಾಗಿ ಮನರಂಜನೆಯ ಸಂದರ್ಭದಲ್ಲಿ ಹುಟ್ಟಿಕೊಂಡು ನಂತರ ಈ ಜಾಗದಲ್ಲಿ ಮನುಷ್ಯರು ಭಾಗವಹಿಸಿರುವುದು ತಿಳಿದುಬರುತ್ತದೆ. ಇಷ್ಟಾದರೂ ಗೊಂಬೆಯಾಟದ ಪ್ರಾಚೀನತೆಯನ್ನು ನಿರ್ದಿಷ್ಟವಾಗಿ ಗುರುತಿಸುವುದು ಪ್ರಪಂಚದ ಯಾವ ಮೂಲೆಯಲ್ಲಿಯೂ ಇದುವರೆಗೆ ಸಾಧ್ಯವಾಗಿಲ್ಲ, ಅದರ ಉಗಮದ ಇತಿಹಾಸ ಮಾನವನ ಉಗಮದ ಇತಿಹಾಸದಂತೆಯೇ ಪ್ರಾಚೀನತೆಯ ಅಂತರಾಳದಲ್ಲಿ ಹುದುಗಿ ಹೋಗಿರುವುದೇ ಇದಕ್ಕೆ ಕಾರಣವೆನ್ನಬಹುದು. ಗ್ರೀಸ್ ಮತ್ತು ಇಟಲಿಯಲ್ಲಿ ಇದರ ಕೆಲವು ಅವಶೇಷಗಳು ದೊರೆತಿವೆ. ಈಜಿಪ್ಟ್‌ನಲ್ಲಿ ಈ ಕಲೆ ಅತ್ಯಂತ ಪ್ರಚಲಿತವಾಗಿತ್ತೆಂಬುದು ತಿಳಿದು ಬರುತ್ತದೆ. ಅಥೆನ್ಸಿನಲ್ಲಿ ಯೂರಿಪಿಡೀಸನ ಕಾಲದಲ್ಲಿಯೇ ಗೊಂಬೆಯಾಟ ಆಡಿಸಲ್ಪಟ್ಟಿತ್ತೆಂಬುದು ತಿಳಿದುಬರುತ್ತದೆ”[೪೩] ಹೀಗೆ ಸೂತ್ರದ ಗೊಂಬೆಯಾಟದ ಪ್ರಾಚೀನತೆಯ ಉಗಮವನ್ನು ಜಾಗತಿಕ ನೆಲೆಯಲ್ಲಿ ಚರ್ಚಿಸುತ್ತಾರೆ. ಭಾರತದಲ್ಲಿ ಗೊಂಬೆಯಾಟ ಪ್ರಾರಂಭದಿಂದಲೂ ಪ್ರಧಾನವಾಗಿ ಜನಪದ ಕಥೆಗಳನ್ನೇ ಹಾಗೂ ರಾಮಾಯಣ, ಮಹಾಭಾರತ, ಪುರಾಣ ಮತ್ತು ಭಾಗವತ ಕಥೆಗಳನ್ನೇ ಪ್ರಮುಖವಾಗಿ ಆಧರಿಸಿ ಒಂದೇ ಜಾಡಿನಲ್ಲಿ ಬೆಳೆದು ಬಂದಿತ್ತು ಎಂದು ವಿವರಿಸುತ್ತಾರೆ. ಆದರೆ ಗೊಂಬೆಯಾಟ ಸಂಪೂರ್ಣವಾಗಿ ಒಂದು ಜನಪದ ಕಲೆಯಾಗಿ ಪ್ರಮುಖರ ಮನರಂಜನೆಯ

ಸಾಧನವಾಗಿಯೇ ಉಳಿದು ಬಂದದ್ದರಿಂದ ಅದರಲ್ಲಿ ಬೇರಾವ ಮಾರ್ಪಾಟುಗಳನ್ನು ಮಾಡಲು ಹೋದಂತೆ ಕಂಡುಬರುವುದಿಲ್ಲ. ಜಾಗತಿಕವಾಗಿ, ಭಾರತೀಯ, ಕರ್ನಾಟಕ ಈ ಮೂರು ನೆಲೆಯಲ್ಲಿ ಸೂತ್ರದಗೊಂಬೆಯಾಟದ ಉಗಮದ ಪ್ರಾಚೀನತೆ, ಅದರ ವೈಶಿಷ್ಟ್ಯತೆಯನ್ನು ಆಕರ ಮುಖೇನ ಚರ್ಚಿಸಿರುವುದು ಸ್ತುತ್ಯರ್ಹವಾಗಿದೆ. ನಂತರ ಇವುಗಳನ್ನು ಪ್ರಾಂತೀಯ ನೆಲೆಯಲ್ಲಿ ವರ್ಗೀಕರಿಸಿಕೊಂಡು ಅವುಗಳ ಸ್ಥಾನವನ್ನು ಗುರುತಿಸುತ್ತಾರೆ. ಯಕ್ಷಗಾನ ಬಯಲಾಟದಂತೆಯೇ ಪ್ರಾದೇಶಿಕವಾಗಿ ಈ ಗೊಂಬೆಯಾಟಗಳನ್ನು ಗಮನಿಸಿದಾಗ, ಇವುಗಳಲ್ಲಿಯೂ ಪ್ರಾದೇಶಿಕವಾಗಿ ವ್ಯತ್ಯಾಸಗಳಿರುವುದು ಗೋಚರವಾಗುತ್ತದೆ. ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು ಈ ಪ್ರಾಂತ್ಯಗಳಲ್ಲಿಯ ಗೊಂಬೆ ಆಟದಲ್ಲಿ ಮೂಡಲಪಾಯ ಯಕ್ಷಗಾನ ಸಂಪ್ರದಾಯದಂತೆಯೇ ಉಳಿದ ಅಂಗಗಳಲ್ಲಿಯೂ ಸಾಂಗತ್ಯವಿರುವುದು ಕಂಡುಬರುತ್ತದೆ. ಮಲೆನಾಡಿನ ಪ್ರಾಂತವಾದ ಶಿವಮೊಗ್ಗ, ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪಡುವಲಪಾಯದ ಪ್ರಭಾವ ಕಂಡುಬರುತ್ತದೆ. ಇಲ್ಲಿಯ ಸೂತ್ರದ ಗೊಂಬೆಗಳನ್ನು ಗಮನಿಸಿದಾಗಲೂ ಅಲ್ಲಿಯ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಯಕ್ಷಗಾನಗಳಂತೆಯೇ ವೇಷಭೂಷಣಗಳಿರುವುದು ಗಮನಾರ್ಹ. ಹೀಗೆ ಸೂತ್ರದ ಗೊಂಬೆಯಾಟಗಳು ಜನಪದ ರಂಗಭೂಮಿಯ ಉಗಮಕ್ಕೆ ಪ್ರಮುಖ ಆಕರಗಳಾಗಿ ಕಂಡುಬರುತ್ತವೆ. ಇವುಗಳ ಸಾಹಿತ್ಯಿಕ ವಸ್ತುಗಳು ರಾಮಾಯಣ–ಮಹಾಭಾರತ, ಪುರಾಣಗಳಾಗಿವೆ.

ತೊಗಲಗೊಂಬೆಯನ್ನು ಆಡಿಸುವ ಜನರು 'ಕಿಳ್ಳೇಕ್ಯಾತರು' ಇವರನ್ನು 'ಶಿಳ್ಳೇಕ್ಯಾತರು' ಎಂದು ಕರೆಯುತ್ತಾರೆ. 'ಕಿಳ್ಳೇಕ್ಯಾತ' ಶಿಳ್ಳೇಕ್ಯಾತ ರೂಪದಿಂದ ಬಂದಿರಬಹುದು. ಉತ್ತರದ ಕಡೆಗೆ ಹೋದಂತೆಲ್ಲಾ ಈ ಶಿಳ್ಳೇಕ್ಯಾತ ಎಂಬ ಹೆಸರೇ ಹೆಚ್ಚು ರೂಢಿಯಲ್ಲಿರುವಂತೆ ತೋರುತ್ತದೆ. ಉತ್ತರ ಕರ್ನಾಟಕದಲ್ಲಿ ಕಂಡುಬರುವ, ದೊಡ್ಡಾಟ, ಸಣ್ಣಾಟ, ದಾಸರಾಟ, ಶ್ರೀಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯ, ದಕ್ಷಿಣ ಕರಾವಳಿ ಕಡೆಯ ಯಕ್ಷಗಾನ ಇವೆಲ್ಲ ಪ್ರಕಾರಗಳೊಂದಿಗೆ ಮೂಡಲಪಾಯದ ದಕ್ಷಿಣ ಸಂಪ್ರದಾಯದ ಜನಪದ ರಂಗಭೂಮಿಯ 'ಯಕ್ಷಗಾನ ಬಯಲಾಟದೊಂದಿಗೆ ಡಿ.ಕೆ.ರಾಜೇಂದ್ರ ಅವರು ತೌಲನಿಕವಾಗಿ ವಿವರಿಸಿದ್ದಾರೆ. ಹಾಗೆಯೇ ಇಲ್ಲಿ ವಿಶಿಷ್ಟವಾಗಿ ಕಂಡುಬರುವ ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಇವುಗಳು ಹೇಗೆ ಜನಪದ ರಂಗಭೂಮಿಗೆ ಪ್ರೇರಕಶಕ್ತಿಗಳಾಗಿ ಕಾಣಿಸಿಕೊಳ್ಳುತ್ತವೆ ಎಂಬುದನ್ನು ಮಾಹಿತಿ ಪ್ರಧಾನವಾಗಿ ಹೇಳಿದ್ದಾರೆ.

ಡಾ. ಚಂದ್ರಶೇಖರ ಕಂಬಾರರ 'ಉತ್ತರ ಕರ್ನಾಟಕ ಜನಪದ ರಂಗಭೂಮಿ', ಡಿ.ಕೆ.ರಾಜೇಂದ್ರರ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ' ಸಂಶೋಧನಾ ಕೃತಿಗಳು ಪ್ರಾದೇಶಿಕ ಸಾಂಸ್ಕೃತಿಕ ರಂಗಭೂಮಿಯ ಅನನ್ಯತೆಯನ್ನು ಪರಿಚಯಾತ್ಮಕವಾಗಿ ಕಟ್ಟಿಕೊಡುತ್ತವೆ. ಈ ಎರಡು ಕೃತಿಗಳಲ್ಲದೆ, ಡಾ.ಬಸವರಾಜ ಮಲಶೆಟ್ಟಿ 'ಉತ್ತರ ಕರ್ನಾಟಕದ ಬಯಲಾಟಗಳು' ಸಂಶೋಧನಾ ಕೃತಿಯು ಪ್ರಾದೇಶಿಕ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಉತ್ತರ ಕರ್ನಾಟಕ ರಂಗ ಪ್ರಕಾರಗಳ ಬಗ್ಗೆ ವಿಶೇಷವಾದ

ಬೆಳಕು ಚೆಲ್ಲುತ್ತಾರೆ. ಇವರು ಸಹ ನಾಟಕದ ಮೂಲಕ್ಕೆ ಸಂಬಂಧ ಪಟ್ಟಂತೆ ತಮ್ಮದೇ ಅಧ್ಯಯನ ಅನುಭದ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನ ಮಾಡಿದ್ದರೂ, ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಚರ್ಚೆಯನ್ನು ಬೆಳೆಸಿಲ್ಲ. ಅಂದರೆ ಉತ್ತರ ಕರ್ನಾಟಕದ ಮೂಡಲಪಾಯ, ಡಪ್ಪಿನಾಟ, ಶ್ರೀಕೃಷ್ಣ ಪಾರಿಜಾತ, ಸಣ್ಣಾಟ, ದೊಡ್ಡಾಟಗಳ, ವೈಷ್ಣವ, ಶೈವ ಪ್ರಭಾವಗಳ ಬಗ್ಗೆ ಐತಿಹಾಸಿಕ ದಾಖಲೆಗಳ ಮೂಲಕ ವಿವೇಚಿಸಿದ್ದಾರೆ. ಶ್ರೀರಾಮ ಇಟ್ಟಣವರ, ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ ಎಂಬ ಗ್ರಂಥವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪಿಎಚ್.ಡಿ ಮಹಾಪ್ರಬಂಧ ಶ್ರೀರಾಮ ಇಟ್ಟಣನವರು ಕಾರ್ಯಕ್ಷೇತ್ರಗಳಲ್ಲಿ ಅಪಾರವಾದ ಮಾಹಿತಿ ಸಂಗ್ರಹಿಸಿ ಮತ್ತು ಈಗಾಗಲೇ ಶ್ರೀಕೃಷ್ಣ ಪಾರಿಜಾತದ ಬಗ್ಗೆ ವಿದ್ವಾಂಸರು ನಡೆಸಿದ ಚರ್ಚೆಗಳನ್ನು ಪ್ರಸ್ತುತ ಗ್ರಂಥದಲ್ಲಿ ಕೊಟ್ಟಿದ್ದಾರೆ. ಎಂಬ ವಾದವನ್ನು ಮತ್ತಷ್ಟು ಮಾಹಿತಿಗಳ ಹಿನ್ನೆಲೆಯಲ್ಲಿ 'ಶ್ರೀಕೃಷ್ಣ ಪಾರಿಜಾತ' ಮೊಟ್ಟ ಮೊದಲಿಗೆ ನಿರ್ದಿಷ್ಟ ವ್ಯಕ್ತಿಗಳಿಂದ ರಚಿತವಾದ ಜನಪದ ನಾಟಕವಾಗಿದೆ. ಈ ಕಾರಣ ಇದಕ್ಕೊಂದು ಚಾರಿತ್ರಿಕವಾದ ಮಹತ್ವವಿದೆ. ಪ್ರಬಂಧಕಾರರು ಈ ನಾಟಕ ರಚನೆಯ ಸಂದರ್ಭದ ತಾತ್ವಿಕತೆಯನ್ನು ಕುರಿತು ಇನ್ನಷ್ಟು ವಿವೇಚಿಸುವ ಅಗತ್ಯವಿತ್ತೆಂದು ಕಾಣಿಸುತ್ತದೆ. ಪಾರಿಜಾತದ ಕಥಾ ವಸ್ತುವಿಗೆ ಪ್ರಭಾವ, ಪ್ರೇರಣೆಗಳನ್ನು ಕುರಿತು ಇನ್ನಷ್ಟು ವಿವೇಚಿಸುವ ಅಗತ್ಯವಿತ್ತೆಂದು ಕಾಣಿಸುತ್ತದೆ. ಪಾರಿಜಾತದ ಕಥಾ ವಸ್ತುವಿಗೆ ಪ್ರಭಾವ, ಪ್ರೇರಣೆಗಳನ್ನು ಕುರಿತು ಮಾಹಿತಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಭಕ್ತಿಪಂಥದ ಪ್ರಭಾವವೇ ಮಧ್ಯಕಾಲೀನ ಚರಿತ್ರೆಯಲ್ಲಿ ಅರೆರಂಗಭೂಮಿ ಪ್ರಕಾರಗಳನ್ನು ಹುಟ್ಟುಹಾಕಿದೆ ಎಂಬುದನ್ನು ರಾಮಲೀಲೆ, ರಾಧನಾಟ ಇತ್ಯಾದಿಗಳ ಹಿನ್ನೆಲೆಯಲ್ಲಿ ಪಾರಿಜಾತದ ಮಹತ್ವವನ್ನು ಸಮರ್ಥವಾಗಿ ತಿಳಿಯಪಡಿಸುವ ಅಗತ್ಯವನ್ನು ಈ ಕೃತಿ ತುಂಬಿಕೊಟ್ಟಿಲ್ಲ, ಒಟ್ಟಿನಲ್ಲಿ ಶ್ರೀರಾಮ ಇಟ್ಟಣನವರ ಕ್ಷೇತ್ರಕಾರ್ಯ ಅಪಾರವಾದ ಮಾಹಿತಿಗಳು, ಪಾರಿಜಾತದ ಬಗ್ಗೆ ಇನ್ನಷ್ಟು ಅಧ್ಯಯನ ನಡೆಸಲು ವಿಶ್ಲೇಷಿಸಲು ಪೂರಕವಿದೆ. ಇವುಗಳಲ್ಲದೆ, ಇನ್ನು ಅನೇಕ ಲೇಖನಗಳು ಜನಪದ ರಂಗಭೂಮಿಯ ಬಗ್ಗೆ ಗಮನ ಸೆಳೆದಿದೆ. ಈ ಎಲ್ಲಾ ಲೇಖನಗಳ ಓನ್ನೆಲೆಯಲ್ಲಿ ಸ್ಪಷ್ಟ ಚಿತ್ರಣ ಕಂಡುಬಂದರೂ ಆಯಾ ಕಾಲದ ರಂಗಭೂಮಿಯ ಸಂದರ್ಭ, ಸಾಮಾಜಿಕ ಒತ್ತಡಗಳನ್ನು ತಿಳಿಸುತ್ತಾ ಪರಿಕಲ್ಪನೆಗಳ ಹಿನ್ನಲೆಯಲ್ಲಿ ಒಂದು ತಾತ್ವಿಕವಾದ ಚರ್ಚೆಗಳ ಮೂಲಕ ರಂಗಭೂಮಿಯ ಬೆಳವಣಿಗೆ ಇತಿಹಾಸಗಳನ್ನು ಅಧ್ಯಯನ ಮಾಡುವ ಅಗತ್ಯ ಕಂಡು ಬರುತ್ತದೆ.

ಈ ಮೇಲಿನ ಪಿಎಚ್.ಡಿ ಮಹಾ ಪ್ರಬಂಧಗಳು ಜನಪದ ರಂಗಭೂಮಿಯ ಬಗ್ಗೆ ಪ್ರಾರಂಭದಲ್ಲಿ ಮಾಡಿದ ಕೆಲಸಗಳಾಗಿದ್ದು, ಅನೇಕ ಉನ್ನತ ಅಧ್ಯಯನಗಳಿಗೆ ಉತ್ತಮ ಮಾಹಿತಿಯನ್ನು ವಿಚಾರಗಳನ್ನು ಕಟ್ಟಿಕೊಡುತ್ತದೆ. ಇದಲ್ಲದೇ ಅಕಾಡೆಮಿಕ್ ವಲಯದಿಂದ ಆಚೆಗೆ ಕೆಲಸ ಮಾಡಿರುವ, ಡಾ.ಶಿವರಾಮ ಕಾರಂತರು 'ಯಕ್ಷಗಾನ ಬಯಲಾಟ' ಕೃತಿಯು ಯಕ್ಷಗಾನಕ್ಕೆ ಸಂಬಂಧಿಸಿದ ಆದ್ಯ ಕೃತಿಯಾಗಿದೆ. ಈ ಭಾಗದಲ್ಲಿ ಯಾರು ಆ ವಿಷಯಕ್ಕೆ ಅಕಾಡೆಮಿಕ್‌ವಲಯದಲ್ಲಿ ಪ್ರಾರಂಭದಲ್ಲಿ ಅಧ್ಯಯನ ಮಾಡದಿರುವ ಸಂದರ್ಭದಲ್ಲಿ ಕಾರಂತರು ಅನೇಕ ವಿಚಾರಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ. ಡಾ. ಶಿವರಾಮ ಕಾರಂತರು ಯಕ್ಷಗಾನ ಸಂಬಂಧವಾದ ಮಹಾಕೃತಿಯೊಂದನ್ನು ರಚಿಸುವ

ಪೂರ್ವಭಾವಿಯಾಗಿ ಸ್ವತಃ ಆ ಕಲೆಯನ್ನು ಕರಗತ ಮಾಡಿಕೊಂಡು ಆ ಕಾರ್ಯಕ್ಕೆ ಕೈಹಾಕಿದವರು. ಯಕ್ಷಗಾನದ ಬಗ್ಗೆ ಅವರಿಗಿರುವ ಗಾಢವಾದ ಆಸಕ್ತಿ, ಬಹುಶಃ ಇಂಥ ಒಂದು ಕೃತಿ ರಚನೆಗೆ ಪ್ರೇರಣೆಯನ್ನು ಒದಗಿಸಿರಬೇಕು. "ಯಕ್ಷಗಾನ ಬಯಲಾಟವು ಬಹಳ ಎಳೆತನದಿಂದಲೂ ನನ್ನ ಮನಸ್ಸಿನ್ನು ಆಕರ್ಷಿಸಿದ್ದೊಂದು ಕಲೆ ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ ಆಸಕ್ತಿ ಕುದುರಿದ್ದು ಅವರ ಸಾಹಿತ್ಯಿಕ ಜೀವನ ಆರಂಭವಾದ ಬೇಟೆ, ಚಿತ್ರ, ಶಿಲ್ಪ, ಗೀತ, ನೃತ್ಯಗಳಲ್ಲಿ ವಿಶೇಷವಾದ ಪರಿಚಯವನ್ನು ಪರಿಶ್ರಮವನ್ನು ಸಾಧಿಸಿಕೊಂಡು ಬಾಲ್ಯಕ್ಕಿಂತಲೂ ಅಧಿಕವಾದ ಆ ಸಕ್ತಿಯನ್ನು ಬೆಳೆಸಿಕೊಂಡಿದ್ದಲ್ಲದೆ, ಅದರ ಅನೇಕ ಪ್ರಯೋಗಗಳನ್ನು ನಡೆಸತೊಡಗಿದರು. ೧೯೩೩ರ ವೇಳೆಗೆ ನವರಾತ್ರಿ ದಿನಗಳಲ್ಲಿ ಪುತ್ತೂರಿನ ಕಡೆಯ ಗೆಳೆಯರನ್ನು ಕಟ್ಟಿಕೊಂಡು ಮೂರು-ಮೂರು ತಿಂಗಳ ಕಾಲ ಯಕ್ಷಗಾನ ಪ್ರಸಂಗಗಳನ್ನು ಅಭ್ಯಸಿಸುವ ಹವ್ಯಾಸ ಅವರದಾಯಿತು. ಪಂಚವಟಿ, ಕೀಚಕವಧೆ, ಇಂದ್ರಕೀಲಕ, ಭೀಷ್ಮ ವಿಜಯಗಳಂಥ ಕೆಲವು ಪ್ರಸಂಗಗಳನ್ನು ಕೇವಲ ನೃತ್ಯ ಮುಖದಿಂದಲೇ ತೋರಿಸುವ ಪ್ರಯತ್ನ ಮಾಡಿದ ಅವರು 'ಕಿನ್ನರ ನೃತ್ಯ'ವೆಂದು ಅದನ್ನು ಕರೆದರು"[೪೪]

ಶಿವರಾಮ ಕಾರಂತರು ತಮ್ಮ ಕೃತಿಯನ್ನು ಎರಡು ಪ್ರಧಾನ ಭಾಗಗಳಾಗಿ ಮಾಡಿಕೊಂಡು ಪ್ರಥಮ ಭಾಗದ ಹದಿಮೂರು ಅಧ್ಯಾಯಗಳಲ್ಲಿ ಯಕ್ಷಗಾನ ಬಯಲಾಟದ ಸಮಗ್ರ ವಿವೇಚನೆಯನ್ನು ನಡೆಸಿ ಅದರ ಲೋಪದೋಷಗಳನ್ನು ಹೇಳಿ, ಕೊನೆಯಭಾಗವನ್ನು ಯಕ್ಷಗಾನ ಕವಿಕಾವ್ಯ ವಿಚಾರಕ್ಕೆ ಮೀಸಲಾಗಿಟ್ಟಿದ್ದಾರೆ. ಯಕ್ಷಗಾನ-ಬಯಲಾಟ ಅದರ ಸಾಹಿತ್ಯ ಅದರ ಕಲಾಮುಖ, ಕವಿಕಾವ್ಯ ಸಂಬಂಧ ವಿಷಯಗಳು ಹೀಗೆ ಸಮಗ್ರ ವಿಷಯ ವ್ಯಾಪ್ತಿಯನ್ನು ಈ ಕೃತಿಪಡೆದುಕೊಂಡು ಬಂದು ಉತ್ತಮ ಸಂಶೋಧನ ಗ್ರಂಥವಾಗಿ ಹೊರಬಂದಿದೆ. ಸಂಸ್ಕೃತಿಯ ನೆಲೆಯನ್ನು ನಿರ್ದಿಷ್ಟವಾಗಿ ಗುರುತಿಸಿರುವ ಕಾರಂತರು ಒಂದು ಜನ ಸಮುದಾಯ ತನ್ನದೇ ಆದ ಸಾಂಪ್ರದಾಯಿಕ ಆಚರಣೆಗಳನ್ನರಿಸಿಕೊಂಡು ಕಾಯಲೆತ್ನಿಸುತ್ತದೆ. ಅದರಿಂದ ಅವರದ್ದೆಂದು ಗುರುತಿಸಬಹುದಾದ 'ಸಂಸ್ಕೃತಿ' ರೂಪುಗೊಳ್ಳುತ್ತದೆ. ಸಂಸ್ಕೃತಿ ಎಂಬುದರಲ್ಲಿ ಶಿಷ್ಟಾಚಾರ, ನಂಬಿಕೆ, ಮತಾಚಾರ, ಕಲಾ ಸಂಪ್ರದಾಯಗಳೆಲ್ಲವೂ ಸೇರುತ್ತವೆ. ಪರಂಪರಾನುಗತವಾಗಿ ಸಿದ್ಧವಾದ ಸಂಸ್ಕೃತಿ ಹೇಗೆ ತನ್ನ 'ವೈಶಿಷ್ಟ್ಯ'ಗಳನ್ನು ಕಾಪಾಡಿಕೊಳ್ಳುತ್ತದೆ ಎಂದು ಶಿಷ್ಟಕಲೆಗಳ ಸಾಲಿನಲ್ಲಿ ಜನಪದ ಕಲೆಗಳನ್ನು ಸಮಾನವಾಗಿ ಕಂಡು ಅವುಗಳ ಮೌಲ್ಯವನ್ನು ನಿಜವಾದ ಹಿನ್ನಲೆಯಲ್ಲಿ ಗುರುತಿಸಿದ್ದಂತೆ. ಒಟ್ಟಾರೆಯಾಗಿ ಕರ್ನಾಟಕದ ಜಾನಪದ ರಂಗಭೂಮಿಯ ಪ್ರಾಂತಭೇದಗಳನ್ನು ಸಂಶೋಧಕರು ತಮ್ಮ ಅಧ್ಯಯನದ ವಸ್ತುಗಳಾಗಿ ಮಾಡಿಕೊಂಡು ಪ್ರಾದೇಶಿಕ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಉಪಸಂಹಾರ

ಜನಪದ ರಂಗಭೂಮಿ ಮತ್ತು ವೃತ್ತಿ ರಂಗಭೂಮಿ ಇವೆರಡರ ನಡುವೆ ಆಧುನಿಕತೆ ಮತ್ತು ದೇಶಿಯತೆಯ ಸಂಘರ್ಷಗಳಿವೆ. ವೃತ್ತಿ ರಂಗಭೂಮಿ ಯಾಕೆ ಸಂಪೂರ್ಣವಾಗಿ ನಾಶವಾಯಿತು

ಎಂದರೆ, ತನ್ನ ಸ್ವಂತ ಅಸ್ಮಿತೆಯನ್ನು ಬಿಟ್ಟುಕೊಟ್ಟು, ಪರ ಅಥವಾ ವಸಾಹತು ಸಂಪೂರ್ಣ ತೆರೆಕಂಡ ಕಾರಣದಿಂದ ವೃತ್ತಿರಂಗಭೂಮಿ ಅಳಿದು ಹೋಯಿತು. ವೃತ್ತಿ ರಂಗಭೂಮಿ ಜನರಿಗೆ ರಂಜಿಸಬೇಕಾಗಿತ್ತು. ಆದ್ದರಿಂದ ಆಧುನಿಕತೆಗೆ ಹೊಗ್ಗೂಡಲು ತವಕಿಸುತ್ತಿದ್ದಂತೆಯೇ ದಮನ ಆಯಿತು. ಆದರೆ ಜನಪದ ಕಲಾ ಪ್ರಕಾರಗಳಲ್ಲಿ ಯಕ್ಷಗಾನ ಮಾತ್ರ ತನ್ನ ಅನನ್ಯತೆಯನ್ನು ಬಿಟ್ಟುಕೊಟ್ಟಿಲ್ಲ. ಯಕ್ಷಗಾನ ಆಧುನಿಕತೆಯನ್ನು ಸ್ವೀಕರಿಸಿದ ಕ್ರಮ ಮತ್ತು ಎಚ್ಚರ ಇವೆರಡರ ನಡುವೆ ಅದು ಉಳಿದುಕೊಂಡಿದೆ. ಇದನು ಆಧುನಿಕತೆಯಲ್ಲಿಟ್ಟು ನೋಡಬೇಕಾಗಿದೆ. ಸಂಸ್ಕೃತ ನಾಟಕ, ಅಭಿಜಾತ ನಾಟಕ ಪರಂಪರೆ ಎದುರು ಜಾನಪದ ರಂಗಭೂಮಿಯು ಕಡೆಗಣಿಸಲ್ಪಟ್ಟಿತ್ತು. ಹತ್ತೊಂಬತ್ತನೇ ಶತಮಾನದಲ್ಲಿ ಕನ್ನಡ ಜನಪದ ರಂಗಭೂಮಿಗೆ ಮತ್ತೆ ಜೀವ ಬಂದಿದ್ದು ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದಾಗಿ ಎಂದು ಹೇಳಬಹುದು. ಆದರೆ ಸಾಂಪ್ರದಾಯಿಕ ರಂಗಭೂಮಿಯು ಭಾರತದಲ್ಲಿ ಯಾವುದೇ ಬದಲಾವಣೆಯಾಗದೆ ಸ್ಥಿತ ಪ್ರಜ್ಞೆಯನ್ನು ಅನುಭವಿಸುವಂತಾಯಿತು. ಕನ್ನಡದ ಜನಪದ ರಂಗಭೂಮಿ ಅಧ್ಯಯನಗಳು ಬಹುಮಟ್ಟಿಗೆ ಕರ್ನಾಟಕದ ಬೇರೆ ಬೇರೆ ಭಾಗದಲ್ಲಿರುವಂತಹ ಜನಪದ ಕಲೆಗಳನ್ನು ಅಧ್ಯಯನ ಮಾಡಿವೆ. ಎಪ್ಪತ್ತರ ದಶಕದಲ್ಲಿ ಜನಪದ ರಂಗಭೂಮಿ ಕುರಿತು ಅನೇಕ ಲೇಖನಗಳು, ಸಂಶೋಧನೆಗಳು, ವಿಮರ್ಶೆಗಳು ಬಂದಿವೆ.

ಕೊನೆ ಟಿಪ್ಪಣಿಗಳು

೧. ಗದ್ದಗೀಮಠ.ಬಿ.ಎಸ್, ಗದ್ದಗಿಮಠ ಬರಹಗಳು, ಪು, ೧೦೧

೨. ರಂಗನಾಥ್.ಎಚ್.ಕೆ, ಕರ್ನಾಟಕ ರಂಗಭೂಮಿ, ಪು, ೫೩

೩. ಸೆಬಾಸ್ಟಿಯನ್ ಜೋಸೆಪ್, ೨೦೧೮, ಪು, ೩೬೮

೪. ಪೋತೆ.ಎಚ್.ಟಿ, ಜಾನಪದ ಆಯಾಮಗಳು, ಪು, ೨೧೪

೫. ಬೋರಲಿಂಗಯ್ಯ.ಹಿ.ಚಿ, ಕರ್ನಾಟಕ ಜನಪದ ಕಲೆಗಳ ಕೋಶ, ಪು, ೨೦

೬. ಅದೇ, ಪು, ೨೦

೭. ರಂಗನಾಥ್.ಎಚ್.ಕೆ, ಪೂರ್ವೋಕ್ತ, ಪು, ೬೦

೮. ಅಕ್ಷರ.ಕೆ.ವಿ, ರಂಗಪ್ರಪಂಚ, ಪು, ೩೧

೯. ವೆಂಕಟೇಶ ಇಂದ್ವಾಡಿ, ಕನ್ನಡ ರಂಗಭೂಮಿ ಮತ್ತು ಆಧುನಿಕ ಜನಪದ ರಂಗಭೂಮಿ (ಪಿಎಚ್.ಡಿ ಮಹಾಪ್ರಬಂಧ), ಪು, ೧

೧೦. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಪು, ೩

೧೧. ನಾರಾಯಣ.ಕೆ.ವಿ, ಬಹುರೂಪಿ, ಪು, ೧೦೪

೧೨. ಅರ್ಚಕ ಬಿ.ರಂಗಸ್ವಾಮಿ, ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಪು, ೯

೧೩. ರಂಗನಾಥ್.ಎಚ್.ಕೆ, ಪೂರ್ವೋಕ್ತ, ಪು, ೧೩

೧೪. ನಾಗರಾಜ.ಡಿ.ಆರ್, ಅಮೃತ ಮತ್ತು ಗರುಡ, ಪು, ೫೯

೧೫. ಅಕ್ಷರ.ಕೆ.ವಿ, ಪೂರ್ವೋಕ್ತ, ಪು, ೧೧೩

೧೬. ರಾಮಚಂದ್ರೇಗೌಡ.ಹಿ.ಶಿ, ಜಾನಪದ ಸಾಂಸ್ಕೃತಿಕ ಆಯಾಮಗಳು, ಪು, ೨೧೪

೧೭. ಶಾಲಿನಿ ರಘುನಾಥ್, ಕಾಲುಹಾದಿ, ಪು, ೨೭೬

೧೮. ಶಿವಶಂಕರ್ ಚಕ್ಕೆರೆ, ಜಾನಪದ ಮಂಥನ, ಪು, ೧೦೦

೧೯. ಶಾಲಿನಿ ರಘುನಾಥ್, ಪೂರ್ವೋಕ್ತ, ಪು, ೨೭೬

೨೦. ಬೋರಲಿಂಗಯ್ಯ.ಹಿ.ಚಿ, ದೇಸಿ ಕನ್ನಡ ಪರಂಪರೆ, ಪು, ೩೩೧

೨೧. ರಾಜೇಂದ್ರ.ಡಿ.ಕೆ, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಪು, ೪೧

೨೨. ರಾಮಚಂದ್ರೇಗೌಡ.ಹಿ.ಶಿ, ಜಾನಪದ ೧೯೯೫, ಪು, ೬೧

೨೩. ಪರಮಶಿವಯ್ಯ.ಜೀ.ಶಂ, ಜಾನಪದ ಕೆಲವು ಮುಖಗಳು(ಸಂ-೨), ಪು, ೧೩೩

೨೪. ಶ್ರೀರಾಮ ಇಟ್ಟಣ್ಣವರ, ಬಯಲಾಟ ಲೇಖನಗಳು, ಪು, ೩೪

೨೫. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಪು, ೨

೨೬. ಅದೇ, ಪು, ೨

